1945-46-47

ನಿರ್ಮಾಪನೆ : ಗಿಟಿಟಿ

ಸಂಸ್ಥಾಪಕರು



ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ಗರ್ಲ್ಡ



ಶತಮಾನೋತ್ತರ ಬೆಳ್ಳಿ ಹಬ್ಬ

(ಏಪ್ರಿಲ್ [illegible])

ವರ್ಷ [illegible]

ಡಿ ಚನ್ನಬಸಪ್ಪನವರು

ಶಾಖಾ ನಿಯಮ

ನಿಯಮ ಸಂಖ್ಯೆ

ಕನ್ನಡ ಪ್ರಾಥಮಿಕ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ಶರಬೀತಿ ವಿದ್ಯಾಲಯ

ಡಿಪ್ಲೊಟಿ ಚನ್ನಬಸಪ್ಪ ನೃತ್ರ. ರೊದ್ದರಸ್ತೆ. ಘಾರವಾಡ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ವಿಷಯಾನುಕ್ರಮಣಿಕೆ



ಅ. ಸಂ.	ವಿಷಯ	ಪುಟ
೧	ನಿವೇದನೆ.	೧
೨	ನಮ್ಮ ಕಾಲೇಜಿನ ಚಟುವಟಿಕೆಗಳು	೨
೩	ಸಾರ್ಜಂಟ್ ರಿಪೋರ್ಟ್	೪
೪	ಭಾರತೀಯ ಗಣಿತ ಶಾಸ್ತ್ರದ ಪ್ರಾಚೀನತೆ	೭
೫	ಸಾಹಿತ್ಯ ಸ್ತೋತ್ರ	೧೪
೬	ವರ್ಷಪ್ರಾಯೋಜಿತ ಪರೀಕ್ಷೆ	೧೦
೭	ನಮ್ಮ ವಿದ್ಯಾಧಿಕಾರಿಗಳು	೧೧
೮	ಟ್ರೇ. ಕಾ. ದ ಸರ್ಟಿಫಿಕೆಟ್ ಪರೀಕ್ಷೆಯ ಪರಿಣಾಮಗಳು.... ...	೧೨
೯	ಪತ್ರಗಳ ಮುಖ್ಯಾಂಶಗಳು	೧೪
೧೦	ಮಕ್ಕಳಮನಸ್ಸು ಮೊಳಮುಲ್ಲಿನಹಾಗೆ (ಪ್ರಬುದ್ಧರಿಗಾಗಿ)	೧೭

Printed by R. G. Hukeri at the Vasant Printing Works Dharwar and
Publishe by H. B. Umadi, Esq. M. A. Principal Training College
For-Men Dharwar at his Office. 7403-45-1375.

ಮಾರಿಷಸ್ ಹಿಂದೂ ಮಹಾಸಭಾ ಸಂಸ್ಥೆಯವರು ಕೊಡಮಾಡಿದ ಉಚಿತ ಪ್ರತಿ

ಹೊಸ ಅಭ್ಯಾಸ ಪತ್ರಿಕೆಯನ್ನನುಸರಿಸಿ ಬರೆಯಲ್ಪಟ್ಟ ಶಾಲೋಪಯೋಗಿ ಪುಸ್ತಕಗಳು.

ಲೇಖಕರು: ಶ್ರೀ. ಬಸವಕುಮಾರ ಕೌಜಗಿರಿ.

ಮುಂಬಯಿ ವಿದ್ಯಾಖಾತೆಯವರಿಂದ ಮಂಜೂರಾಗಿವೆ.
ಕನ್ನಡ ಹೆಣ್ಣುಮಕ್ಕಳ ೫-೬-೭ನೇ ಇಯತ್ತೆಗಳಿಗಾಗಿ ಬರೆಯಲ್ಪಟ್ಟ

★★ ಗೃಹ-ವಿಜ್ಞಾನ-ಶಾಸ್ತ್ರ ★★

ಇದರಲ್ಲಿ ಪಾಕಶಾಸ್ತ್ರ, ಶರೀರಶಾಸ್ತ್ರ, ಆರೋಗ್ಯ ಶಾಸ್ತ್ರ, ಆಹಾರ ವಿಜ್ಞಾನ ಶಾಸ್ತ್ರ, ವೈದ್ಯ ಶಾಸ್ತ್ರ, ಸಂಗೋಪನ ಶಾಸ್ತ್ರ, ಮರ್ಮಶಾಸ್ತ್ರ, ಕಲಾತರಂಗ, ರೋಗಿಗಳ ಆರೈಕೆ, ಮನೆತನದ ಮಾತು, ತಾತ್ಕಾಲಿಕ ಉಪಾಯ, ಶಾಸ್ತ್ರೀಯ ಕಾರಣ ಮುಂತಾದ ಉಪಯುಕ್ತ ವಿಷಯಗಳಿಂದೊಡಗೂಡಿದೆ. ಪತ್ರಿಕೆಗಳ ಸಂಪಾದಕರಿಂದಲೂ, ಶಿಕ್ಷಣಾಧಿಕಾರಿಗಳಿಂದಲೂ ಒಳ್ಳೇ ಉಪಯುಕ್ತ ಪುಸ್ತಕವೆಂದು ಮನ್ನಣೆ ಪಡೆದಿದೆ. ಎಲ್ಲರೂ ಕೊಂಡು ಓದಲೆಂಬ ಆಶೆಯಿಂದಲೇ ಬೆಲೆಯನ್ನು ತೀರ ಕಡಿಮೆ ಇಟ್ಟಿದ್ದೇವೆ. ಪ್ರತಿಗಳು ಸ್ವಲ್ಪೇ ಇರುವವು. ಇಂದೇ ಕೆಳಗಿನ ಅಡ್ರೆಸ್ಸಿನಿಂದ ತರಿಸಿಕೊಂಡು ಅದರ ಮಹತ್ವ ತಿಳಿಯಿರಿ.

ಕ್ರೌನ ೪ ಪುಟ ೧೫೨+೧೬. ಬೆಲೆ ೧ಕ್ಕೆ ೮ ಆಣೆ. (ವ್ಹಿ. ಪಿ. ವೆಚ್ಚ ಬೇರೆ)

ಈ ವರೆಗೆ ವಿದ್ಯಾರ್ಥಿಗಳಿಗಾಗುವ ತೊಂದರೆಯು ದೂರಾಯಿತು!

ಪ್ರಕೃತಿ ವಿಮರ್ಶೆ

ಅಥವಾ

ಸಾಮಾನ್ಯ-ವಿಜ್ಞಾನ ಶಾಸ್ತ್ರ

ಈ ಪುಸ್ತಕವು ಕನ್ನಡ ೪-೫-೬-೭ನೇ ಇಯತ್ತೆಯವರಿಗೂ, ಇಂಗ್ಲೀಷ ೧-೨-೩ನೇ ಇಯತ್ತೆಯವರಿಗೂ, ಮಿಡಲ್‌ಸ್ಕೂಲ ಹಾಗೂ ಹಾಯ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷಕರಿಗೂ ಮತ್ತು ಹೆಣ್ಣುಮಕ್ಕಳ ಮುಲ್ಕೀಪರೀಕ್ಷೆಯ ಐಚ್ಛಿಕ ವಿಷಯವುಳವರಿಗೂ ಹಾಗೂ ಕಾಲೇಜ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತೆ ಬರೆಯಲ್ಪಟ್ಟಿದೆ. ಇದರಲ್ಲಿ ಜೀವ ವಸ್ತುಗಳ ಜ್ಞಾನ, ಸೃಷ್ಟಿ ನಿರೀಕ್ಷಣೆ, ಪ್ರಾಣಿಗಳ ಜೀವನ ಕ್ರಮ, ವನಸ್ಪತಿಯ ವಿಜ್ಞಾನ, ಪದಾರ್ಥಗಳ ಜ್ಞಾನ, ವಸ್ತುಗಳ ಪರಿಚಯ, ಸಾಮಾನ್ಯ ಜ್ಞಾನ, ಪರೀಕ್ಷೆಯ ಪ್ರಶ್ನೆಗಳು ಹೀಗೆ ಒಂಬತ್ತು ಭಾಗಗಳಿಂದ ಕೂಡಿದೆ. ಶಿಕ್ಷಣಾಧಿಕಾರಿಗಳಿಂದ ಮನ್ನಣೆ ಪಡೆದಿದೆ. ಎಲ್ಲರೂ ಓದಲು ಒಳ್ಳೇ ಉಪಯುಕ್ತ ಪುಸ್ತಕವೆಂದು ಅಭಿಪ್ರಾಯ ಪಟ್ಟಿದ್ದಾರೆ. ಕಾಗದದ ತುಟಾಗ್ರತೆ ಇದ್ದರೂ ಲಾಭದ ಕಡೆಗೆ ಲಕ್ಷಕೊಡದೆ ಬೆಲೆಯನ್ನು ಕಡಿಮೆ ಇಟ್ಟಿದ್ದೇವೆ.

ಕ್ರೌನ ೪ ೧೬೬+೩೦. ಪ್ರತಿ ಒಂದಕ್ಕೆ ೧ ರೂ. (ವ್ಹಿ. ಪಿ. ವೆಚ್ಚವಿಲ್ಲ.)

ಪ್ರಾದೇಶಿಕ ಪದ್ಧತಿಯಿಂದ ಬರೆಯಲ್ಪಟ್ಟ

ಜಗತ್ತಿನ ಜನಾಂಗಗಳ ಪರಿಚಯ

ಈ ಚಿಕ್ಕ ಪುಸ್ತಕವು ೨ನೇ ಇಯತ್ತೆಯ ಆಯಾತಾಲೂಕಿನ ಭೂಗೋಲ ವಿಷಯಕ್ಕೆ ಪುರವಣಿಯಾಗಿ ಬರೆಯಲ್ಪಟ್ಟಿದೆ. ಅದೇ ವಿಷಯಗಳ ಜೊತೆಗೆ ಜನ ಸಾಮಾನ್ಯರಿಗೂ ಹಾಗೂ ೨ನೇ ಇಯತ್ತೆಯ ಬಾಲಕ ಬಾಲಕಿಯರಿಗೂ ಜಗತ್ತಿನ ಜನರ ಜೀವನದ ಚರಿತ್ರೆ ಟಪ್ಪಣಿಗಳನ್ನು ಇದರಲ್ಲಿ ಸೇರಿಸಲಾಗಿದೆ. ಈ ಹೊತ್ತಿಗೆಯು ವರ್ತಮಾನ ಪತ್ರದ ಸಂಪಾದಕರಿಂದಲೂ, ಶಿಕ್ಷಣ ತಜ್ಞರಿಂದಲೂ ಒಳ್ಳೇ ಉಪಯುಕ್ತ ಪುಸ್ತಕವೆಂದೂ, ಸಂಗ್ರಹಿಸಲು ಯೋಗ್ಯವಾಗಿರುವದೆಂದೂ ಅಭಿಪ್ರಾಯಪಟ್ಟಿದೆ ಕಾಗದ ತುಟಾಗ್ರತೆಯಿದ್ದರೂ ಸಹ ಎಲ್ಲರೂ ಕೊಂಡು ಓದಲೆಂಬ ಹಿರಿಯಾಸೆಯಿಂದ ದರವನ್ನಾದರೂ ಕಡಿಮೆ ಇಡಲಾಗಿದೆ. ವ್ಯಾಪಾರಸ್ಥರಿಗೂ, ಶಿಕ್ಷಕರಿಗೂ ಯೋಗ್ಯ ಕಮಿಶನ್ ಕೊಡಲಾಗುವದು. ಇಂದೇ ಕೆಳಗಿನ ಅಡ್ರೆಸ್ಸಿನಿಂದ ತರಿಸಿಕೊಂಡು ಅದರ ಸತ್ಪತಿಳಿಯಿರಿ.

ಡೆಮಿ ೪. ೩೦ ಪ್ರತಿಒಂದಕ್ಕೆ ಬೆಲೆ ೪ ಆಣೆ ಮಾತ್ರ.

ಪ್ರಕಾಶಕರು:

ಪಶುಪತಯ್ಯಾ ಚನ್ನಯ್ಯಾ ಶಾಬಾದಿಮಠ, ಬುಕ್‌ಡಿಪೊ ಗದಗ-ಸಿಟಿ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹುಚ್ಚರಾಯ ಭೀಮರಾವ ಉಮಡಿ, ಎಂ. ಎ.

ಸಂಪುಟ ೮೪	ಏಪ್ರಿಲ್, ಮೇ, ಜೂನ್ ೧೯೪೫	ವರ್ಷ ೧೮ ಸಂ. ೧–೩–೩

ನಿವೇದನೆ.

ಪ್ರಾಥಮಿಕ ಶಿಕ್ಷಣಕ್ಕೆ ಆರು ವರುಷಗಳು ಕಳೆದುವು. ಹೊಸ ವರ್ಷವು ಆರಂಭವಾಗುವ ಈ ಹೊಸ ದಿನದಲ್ಲಿ ಹೊಸದನ್ನೇನಾದರೂ ಹೇಳುವರೇನೋ ಎಂದು ವಾಚಕರು ಸ್ವಾಭಾವಿಕವಾಗಿ ನಿರೀಕ್ಷಿಸುತ್ತಿರಬಹುದು. ಯುರೋಪಿನ ಮಹಾಯುದ್ಧದ ಜೋಗೆಯು ಶಾಂತವಾಗಿರುವದರಿಂದ ನಾವೆಲ್ಲರೂ ಈ ವರ್ಷ ಹೆಚ್ಚಿನ ಸುಖಶಾಂತಿಗಳನ್ನು ಕೋರುವದೂ ಸಹಜವಾಗಿಯೇ ಇದೆ. ಆದರೆ ಸುತ್ತಲೂ ನಿರೀಕ್ಷಿಸಿದರೆ ನಮಗೆ ಯಾವುದೂ ತೃಪ್ತಿಕರವಾಗಿ ತೋರುವುದಿಲ್ಲ. ಕಾಗದದ ಕೊರತೆ, ಮುದ್ರಣ ಸೌಕರ್ಯಗಳ ಅಭಾವ, ಇವು ಹಿಂದಿನ ದಿನಗಳಿಗಿಂತಲೂ ಮುಂದೆ ಹೆಚ್ಚಾಗಿಯೇ ಬಾಧಿಸುವ ಲಕ್ಷಣಗಳಿವೆ. ಎಂದಬಳಿಕ ಹೊಸ ವರ್ಷದಲ್ಲಿ ಹೊಸ ಕಾರ್ಯಕ್ರಮವನ್ನು ಕೈಕೊಳ್ಳುವ ಹಂಬಲವೆಲ್ಲಿಯೋ ಉಳಿಯಲಿ, ಇದ್ದದ್ದನ್ನೇ ಆದರೂ ಸುಗಮವಾಗಿ ಸಾಗಿಸಿಕೊಂಡು ಹೋಗುವುದು ಕೂಡ ಹೇಗೋ ಎನ್ನಿಸಹತ್ತಿದೆ. ಹಿಂದಿನ ವರ್ಷಗಳಲ್ಲಿ ಶಿಕ್ಷಣ, ಶಿಕ್ಷಕರು, ಪಾಲಕರು, ಬಾಲಕರು ಇವಕ್ಕೆ ಹೆಚ್ಚಾಗಿ ಸಂಬಂಧಿಸುವ ವಿಷಯಗಳನ್ನೂ ಕನ್ನಡನಾಡಿನ ಜನಜೀವನ ಸಂಸ್ಕೃತಿ ಅಭಿರುಚಿ ಇವುಗಳನ್ನು ಪ್ರತ್ಯಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಪುರೋವೃದ್ಧಿಗೊಳಿಸುವ ವಿಚಾರಗಳನ್ನೂ ಆರಿಸಿ ಪ್ರಕಟಿಸಿ ನಮ್ಮಿಂದಾದಷ್ಟು ಸೇವೆಯನ್ನು ನಿಷ್ಠೆಯಿಂದ ಮಾಡಿದೆವೆಂದು ನಮ್ಮ ಮನೋದೇವತೆಯು ಧೈರ್ಯವಾಗಿ ಹೇಳುತ್ತಿದೆ. ಇಂದಿನವರೆಗೆ ಪ್ರಕಟವಾದ ಲೇಖನಗಳ ಸಿಂಹಾವಲೋಕನದಿಂದ ವಾಚಕರಿಗೆ ಈ ಮಾತು ಸಹಜವಾಗಿ ಹೊಳೆಯದಿರದು. ಈ ಕಾರ್ಯದಲ್ಲಿ ನೆರವಾದ ಎಲ್ಲ ಲೇಖಕ ಮಹನೀಯರಿಗೆ ನಾವು ತುಂಬ ಕೃತಜ್ಞರಾಗಿರುವೆವು.

ಹೊಸ ವರ್ಷದ ಮೊದಲನೆಯ ಅಂಕವು ಹೊರಡುವದರೊಂದಿಗೆ, ಈ ಅಂಕವು ನಮ್ಮ ವಾಚಕರ ಕೈಸೇರುವ ಹೊತ್ತಿಗೆ, ನಮ್ಮ ಮೇಲಿನ ಸಂಪಾದಕೀಯ ಹೊಣೆಗಾರಿಕೆಯೂ ಕೂಡ

ಕೊನೆಗಾಣುತ್ತಿದೆ. ಇದೇ ಜೂನ್ ತಿಂಗಳ ೨೬ನೆಯ ತಾರೀಖಿಗೆ ನಮ್ಮ ಸರಕಾರದ ಪ್ರತ್ಯಕ್ಷ ಸೇವೆಯ ಅವಧಿಯು ಮುಗಿಯುವದು. ಪ್ರಾಥಮಿಕ ಶಿಕ್ಷಣದ ಇಂದಿನ ವಾಚಕರಾಗಿದ್ದ ಟ್ರೇಂಡ ಪ್ರಾಥಮಿಕ ಶಿಕ್ಷಕರಲ್ಲಿ ಬಹುಜನರು ನಮ್ಮನ್ನು ಬಲ್ಲರು. ಹಲವರಂತೂ ನಮ್ಮ ಪ್ರತ್ಯಕ್ಷ ವಿದ್ಯಾರ್ಥಿಗಳಾಗಿರುವರು. ಇವರೆಲ್ಲರಿಗೂ ನಾನು ಇಂದು ಒಂದು ಕಿವಿಮಾತು ಹೇಳಬಯಸುವೆನು.— "ನಿಮ್ಮ ಇಂದಿನ ಆರ್ಥಿಕಸ್ಥಿತಿ ಸಾಮಾಜಿಕಜೀವನ ಇವು ತೃಪ್ತಿಕರವಾಗಿಲ್ಲ. ಆದರೆ ಇದೇ ಸ್ಥಿತಿ ಕೊನೆಯ ವರೆಗೂ ಉಳಿಯಲಾರದು. ಇವನ್ನು ಸುಧಾರಿಸಬೇಕೆಂದು ದೇಶದ ತುಂಬೆಲ್ಲ ಚಳುವಳಿ ನಡೆದಿದೆ. ಇನ್ನೊಂದೆಡೆಯಲ್ಲಿ ಪ್ರಕಟವಾದ ಲೇಖನವನ್ನು ನೋಡಿರಿ. ಆಗ ನೀವೂ ಕೂಡ ನನ್ನಂತೆ ಆಶಾವಾದಿಗಳಾಗದಿರಲಾರಿರಿ. ಕರ್ತವ್ಯನಿಷ್ಠರಾದವರಿಗೆ ಪರಮಾತ್ಮನ ಬೆಂಬಲವುಂಟೆಂಬುದನ್ನು ನಂಬಿರಿ. ನಿಮ್ಮ ಮೇಲಿರುವ ಹೊಣೆಗಾರಿಕೆಯ ಹೊರೆಯನ್ನು ಮರೆಯದಿರಿ. ಚಿಕ್ಕಮಕ್ಕಳ ಸಂಸ್ಕಾರದಂಥ ಪುಣ್ಯಕರವಾದ ಕಾರ್ಯವು ಬೇರೊಂದಿಲ್ಲ. ಆ ಪುಣ್ಯದ ಬಲವೇ ನಿಮ್ಮನ್ನು ಮೇಲಕ್ಕೆತ್ತುವದೆಂದು ದೃಢವಾಗಿ ನಂಬಿರಿ. ಅಧಿಕಾರಿಗಳ ಒತ್ತಾಯ ಊರ ಜನರೇ ನೊದಲಾದ ಇನ್ನನೇಕರ ಬೆದರಿಕೆ ಇವು ಮುಖ್ಯವಲ್ಲ. ಪರಮಾತ್ಮನ ಪ್ರೇರಣೆಯೇ ನಿಮಗೆ ಹೆಚ್ಚಿನ ಕಾರ್ಯೋತ್ಸಾಹವನ್ನು ಕೊಡಲಿ. ನಿಮ್ಮ ಸ್ವಂತದ ಕಲ್ಯಾಣವೂ ದೇಶದ ಹಿತವೂ ಕೂಡಿಯೇ ಸಾಧಿಸುವಂತಹ ಸುದಿನಗಳು ಬೇಗನೆ ಬರಲಿ."

ಸರಿ. ಇನ್ನೇನು ಹೇಳುವದು? ನಮ್ಮ ಕಾರ್ಯದಲ್ಲಿ ನೆರವಾದ ನಮ್ಮ ಎಲ್ಲ ವ್ಯವಸಾಯ ಬಂಧುಗಳಿಗೂ ಅಧಿಕಾರಿಗಳಿಗೂ ಮುದ್ರಣಾಲಯಾಧಿಕಾರಿಗಳಿಗೂ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸಿ ವಿರಮಿಸುವೆವು.

— ಸಂ.

ನಮ್ಮ ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು.

ಕಳೆದ ಎಪ್ರಿಲ್ ತಿಂಗಳ ೨೮ನೆಯ ತಾ' ನ ದಿನ ನಮ್ಮ ಟ್ರೇನಿಂಗ್ ಕಾಲೇಜದ ವಾರ್ಷಿಕ ಸಮಾರಂಭವು ವಿಜೃಂಭಣೆಯಿಂದ ನೆರವೇರಿತು. ವಿದ್ಯಾರ್ಥಿ ಶಿಕ್ಷಕರ ಶಾರೀರಿಕ ಚಟುವಟಿಕೆಗಳ ಪಂದ್ಯಾಟಗಳು, ಮನರಂಜನೆ ಮುಂತಾದ ಕಾರ್ಯಕ್ರಮಗಳು ನಡೆದ ನಂತರ ಸಂಜೆಯ ೫ ಗಂಟೆಗೆ ಸಾಯಿನ್ಸ್‌ಹಾಲಿನಲ್ಲಿ ಸಭೆ ನೆರೆಯಿತು. ರಾಜಸೇವಾಸಕ್ತ ಪ್ರಿನ್ಸಿಪಾಲ ಬಿ. ಎಂ ಶ್ರೀ. ಕಂಠಯ್ಯ ಎಮ್. ಎ. ಬಿ. ಎಲ್. ಅವರು ಮಾನ್ಯ ಅತಿಥಿಗಳಾಗಿದ್ದರು. ಸ್ವಾಗತ ಗೀತೆಯಾದ ಮೇಲೆ ಶ್ರೀ. ಬೈಚವಾಳ ಅವರು ತುಂಬ ಸ್ಫೂರ್ತಿದಾಯಕವಾದ ವಾಣಿಯಿಂದ ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟರು.

ತರುವಾಯ ಕಾಲೇಜದ ಅಧ್ಯಾಪಕರಾದ ಶ್ರೀಮಾನ್ ಬಿದರಿ ಅವರು ವಾದವಿವಾದ ಮಂಡಲದ ವಾರ್ಷಿಕ ವರದಿಯನ್ನು ಓದಿದರು. ತರುವಾಯ ಪಂದ್ಯಾಟಗಳಲ್ಲಿ ಜಾಣ್ಮೆಯನ್ನು ತೋರಿಸಿದವರಿಗೆ ಪ್ರಶಸ್ತಿ-ಪತ್ರಿಕೆಗಳನ್ನು ಮಾನ್ಯ ಅತಿಥಿಗಳ ಹಸ್ತದಿಂದ ಕೊಡಿಸಲಾಯಿತು. ಬಳಿಕ ಪ್ರಿ. ಉಮಡಿರಾಯರ ಭಾವಚಿತ್ರದ ಅನಾವರಣವಾದ ಕಾರ್ಯವನ್ನು ಶ್ರೀ. ಅವರು ನೆರವೇರಿಸಿದ ನಂತರ ವಿದ್ಯಾರ್ಥಿ ಶಿಕ್ಷಕರನ್ನು ಉದ್ದೇಶಿಸಿ ನಾಲ್ಕು ಉಪದೇಶ ಮಾತುಗಳನ್ನಾಡಿದರು. ಅದರ ಮುಖ್ಯಾಂಶಗಳು ಈ ರೀತಿಯಾಗಿವೆ:—

ಮಾನ್ಯರೇ, ಹೋದವರ್ಷದಂತೆ ಈ ವರ್ಷವೂ ಸಮಾರಂಭವು ನಡೆದುದು ಸಂತೋಷದ ಮಾತು. ನಿಮ್ಮೆಲ್ಲರಲ್ಲಿ ಬೆರೆಯಲಿಕ್ಕೂ ನಿಮ್ಮ ಆಟಪಾಟಗಳಲ್ಲಿ ಶಿಕ್ಷಕ ಅಧ್ಯಾಪಕ-ಆಚಾರ್ಯರಲ್ಲಿ ಕೂಡಲಿಕ್ಕೂ ನನಗೆ ಆನಂದವೆನಿಸುತ್ತದೆ.ಪ್ರಶಸ್ತಿ ಪಡೆದವರಿಗೆಲ್ಲ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆಟಗಳಲ್ಲಿ ಗೆದ್ದರೂ ಆನಂದ, ಸೋತರೂ ಆನಂದ, ಹೀಗಿರಬೇಕು, ಆಡುವವರ ಮನೋವೃತ್ತಿ.

ನೀವು ಕನ್ನಡದಲ್ಲಿ ಕೆಲಸಮಾಡಿ ಕನ್ನಡದ ಉದ್ಧಾರ ಮಾಡತಕ್ಕವರು. ಹೇಳುವವರು ತನ: ತಮಗೆ ತಿಳಿದಂತೆ ಹೇಳುವರು. ಕೇಳುವವರು ಎಲ್ಲವನ್ನೂ ಕೇಳಬೇಕು. ತಮ್ಮ ಬುದ್ಧಿಯನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರಬೇಕು. ಪರಿಶ್ರಮ ಪಡೆದವರ ಅನುಭವಗಳನ್ನು ಅರಿತುಕೊಂಡು ಚೆನ್ನಾಗಿ ವಿಚಾರ ಮಾಡಿ ಧರ್ಮವಾಗಿ ತೋರಿದ್ದನ್ನು, ನ್ಯಾಯವಾಗಿ ಕಂಡದ್ದನ್ನು, ನಡಿಸಬೇಕು. ಆಸಕ್ತಿಯಿಲ್ಲದೆ ಮುಕ್ತಿ ಇಲ್ಲ. ನೀವು ಚಿಕ್ಕಮಕ್ಕಳ ತ್ರಾತರು. ಎಲ್ಲವನ್ನೂ ಒರೆ ಹಚ್ಚಿ ನೋಡಬೇಕು. ಭೂಮಿಯನ್ನು ಸಕಾಲದಲ್ಲಿ ಉತ್ತು ಬಿತ್ತಿದರೆ ಮಾತ್ರ ಬೆಳೆ ಚೆನ್ನಾಗಿ ಬರುವದು. ಅನ್ಯಾಯದ ಜೀವನವು ಬೇಡ. ಆದರಲ್ಲಿ ಭಗವಂತನ ಸಾನ್ನಿಧ್ಯವೇ ಇರದು. ಔದಾಸೀನ್ಯವಿರದೆ. ಧೈರ್ಯ ಸ್ಥೈರ್ಯ ಸಹಕಾರಗಳಿಂದ ಮುದುಕರೂ ಹರೆಯದವರೂ ಸೇರಿ ಸರಿಯಾದ ಮಾರ್ಗದಲ್ಲಿ ಹೋರೆಯನ್ನು ಸಾಗಿಸಬೇಕು. ಶಿಕ್ಷಕ ವೃತ್ತಿಯು ಸಾಧುವಾದುದು. ಧನಲೋಭಕ್ಕೆ ಇದರಲ್ಲಿ ಆಸ್ಪದವೇ ಇಲ್ಲ. ಈಗ ಹಲವರು ಇದನ್ನು ಹೀನವೃತ್ತಿಯಾಗಿ ಭಾವಿಸುತ್ತಾರೆ. ಶಿಕ್ಷಕರಿಗೆ ಸಮಾಜದಲ್ಲಿ ತಕ್ಕಸ್ಥಾನ ಮಾನಗಳಿಲ್ಲ. "ಅಂದಿನ ಲಗ್ನ ಸಮಾರಂಭಕ್ಕೆ ಶಿಕ್ಷಕರನ್ನು ಮೊದಲು ಗೊಂಡು ಡಿಪ್ಯುಟಿ ಕಮಿಶನರರ ವರೆಗಿನನರೆಲ್ಲರೂ ಬಂದಿದ್ದರು" ಎಂದು ಹೇಳುವವರ ಮನೋವೃತ್ತಿಯಲ್ಲಿ ಶಿಕ್ಷಕರ ಸ್ಥಾನವೆಲ್ಲಿದೆ? ಹೇಳಿರಿ. ಇಂತಹ ಸ್ಥಿತಿಯಲ್ಲಿ ಶಿಕ್ಷಕರು ಮಕ್ಕಳ ಸಲುವಾಗಿ ಏನು ಮಾಡಬಲ್ಲರು. ಶಿಕ್ಷಕರ ಹೊಟ್ಟೆ ಬಟ್ಟೆಗೆ ಅವರ ಮಕ್ಕಳು ಮರಿಗಳ ವಿದ್ಯೆಗೆ ಸಾಲುವಷ್ಟಾದರೂ ಸಂಬಳ ದೊರೆಯಬೇಕು. ಸಮಾಜವೂ ಸರಕಾರವೂ ಶಿಕ್ಷಕನ ಹೋರೆಯನ್ನು ಮನ್ನಿಸಬೇಕು. ಸರಕಾರವು ಸಮಾಜದಿಂದ ಹಣವನ್ನು ಕೂಡಿಸಿ ಶಿಕ್ಷಕರಿಗೆ ಕೊಡಬೇಕಾಗುವದು. ಸರಕಾರವು ಎಲ್ಲಿಂದ ಹಣ ತರುವದು? ಅದರ ಕೆಲಸವು ಕೆರೆಯ ನೀರನ್ನು ಕೆರೆಯಲ್ಲಿ ಹಾಕಿದಂತೆ ಇದೆ. ಶಿಕ್ಷಕರ ಹಿತವಾಗದೆ ಇದ್ದರೆ ಮುಂದೆ ನಮ್ಮ ದೇಶದ ಉದ್ಧಾರದ ಮಾರ್ಗವೇ ಇಲ್ಲ. ಪಾಲಕರ ಮನೆಯಲ್ಲಿ ಮಕ್ಕಳು ತೊಂದರೆ ಕೊಡುವದು ತಪ್ಪಲಿ, ಎಂದು ಅವರನ್ನು ಸಾಲಿಗೆ ಅಟ್ಟಿ ಶಿಕ್ಷಕರಿಗೆ ದನಕಾಯುವವರು ಎಂದರೆ ತಪ್ಪು ಯಾರದು? ಅವರ ಮಕ್ಕಳು ದನವಾಗಿ ಬಂದರೆ ಶಿಕ್ಷಕರು ಅವನ್ನು ಕಾಯಬೇಕಷ್ಟೆ!

ಅಭಿರುಚಿ ಹುಟ್ಟುವಂತೆ ಪಾಠ ಹೇಳುವದು ಒಂದು ಹೆಚ್ಚಿನ ಶಕ್ತಿ! ಪೂರ್ವಕಾಲದಲ್ಲಿ ನಮ್ಮ ದೇಶದಲ್ಲಿ ಲಪ್ಪೈಯ್ಯು ತಾಂಡವನೃತ್ಯವಾಡುತ್ತಲಿದ್ದಳು. ವಿದ್ಯೆ ಪರಿಪೂರ್ಣವಾಗಿತ್ತು. ಈಗ ಪ್ರಪಂಚವೇ ಬದಲಿಸಿದೆ. ಮಕ್ಕಳು ಏನೇನೋ ಓದುವರು. ನಾವು ಏನೇನೋ ಕಲಿಸುವೆವು. ನಾನು ೩೫ ವರ್ಷ ಕೆಲಸಮಾಡಿ ಈಗ "ಯಾವ ಕೆಲಸಕ್ಕೆ ಬಂದು ಏನುಮಾಡಿದೆ?" ಎಂಬ ಪ್ರಶ್ನೆಯನ್ನು ನನ್ನನ್ನು ನಾನೇ ಕೇಳಿಕೊಳ್ಳುತ್ತೇನೆ. ತೃಪ್ತಿಕರವಾದ ಉತ್ತರವಿಲ್ಲ.

ಸ್ತ್ರೀ ಶಿಕ್ಷಣವನ್ನು ದುರ್ಲಕ್ಷಿಸಬಾರದು. ಅವರು ಸಮಾಜದ ಅರ್ಧಭಾಗ. ಅವರು ಮನೆಗೆ ತಾಯಿ, ಅಕ್ಕ, ತಂಗಿ, ಇಲ್ಲವೆ ಹೆಂಡತಿ ಮೊದಲಾದ ಸಂಬಂಧವುಳ್ಳವರು. ಪ್ರಕೃತಿದೇವಿಯು ಅಶಕ್ತತೆಯನ್ನು ಅವರಿಗೆ ಕೊಟ್ಟಿದ್ದರಿ ನಿಮಗೆ ಕರುಣೆ ಬರಲಿ! ಅವರು ಪೂಜ್ಯವ್ಯಕ್ತಿಗಳು. ಒಂದೆಡೆಗೆ 'ನಸ್ತ್ರೀ ಸ್ವಾತಂತ್ರ್ಯಮರ್ಹತಿ.' ಎಂದು ಹೇಳುವವರೇ ಇನ್ನೊಂದೆಡೆಗೆ "ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" "ತಾಯಿಗಿಂತ ಹೆಚ್ಚಿನ ದೇವತೆಯಿಲ್ಲ" ಎಂದು ಹೇಳುವರು. ಇಂಥವುಗಳನ್ನು ಬರಿಯ ಬಾಯಿಯಿಂದ ಆಡುವದರಿಂದ ಏನು ಫಲ? ಇಂತಹ ಪರಸ್ಪರ

ವಿರೋಧಕರವಾದ ವಾಕ್ಯಗಳು ಬೇಕಾದಷ್ಟು ಇವೆ. ನಮ್ಮ ಉದ್ಧಾರವಾಗಬೇಕಾದರೆ. ಎಲ್ಲರಿಗೂ ಶಿಕ್ಷಣವು ಬೇಕು. ಹೆಣ್ಣಿಗೆ ತಕ್ಕ ಶಿಕ್ಷಣ ಹೆಣ್ಣಿಗೆ, ಗಂಡಿಗೆ ತಕ್ಕ ಶಿಕ್ಷಣ ಗಂಡಿಗೆ, ದೊರೆಯ ಬೇಕು. ಅಚ್ಚುಕನ್ನಡದಲ್ಲಿ ಉತ್ತಮ ಮಾತುಗಳಿವೆ ಅವುಗಳನ್ನು ಹೆಚ್ಚಾಗಿ ಬಳಸಿರಿತು. ಹಳ್ಳಿಯಲ್ಲಿ ನಿಮ್ಮ ನಿಜವಾದ ಕರ್ತವ್ಯವಿದೆ. ಆಚರಣೆಯಿಂದ ನಿಮಗೆ ಮಾನವು ಬರುತ್ತದೆ. ಅಲ್ಲಿ ತೊಂದರೆ ಗೇನೂ ಕಡಿಮೆ ಇಲ್ಲ. ಎಷ್ಟು ಪಾರ್ಟಿಗಳು, ಠಕ್ಕರು, ಸುಳ್ಳರು, ಸೊಳ್ಳೆಗಳು ಇವೆಲ್ಲವನ್ನು ಸಹಿಸಿ ನಿಮ್ಮ ಹೋರೆಯಲ್ಲಿ ಸ್ಥೈರ್ಯವನ್ನು ತಂದುಕೊಳ್ಳಿರಿ. ಇನ್ನೊಬ್ಬರ ಕಾಲಗುಣ ಅಸ್ಸಾದೆ ಲೋಕನಡೆದಂತೆ ನಡೆಯಬೇಕು. ಬರಿಯ ಶಬ್ದಾರ್ಥಕ್ಕೆ ಬಡಿದಾಟಬೇಡ! ಮಕ್ಕಳನ್ನು ಸಂತೋಷ ಪಡಿಸಿರಿ. ನೀವು ಹೆಚ್ಚು ಪಾಠಗಳನ್ನು ಹೇಳಿಕೊಡಬೇಕಾಗಿಲ್ಲ. ಹೆಗಲು ಮುರಿಯಂತೆ ಅವರ ಮೇಲೆ ಹೊರೆ ಹೊರೆ ಪುಸ್ತಕಗಳನ್ನು ಹೊರಿಸಬೇಕಾಗಿಲ್ಲ. ಮಿದುಳಿಗೆ ವಿರಾಮ ಕೊಡದೆ ಇದ್ದರೆ ಏನು ಪ್ರಯೋಜನ?

ನೀವು ನನ್ನನ್ನು ನೆನಿಸಿ ಈ ಸಮಾರಂಭಕ್ಕೆ ಬರಮಾಡಿಕೊಂಡ ಬಗೆಗೆ ನಾನು ಋಣಿ ಯಾಗಿದ್ದೇನೆ. ನೀವು ಕೈಕೊಂಡ ಪವಿತ್ರವೃತ್ತಿಯಲ್ಲಿ ನಿಮಗೆ ಯಶಸ್ಸು ದೊರೆಯಲಿ. ಸಮಾಜವೂ ಸರಕಾರವೂ ನಿಮ್ಮನ್ನು ಸಂತೋಷದಲ್ಲಿಡಲಿ. ಶ್ರೀ. ಉಮಡಿ ಅವರ ಭಾವಚಿತ್ರವು ಒಳ್ಳೆಯ ಲಕ್ಷಣವಾಗಿದೆ. ಶಾಂತಿಯೇ ಮೈಗೊಂಡು ಬಂದಂತಿರುವ ಅವರನ್ನು ಮಾದರಿಯಾಗಿ ಇಟ್ಟುಕೊಂಡು ನೀವು ಸಾಗಬೇಕು. ಎಂದರೆ ನಿಮ್ಮ ಜೀವನವು ಸುಖಮಯವಾಗುವದು. ಇದೇ ನನ್ನ ಮುಖ್ಯವಾದ ಆಶೆ.

ಶ್ರೀಯುವರ ಉದ್ಬೋಧಕ ಭಾಷಣವಾದಮೇಲೆ ಶ್ರೀ. ಜವಳಿ ಅವರು ಎಲ್ಲರ ಆಭಾರ ಮನ್ನಿಸಿ ದರು. "ಆಚಾರ-ವಿಚಾರ-ತನು-ಮನ-ಧನಗಳಿಂದ ಕನ್ನಡಿಗರಾಗಿ, ಅಜ್ಞಾನ ರೋಗಕ್ಕೆ ವೈದ್ಯ ರಾಗಿ, ಕಾಯಕವೇ ಕೈಲಾಸವೆಂಬ ಸಂದೇಶವನ್ನು ಬೀರಿ, ಪರುಷಕಲ್ಲಿನಂತಿರುವ ಶ್ರೀ. ಅವರ ಆಶೀರ್ವಾದವು ಫಲಿಸಲಿ." ಎಂದು ಸೋರಿ ಅವರು ತಮ್ಮ ಮಾತು ಮುಗಿಸಿದರು.

ರಾತ್ರಿ ೧೦ ಗಂಟೆಗೆ ಬೆಳಕು, ನಾಗರಿಕ ಮತ್ತು ಶಿವಮೊಗ್ಗೆಯ ಸಾಹಿತ್ಯ ಸಮ್ಮೇಲನದಲ್ಲಿ ಬಹುಮಾನ ಪಡೆದ ಶ್ರೀ. ರೋಹಿಡೇಕರರು ಬರೆದ 'ಮೊಮ್ಮಗಳ ಮದುವೆ' ಎಂಬ ನಾಟಕಗಳು ಅಭಿನಯಿಸಲ್ಪಟ್ಟವು. ಇದಲ್ಲದೆ ಬೇರೆ ಕೆಲವು ವೈಯ್ಯಕ್ತಿಕ ಗಾಯನ ಹಾಸ್ಯ ಮೊದಲಾದ ಕಾರ್ಯಕ್ರಮಗಳು ನಡೆದು ಅವಿನ ವಾರ್ಷಿಕ ಸಮಾರಂಭದ ಕಾರ್ಯಕ್ರಮವು ಮುಕ್ತಾಯ-ವಾಯಿತು.

ಸಾರ್ಜಂಟ ರಿಪೋರ್ಟು.

ಹಿದುಸ್ತಾನದ ಕೇಂದ್ರ ಸರಕಾರಕ್ಕೆ ಶಿಕ್ಷಣ ವಿಷಯದಲ್ಲಿ ಸಲಹೆ ಕೊಡಲು ಒಂದು "ಅಡ್ವಾಜರಿ" ಬೋರ್ಡು ಇದೆ. ಇದರಲ್ಲಿ ಸಾರ್ಜಂಟ ಎಂಬವರು ಸರಕಾರದಿಂದ ನಿಯಮಿಸಲ್ಪಟ್ಟಿದ್ದಾರೆ. ಈ ಬೋರ್ಡಿನವರು ಮೊನ್ನೆ ಸಾರ್ಜಂಟ ರಿಪೋರ್ಟ ಎಂಬ ಹೆಸರಿನ ಒಂದು ವರದಿಯನ್ನು ಸರಕಾರಕ್ಕೆ ಒಪ್ಪಿಸಿದ್ದಾರೆ. ಅದರಲ್ಲಿ ನಮ ದೇಶದ ಪರಿಸ್ಥಿತಿಯನ್ನು ಅನುಲಕ್ಷಿಸಿ ಯುದ್ಧೋತ್ತರ ಕಾಲದಲ್ಲಿ ಅವ ಶ್ಯವಾಗಿ ಆಗಬೇಕಾದ ಶೈಕ್ಷಣಿಕ ಪುನರ್ಘಟನೆಯ ಯೋಜನೆಗಳಿವೆ. ಹಲವರು ಶಿಕ್ಷಣ ಪ್ರೇಮಿ ಗಳೂ ಸರಕಾರದ ಅಧಿಕಾರಿಗಳೂ ಈ ಯೋಜನೆಯನ್ನು ಆಶಾದೃಷ್ಟಿಯಿಂದ ನೋಡುತ್ತಿದ್ದಾರೆ.

ಪ್ರಾಂತಿಕ ಸರಕಾರಗಳೂ ಕೂಡ ಈ ವರದಿಯನ್ನು ಮುಂದಿಟ್ಟುಕೊಂಡೆ ತಮ ತಮಗೆ ಸಮವೆನಿಸುವ ಹಲಕೆಲವು ಯೋಜನೆಗಳನ್ನು ಮಾಡಿಕೊಂಡು ಕಾರ್ಯ ಪ್ರವೃತ್ತವಾಗುತ್ತಲಿವೆ. ಈ ರೀತಿಯಲ್ಲಿ ಎಲ್ಲರವಿಚಾರಕ್ಕೂ ಎಡೆಯಾಗಿರುವ ಈ ವರದಿಯಲ್ಲಿ ಪ್ರಾಥಮಿಕ-ಮಾಧ್ಯಮಿಕ-ಉಚ್ಚ ಶಿಕ್ಷಣಗಳು ಶಿಶು ಶಿಕ್ಷಣ ಉದ್ಯೋಗ ಪ್ರಧಾನವಾದ ಶಿಕ್ಷಣ, ವ್ಯವಸಾಯ ಕಲೆಗಳ ಶಿಕ್ಷಣ, ಪ್ರಬುದ್ಧರ ಶಿಕ್ಷಣ, ಶಿಕ್ಷಕರ ಶಿಕ್ಷಣ, ಮಕ್ಕಳ ಆರೋಗ್ಯ, ಆಡಳಿತ ಮೊದಲಾದ ವಿಷಯಗಳ ಸಾಂಗೋಪಾಂಗವಾದ ವಿವರಣೆಗಳಿವೆ. ಹೆಂಗುಸರಿಗಾಗಿ ಯಾವ ವಿಶಿಷ್ಟ ಯೋಜನೆಯನ್ನು ಕೈಕೊಳ್ಳದೆ, ಜಾತಿಭೇದವನ್ನು ಎಣಿಸದೆ, ಶಿಕ್ಷಣ ಪ್ರಸಾರದಲ್ಲಿ ಪಕ್ಷಪಾತವಿಲ್ಲದೆ, ಕಠಿಣವಾಗಿರುವ ರಾಜಕೀಯ ಸಾಮಾಜಿಕ ತೊಡಕುಗಳನ್ನು ಕಡೆಗಣಿಸಿ, ಯುದ್ಧಪೂರ್ವದ ಪಾಶ್ಚಾತ್ಯ ದೇಶಗಳಿಗಿಂತ ನಮ್ಮ ದೇಶವು ಹಿಂದುಳಿಯದಂತೆ ಸರ್ವ ಮಾನ್ಯ ಹಾಗು ಕಾರ್ಯರೂಪದಲ್ಲಿ ತರಲು ತಕ್ಕವೆನಿಸುವ ಹಲವು ಸೂಚನೆಗಳು ಇದರಲ್ಲಿ ಸಮಾವೇಶವಾಗಿವೆ. ಇಡಿಯ ದೇಶಕ್ಕೆ ಅನ್ವಯಿಸುವ ಅಂಕೆ ಸಂಖ್ಯೆಗಳಿಂದ ಕೂಡಿದ ಇಷ್ಟು ವಿಸ್ತೃತವಾದ ವರದಿಯು ಈ ಮೊದಲು ಆಗಿದ್ದಿಲ್ಲವೆಂದು ಹೊಳುವದೂ ಉಂಟು.

ಈಗಿನ ಶಿಕ್ಷಣಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಯಾಗಿ ಉದ್ಯೋಗಪ್ರಧಾನವಾದ(ಬೇಸಿಕ್) ಶಿಕ್ಷಣಕ್ರಮವು ಪುನರ್ಘಟಿತವಾಗಿ ಯುದ್ಧೋತ್ತರಕಾಲದಲ್ಲಿ ಫೀ ಇಲ್ಲದಿರುವ ಒತ್ತಾಯದ ಪ್ರಾಥಮಿಕ ಶಿಕ್ಷಣವು ಪ್ರಚಾರದಲ್ಲಿ ಬರಬೇಕು. ಯೋಗ್ಯರಾದ ಶಿಕ್ಷಕರು ಯೋಗ್ಯ ವೇತನದಿಂದ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಜಾತಿಪಂಥಗಳನ್ನೆಣಿಸದೆ ಎಲ್ಲರಿಗೂ ಒಂದೇ ತರದಿಂದ ಶಿಕ್ಷಣ ದೊರೆಯಬೇಕು. ಹೆಣ್ಣುಗಂಡು ಮಕ್ಕಳಿಗೆಲ್ಲ ೬ ರಿಂದ ೧೧ ವರ್ಷಗಳ ವಯಸ್ಸಿನಲ್ಲಿ ಜ್ಯೂನಿಯರ ಪ್ರಾಥಮಿಕ ಶಿಕ್ಷಣವೂ ೧೧ ರಿಂದ ೧೪ ವರ್ಷಗಳ ವಯಸ್ಸಿನಲ್ಲಿ ಸೀನಿಯರ ಪ್ರಾಥಮಿಕ ಶಿಕ್ಷಣವೂ ಒಟ್ಟು ೮ ವರ್ಷಗಳ ವರೆಗೆ ತಪ್ಪದೆ ದೊರೆಯಬೇಕು. ಈ ರೀತಿ ಶಿಕ್ಷಣ ಹೊಂದಿದವರು ಮುಂದೆ ಉದ್ಯೋಗ ಶಿಕ್ಷಣ ಹೊಂದಲು ತಕ್ಕ ಉಮೇದುವಾರರಾಗತಕ್ಕದ್ದು. ಜ್ಯೂನಿಯರ ಶಿಕ್ಷಣಕ್ರಮದಲ್ಲಿ ಇಂಗ್ರೆಜಿಯ ಅವಶ್ಯಕತೆಯಿಲ್ಲ. ಪ್ರಾಂತಿಕ ಸರಕಾರಗಳಿಗೆ ಅವಶ್ಯಕವೆನಿಸಿದರೆ ಸೀನಿಯರ ಪ್ರಾಥಮಿಕ ಶಿಕ್ಷಣದಲ್ಲಿ ಮಾತ್ರ ಇಂಗ್ಲಿಷನ್ನು ಸಮಾವೇಶ ಮಾಡಬಹುದು. ಜ್ಯೂನಿಯರ ಶಿಕ್ಷಣಕ್ರಮವು ಮುಗಿದ ನಂತರ ಬೇಕಾದವರು ಮಾಧ್ಯಮಿಕ ಶಿಕ್ಷಣವನ್ನು ಹೊರಳಬಹುದು. ಸೀನಿಯರ ಪ್ರಾಥಮಿಕ ಶಿಕ್ಷಣಕ್ರಮದಲ್ಲಿ ವ್ಯವಸಾಯ ಶಿಕ್ಷಣದ ಸಮಾವೇಶವಾಗುವದು ಅದಕ್ಕೆ ಅನುಕೂಲವಾಗುವಂತೆ ಸಾಕಷ್ಟು ವಿದ್ಯಾರ್ಥಿಗಳು ಕೂಡಬಹುದಾದ ಮಧ್ಯವರ್ತಿ ಸ್ಥಳಗಳಲ್ಲಿ ಹೆಣ್ಣುಮಕ್ಕಳಿಗಾಗಿಯೂ ಗಂಡುಮಕ್ಕಳಿಗಾಗಿಯೂ ಬೇರೆ ಬೇರೆ ವಸತಿಗೃಹಗಳನ್ನು ತೆರೆಯಬೇಕು. ಈ ರೀತಿಯಲ್ಲಿ ಬೆಳೆಯುವ ವೆಚ್ಚಕ್ಕೆ ಸರಕಾರವು ಸಾಲ ತೆಗೆಯಬೇಕಾಗುವದು ಯೋಗ್ಯತೆಯುಳ್ಳ ಶಿಕ್ಷಕರ ಸಾಕಷ್ಟು ದೊರೆಯುವ ವಕ್ಕಾಗಿ ಹೊಸದಾಗಿ ಅನೇಕ ಕಾಲೇಜಗಳನ್ನು ಪ್ರಾರಂಭಿಸಬೇಕು. ಜ್ಯೂನಿಯರ ಪ್ರಾಥಮಿಕ ಶಾಲೆಗಳಲ್ಲಿ ೫ ದಷ್ಟು ಹಾಗು ಸೀನಿಯರ ಪ್ರಾಥಮಿಕ ಶಿಕ್ಷಣದ ಶಾಲೆಗಳಲ್ಲಿ ೩ ದಷ್ಟು ಶಿಕ್ಷಕಿಯರಿರಬೇಕು. ಜ್ಯೂನಿಯರ ಪ್ರಾಥಮಿಕ ಶಿಕ್ಷಣವು ಹೆಣ್ಣುಗಂಡುಮಕ್ಕಳೆಲ್ಲ ಕೂಡಿಯೇ ಇರಬೇಕು. ಸೀನಿಯರ ಪ್ರಾ. ಶಿ. ವು ಮಾತ್ರ ಅದು ಬೇರೆ ಬೇರೆಯಾಗಿರಬೇಕು ಹೊಸ ಯೋಜನೆಯಂತೆ ಕೆಲಸ ಮಾಡುವ ಶಿಕ್ಷಕ ಶಿಕ್ಷಕಿಯರು ತೀರ ಕಡಿಮೆಯೆಂದರೂ ಮ್ಯಾಟ್ರಿಕ್ ಜತೆವಾತ್ತನಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿರಬೇಕು. ಇವರಿಗೆ ಸ್ತ್ರೀಪುರುಷರೆಂಬ ಭೇದವನ್ನು ಎಣಿಸದೆ ಪಗಾರಿನ ಸ್ಕೇಲು ಮುಂದೆ ಕೊಟ್ಟಂತೆ ಇರಬೇಕು.

(ಅ) ಜ್ಯೂನಿಯರ ಪ್ರಾಥಮಿಕ ಶಿಕ್ಷಣದ ಶಾಲೆಗಳಲ್ಲಿಯ ಉಪಶಿಕ್ಷಕರಿಗೆ ೭೦-೧೨೦ ರೂ. ಸೀನಿಯರ ಪ್ರಾಥಮಿಕ ಶಿಕ್ಷಣದ ಶಾಲೆಗಳಲ್ಲಿಯ ಉಪಶಿಕ್ಷಕರಿಗೆ ೮೦-೧೩೦ ರೂ.

ಹಳ್ಳಿಯಲ್ಲಿರುವ ಈ ಶಿಕ್ಷಕರಿಗೆ ಮನೆ ಬಾಡಿಗಾಗಿ ೧೦೦ ಕ್ಕೆ ೧೦ ರಷ್ಟು ಹೆಚ್ಚು ಪಗಾರನ್ನು ಕೊಡಬೇಕು. ಇಲ್ಲವೆ ಪುಕ್ಕಟೆಯಾಗಿ ವಾಸ ಮಾಡಲು ಅನುಕೂಲತೆ ಇರಬೇಕು. ಧಾರಣೆಯು ತುಟ್ಟಿಯಾಗಿರುವ ವಿಶೇಷ ಸ್ಥಳದಲ್ಲಿ ಈ ಪಗಾರದ ಮಾನವು ೧೦೦ಕ್ಕೆ ೫೦ ರಷ್ಟು ಹೆಚ್ಚಿರಬೇಕು.

(ಟ) ಸೀನಿಯರ ಪ್ರಾಥಮಿಕ ಶಾಲೆಗಳಲ್ಲಿಯ ಉಪಶಿಕ್ಷಕರಿಗೆ ೪೦-೨-೮೦ ರೂ.

ಧಾರಣೆಯು ತುಟ್ಟಿಯಾಗಿರುವ ಸ್ಥಳದಲ್ಲಿ ಪಗಾರದ ಮಾನವು ೧೦೦ಕ್ಕೆ ೫೦ ರಷ್ಟು ಹೆಚ್ಚು ಇರಬೇಕು.

(ಕ) ಜ್ಯೂನಿಯರ ಪ್ರಾಥಮಿಕ ಶಾಲೆಗಳಲ್ಲಿಯ ಮುಖ್ಯ ಶಿಕ್ಷಕರಿಗೆ—

(೧ ಒಂದು ಅಥವಾ ಎರಡು ವರ್ಗಗಳು ಇದ್ದಲ್ಲಿ ಉಪಶಿಕ್ಷಕರಿಗಿಂತ ಪ್ರತಿ ತಿಂಗಳಿಗೆ ೧೦ ರೂ. ಹೆಚ್ಚು.

(೬) ಮೂರರಿಂದ ಐದು ವರ್ಗಗಳಿದ್ದಲ್ಲಿ— ೫೦-೪-೭೦ ರೂ.

(೩) ಆರರಿಂದ ಎಂಟು ವರ್ಗಗಳಿದ್ದಲ್ಲಿ— ೬೦-೪-೮೦ ರೂ.

(೪) ಎಂಟರಿಂದ ಹತ್ತು ವರ್ಗಗಳಿದ್ದಲ್ಲಿ— ೮೦-೪-೧೦೦ ರೂ.

ಇದರ ಹೊರತು ಮನೆ ಬಾಡಿಗೆಗಾಗಿ ೧೦೦ಕ್ಕೆ ೧೦ರಷ್ಟು ಹೆಚ್ಚು ಪಗಾರ ಕೊಡಬೇಕು.

(ಡ) ಸೀನಿಯರ ಪ್ರಾಥಮಿಕ ಶಿಕ್ಷಣದ ಶಾಲೆಗಳಲ್ಲಿಯ ಮುಖ್ಯ ಶಿಕ್ಷಕರಿಗೆ—

(೧) ೩ ಅಥವಾ ೪ ವರ್ಗಗಳಿದ್ದಲ್ಲಿ— ೮೦-೪-೧೦೦ ರೂ.

(೨) ೫ರಿಂದ ೮ ವರ್ಗಗಳಿದ್ದಲ್ಲಿ— ೯೦-೪-೧೧೦ ರೂ.

(೩) ೮ಕ್ಕಿಂತ ಹೆಚ್ಚು ವರ್ಗಗಳಿದ್ದಲ್ಲಿ— ೧೧೦-೪-೧೩೦ ರೂ.

ಇದರ ಹೊರತು ಮನೆ ಬಾಡಿಗೆಗಾಗಿ ೧೦೦ಕ್ಕೆ ೧೦ರಷ್ಟು ಹೆಚ್ಚು ಪಗಾರ ಕೊಡಬೇಕು.

ಎಲ್ಲ ಶಿಕ್ಷಕ-ಶಿಕ್ಷಕಿಯರಿಗೆ ಪೇನಶನ್ನಿನ ಯೋಜನೆಯಿರಬೇಕು. ಹಾಗೆ ಇರದೆ ಇದ್ದಲ್ಲಿ ಪ್ರಾವ್ಹಿಡೆಂಟ ಫಂಡಿನ ಯೋಜನೆಯಿರಬೇಕು. ಜ್ಯೂನಿಯರ ಶಾಲೆಗಳಲ್ಲಿ ಸರಾಸರಿ ೩೦ ವಿದ್ಯಾರ್ಥಿಗಳಿಗೆ ಒಬ್ಬರಂತೆ ಸೀನಿಯರ ಶಾಲೆಗಳಲ್ಲಿ ೩೫ ವಿದ್ಯಾರ್ಥಿಗಳಿಗೆ ಒಬ್ಬರಂತೆ ಶಿಕ್ಷಕರಿರಬೇಕು. ಎಲ್ಲ ಶಾಲೆಗಳಲ್ಲಿಯ ಎಲ್ಲ ಶಿಕ್ಷಕ ಶಿಕ್ಷಕಿಯರು ಟ್ರೇಂಡರೇ ಇರಬೇಕು. ಯಾವ ಪ್ರಮಾಣದಲ್ಲಿ ಟ್ರೇಂಡರು ದೊರೆಯುವರೋ ಆ ಮಾನದಿಂದ ಈ ಶಿಕ್ಷಣದ ಯೋಜನೆಯು ಯಶಸ್ವಿತೆಯು ಅವಲಂಬಿಸಿರುವದರಿಂದ ಮೊದಲಿನ ೫ ವರ್ಷಗಳಲ್ಲಿ ಟ್ರೇನಿಂಗ್ ಸಂಸ್ಥೆಗಳನ್ನು ಹೆಚ್ಚಾಗಿ ತೆರೆದು ಹೆಚ್ಚು ಟೇಂಡರನ್ನು ಸಿದ್ಧಪಡಿಸುವ ಕೆಲಸವನ್ನು ಕೈಕೊಳ್ಳಬೇಕು. ಟ್ರೇನಿಂಗ್ ಸಂಸ್ಥೆಗಳು ಎರಡು ಪ್ರಕಾರದವಿರಬೇಕ.

(ಅ) ಕಿಂಡರ ಗಾರ್ಟನ್ ಪ್ರಾ. ಶಾ. ಗಳ ಶಿಕ್ಷಕರಿಗಾಗಿ ೨ ವರ್ಷಗಳ ಅಭ್ಯಾಸ ಕ್ರಮವು

(ಬ) ಜ್ಯೂನಿಯರ ಪ್ರಾ. ಶಾ. ಗಳ ಶಿಕ್ಷಕರಿಗಾಗಿ ಅಭ್ಯಾಸಕ್ರಮವು ೨ ವರ್ಷಗಳದ್ದು ಸೀನಿಯರ ಪ್ರಾ. ಶಾ. ಗಳ ಶಿಕ್ಷಕರಿಗಾಗಿ ಅಭ್ಯಾಸಕ್ರಮವು ೩ ವರ್ಷಗಳದ್ದು.

ಪ್ರತಿಯೊಂದು ಟ್ರೇನಿಂಗ್ ಸ್ಕೂಲದಲ್ಲಿ ೩೦೦ ವಿದ್ಯಾರ್ಥಿಗಳು ಇರುವಷ್ಟು ಅನುಕೂಲತೆಯಿರಬೇಕು. ಅವರಿಗಾಗಿ ೨೦ ಶಿಕ್ಷಕರು ಇರತಕ್ಕದ್ದು. ವಿದ್ಯಾರ್ಥಿಗಳಿಗೆ ಫೀ ಇರಬಾರದು. ಪ್ರತಿಯೊಬ್ಬರಿಗೆ ಹೊಟ್ಟೆಬಟ್ಟೆಗಳ ವೆಚ್ಚಕ್ಕಾಗಿ ಪ್ರತಿವರ್ಷ ೨೫೮ ರೂ. ಕೊಡಬೇಕು.

ಪ್ರಾಥಮಿಕ ಶಿಕ್ಷಣಕ್ಕಾಗಿ ಆಗುವ ಒಟ್ಟು ವೆಚ್ಚದಲ್ಲಿ ಮುಂದೆ ಹೇಳುವಂತೆ ಪ್ರಮಾಣ ವಿರಬೇಕು. ೧೦೦ ರಲ್ಲಿ ೭೦ ಶಿಕ್ಷಕರ ಪಗಾರ, ೫ ಸಾಲದ ಮೇಲಿನ ಬಡ್ಡಿ, ೧೦ ವಿಶೇಷತರದ ಶಾಲೆ, ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷೆ, ಔಷಧೋಪಚಾರಗಳು, ೧೦ ಪುಸ್ತಕ, ಶಿಕ್ಷಣ ಸಾಹಿತ್ಯ ಗಳು ಶಾಲೆಗಳ ರಿಪೇರಿ. ೫ ಮೇಲ್ವಿಚಾರಣೆ.

ಈ ಯೋಜನೆಯಂತೆ ಕೆಲಸ ಸಾಗಿದರೆ ಪ್ರತಿವರ್ಷ ೨೦೦ ಕೋಟಿ ರೂ. ವೆಚ್ಚ ಬರುವದು. ಪ್ರಾಥಮಿಕ ಶಾಲೆಗಳಿಂದ ೧೦೦ ಕ್ಕೆ ೨೦ ರಷ್ಟು ವಿದ್ಯಾರ್ಥಿಗಳು ಹೈಸ್ಕೂಲುಗಳಲ್ಲಿ ಶಿಕ್ಷಣ ಪಡೆಯ ಲಿಕ್ಕೆ ಹೋಗಬಹುದು. ಪ್ರಾಥಮಿಕ ಶಿಕ್ಷಣದ ಎಲ್ಲ ವ್ಯವಸ್ಥೆಯನ್ನು ಸರಕಾರದವರು ಪ್ರಾರಂಭ ದಲ್ಲಿ ತಮ್ಮ ಕಡೆಗೇ ತಕ್ಕೊಳ್ಳಬೇಕು. ಸಾಕಷ್ಟು ಯೋಗ್ಯ ಜನರುಳ್ಳ ಸ್ಕೂಲಬೋರ್ಡ ಮತ್ತು ಸಮಿತಿಗಳಿಗೆ ಅದನ್ನು ಯಥಾವಕಾಶ ಒಪ್ಪಿಸಬಹುದು. ಪ್ರಾಂತಿಕ ಸರಕಾರಕ್ಕೆ ಸಹಾಯ ಸೂಚನೆ ಗಳನ್ನು ಕೊಡುವ ಸಲ್ಲಾಗಾರ ಮುಂಡಲವೊಂದಿರಬೇಕು. ಶಿಕ್ಷಣದ ಪುನರ್ಘಟನೆಯು ಯಶಸ್ವಿ ಯಾಗುವದರ ಸಲುವಾಗಿ ಯೋಗ್ಯ ಅಧಿಕಾರಗಳನ್ನು ನಿಯಮಿಸಬೇಕು. ಅವರ ಪಗಾರವು ಕೆಳಗಿನಂತೆ ಇರಬೇಕು.

(೧) ಅ. ಡೆ. ಎ. ಇ. ಅವರಿಗೆ ೧೫೦–೧೦–೨೫೦ ಯೋಗ್ಯರಾದವರಿಗೆ ೧೦–೩೫೦.

(೨) ಡೆ. ಎ. ಇ. ಅವರಿಗೆ ೨೪೦–೧೫–೫೫೦ ಸಿಲೆಕ್ಶನ್ ೨೦–೭೫೦.

(೩) ೧ನೆಯ ಗ್ರೇಡ ಇನ್‌ಸ್ಪೆಕ್ಟರರಿಗೆ ೪೦೦–೨೫–೧೦೦೦.
ಟ್ರೇನಿಂಗ್ ಸಂಸ್ಥೆಗಳ ಅಧ್ಯಾಪಕರಿಗೆ ೧೦೦ ರಿಂದ ೭೫೦ ರೂ.

ಇದರ ಹೊರತು ವರಿಷ್ಠ ಅಧಿಕಾರಿಗಳನ್ನು ಪ್ರಾಂತಗಳ ವಿಸ್ತಾರಮಾನದಿಂದ ನಿಯಮಿಸಿ ಕೊಳ್ಳಬೇಕು.

ಈ ಯೋಜನೆಯಲ್ಲಿ ಸಾರ್ವತ್ರಿಕ ಶಿಕ್ಷಣಪ್ರಸಾರದೊಂದಿಗೆ ಅದು ವ್ಯವಹಾರೋಪಯುಕ್ತ ವಾಗುವಂತೆಯೂ ಶಿಕ್ಷಕರ ಯೋಗ್ಯತೆಯೂ ವೇತನವೂ ಬೆಳೆದು ಜನತೆಯಲ್ಲಿ ಅವರ ಪ್ರತಿಷ್ಠೆಯು ಬೆಳೆಯುವಂತೆ ಮಾಡಲಾಗಿದೆ. ಸುಧಾರಿಸಿದ ದೇಶಗಳಲ್ಲಿ ಎಂಥ ಕಷ್ಟಕರ ಸ್ಥಿತಿ ಯಲ್ಲಿ ಕೂಡ ಶಿಕ್ಷಣದ ಯೋಜನೆಗಳನ್ನು ಪ್ರಾಮುಖ್ಯವಾಗಿ ಎಣಿಸುತ್ತಾರೆ. ಅದರಂತೆ ನಮ್ಮ ಲ್ಲಿಯೂ ಆಗಿ, ಈ ಸಾರ್ಜಂಟ್ ಯೋಜನೆಗೆ ಮೂರ್ತಸ್ವರೂಪ ಬರಲೆಂದು ಹಾರೈಸುವೆವು.

ಭಾರತೀಯ ಗಣಿತಶಾಸ್ತ್ರದ ಪ್ರಾಚೀನತೆ.

ಗಣಿತಶಾಸ್ತ್ರದ ಉತ್ಪತ್ತಿ ಬೆಳವಣಿಗೆ ವಿಕಾಸಗಳ ಸ್ಥಾನಕಾಲಗಳ ಬಗೆಗೆ ಭಿನ್ನಾಭಿಪ್ರಾಯ ಗಳವೆ. ಅದು ಮೊತ್ತಮೊದಲು ಭಾರತೀಯ ಆರ್ಯರಲ್ಲಿ ಉತ್ಪತ್ತಿಹೊಂದಿ ಬೆಳೆದು ಅರಬಸ್ತಾನದ ಮಾರ್ಗವಾಗಿ ಯುರೋಪಕ್ಕೆ ಹೋಗಿ ಅಲ್ಲಿ ವಿಕಾಸಹೊಂದಿ ಇಂದಿನ ಸ್ಥಿತಿಗೆ ಬಂದಿದೆಯೆಂದು ಹೇಳುವವರು ಹಲವರಾದರೆ ಚೀನವು ಗಣಿತಶಾಸ್ತ್ರದಲ್ಲಿ ಬಹುಕಾಲವ ಹಿಂದೆಯೆ ಮುಂದುವರಿದಿತ್ತೆಂದು ಹೇಳುವವರು ಅನೇಕರಿದ್ದಾರೆ. ಗ್ರೀಕರೂ ರೋಮನ್ನರೂ ಗಣಿತಶಾಸ್ತ್ರದಲ್ಲಿ ತುಂಬ ಪ್ರಗತಿಯನ್ನು ಹೊಂದಿದ್ದರೆಂದು ಪ್ರತಿಪಾದಿಸುವರೂ ಹೊರಡಬಹುದು. ಇಂತು ವಾದ ಗ್ರಸ್ತವಾದ ವಿಷಯವನ್ನುವ ನಿರ್ಧರಿಸಿ ಹೇಳುವದು, ಇದು ಇಷ್ಟೇ ಎಂದು ಗೆರೆಕೊರೆದು ತೋರಿಸುವದ,

ಯಾರಿಗೂ ಸಾಧ್ಯವಲ್ಲ. ಪ್ರಾಚೀನ ಗ್ರಂಥಗಳ ಕೊರತೆ, ಹಿಂದಿನಕಾಲದಲ್ಲಿ ಶಾಸ್ತ್ರೀಯವಿಷಯಗಳನ್ನು ಈ ದೃಷ್ಟಿಯಿಂದ ಅವಲೋಕಿಸಿ ಉಲ್ಲೇಖ ಮಾಡುವ ಪದ್ಧತಿಯ ಅಭಾವ, ಮುಂತಾದ ಹಲವು ಕಾರಣಗಳು ಈ ಮಾರ್ಗದಲ್ಲಿ ಅನಿವಾರ್ಯವಾದ ಅಡ್ಡಿಯನ್ನು ತಂದೊಡ್ಡುವವು. ಉಪಲಬ್ಧವಿರುವಷ್ಟು ಸಾಧನಗಳನ್ನೇ ಅವಲಂಬಿಸಿ ಇಂತಹ ವಿಮರ್ಶಾತ್ಮಕ ಲೇಖನಗಳನ್ನು ಬರೆಯಬೇಕಾಗುವದು. ಇದರಲ್ಲಿ ಒಬ್ಬರ ಪೂತನ್ನು ಇನ್ನೊಬ್ಬರು ಎತ್ತಿ ಉಲ್ಲೇಖಿಸದೆ ಗತ್ಯಂತರವಿರದು, ಅದು ಕ್ಷಮ್ಯ ವೆಂದು ಗ್ರಹಿಸುವದೂ ಉಂಟು.

ಗಣಿತಶಾಸ್ತ್ರವು ಹೇಗೆ ಹುಟ್ಟಿ ಬೆಳೆಯಿತೆಂಬದೂ ಒಂದು ಪ್ರಶ್ನೆ. ಭಾರತೀಯ ಆರ್ಯರಿಗೆ ತಮ್ಮ ವೇದೋಕ್ತ ಕಾರ್ಯಗಳನ್ನು ಸಕಾಲದಲ್ಲಿ ನೆರವೇರಿಸಬೇಕಾಯಿತಾದ್ದರಿಂದ ಅವರು ಪಂಚಾಂಗ ರಚನೆ ಜ್ಯೋತಿಷ ಶಾಸ್ತ್ರದ ಅಭ್ಯಾಸ ಮುಂತಾದುವನ್ನು ಮುಂದುವರಿಸಿದರು. ಅದಕ್ಕೆ ಅಂಗಭೂತವಾಗಿ ಗಣಿತ ಶಾಸ್ತ್ರವು ಮುಂದುವರಿಯಿತು. ಯಜ್ಞವೇದಿಕೆಗಳ ರಚನೆಯಕಾರ್ಯದಲ್ಲಿ ಅವಶ್ಯವಾಗಿ ಅವರು 'ಭೂಮಿತಿ' ವಿಭಾಗವನ್ನು ವಿಕಾಸಗೊಳಿಸಿದರು. ಇತ್ಯಾದಿ.

ಇಲ್ಲಿ ನಮ್ಮವರು ಪ್ರಚಾರದಲ್ಲಿ ತಂದ ಗಣಿತಶಾಸ್ತ್ರದ ಕೆಲಕೆಲವು ಉದಾಹರಣೆಗಳನ್ನು ಎತ್ತಿ ತೋರಿಸಿ ಅವು ಪ್ರತಿಪಾದಿಸುವ ವಿಭಾಗಗಳ ಉತ್ಪಾದಕರು ನಮ್ಮವರೇ ಎಂಬುದನ್ನು ಪ್ರಸ್ಥಾಪಿಸುವದೇ ಪ್ರಸ್ತುತ ಲೇಖನದ ಉದ್ದೇಶವು.

ಮೊತ್ತಮೊದಲು ಅಪೂರ್ಣಾಂಕಗಳಿಗೆ ಸಂಬಂಧಿಸುವ ಕೆಲವು ಉದಾಹರಣೆಗಳನ್ನು ನೋಡುವ. ಗಣಿತಶಾಸ್ತ್ರದಲ್ಲಿ ಇದಕ್ಕೆ ತುಂಬ ಮಹತ್ವದಸ್ಥಾನವಿದೆ. ಈ ಸಾರಣಿಯ ಅಭಾವದಲ್ಲಿ ಅಂಕ ಗಣಿತವು ತೀರ ಅಪೂರ್ಣಾವಸ್ಥೆಯಲ್ಲಿ ಉಳಿಯುತ್ತಿದ್ದಿತು. ಮತ್ತು ಅದಕ್ಕೆ ಸದ್ಯಕ್ಕೆ ದೊರೆದಿರುವಷ್ಟು ಗೌರವವು ಎಂದೂ ದೊರೆಯುತ್ತಿರಲಿಲ್ಲ. ಈ ಸಾರಣಿಯು ಕ್ರಿ. ಶ. ದ ೭೫೦ರಲ್ಲಿ ರಚಿತವಾದ ಶ್ರೀಧರನ 'ತ್ರಿಶತಕ' ವೆಂಬ ಗ್ರಂಥದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಒಂದು ಕುಂಬದ ೧/೨ ನೀರಿನಲ್ಲಿಯೂ ೧/೪ ಕೆಸರಿನಲ್ಲಿಯೂ ೧/೬ ಉಸುಕಿನಲ್ಲಿಯೂ ಮುಳುಗಿತ್ತು; ಮತ್ತು ಎರಡು ಮೊಳ ಮೇಲಕ್ಕೆ ಕಾಣಿಸುತ್ತಿತ್ತು. ಹಾಗಾದರೆ ಆ ಕುಂಬದ ಒಟ್ಟು ಎತ್ತರೆಯೆಷ್ಟು?

ಭಾರತೀಯ ಗಣಿತ ಶಾಸ್ತ್ರದಲ್ಲಿ ಮಹತ್ವದಸ್ಥಾನವನ್ನು ಪಡೆದಿರುವ ಮಹಾವೀರನ ಗಣಿತ ಸಾರಸಂಗ್ರಹದಲ್ಲಿಯೂ (ಕ್ರಿ. ಶ. ೮೫೦) ಈ ವಿಚಾರವು ಉಕ್ತವಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರ (ಕ್ರಿ. ಪೂ. ೪ನೆಯ ಶತಮಾನ)ದಲ್ಲಿ ಕೋಟೆಯ ಗೋಡೆಯನ್ನು ಕಟ್ಟುವ ಸಂಬಂಧದ ನಿಯಮವನ್ನು ಹೇಳುವಾಗಲೂ ಈ ವಿಚಾರವು ಇನ್ನೊಂದು ಬಗೆಯಲ್ಲಿ ಉಕ್ತವಾಗಿದೆ.

'ಕೇ' ಎಂಬ ವಿಮರ್ಶಕನು ಈ ವಿಚಾರವು ನೈಲ ನದಿಯ ದಂಡೆಯಲ್ಲಿ ಹುಟ್ಟಿತೆಂದು ಹೇಳುವದು ಸಮಂಜಸವಾಗಿರುವದಿಲ್ಲ.

ಇದೇ ವಿಷಯಕ್ಕೆ ಸಂಬಂಧಿಸುವ ಇನ್ನೊಂದು ಉದಾಹರಣೆಯನ್ನು ನೋಡಿರಿ.

ರಮಣಿಯೊಬ್ಬಳು ಧರಿಸಿದ ಮುತ್ತಿನಹಾರದ ೧/೩ವು ಪ್ರಣಯ ಕಲಹದ ಗದ್ದಲದಲ್ಲಿ ಹರಿದ ಎತ್ತಿತ್ತ ಸೂರೆಯಾಯಿತು. ಆದರ ೧/೫ವು ಪಲ್ಲಂಗದ ಮೇಲೆ ಬಿದ್ದಿತು. ೧/೬ವನ್ನು ದಾಸಿಯು ಆರಿಸಿಕೊಂಡಳು. ೧/೧೦ವನ್ನು ಆಕೆಯ ಪ್ರಣಯಿಯು ಹೆಕ್ಕಿಕೊಂಡನು. ಆರೇ ಮುತ್ತುಗಳು ಮಾತ್ರ ಆ ಹಾರದ ದಾರದಲ್ಲಿ ನಿಂತುಕೊಂಡಿದ್ದುವು. ಹಾಗಾದರೆ ಆ ಸರದಲ್ಲಿದ್ದ ಒಟ್ಟು ಮುತ್ತುಗಳೆಷ್ಟು?

ಭಾಸ್ಕರಾಚಾರ್ಯರ ಲೀಲಾವತಿಯಲ್ಲಿ ಈ ಉದಾಹರಣೆಯು ಸ್ಪಷ್ಟವಾಗಿ ಹೇಳಲ್ಪಟ್ಟಿದೆ ಇದೇ ಮಾದರಿಯ ಮತ್ತೆ ಕೆಲವು ಉದಾಹರಣೆಗಳು ತ್ರಿಶತಕದಲ್ಲಿಯೂ ಗಣಿತ ಸಾರಸಂಗ್ರಹದಲ್ಲಿಯೂ ಕಂಡು ಬರುವವು.

ಒಂದು ಭ್ರಮರ ಸಮೂಹದ ಅರ್ಧದಷ್ಟು ಭ್ರಮರಗಳು ಕದಂಬ ಕುಸುಮದ ಮೇಲೆ ಕುಳಿತವು. ಅದರಷ್ಟು ಸಿಲಿಂಧ್ರಿ ಕುಸುಮದತ್ತ ಹೋದವು. ಅವೆರಡರ ಅಂತರದ ಮೂರು ಪಟ್ಟಿನಷ್ಟು ಭ್ರಮರಗಳು ಕುಟಜ ಕುಸುಮದತ್ತ ಧಾವಿಸಿ ನಡೆದವು. ಮಲ್ಲಿಗೆಯ ಮನೋಹರವಾಸನೆಗೆ ಮರುಳಾಗಿ ಉಳಿದ ಒಂದೇ ಒಂದು ಭ್ರಮರವು ಗಾಳಿಯಲ್ಲಿ ಅತ್ತಿತ್ತ ಅಲೆದಾಡುತ್ತಲಿದ್ದಿತು. ಹಾಗಾದರೆ ಒಟ್ಟು ಆ ಭ್ರಮರ ಸಮೂಹದದಲ್ಲಿದ್ದ ಭ್ರಮರಗಳೆಷ್ಟು?

ಗಣಿತಸಾರ ಸಂಗ್ರಹದಲ್ಲಿಯೂ ಲೀಲಾವತಿಯಲ್ಲಿಯೂ ಈ ಉದಾಹರಣೆಯಿದೆ.

ಲಿಲಾವತಿಯ ಇನ್ನೊಂದು ವಿಭಾಗದಲ್ಲಿ ಇದೇ ಉದಾಹರಣೆಯನ್ನು ತುಸು ಮಾರ್ಪಡಿಸಿ ಈ ರೀತಿಯಾಗಿ ಹೇಳಿದೆ:—

ಅಲಿಕುಲದಲಮೂಲಂ ಮಾಲತೀಂ ಯಾತಮಷ್ಟೌ ।
ನಿಖಿಲ ನವಮ ಭಾಗಾಶ್ಚಾಲಿನೀ ಭೃಂಗಮೇಕಂ ॥
ನಿಶಿಪರಿಮುಲಲುಬ್ಧಂ ಪದ್ಮಮಧ್ಯೇ ನಿರುದ್ಧಂ ।
ಪ್ರತಿರಣತಿ ರಣಂತಂ ಬ್ರೂಹಿ ಕಾಂತೇಽಲಿ ಸಂಖ್ಯಾಂ ॥

ಎಲೆ ಕಾಂತೆ, ಒಂದು ಭೃಂಗ ಸಮೂಹವಿತ್ತು. ಅದರ ಅರ್ಧಭಾಗದ ವರ್ಗ ಮೂಲದಷ್ಟು ಭೃಂಗಗಳು ಮಾಲತೀಪುಷ್ಪವನ್ನು ಕುರಿತು ತೆರಳಿದವು. ಒಂಬತ್ತನೆಯ ಭಾಗದ ಎಂಟರಷ್ಟು ಹಾಗೆಯೇ ತೆರಳಿದವು. ಪದ್ಮಕೋಶದಲ್ಲಿ ಸಿಲುಕಿ ಒಂದು ಭೃಂಗವು ಝೇಂಕರಿಸುತ್ತಿರಲು ಇನ್ನೊಂದು ಭೃಂಗವು ಆ ಪದ್ಮದ ಬಳಿಯಲ್ಲಿದ್ದು ಪ್ರತಿಧ್ವನಿಗೊಡುತ್ತಿತ್ತು.....ಆದರೆ ಆ ಭೃಂಗಗಳ ಒಟ್ಟು ಸಂಖ್ಯೆಯನ್ನು ಹೇಳು.

ಆಪೂರ್ಣಾಂಕಗಳ ವಿಚಾರವಾದ ನಂತರ ಹೆಚ್ಚು ಆಕರ್ಷಕವಾದ ಉದಾಹರಣೆಗಳೆಂದರೆ–ವೇಳೆ ವೇಗ ಅಂತರಗಳಿಗೆ ಸಂಬಂಧಿಸಿದುವು.

ಸೂರ್ಯನು ಒಂದು ದಿನದಲ್ಲಿ ೫೦ ಕೋಟಿ ಯೋಜನಗಳನ್ನು ಕ್ರಮಿಸಿದರೆ ಒಂದು ಗಳಿಗೆಗೆ ಎಷ್ಟು ಯೋಜನ ಸಾಗಿದಂತಾಯಿತು?

ಸಿದ್ಧ–ನಿದ್ಯಾಧರಿಯರೊಳಗಿನ ಮಹೋರಗನೆಂಬವನು ಸೂರ್ಯನ ರಥವನ್ನು ನಡಿಸುವನು. ಅವನು ಹಗಲು ರಾತ್ರಿಗಳಲ್ಲಿ ಕೂಡಿ ಅರ್ಧ ನೂರು (೫೦) ಕೋಟಿ ಯೋಜನಗಳನ್ನು ಕ್ರಮಿಸುವನೆಂದು ಜಾಣರಾದ ಶಾಸ್ತ್ರಜ್ಞರು ಹೇಳುವರು. ಹಾಗಾದರೆ ಒಂದು ಮೂಹೂರ್ತದಲ್ಲಿ ಅವನು ಎಷ್ಟು ದೂರ ಕ್ರಮಿಸುವನು.?

ಇವು ನಮ್ಮ ಭಾರತೀಯ ಗಣಿತ ಶಾಸ್ತ್ರದಲ್ಲಿ ಬಂದ ಉದಾಹರಣೆಗಳು. ಆದರೆ ಅಲೆಕ್ಸಾಂಡರನು ತಾನು ಗೆದ್ದುಕೊಂಡ ಭೂಭಾಗದ ನಕಾಶೆಯ ಸ್ಕೇಲನ್ನು ಗೊತ್ತುಪಡಿಸುವದಕ್ಕಾಗಿ ಇಂಥ ಉದಾಹರಣೆಗಳನ್ನು ಹುಡುಕಿಕೊಂಡನೆಂದೂ ಇಂಥ ವಿಚಾರಗಳ ಉತ್ಪಾದಕನು ಅವನೇ ಎಂದೂ ಯುರೋಪದ ಶೋಧಕರು ಪ್ರತಿಪಾದಿಸುವರು. ಇದು ಸರಿಯಾದ ವಿಚಾರವಲ್ಲ. ನಮ್ಮ ವೇದಾಂಗ ಜ್ಯೋತಿಷ್ಯದಲ್ಲಿ (ಕ್ರಿ. ಪೂ. ೧೨೦೦) ಇದಕ್ಕೂ ಹೆಚ್ಚಿನ ವಿಚಾರಗಳುಳ್ಳ ಉದಾಹರಣೆಗಳು ಉಕ್ತವಾಗಿವೆ. ಚಂದ್ರನು ಒಂದು ನಕ್ಷತ್ರದಲ್ಲಿ ಎಷ್ಟುಕಾಲ ಇರುವನೆಂಬದನ್ನು ತೆಗೆಯುವದಕ್ಕೆ ಇಂಥ ಲೆಕ್ಕವಿರಬೇಕಾಗುವದು. ಇದಕ್ಕೆ 'ವೇಗ ವೇಳೆ ಅಂತರಗಳ' ಸಾರಣಿ ಎಂದು ಹೇಳಿದೆ.

ವೇಳೆ ವೇಗ ಅಂತರಗಳ ಸಾರಣಿಗೆ ಸೇರುವ ಲೆಕ್ಕಗಳಲ್ಲಿ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳ ಮೇಲಾಟಕ್ಕೆ ಸಂಬಂಧಿಸಿದವು ಹೆಚ್ಚು ತೊಡಕಿನವಾಗುವವು. ಗಣಿತ ಸಾರಸಂಗ್ರಹದಲ್ಲಿ ಈ ಉದಾಹರಣೆಯಿದೆ:—

"ಒಬ್ಬನು ಒಂದು ದಿನಕ್ಕೆ ೯ ಯೋಜನ ನಡೆಯುತ್ತಾನೆ. ಅವನು ೧೦೦ ಯೋಜನ ಮುಂದೆ ಹೋದ ಬಳಿಕ ಇನ್ನೊಬ್ಬ ದೂತನು ಅವನನ್ನು ಕರೆಯಲು ಹೊರಟು ದಿನಕ್ಕೆ ೧೩ ಯೋಜನದಂತೆ ಸಾಗಿಸಿದನು. ಆದರೆ ಆ ದೂತನು ಅವನನ್ನು ಎಷ್ಟು ದಿನಗಳಲ್ಲಿ ಕೂಡುವನು?"

ಚೀನದೇಶದಲ್ಲಿ ಕ್ರಿ. ಪೂ. ೩ನೆಯ ಶತಮಾನದಲ್ಲಿ ರಚಿತವಾದ ಒಂದು ಗ್ರಂಥದಲ್ಲಿ ಈ ಉದಾಹರಣೆಯಿದೆ.:—

'ಒಂದು ನೂರು ಅಡಿಗಳ ಅಂತರವಿರುವಾಗ ಒಂದು ನಾಯಿಯು ಮೊಲವನ್ನು ನೋಡಿತು. ನಾಯಿಯು ಮೊಲವನ್ನು ಬೆನ್ನುಹತ್ತಿ ೨೫೦ ಅಡಿಗಳನ್ನು ಕ್ರಮಿಸಿದಾಗ ಅವೆರಡರ ನಡುವೆ ೩೦ ಅಡಿಗಳಷ್ಟು ಅಂತರವುಳಿಯಿತು. ಆದರೆ ಇನ್ನೆಷ್ಟು ಅಡಿಗಳನ್ನು ಕ್ರಮಿಸಿದಾಗ ನಾಯಿಯು ಮೊಲವನ್ನು ಹಿಡಿಯುವದು?'

ಇದರ ಮತ್ತು ಇಂತಹದೇ ಇನ್ನನೇಕ ಆಧಾರಗಳಿಂದ ಇಂತಹ ಗಣಿತದ ಸಾರಣಿಯ ಶೋಧನೆಯ ಶ್ರೇಯಸ್ಸು ಚೀನಕ್ಕೋ ಯುರೋಪದೊಳಗಿನ ಇಟಲಿಗೋ ಹೋಗುವದೆಂದು ಪಾಶ್ಚಿಮಾತ್ಯ ಶೋಧಕರು ಪ್ರತಿಪಾದಿಸುವರು.

ಆದರೆ ಕ್ರಿ.ಪೂ. ೧೨ನೆಯ ಶತಮಾನದ ವೇದಾಂಗ ಜ್ಯೋತಿಷ್ಯದಲ್ಲಿ ಇದಕ್ಕೂ ಹೆಚ್ಚಿನ ತೊಡಕುಳ್ಳ ಸಾರಣಿಗಳ ಉದಾಹರಣೆಗಳು ಉಪಲಬ್ಧವಾಗುವವು. ಸೂರ್ಯ ಚಂದ್ರರ ಗತಿಯು ಭಿನ್ನವಾಗಿದ್ದು ಅವರು ಕೆಲವೊಂದು ಕಾಲಾವಧಿಗೊಮ್ಮೆ ಒಬ್ಬರನ್ನೊಬ್ಬರು ಕೂಡುವರೆಂಬದು ಸಕಲ ಶಾಸ್ತ್ರಜ್ಞರಿಗೂ ಸಮ್ಮತವಾಗಿರುವದಷ್ಟೇ? ಈ ಅವಧಿಯನ್ನು ನಮ್ಮವರು ಲೆಕ್ಕ ಮಾಡಿ ನಿಶ್ಚಿತವಾಗಿ ಹೇಳಬಲ್ಲವರಾಗಿದ್ದರು. ಎಂದಬಳಿಕ ಇಂಥ ಸಾರಣಿಗಳನ್ನು ಕಂಡು ಹಿಡಿದ ಶ್ರೇಯಸ್ಸು ಭಾರತೀಯರಿಗಲ್ಲದೆ ಅನ್ಯರಿಗೆ ಹೇಗೆ ಸಲ್ಲುವದು?

ಗಣಿತ ಶ್ರೇಢಿ ಮತ್ತು ಭೂಮಿತಿ ಶ್ರೇಢಿಗಳಿಗೆ ಸಂಬಂಧಿಸುವ ವಿಭಾಗವು ಈ ಸಂದರ್ಭದಲ್ಲಿ ತುಂಬ ಮಹತ್ವದ್ದಾಗಿದೆ. ಈ ಶ್ರೇಢಿಗೆ ಸಂಬಂಧಿಸಿದ ಉದಾಹರಣೆಗಳು ಬಹುತರವಾಗಿ ದಾನಕ್ಕೆ ಸಂಬಂಧಿಸಿದವಿರುವವು. ಗಣಿತಸಾರ ಸಂಗ್ರಹದಲ್ಲಿ ಬಂದ ಗಣಿತ ಶ್ರೇಢಿಗೆ ಸಂಬಂಧಿಸಿದ ಈ ಉದಾಹರಣೆಯನ್ನು ನೋಡಿರಿ. ಒಬ್ಬ ಶ್ರಾವಕನು ಐದು ದೇವಾಲಯಗಳಿಗೆ ದಾನಕೊಡುವನು. ಮೊದಲನೆಯ ದೇವಾಲಯಕ್ಕೆ ೨ ರತ್ನಗಳನ್ನು ಕೊಟ್ಟು ಮುಂದೆ ಕ್ರಮವಾಗಿ ೩ ರಂತೆ ಹೆಚ್ಚಿಸುತ್ತ ಹೋದನು. ಆದರೆ ಅವನು ಐದೂ ದೇವಾಲಯಗಳಿಗೆ ಕೂಡಿ ಕೊಟ್ಟ ರತ್ನಗಳ ಸಂಖ್ಯೆಯನ್ನು ಹೇಗೆ ಗೊತ್ತು ಪಡಿಸುವಿರಿ? ಪೃಥೂದಕನೆಂಬ ಗಣಿತಜ್ಞನೂ ಕೂಡ ಇಂಥದೇ ಉದಾಹರಣೆಯನ್ನು ಹೇಳಿರುವನು. ಭಾಸ್ಕರಾಚಾರ್ಯರ ಲೀಲಾವತಿಯಲ್ಲಿ ಈ ಕೆಳಗಿನ ಉದಾಹರಣೆ ಇದೆ:—

ಒಬ್ಬನು ಮೊದಲನೆಯ ದಿನ ಬ್ರಾಹ್ಮಣರಿಗೆ ನಾಲ್ಕು ದ್ರಮ್ಮಗಳನ್ನು ದಾನಮಾಡಿದನು. ಮುಂದೆ ಪ್ರತಿದಿನಕ್ಕೆ ೫ ದ್ರಮ್ಮಗಳಂತೆ ಹೆಚ್ಚಿಸುತ್ತಾ ೧೫ ದಿನಗಳವರೆಗೆ ದಾನಮಾಡಿದನು. ಅವನು ೧೫ ದಿನಗಳಲ್ಲಿ ಕೂಡಿ ಎಷ್ಟು ದ್ರಮ್ಮಗಳನ್ನು ದಾನಮಾಡಿದನು?

ಆದ್ಯೇ ದಿನೇ ದ್ರಮ್ಮಚತುಷ್ಟಯಂ ಯೋದತ್ತಾದ್ವಿಜೇಭ್ಯೋನುದಿನಂ ಪ್ರವೃತ್ತಃ ॥
ದಾತುಂ ಸಖೇ ಪಂಚಚಯೇನ ಪಕ್ಷೇ ದ್ರಮ್ಮಾವದದ್ರಾಕ್ಕತಿ ತೇನದತ್ತಾಃ ॥

ಭೂಮಿತಿ ಶ್ರೇಢಿಗೆ ಸಂಬಂಧಿಸುವ ಉದಾಹರಣೆಗಳೂ ಕೂಡ ದಾನಕ್ಕೆ ಸಂಬಂಧಿಸಿದವೇ ಇರುವವು. ಮಹಾವೀರನು ಕೊಟ್ಟ ಉದಾಹರಣೆಯು ಈ ರೀತಿಯಾಗಿರುವದು. "ಒಬ್ಬನು ಊರಿಂದ ಊರಿಗೆ ಪ್ರವಾಸಮಾಡುವನು. ಅವನು ಮೊದಲನೆಯ ಊರಿನಲ್ಲಿ ೨ ನಾಣ್ಯಗಳನ್ನು

ದೊರಕಿಸಿದನು. ಎರಡನೆಯ ಊರಿನಲ್ಲಿ ಅದರ ಮೂರು ಮಡಿ ನಾಣ್ಯಗಳನ್ನೂ ಮೂರನೆಯ ಊರಿನಲ್ಲಿ ಅದರ ಮೂರು ಮಡಿ ನಾಣ್ಯಗಳನ್ನೂ ದೊರಕಿಸಿದನು. ಇದೇ ರೀತಿಯಾಗಿ ಮುಂದೆ ಸಾಗಿದರೆ ಎಂಟನೆಯ ಊರಿನಲ್ಲಿ ಅವನು ಎಷ್ಟು ನಾಣ್ಯಗಳನ್ನು ದೊರಕಿಸುವನು?

ಬುಟೋ (೧೫೭೭) ಮುಂತಾದ ಯುರೋಪದ ಗಣಿತ ಶಾಸ್ತ್ರಜ್ಞರು ಈ ವಿಷಯದಲ್ಲಿ ನಮ್ಮವರ ಮಾರ್ಗವನ್ನು ಅನುಸರಣ ಮಾಡಿ ಮುಂದೆ ಸಾಗಿರುವರೆಂಬದನ್ನು ಆಧಾರ ಸಹಿತವಾಗಿ ಸಿದ್ಧಮಾಡಬಹುದು.

ಪಾಲುಗಾರಿಕೆಗೆ ಸಂಬಂಧಿಸುವ ಸಾರಣಿಯನ್ನು ಕೂಡ ಭಾರತೀಯ ಗಣಿತ ಶಾಸ್ತ್ರಜ್ಞರೇ ಮೊದಲು ಕಂಡು ಹಿಡಿದಿರುವರೆಂದೂ ಮಿಕ್ಕವರು ಅವರ ಅನುಕರಣೆ ಮಾಡಿರುವರೆಂದೂ ಹೇಳುವದಕ್ಕೆ ಬೇಕಾದಷ್ಟು ಆಧಾರಗಳಿವೆ. ಬ್ರಹ್ಮಗುಪ್ತ (ಕ್ರಿ. ಶ. ೬೨೮)ನ ಗ್ರಂಥದಲ್ಲಿ ವಿವರಣಾತ್ಮಕವಾದ ಉದಾಹರಣೆಗಳು ದೊರೆಯದೆ ಇದ್ದರೂ ಆ ಸಂಬಂಧದ ನಿಯಮವು ಅದರಲ್ಲಿ ಈ ರೀತಿ ಸ್ಪಷ್ಟವಾಗಿ ಉಲ್ಲೇಖವಾಗಿದೆ. "ಪಾಲುಗಾರರು ತಮ್ಮ ತಮ್ಮ ಮೂಲಧನಕ್ಕೆ ಅನುಗುಣವಾಗಿ ಲಾಭವನ್ನು ಹಂಚಿ ಕೊಳ್ಳಬೇಕು. ಮೂಲಧನವು ಹೆಚ್ಚಾದರೆ ಲಾಭವು ಹೆಚ್ಚಾಗಿಯೂ ಕಡಿಮೆಯಾದರೆ ಕಡಿಮೆಯಾಗಿಯೂ ಅವರವರಿಗೆ ದೊರೆಯಬೇಕು." ಈ ಗ್ರಂಥಕ್ಕೆ ವ್ಯಾಖ್ಯಾನವನ್ನು ಬರೆದ ಪೃಥೂದಕ ಸ್ವಾಮಿಯು ಈ ನಿಯಮವನ್ನು ತಕ್ಕ ಉದಾಹರಣೆಗಳಿಂದ ವಿವರಿಸಿರುವನು. ಗಣಿತಸಾರ ಸಂಗ್ರಹ ತ್ರಿಶತಕ ಲೀಲಾವತಿಗಳಲ್ಲಿಯೂ ಈ ವಿಷಯದ ಉದಾಹರಣೆಗಳಿವೆ.

ಕ್ರಿ. ಪೂ. ನಾಲ್ಕನೆಯ ಶತಕದ ಗ್ರಂಥವಾದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಈ ವಿಷಯದ ನಿಯಮವಿದ್ದು ಅದು ಈ ರೀತಿಯಾಗಿದೆ. "ಮೂಲಧನದ ಪ್ರಮಾಣಕ್ಕೆ ಅನುಗುಣವಾಗಿ ಲಾಭವು ಹಂಚಲ್ಪಡಬೇಕು". —ಇತ್ಯಾದಿ

ಯುರೋಪದಲ್ಲಿ ೧೭೦೨ರಲ್ಲಿ ಹುಟ್ಟಿದ ಒಂದು ಗ್ರಂಥದಲ್ಲಿ ಈ ಉದಾಹರಣೆಯಿದೆ — ಇಬ್ಬರು ಪಾಲುಗಾರರಲ್ಲಿ ಒಬ್ಬನು ೧೮ ಪೌಂಡುಗಳನ್ನೂ ಇನ್ನೊಬ್ಬನು ೨೫ ಪೌಂಡುಗಳನ್ನೂ ಹಾಕಿ ವ್ಯಾಪಾರ ಮಾಡಿದರೆ ಅವರಿಗೆ ದೊರೆಯಬೇಕಾದ ಲಾಭದ ಪ್ರಮಾಣವು ಯಾವದು? ಇವನು ಭಾರತೀಯ ಗಣಿತಶಾಸ್ತ್ರದ ಗ್ರಂಥಗಳನ್ನು ದೊರಕಿಸಿಕೊಂಡು ಅವುಗಳ ಆಧಾರದಿಂದ ತನ್ನ ಉದಾಹರಣೆ ವಿವರಣೆಗಳನ್ನು ರಚಿಸಿರುವನೆಂಬದು ನಿಃಸಂಶಯದ ಮಾತಾಗಿದೆ.

ಭಾರತೀಯ ಗಣಿತಶಾಸ್ತ್ರಜ್ಞರ ಕೀರ್ತಿಗೆ ಕಾರಣವಾದ ಇನ್ನೊಂದು ಉದಾಹರಣೆಯನ್ನು ನೋಡಿರಿ.

ಒಬ್ಬನ ಹತ್ತರ ೭ ಕುದುರೆಗಳೂ ಇನ್ನೊಬ್ಬನ ಹತ್ತರ ಒಂಬತ್ತು ಹೇಸರಗತ್ತೆಗಳೂ ಮೂರನೆಯವನ ಹತ್ತರ ಹತ್ತು ಒಂಟೆಗಳೂ ಇರುವವು. ಅವರು ತಮ್ಮ ಕಡೆಗಿದ್ದ ಪ್ರಾಣಿಗಳಲ್ಲಿ ಒಂದೊಂದನ್ನು ಮಿಕ್ಕವರಿಗೆ ಕೊಟ್ಟರೆ ಅವರೆಲ್ಲರ ಬಳಿಯಲ್ಲಿರುವ ಪ್ರಾಣಿಗಳ ಬೆಲೆಯು ಅಷ್ಟೇ ಆಗುವದು. ಹಾಗಾದರೆ ಆ ಪ್ರತಿಯೊಂದು ಪ್ರಾಣಿಯ ಬೆಲೆಯ ಪ್ರಮಾಣವೇನು?

ಗಣಿತಸಾರ ಸಂಗ್ರಹದಲ್ಲಿಯೂ ಇದೇ ಮಾದರಿಯ ಉದಾಹರಣೆಯಿದೆ. ಲೀಲಾವತಿಯಲ್ಲಿಯ 'ಮಾಣಿಕ್ಯಾಷ್ಟಕಮಿಂದ್ರನೀಲದಶಕಂ ಮುಕ್ತಾ ಫಲಾನಾಂ ಶತಂ.....' ಎಂಬ ಲೆಕ್ಕವು ಸುಪ್ರಸಿದ್ಧವಾಗಿದೆ. ಈ ಉದಾಹರಣೆಯ ಭಾಷಾಂತರವು ಗೆಜ್ಜಿ ಗಣಿತ (ಗೋಖಲೆಯನರ ಗಣಿತದ ಭಾಷಾಂತರ)ದಲ್ಲಿಯೂ ಬಂದಿದೆ.

ನಾಲ್ವರು ರತ್ನವ್ಯಾಪಾರಿಗಳಿದ್ದರು; ಅವರಲ್ಲಿ ಒಬ್ಬನಲ್ಲಿ ಎಂಟು ಮಾಣಿಕ್ಯಗಳೂ ಇನ್ನೊಬ್ಬನಲ್ಲಿ ಹತ್ತು ಇಂದ್ರನೀಲಗಳೂ ಮೂರನೆಯವನಲ್ಲಿ ನೂರು ಮುಕ್ತಾಫಲಂಗಳೂ ಕೊನೆಯವನಲ್ಲಿ

ಐದುವಜ್ರಗಳೂ ಇದ್ದುವು. ಒಂದು ದಿನ ಅವರೆಲ್ಲರೂ ಒತ್ತಟ್ಟಿಗೆ ಕೂಡಿದಾಗ ಪ್ರತಿ ಒಬ್ಬನೂ ತನ್ನಲ್ಲಿದ್ದ ರತ್ನಗಳಲ್ಲಿ ಒಂದೊಂದನ್ನು ಮಿಕ್ಕುಳಿದವರಿಗೆ ಕೊಟ್ಟನು. ಆಗ ಪ್ರತಿಒಬ್ಬನಲ್ಲಿದ್ದ ಸರಕಿನ ಬೆಲೆಯು ಅಷ್ಟೇ ಆಯಿತು. ಆದರೆ ಪ್ರತಿ ಒಂದು ಪ್ರಕಾರದ ರತ್ನದ ಬೆಲೆಯ ಪ್ರಮಾಣವನ್ನು ಹೇಳಿರಿ.

ಬಾಕಿಯ ಸಿದ್ಧಾಂತ (Remainder theorem)ವು ಚೀನ ದೇಶದಲ್ಲಿ ಮೊದಲು ಉಗಮ ಹೊಂದಿತೆಂದು ಸರ್ವಸಾಮಾನ್ಯವಾಗಿ ಹೇಳುವದುಂಟು. ಈ ವಿಷಯವನ್ನು ವಿಮರ್ಶಿಸಿದ ಹಿಂದೂ ಗಣಿತ ಶಾಸ್ತ್ರಜ್ಞರಲ್ಲಿ ಆರ್ಯಭಟ್ಟನೇ ಮೊದಲಿಗನು. ಮುಂದೆ ಗಣಿತಸಾರ ಸಂಗ್ರಹದಲ್ಲಿ ಇದಕ್ಕೆ ಸಂಬಂಧಿಸಿದ ಉದಾಹರಣೆಗಳು ಬಂದಿವೆ. ಅವುಗಳಲ್ಲಿ ಒಂದು ಈ ರೀತಿಯಾಗಿದೆ:—"ಯಾವುದೋ ಒಂದು ಸಂಖ್ಯೆಗೆ ಎರಡರಿಂದಭಾಗಿಸಿದರೆ ೧ ಬಾಕಿ ಉಳಿಯುವದು. ಮತ್ತು ಮೂರರಿಂದ ಭಾಗಿಸಿದರೆ ೨, ನಾಲ್ಕರಿಂದ ಭಾಗಿಸಿದರೆ ೩, ಉಳಿಯುವವು. ಆದರೆ ಆ ಸಂಖ್ಯೆಯು ಯಾವದು?"

ಈ ವಿಷಯದ ಉದಾಹರಣೆಗಳು ಚೀನದ ಗಣಿತಜ್ಞನಾದ 'ಸನ್‌ತು ಸುವಾನ್ ಚಿಂಗ'ನ ಗ್ರಂಥದಲ್ಲಿ ಮೊತ್ತ ಮೊದಲು ಬಂದಿದೆ. "ಯಾವದೋ ಸಂಖ್ಯೆಗೆ ೪ ರಿಂದ ಭಾಗಿಸಿದರೆ ೨ ಬಾಕಿ ಉಳಿಯುವದು. ಮತ್ತು ೫ ರಿಂದ ಭಾಗಿಸಿದರ ೩, ೬ ರಿಂದ ಭಾಗಿಸಿದರೆ ೨ ಬಾಕಿ ಉಳಿಯುವವು? ಆದರೆ ಆ ಸಂಖ್ಯೆ ಯಾವದು?"

ಈ ಉದಾಹರಣೆಯಿಂದ ಈ ಬಾಕಿಯ ಸಿದ್ಧಾಂತದ ವಿಚಾರವು ಮೊದಲು ಚೀನದಲ್ಲಿ ಹುಟ್ಟಿತೆಂದು ಭಾಸವಾಗುವದಷ್ಟೇ? ಆದರೆ ಈ ವಿಚಾರಗಳನ್ನು ಚೀನೀಯರು ಭಾರತೀಯರಿಂದಲೇ ದೊರಕಿಸಿರಬಹುದೆಂದು ಅನುಮಾನಿಸಲು ಬಲವಾದ ಕಾರಣಗಳಿಲ್ಲದೆ ಇಲ್ಲ. ಈ ಉದಾಹರಣೆಗಳು ಯಾವ ಗ್ರಂಥದಲ್ಲಿ ಉಪಲಬ್ಧವಾಗಿರುವವೋ ಆ ಗ್ರಂಥದಲ್ಲಿ ಇವು ಪ್ರಕ್ಷಿಪ್ತವಾಗಿವೆಯೋ ಏನೋ ಎನ್ನುವಂತೆ ಹಿಂದು ಮುಂದಿನ ಸಂಬಂಧವಿಲ್ಲದೆ ಸೇರ್ಪಡೆಯಾಗಿವೆ. ಯಾವದೋ ಒಂದು ಸದ್ಯಕ್ಕೆ ಅನುಪಲಬ್ಧವಾಗಿರುವ ಭಾರತೀಯ ಬೌದ್ಧರ ಗ್ರಂಥದಿಂದ ಈ ಉದಾಹರಣೆಯನ್ನು ಆರಿಸಿ ಓದುಗರ ಕೌತುಕಕ್ಕಾಗಿ ಅದನ್ನು ಆ ಗ್ರಂಥದಲಿ ಸೇರಿಸಿರಬೇಕೆಂದು ಅನುಮಾನಿಸುವದೂ ಉಂಟು. ಈ ಗ್ರಂಥದಲ್ಲಿ ಬೌದ್ಧರ ಗ್ರಂಥಗಳಿಂದ ಆರಿಸಿಕೊಂಡ ಮತ್ತೆ ಕೆಲವು ಭಾಗಗಳೂ ಇರುವವು. ಚೀನ ದೇಶದಲ್ಲಿ ಬೌದ್ಧರ ಪ್ರಸಾರವಾದ ತರುವಾಯವೇ ಈ ಗ್ರಂಥವು ಹುಟ್ಟಿರುವದೆಂಬದಂತೂ ನಿರ್ವಿವಾದವಾಗಿದೆ.

ಬೀಜ ಗಣಿತದೊಳಗಿನ ಒಂದು ಮಹತ್ವದ ಸಾರಣಿಯನ್ನು ನೋಡಿರಿ:—

ಒಬ್ಬನು ಪಾರಿವಾಳಗಳನ್ನು ೩ ಪಣಕ್ಕೆ ೫ ರಂತೆಯೂ ಸಾರಸ ಪಕ್ಷಿಗಳನ್ನು ೫ ಪಣಕ್ಕೆ ೭ ರಂತೆಯೂ ಗಿಳಿಗಳನ್ನು ೯ ಪಣಕ್ಕೆ ೩ ರಂತೆಯೂ ಮಾರುವನು. ಬೇರೊಬ್ಬನು ಅವನಿಂದ ೧೦೦ ಪಣಗಳನ್ನು ಕೊಟ್ಟು ೧೦೦ ಪಕ್ಷಿಗಳನ್ನು ಕೊಂಡುಕೊಂಡನು. ಆದರೆ ಅವನು ಕೊಂಡು ಕೊಂಡ ಪ್ರತಿಯೊಂದು ಜಾತಿಯ ಪಕ್ಷಿಗಳು ಎಷ್ಟು?

ಈ ಸಾರಣಿಯ ವಿಚಾರವೂ ಕೂಡ ಚೀನದಿಂದಲೇ ಭಾರತಕ್ಕೆ ಬಂದಿತೆಂದು ಹೇಳುವರು ಯುರೋಪದಲ್ಲಿಯಂತೂ ಈ ವಿಷಯವು ೮ ನೆಯ ಶತಮಾನಕ್ಕಿಂತ ಮುಂಚಿತವಾಗಿ ಇದ್ದೇ ಇಲ್ಲ ಕ್ರಿ. ಶ. ಕ್ಕೆ ಮೊದಲೇ ನಮ್ಮಲ್ಲಿ ಈ ವಿಷಯವು ವಿಷದವಾಗಿ ವಿವೇಚಿಸಲ್ಪಡುತ್ತಿದ್ದಿತೆಂಬ ಬಗೆ ಆಧಾರಗಳಿವೆ. ಆದರೆ ಚೀನಿಯರಲ್ಲಿ ಈ ವಿಷಯದ ವಿಚಾರವು ಇದಕ್ಕೂ ಮೊದಲಿನ ಗ್ರಂಥದಲ್ಲಿ ಉಪಲಬ್ಧವಾಗುತ್ತಿದ್ದರೂ ಅಲ್ಲಿ ಅವುಗಳ ವಿಮರ್ಶಾತ್ಮಕವಾದ ವಿವರಣೆಯಾಗಲಿ ವ್ಯಾವಹಾರಿಕ ಸ್ವರೂಪವಾಗಲಿ ಉಕ್ತವಾಗಿಲ್ಲ. ಇದರಿಂದ ಈ ವಿಷಯವನ್ನು ಕೂಡ ಚೀನೀಯರು ಭಾರತೀಯರಿಂದಲೇ ಸಂಗ್ರಹಿಸಿರಬೇಕೆಂದು ಅನುಮಾನಿಸಬೇಕಾಗುವದು.

ಇದೇ ರೀತಿಯಾಗಿ ಮುಂದೆ ಹೇಳುವ ಭೂಮಿತಿಯ ಪ್ರಶ್ನೆಗಳೂ ಕೂಡ ಅವುಗಳ ಉತ್ಪಾದಕರನ್ನೂ ಅವರ ಸ್ಥಾನ ಕಾಲಗಳನ್ನೂ ನಿರ್ದೇಶಪಡಿಸಿ ಹೇಳಲು ಸಾಧ್ಯವಿಲ್ಲದೆ ಇದ್ದರೂ ಅವು ನಮ್ಮವರಿಂದಲೇ ಪ್ರಕಟವಾದುವೆಂಬುದಕ್ಕೆ ತಕ್ಕ ಅನುಮಾನಗಳಿವೆ. ಪೃಥೂದಕಸ್ವಾಮಿ ಮತ್ತು ಮಹಾವೀರ ಇವರಿಬ್ಬರೂ ೯ ನೆಯ ಶತಮಾನದಲ್ಲಿಯೇ ಇರುತ್ತಿದ್ದರೂ ಹಿಂದುಸ್ಥಾನದ ಬೇರೆ ಬೇರೆ ಭಾಗಗಳಲ್ಲಿರುತ್ತಿದ್ದ ಇವರಿಬ್ಬರ ಗ್ರಂಥಗಳಲ್ಲಿಯೂ ಇವು ಕಂಡುಬರುವದರಿಂದ ಇದಕ್ಕೂ ಬಹು ಕಾಲದ ಮೊದಲೇ ಇವು ಭಾರತದೇಶದಲ್ಲೆಲ್ಲ ಪ್ರಸಿದ್ಧಿಯನ್ನು ಹೊಂದಿದ್ದು ವೆಂದು ಹೇಳಲೇ ಬೇಕಾಗುವದು.

೧) ಒಂದು ಸಮದ್ವಿಭುಜ ತ್ರಿಕೋಣದ ತಳವು ೧೦ ಹಸ್ತ, ಭುಜಗಳು ೧೩ ಹಸ್ತ, ಇರುತ್ತಿದ್ದರೆ ಅದರ ಕ್ಷೇತ್ರವೆಷ್ಟು?

೨) ಒಂದು ವಿಷಮಭುಜ ತ್ರಿಕೋಣದ ತಳವು ೧೩ ಹಸ್ತ, ಭುಜಗಳು ೧೪ ಮತ್ತು ೧೫ ಹಸ್ತಗಳು ಇರುತ್ತಿದ್ದರೆ ಅದರ ಕ್ಷೇತ್ರವೆಷ್ಟು?

೩) ನೂರುಮೊಳ ಎತ್ತರವಾದ ಗಿಡದ ತುದಿಯಲ್ಲಿದ್ದ ಒಂದು ಮುಂಗವು ಕೆಳಗಿಳಿದು ೨೦೦ ಮೊಳ ದೂರದಲ್ಲಿರುವ ಒಂದು ಕೆರೆಗೆ ಹೋಯಿತು. ಅಲ್ಲಿಯೇ ಕುಳಿತಿದ್ದ ಮತ್ತೊಂದು ಕೋತಿಯ ತುಸು ಮೇಲಕ್ಕೇರಿ ಅಲ್ಲಿಂದ ನೇಟ್ಟಗೆ ಹಾರಿ ಅದೇ ಸ್ಥಳಕ್ಕೆ ಮುಟ್ಟಿತು. ಎರಡೂ ಕಪಿಗಳು ಕ್ರಮಿಸಿದ ದಾರಿಯು ಅಷ್ಟೇ ಎಂಬದು ತಿಳಿಯಿಂದ ಗೊತ್ತಾಯಿತು. ಆದರೆ ಎರಡನೆಯ ಕೋತಿಯ ಎಷ್ಟು ಮೊಳ ಮೇಲೆ ಹಾರಿದ ಬಳಿಕ ತಿಡ್ಡ ಹಾರಿತು?

ಈ ಕೆಳಗೆ ಹೇಳುವ ಮೂರು ಉದಾಹರಣೆಗಳು ಪೃಥೂದಕ ಸ್ವಾಮಿಯ ಗ್ರಂಥದಲ್ಲಿಯೂ ಶ್ರೀಧರನ ತ್ರಿಶತಕದಲ್ಲಿಯೂ ಬಂದಿವೆ. ಇವು ಭಾರತೀಯ ಗಣಿತ ಶಾಸ್ತ್ರದಲ್ಲಿಯ ವಿಶಿಷ್ಟ ಮಾದರಿಯ ಉದಾಹರಣೆಗಳಾಗಿವೆ.

೧) ಒಂದು ಚತುರ್ಭುಜಾಕೃತಿಯ ತಳವು ೩೯ ಮೊಳ ಮತ್ತು ಅದರ ಮಿಕ್ಕ ಮೂರು ಭುಜಗಳು ಅಷ್ಟೇ ಎಂದರೆ ೨೫ ಮೊಳ ಇರುತ್ತಿದ್ದರೆ ಅದರ ಕ್ಷೇತ್ರವೆಷ್ಟು?

೨) ಒಂದು ಚತುರ್ಭುಜಾಕೃತಿಯ ತಳವು ೧೪ ಹಸ್ತ ಸರಿಯಾದ ಎರಡು ಭುಜಗಳು ೧೩ ಹಸ್ತ ಮತ್ತು ಇಳುಕಲಿನ ಭುಜವು ೪ ಹಸ್ತ ಇರುತ್ತಿದ್ದರೆ ಅದರ ಕ್ಷೇತ್ರವೆಷ್ಟು?

೩) ತಳವು ೬೦ ಹಸ್ತ ಇಳುಕಲುಗಳು ೨೫, ೫೨, ಮತ್ತು ೩೯ ಹಸ್ತಗಳು ಇರುವ ಟ್ರೆಪಿಝಿಯಮ್ಮದ ಕ್ಷೇತ್ರವೆಷ್ಟು?

ಪೇಥೇಗೋರಸನ ಸಿದ್ಧಾಂತವೆಂಬ ಭ್ರಾಮಕ ಕಲ್ಪನೆಗೆ ಸಂಬಂಧಿಸುವ ಈ ಕೆಳಗಿನ ಎರಡು ಉದಾಹರಣೆಗಳು ಭಾರತೀಯ ಭೂಮಿತಿ ವಿಷಯಕ ಜ್ಞಾನದ ಮಹತಿಯ ನಿದರ್ಶಕಗಳಾಗಿವೆ. ಈ ಉದಾಹರಣೆಗಳು ಚೀನದಲ್ಲಿ ಕ್ರಿ. ಪೂ. ೩ ನೆಯ ಶತಮಾನದಲ್ಲಿ ಇದ್ದುವು.

೧) ಸಮ ನೆಲದ ಮೇಲೆ ನಿಂತಿರುವ ೩೭ ಮೊಳ ಎತ್ತರವಾದ ಒಂದು ಬಿದಿರು ಗಾಳಿಯಿಂದ ನೆಲದಿಂದ ಕೆಲವೊಂದು ಮೊಳ ಎತ್ತರದಲ್ಲಿ ಮುರಿದು ಬಿದ್ದಿತು. ಅದರ ತಲೆಯು ಬುಡದಿಂದ ೧೬ ಮೊಳ ಅಂತರದಲ್ಲಿ ನೆಲಕ್ಕೆ ಹತ್ತಿತು. ಗಣಿತಜ್ಞರೇ ಹೇಳಿರಿ. ಅದು ನೆಲದಿಂದ ಎಷ್ಟು ಮೊಳ ಎತ್ತರದ ಮೇಲೆ ಮುರಿಯಿತು?

೨) ಈ ಕೆಳಗೆ ಹೇಳುವ ಲೀಲಾವತಿಯೊಳಗಿನ ಉದಾಹರಣೆಯನ್ನು ನೋಡಿರಿ.—

ಅಸ್ತಿಸ್ತಂಭ ತಲೇ ವಿಲಂ ತದುಪರಿ ಕ್ರೀಡಾಶಿಖಂಡೀಸ್ಥಿತಃ ।
ಸ್ತಂಭೇ ಹಸ್ತನವೋಚ್ಛ್ರಿ ತೇತ್ರಿಗುಣಿತ ಸ್ತಂಭ ಪ್ರಮಾಣಾಂತರೇ ॥

ದೃಷ್ಟ್ವಾಹಿಂ ವಿಲವಾವ್ರಜಂತಮಪತತ್ತಿರ್ಯಕ್ ಸುತಸ್ಯೋಪರಿ ।
ಕ್ಷಿಪ್ರಂ ಬ್ರೂಹಿ ತಯೋರ್ವಿಲಾತ್ಯತಿ ಮಿತೈಃ ಸಾಮ್ಯೇನ ಗತ್ಯೋರ್ಯುತಿಃ ॥

ಒಂದು ಸ್ತಂಭದ ತುದಿಯಲ್ಲಿ ಒಂದು ನವಿಲು ಕುಳಿತಿತ್ತು. ಸ್ತಂಭದ ಬುಡದಲ್ಲಿ ಹಾವಿನ ಬಿಲವಿತ್ತು. ಬಿಲಕ್ಕೆ ಬರುತ್ತಿದ್ದ ಹಾವನ್ನು ಕಂಡು ನವಿಲು ಹಾರಿ ಅದನ್ನು ಹಿಡಿಯಿತು. ಸ್ತಂಭದ ಎತ್ತರ ಒಂಬತ್ತು ಹಸ್ತಗಳು. ಹಾವು ಬಿಲದಿಂದ ಇಪ್ಪತ್ತೈದು ಹಸ್ತ ದೂರದಲ್ಲಿದ್ದಾಗ ನವಿಲು ಅದನ್ನು ನೋಡಿತು. ಹಾವು ನವಿಲುಗಳ ವೇಗವು ಸಮವಾಗಿದ್ದರೆ ಅವೆರಡೂ ಬಿಲದಿಂದ ಎಷ್ಟು ದೂರದಲ್ಲಿ ಕೂಡಿದುವು ಎಂಬದನ್ನು ತಟ್ಟನೆ ಹೇಳು.

ಚಕ್ರಕ್ರೌಂಚಾಕುಲಿತ ಸಲಿಲೇ ಕ್ವಾಪಿದೃಷ್ಟಂ ತಡಾಗೇ ।
ತೋಯಾದೂರ್ಧ್ವಂ ಕಮಲಕಲಿಕಾಗ್ರಂ ವಿತಸ್ತಿ ಪ್ರಮಾಣಂ ॥
ಮುಂದಂ ಮುಂದಂ ಚಲಿತಮನಿಲೇನಾಹತಂ ಹಸ್ತಯುಗ್ಮಂ ।
ತಸ್ಮಿನ್ ಮಗ್ನಂ ಗಣಕ ಕಥಯ ಕ್ಷಿಪ್ರಮಂಭಃ ಪ್ರಮಾಣಂ ॥

ಭಾಸ್ಕರಾಚಾರ್ಯರ ಲೀಲಾವತಿಯೊಳಗಿನ ಉದಾಹರಣೆಯಿದು.

ಇದರೊಳಗಿನ ಗಣಿತ ವಿಷಯಕ ಮಹತ್ವನನ್ನಂತೂ ಯಾರೂ ಪ್ರಶ್ನಿಸುವಂತಿಲ್ಲ. ಈ ಕವಿತೆಯೊಳಗಿನ ಉನ್ನತವಾದ ಸಾಹಿತ್ಯ ವಿಷಯಕ ಪ್ರಶಸ್ತಿಯನ್ನು ನೋಡಿ ಆನಂದಪಡೆಯದ ಅರಸಿಕನೆಂಥವನಿರಬೇಕೆನ್ನಿಸುವದಲ್ಲವೆ? ಚಕ್ರವಾಕ ಕ್ರೌಂಚ ಪಕ್ಷಿಗಳಿಂದಲೂ ಕಮಲ ಕಲ್ಹಾರಗಳಿಂದಲೂ ಮನೋಹರವಾದ ತಡಾಗದ ತಟದಲ್ಲಿ ನಮ್ಮನ್ನು ನೊದಲು ಒಯ್ದು ನಿಲ್ಲಿಸುವರು, ಭಾಸ್ಕರಾಚಾರ್ಯರು. ಬಳಿಕ ಅದೋ ಅಲ್ಲೊಂದು ಕಮಲವು ಕಾಣಿಸುತ್ತಿದೆಯಲ್ಲ, ಅದು ನೀರಿನ ಮೇಲೆ ಅರ್ಧ ಮೊಳ ಎತ್ತರವಾಗಿದೆ. ಅತ್ತ ನೋಡು, ಅದು ತಂಗಾಳಿಯಿಂದ ತೊನೆದು ಎರಡು ಮೊಳ ದೂರದ ವರೆಗೆ ಬಾಗಿ ನೀರನ್ನು ಮುಟ್ಟಿತು. ಈಗ ಹೇಳು, ಗಣಿತಜ್ಞನೇ ತಟ್ಟನೆ ಹೇಳು; ಈ ಸರೋವರದಲ್ಲಿ ನೀರು ಎಷ್ಟು ಆಳವಾಗಿದೆ?

ತ್ರಿಕೋಣ, ಭುಜ ಇಲ್ಲವೆ ಕೇಂದ್ರ, ತ್ರಿಜ್ಯ, ಪರಿಧಿ, ಶರ, ಜ್ಯಾ ಮುಂತಾದ ಭೂಮಿತಿಯ ಪಾರಿಭಾಷಿಕಗಳಿಂದ ನೀರಸವಾದ ಗಣಿತದ ಉದಾಹರಣೆಯನ್ನು ಕೇಳಿದಾಗ ಉಂಟಾಗುವ ತಲೆಬೇಸರಿಕೆಯನ್ನು ಇಂಥ ಮನೋಹರವಾದ ದೃಶ್ಯದ ಮುಂದೆ ಒಯ್ದು ನಿಲ್ಲಿಸಿ ಕಳೆದು ಬಿಡುವ ಚಮತ್ಕಾರವು ಭಾರತೀಯ ಗಣಿತ ಶಾಸ್ತ್ರಜ್ಞರಿಗೇ ಸಾಧ್ಯವಲ್ಲದೆ ಇನ್ನಾರಿಗೂ ಸಾಧ್ಯವಿಲ್ಲ. ಭಾಸ್ಕರಾಚಾರ್ಯರ ಲೀಲಾವತಿಯಲ್ಲಿ ಹೆಜ್ಜೆ ಹೆಜ್ಜೆಗೆ ಇಂತಹ ಸುರಮ್ಯವಾದ ಕಾವ್ಯಾಲಾಪವೂ ಗಣಿತದ ಚಮತ್ಕಾರವಾದ ಪ್ರಶ್ನೆಯೂ ಸಮ್ಮಿಲಿತವಾಗಿ ಓದುಗರ ಅಂತಃಕರಣವನ್ನು ಹರಣ ಮಾಡುತ್ತಿವೆ. ಗಣಿತಶಾಸ್ತ್ರದಲ್ಲಿಯೂ ಕಾವ್ಯಶಾಸ್ತ್ರದಲ್ಲಿಯೂ ಪರಿಣತಮತಿಗಳಾದ ಭಾರತೀಯ ಗಣಿತ ಶಾಸ್ತ್ರಜ್ಞರು ತಾವು ಪ್ರತಿಪಾದಿಸುವ ವಿಷಯವನ್ನು ಶ್ಲೋಕ ರೂಪವಾಗಿ ರಚಿಸಿ ಗಣಿತ ಶಾಸ್ತ್ರದ ಗ್ರಂಥಗಳನ್ನು ಉತ್ಕೃಷ್ಟ ಕಾವ್ಯಗಳ ನೆಲೆಗೆ ಏರಿಸಿ ನಿಲ್ಲಿಸಿರುವದು ಅವರ ಕೌಶಲ್ಯದ ನೈಶಿಷ್ಟ್ಯವಲ್ಲದೆ ಮತ್ತೇನು?

ಒಟ್ಟಿಗೆ ಗಣಿತ ಶಾಸ್ತ್ರದ ಉಪ್ಪತ್ತಿ ಬೆಳವಣಿಗೆ ವಿಕಾಸಗಳ ಬಗೆಗೆ ಭಾರತವು ಮುಂದೋ ಚೀನವು ಮುಂದೋ ಎಂಬದು ಕೆಲಕೆಲವು ಸಂದರ್ಭಗಳಲ್ಲಿ ಇನ್ನೂ ಸಂಶಯಾಸ್ಪದವಾಗಿಯೇ ಉಳಿದಿದೆ. ಏನೇ ಇದ್ದರೂ ಅತಿ ಪ್ರಾಚೀನ ಕಾಲದಲ್ಲಿಯೇ ಇವೆರಡೂ ದೇಶಗಳು ಇಂತಹ ಶಾಸ್ತ್ರ ಕಲೆಗಳ ಅಭ್ಯಾಸದಲ್ಲಿ ಹೆಚ್ಚಿನ ಪ್ರಗತಿಯನ್ನು ಪಡೆದಿದ್ದು ಪರಸ್ಪರ ವಿನಿಮಯದಿಂದ ಅವನ್ನು ಇನ್ನಷ್ಟು ವಿಕಾಸಗೊಳಿಸಿಕೊಂಡಿದ್ದವೆಂದುಹೇಳಲು ಏನೂ ಅಡ್ಡಿಯಿಲ್ಲ.

ಸಾಹಿತ್ಯ ಸ್ತೋತ್ರ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ನಮ್ಮ ನಿತ್ಯ ಸಾಹಿತ್ಯದ ಸ್ವರೂಪ ಧ್ಯೇಯಗಳ ಬಗೆಗೆ ನಾಲ್ಕು ಮಾತುಗಳನ್ನು ಬರೆದಿರುವೆವಷ್ಟೆ? ಕನ್ನಡ ಸಾಹಿತ್ಯದ ನಿರೀಕ್ಷಣೆಯಿಂದ ಈ ಸ್ವರೂಪ ಧ್ಯೇಯಗಳ ಒರೆಗೆ ಅದು ನಿಲ್ಲಬಹುದೇ ಎಂಬುದನ್ನೂ ಇಂದಿನವರ ಆಕ್ಷೇಪಗಳನ್ನೂ ಅದಕ್ಕೆ ಹೇಳಬಹುದಾದ ಸಮಾಧಾನಗಳನ್ನೂ ಕುರಿತು ಹಲಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಲು ಬಯಸುವೆವು.

ಸಾಹಿತ್ಯವಿಮರ್ಶಕರು ಸಾಮಾನ್ಯವಾಗಿ 'ಕಾಲಸ್ಥಾನಗಳನ್ನಾಗಲಿ ಅವರು ಇವರು ಎಂಬ ವ್ಯಕ್ತಿಭೇದವನ್ನಾಗಲಿ ಗಣಿಸದೆ ಅದರ ಗುಣಾವಗುಣ ವಿಶೇಷಗಳನ್ನೇ ಅನುಲಕ್ಷಿಸಬೇಕೆಂಬದು ಎಲ್ಲರೂ ಒಪ್ಪಿದ ಮಾತು. ಕಾಲವಿಭಾಗದ ಬಗೆಗೆ ಅವರು —

"ಅಂದಿನದು ಇಂದಿನದು ಎನಬೇಡ ಸಚ್ಚಿದಾ। ನಂದವೇ ಕಾವ್ಯಕ್ಕೆ ಗುರಿಯು."

ಎಂದು ಒಂದೇ ಮಾತಿನಲ್ಲಿ ತಮ್ಮ ನಿರ್ಣಯವನ್ನು ಹೇಳಿಬಿಟ್ಟಿರುವರು.

ನಮ್ಮ ವಾಙ್ಮಯಭಕ್ತರಲ್ಲಿ ಕೆಲವರು ನಮ್ಮ ಹಿಂದಣ ಸಾಹಿತ್ಯವನ್ನು ನಿರೀಕ್ಷಿಸಿ ಇಂದು ಬೆಳೆದು ಬಾಳಿ ಬದುಕಬೇಕಾಗಿರುವ ನಮ್ಮ ಬಯಕೆ ಬೇಡಿಕೆಗಳನ್ನು ತಿಳಿದು ಮುಂದೆ ನಾವೇನು ಮಾಡಬೇಕೆಂಬುದನ್ನು ಆಲೋಚಿಸುತ್ತಲಿದ್ದಾರೆ. ಅವರು ಹೇಳುವ ಮಾತುಗಳನ್ನು ಈ ರೀತಿ ವಿಂಗಡಿಸಿ ಸಂಗ್ರಹಿಸಿ ಹೇಳಬಹುದು:—

(ಅ) ನಮ್ಮ ಹಿಂದಣ ಸಾಹಿತ್ಯವು ಉತ್ತಮ ತರಗತಿಗೆ ಸೇರತಕ್ಕುದೇ ಆದರೂ ಅದು ನಮ್ಮ ಇಂದಿನ ಕೊರತೆಗಳನ್ನು ಈ ಕಾರಣಗಳ ಮೂಲಕ ಪೂರೈಸಲು ಸಾಧ್ಯವಿಲ್ಲ.

(೧) ಅದು ಆದ್ಯಂತ ಪದ್ಯರೂಪವಾಗಿದೆ.

(೨) ಆದು ಕೇವಲ ಪಂಡಿತರಿಗಾಗಿಯೇ ಬರೆದುದು.

(೩) ಅದರ ಭಾಷೆ ಜನಸಾಮಾನ್ಯಕ್ಕೆಲ್ಲ ಆನಂದವನ್ನು ಬೀರುವಷ್ಟು ಸುಲಭವಾಗಿಲ್ಲ.

(೪) ಅದು ನಮ್ಮ ಇಂದಿನ ರುಚಿ ವೈಚಿತ್ರ್ಯಕ್ಕೆ ಅನುಗುಣವಾಗಿಲ್ಲ.

(೫) ಯಾವ ಕಾವ್ಯದಲ್ಲಿ ನೋಡಿದರೂ ಧರ್ಮ, ನೀತಿ, ಪುರಾಣ; ಹುರುಳಿಲ್ಲದ ವೇದಾಂತ. ವರ್ಣನಾಕ್ರಮವೋ ಒಂದೇಒಂದು ವಿಧವಾದುದು; ಅದೇ ವಸಂತ; ಅದೇ ಕೋಗಿಲೆ; ಅದೇ ಕುಮುದ ಕಲ್ಹಾರಗಳು; ಅದೇ ಚಂದ್ರವದನೆ; ಕಮಲನಯನೆ.

ನಮ್ಮ ಇಂದಿನ ಸಾಹಿತ್ಯವು ಕೂಡ ತುಸು ಹೆಚ್ಚುಕಡಿಮೆ ಹಿಂದಣ ಸಾಹಿತ್ಯದಂತೆಯೇ. ಅದರಲ್ಲಿ ನಾವು ನಮ್ಮ ಇಂದಿನ ಜನಜೀವನದ ಪ್ರತಿರೂಪವನ್ನು ಕಾಣಲಾರೆವು. ತರುಣರೇ, ನಮ್ಮಲ್ಲಿ ಅಷ್ಟು ಗ್ರಂಥಗಳು ಹುಟ್ಟಿದುವು; ಇಷ್ಟು ಕಾವ್ಯಗಳ ರಚನೆಯಾಗಿದೆ, ಎಂದು ಹೆಮ್ಮೆ ಪಡುತ್ತೀರಲ್ಲ! ಎಲ್ಲಿದೆ ನಿಮ್ಮ ಗ್ರಂಥ ರಾಶಿ? ಎಲ್ಲವೂ ಕಥೆ ಕಾದಂಬರಿಗಳು, ಬಿಡಿ ಕವಿತೆಗಳು. ಬೆಳೆಗಿಂತಲೂ ಕಳೆ ಹೆಚ್ಚು. ಅನ್ನವನ್ನು ಮಿಕ್ಕಿದ ತೊನ್ನೆ. ಹುರುಳಿಲ್ಲದ ಹೊಳ್ಳು ಸಾಹಿತ್ಯ. ಕಾಲಚಕ್ರದ ಗತಿಯ ಗಾಳಿಯಲ್ಲಿ ತೂರಿದಾಗ ಇದರೊಳಗಿನ ಹೊಳ್ಳಿಷ್ಟು ನೆಲ್ಲಿಷ್ಟು ನೆಲೆಯಾಗುವುದು. ಎಲ್ಲವೂ ಅಂಧ ಅನುಕರಣದ ಫಲ. ಹೊರಗೆ ಸಾಹಿತ್ಯ ಸೇವೆ. ಒಳಗೆ ಉದರ ಸೇವೆ.

ಗ್ರಂಥಾ ಹಿ ಬಹವಃ ಸಂತಿ ಲೋಕ ವಿತ್ತಾಪಹಾರಕಾಃ ।
ಗ್ರಂಥಾ ಹಿ ವಿರಲಾಃ ಸಂತಿ ಲೋಕ ಹೃತ್ತಾಪಹಾರಕಾಃ ॥ ಇತ್ಯಾದಿ – ಇತ್ಯಾದಿ.

ಈ ಆಕ್ಷೇಪಗಳಿಗೆ ನಾವೇನು ಸಮಾಧಾನ ಹೇಳಬಹುದೋ ಕ್ರಮವಾಗಿ ಒಂದೊಂದೇ ಮಾತಿನಲ್ಲಿ ಆಲೋಚಿಸಿ ವಿಷಯವನ್ನು ಮುಗಿಸೋಣ.

ನಮ್ಮ ಹಿಂದಣ ಕಾವ್ಯಗಳನ್ನು ಜೈನರ ಪ್ರಾಬಲ್ಯದ ಕಾಲದುವು, ವೀರಶೈವ ವಾಙ್ಮಯ, ಮೊದಲಾಗಿ ವರ್ಗೀಕರಿಸಿ ಅವನ್ನೆಲ್ಲ ಕೂಲಂಕಷವಾಗಿ ಪರ್ಯಾಲೋಚಿಸಲು ಇಲ್ಲಿ ಅವಕಾಶವಿಲ್ಲ. ಜೈನ ಕವಿಗಳು ಕನ್ನಡಕ್ಕೆ ಮಾಡಿದ ಉಪಕಾರವನ್ನು ನಾವು ಹೊಗಳಬೇಕಾಗಿಲ್ಲ. ಯಾರು ತೆಗಳಿದರೂ ಅದಕ್ಕೇನೂ ಕುಂದು ಬರದು

ಪಂಪನು ನಮ್ಮ ಆದಿಕವಿ ಸಂಸ್ಕೃತದಲ್ಲಿ ಕಾಳಿದಾಸನಿಗೂ ಇಂಗ್ಲಿಷಿನಲ್ಲಿ ಷೇಕ್ಸ್‌ಪೀಅರನಿಗೂ ದೊರೆದಷ್ಟು ಮನ್ನಣೆ ಮಹಾ ಕಾವ್ಯ ಕರ್ತುವೆಂಬ ದೃಷ್ಟಿಯಿಂದ ಕನ್ನಡದಲ್ಲಿ ಪಂಪನಿಗೆ ದೊರೆಯಬೇಕೆಂದು ಹೇಳುವದುಂಟು. ಆತನ ಕಥಾರಚನೆಯ ಜಾಣ್ಮೆ ಪಾತ್ರಸೃಷ್ಟಿಯ ಕುಶಲತೆ ಕವಿತಾ ಶಕ್ತಿ ಇವನ್ನು ನಾವು ಬಣ್ಣಿಸಬೇಕಾಗಿಲ್ಲ.

"ವರ್ಣಕಂ ಕಥೆಯೊಳೊಡಂಬಡೆಯೆ ಪೇಳ್ವೊಡೆ ಪಂಪನೆ ಪೇಳ್ದಂ" ಎಂದು ಆಕಾಲದ ಸುಜ್ಞರೇ ಆತನನ್ನು ಹೊಗಳಿದ್ದಾರೆ. ಆತನ ಪಾತ್ರಸೃಷ್ಟಿಯೂ ಆ ಪಾತ್ರಗಳ ಗುಣಪೋಷಣೆಯೂ ಇನ್ನಾವ ಕವಿಗೂ ಸಾಧಿಸಲಾರದು, ಎಂದು ಒಂದೇ ಮಾತು ಹೇಳಿದರೆ ಸಾಕು. ಪಂಪನ ಪದ್ಯಗಳು ಗದ್ಯ ಛಾಯೆಯಿಂದ ಮಿರುಗುತ್ತವೆ. ಒಂದರ ಮುಂದೊಂದು ಬರುವ ವಾಕ್ಯಮಾಲೆಗಳಿಂದಾದ ಪದ್ಯಗಳವು. ಕೆಲವೆಡೆ ಪದ್ಯದಲ್ಲಿ ಪ್ರಾರಂಭವಾದ ವಾಕ್ಯಗಳು ಮುಂದಣ ಗದ್ಯದಲ್ಲಿ ಮುಗಿದಿವೆ. ಆತನ ಕಾವ್ಯಗಳ ರಸಾಲಂಕಾರಗಳ ಮಾತೆತ್ತುವುದೇ ಬೇಡ. ಕೇವಲ ಕವಿಸಮಯಕ್ಕೆ ಕಟ್ಟು ಬಿದ್ದ ವರ್ಣನೆಗಳೂ ಅಲಂಕಾರಗಳೂ ಈತನ ಗ್ರಂಥಕ್ಕೆ ಹೊರೆಯಾಗಿ ಹೊಕ್ಕು ಅದರ ಸೌಂದರ್ಯವನ್ನು ಕೆಡಿಸಿಲ್ಲ. ಈ ಕಾರಣಗಳಿಂದ ಪಂಪನು ನಮಗೆ ಆದಿಕವಿ, ಮಾನ್ಯಕವಿ, ಗ್ರೀಕರಿಗೆ ಹೋಮರನಿದ್ದಂತೆ; ರೋಮನರಿಗೆ ವರ್ಜಿಲನಿದ್ದಂತೆ.

ಪಂಪನ ತರುವಾಯದ ನಮ್ಮ ಕವಿಚಕ್ರವರ್ತಿಯೆಂದರೆ ರನ್ನನು ಆತನು— ಮತಿಕೋಶಂ ಪದವಿದ್ಯೆ, ಕಂತಿಕೆ ಜಸಂ, ಶ್ವೇತಾತಪತ್ರಂ ಸರ। ಸ್ವತಿಮಾದೇವಿ, ಪದೋಕ್ತಿ ಭೇರಿ, ಕಲ್ಪಿತಂ ಸಿಂಹಾಸನಂ ಸಂದಲಂ। ಕೃತಿ ಚಾಂಚಲ್ಯ ಮರೀಚಿಮಾಗೆ, ಕವಿತಾ ಸಾಮ್ರಾಜ್ಯಮಂಶಾಳ್ದುನ್ನತಿಯಿಂದಂ ಕವಿಚಕ್ರವರ್ತಿವೆಸರೇಂ ರನ್ನಂಗೆ ಮೆಯ್ವೆತ್ತುದೊ ॥ ಈ ಕಾರಣಗಳಿಂದ ಕವಿ ಚಕ್ರವರ್ತಿಯಾಗಿ ಮೆರೆದನು.

ಪಂಪರನ್ನರಂತೆಯೇ ಪೊನ್ನ ಜನ್ನರು; ನಾಗಚಂದ್ರ ನೇಮಿಚಂದ್ರರು; ಚಾವುಂಡ ಅಂಡಯ್ಯರು.

ಪಂಪನ ನುಣ್ಪುವೆತ್ತನುಡಿ, ಪೊನ್ನನ ಬಿನ್ನಣ ದೋಜೆ, ರನ್ನನೊಳ್ಪಂ ಪುದಿದಿರ್ದ ಲಕ್ಷಣ ವಿಚಕ್ಷಣೋನ್ನತಿ, ಕಣ್ಣಮಯ್ಯನಿಂಪಂ ಪುದಿದಿರ್ದ ಗೌರವಗುಣಂ ಗುಣವರ್ಮನ ದೇಸಿವೆತ್ತ ಮಾತು— ಇವನ್ನೆಲ್ಲ ನಾವು ಅವರ ಕಾವ್ಯಗಳನ್ನೋದಿಯೇ ತಿಳಿಯಬೇಕು. ಅವರು ಸಾವಿರ ವರುಷಗಳ ಹಿಂದಣವರಾದರೂ— ಇಂದಿನವರೇ ಆ ಜೈನ ಕಾವ್ಯೋದಧಿಯಿಂದಿಗೂ ನಾಗರದ ತೆರೆಗಳಂತೆಯೇ ನಮಗೆ ಹೊಸದೇ. ಅದು ನಮಗೆ ಹಿಂದೆಯೂ ಇಂದಿಗೂ ಮುಂದೆಯೂ 'ಸತ್ಯಂ ಶಿವಂ ಸುಂದರಂ' ಅದುದರಿಂದ ಅದು ತ್ರಿಕಾಲಾಬಾಧಿತವಾದ ಸತ್ಯದ ಭಿತ್ತಿಯಲ್ಲಿ ಚಿತ್ರಿತವಾದ ಶಿವ ಸ್ವರೂಪದ ಜೀವಕಳೆಯನ್ನೊಂದಿದ ಸರಸ್ವತೀ ದೇವಿಯ ಅತ್ಯಂತ ರಮಣೀಯವಾದ ಉಜ್ವಲವಾದ ಪ್ರತಿರೂಪ. ಅದಕ್ಕಾಗಿ ನಾವು—

ಪಂಪರನ್ನರ ಪೆಂಪು ಪೊನ್ನ ಜನ್ನರ ನುಣ್ಪು । ಸೊಂಪೆನಿಸದೇ ಇಂದು ನಮಗೆ ॥
ಪಂಪ ರಾಮಾಯಣದ ವೈದುಷ್ಯ ನಲ್ವಾತು । ಸೊಂಪಿತ್ತು ಮನದಣಿಸದಿಹುದೇ ।

ಅಂದಿನದು ಇಂದಿನದು ಎನಬೇಡ ಪರಮಾನಂದವೇ ಕಾವ್ಯಕ್ಕೆ ಗುರಿಯು— ಎಂಬ ಕನ್ನಡದ ಹಾಡನ್ನು ಇನ್ನೊಮ್ಮೆ ಹಾಡುವ. ಅಂತೆಯೇ ವೀರಶೈವರ ವಚನಸಾಹಿತ್ಯ, ಬ್ರಾಹ್ಮಣಂಕಾವ್ಯಗಳು.

ಶ್ರೀ ಬಸವೇಶ್ವರ ಚೆನ್ನಬಸವೇಶ್ವರರು, ವೀರಶೈವ ಮತದ ಉದ್ಧಾರಕರು. ಅವರೂ ಅವರ ಅನುಯಾಯಿಗಳಾದ ಅಸಂಖ್ಯ ಪಾವಾಡ ಪುರುಷರೂ ಕರ್ಣಾಟಕ ಸರಸ್ವತಿಯನ್ನು ಬಹುವಿಧದಿಂದ ಅರ್ಚಿಸಿದರು. ಅವರ ಆ ಭಕ್ತ್ಯಂಜಲಿಯಲ್ಲಿ ಎಂದಿಗೂ ಬಾಡದ ಕಂಪಡಗದ ಚಿರಂತನ ಜೀವಿಗಳಾದ ಅನಂತ ಕುಸುಮಗಳು ಮಗಮಗಿಸಿದುವು. ಅವೇ ವೀರಶೈವ ವಚನಗಳು. ಆ ವಚನಗಳ ಮನೋಹರ ಶೈಲಿಯ ಬಿಗುವನ್ನೂ ಅರ್ಥಗಾಂಭೀರ್ಯವನ್ನೂ ಭಾಷಾಸೌಂದರ್ಯವನ್ನೂ ಬಣ್ಣಿಸಿದಷ್ಟೂ ಕಡಮೆಯೇ. ವೇದೋಪನಿಷತ್ತುಗಳಲ್ಲಿಯ ಗಹನವಾದ ವಿಷಯಗಳನ್ನು ಪಾಮರ ರಂಜಕವಾದ ರೀತಿಯಲ್ಲಿ ಸಕಲರೂ ತಿಳಿಯಬಹುದಾದ ತಿಳಿಗನ್ನಡದ ಮಾತುಗಳಲ್ಲಿ ಸೂರೆಮಾಡಿ ನಮ್ಮವರ ಮನೆ ಮನೆಗಳನ್ನು ಭದ್ರಂ ಶುಭಂ ಮಂಗಳಂ! ಮಾಡಿದ ನಮ್ಮ ವಾಙ್ಮಯ ದೇವಿಯನ್ನು ಸತ್ಯಂ ಶಿವಂ ಸುಂದರಂ ಗೈದ ಆ ಮಹಾತ್ಮರ ಭಾಷಾ ಸೇವೆಯನ್ನು ಎಷ್ಟೆಂದು ಬಣ್ಣಿಸೋಣ ಈ ಶಿವ ಶರಣರಲ್ಲದೆ ಹರಿಹರ ರಾಘವಾಂಕ ಭೀಮಕವಿ ಷಡಕ್ಷರದೇವ ಮೊದಲಾದ ಉದಾತ್ತ ವಾಙ್ಮಯ ಭಕ್ತರೂ ಉದಯವಾಗಿ ಆ ಕಾಲದಲ್ಲಿ ಅನೇಕ ಧಾರ್ಮಿಕ ಗ್ರಂಥಗಳನ್ನೂ ಲಾಕಿಕ ಮಹಾ ಕಾವ್ಯಗಳನ್ನೂ ವಿರಚಿಸಿ ಕನ್ನಡದೇವಿಯನ್ನು ಸಿಂಗರಿಸಿದರು.

ಈ ಕಾಲದಲ್ಲಿ ಮಾರ್ಪಟ್ಟ ನಮ್ಮ ಕನ್ನಡ ಕಾವ್ಯಗಳ ಸ್ವರೂಪವು ನಾವು ಪರ್ಯಾಲೋಚಿಸತಕ್ಕ ಇನ್ನೊಂದು ವಿಷಯ. ವೀರಶೈವ ವಾಙ್ಮಯವು ತನ್ನ ಧ್ಯೇಯಕ್ಕನುಗುಣವಾಗಿ ಜೈನರ ಕಾಲದ ಭಾಷೆಯ ಬಿಗುವನ್ನೂ ಶೈಲಿಯ ಉನ್ನತಿಯನ್ನೂ ದಲಿಸಿಕೊಂಡು ಶಿಕ್ಷಿತರಲ್ಲದ ಸಾಮಾನ್ಯರುಕೂಡ ತಿಳಿಯಲು ಸಾಧ್ಯವಾದ ಸುಲಭ ಸ್ವರೂಪವನ್ನು ಹೊಂದಿತು. ಗಹನವಾದ ಧಾರ್ಮಿಕ ವಿಷಯಗಳನ್ನು ಸಾಮಾನ್ಯರಿಗೂ ಕೂಡ ತಿಳಿಸಲು ಹೊರಟ ಸಾರಸ್ವತಪ್ರವಾಹ ಅದು. ಅದಕ್ಕಾಗಿಯೇ ಅದು ವ್ಯವಹಾರದ ಮಾತಿನಲ್ಲಿ ಒಡೆದು ಮೂಡಬೇಕಾಯಿತು. ಅದಕ್ಕಾಗಿಯೇ ಅದು ಗದ್ಯದಲ್ಲಿ ಮಾರ್ಪಟ್ಟಿತು. ಪದ್ಯದಲ್ಲಿದ್ದರೂ ಹಳಗನ್ನಡ ನಡುಗನ್ನಡಗಳ ಬಿಗುವಾಗಲಿ ಶೈಲಿಯಾಗಲಿ ಅದಕ್ಕೊಪ್ಪುವ ಸಂಸ್ಕೃತ ವೃತ್ತಗಳ ಛಂದಸ್ಸಾಗಲಿ ಅದಕ್ಕೆ ಗ್ರಾಹ್ಯವಾಗಲಿಲ್ಲ. ಹಿಂದೆ ಎಲ್ಲಿಯೋ ಒಂದೆರಡೆಂದು ಎಣಿಸಬಹುದಾದ ಷಟ್ಪದಿಗಳು ಈಗ ಎಲ್ಲೆಲ್ಲಿಯೂ ತಾವೇ ತಾವಾಗಿ ರೂಢಿಕರಿಸತೊಡಗಿದುವು. ಚಿರಂತನ ಸತ್ಯದ ನೆಲೆಯನ್ನರಿತ ಮಹಾನುಭಾವರಿಂದಲೂ ಮಹಾ ಕವಿಗಳಿಂದಲೂ ಹುಟ್ಟಿ ಕಾಲಾನುರೋಧದಿಂದ ಧರ್ಮ ಪ್ರಸಾರಣೆಯೇ ಧ್ಯೇಯವಾಗಿ ಧರ್ಮನೀತಿಗಳೇ ಜೀವವಾಗಿದ್ದುದರಿಂದಲೂ ಸಕಲರೂ ತಿಳಿಯಬಹುದಾದ ತಿಳಿಗನ್ನಡದ ಕಟ್ಟು ಮಟ್ಟುಗಳಲ್ಲಿರುವುದರಿಂದಲೂ ವೀರಶೈವ ವಾಙ್ಮಯವು ಕೂಡ ಜೈನ ಸಾರಸ್ವತದಷ್ಟೇ ನಮಗ ಮಾನ್ಯವಾಗಿದೆ. ಸುಖಾವಹವಾಗಿದೆ. ಆನಂದದಾಯಕವಾಗಿದೆ. ಅದೂ ನಮಗೆ ಸತ್ಯಂ ಶಿವಂ ಸುಂದರಂ!

ಇನ್ನುಳಿದವರು ಬ್ರಾಹ್ಮಣ ಕವಿಗಳು— ಅವರ ಕಾವ್ಯಗಳು. ಲಕ್ಷ್ಮೀಶ, ಕುಮಾರವ್ಯಾಸ ಕುಮಾರವಾಲ್ಮೀಕಿ ಮೊದಲಾದವರ ಮತ್ತು ಅವರ ಕಾವ್ಯಗಳ ವಿಚಾರವಾಗಿ ನಾವೇನೂ ಹೇಳಬೇಕಾಗಿಲ್ಲ ಲಕ್ಷ್ಮೀಶ, ಕುಮಾರವ್ಯಾಸರ ಷಟ್ಪದಿಗಳ ಓಟ ರಸಭಾವಗಳ ಚೆಲ್ಲಾಟ, ರೀತಿನೀತಿಗಳ ಬೀರಾಟಗಳನ್ನು ನಾವು ಬಣ್ಣಿಸಬೇಕಾಗಿಲ್ಲ. ಈ ಸರ್ವಮಾನ್ಯವಾದ ಸರ್ವಜನಾನಂದದಾಯಕಗಳಾದ ಮಹಾ ಕಾವ್ಯಗಳನ್ನು ಎತ್ತಿ ಆಡಿ ತಮ್ಮ ಹೊತ್ತು ಕಳೆಯಲಾರೆ. ಆದುದರಿಂದ

ನಮ್ಮ ವಾಙ್ಮಯವೃಕ್ಷದ ಈ ಶಾಖೆಯು ಕೂಡ ಸತ್ಯಂ ಶಿವಂ ಸುಂದರಂ! ಆದುದರಿಂದ 'ಅಂದಿನದು ಇಂದಿನದು....' ಏನಬೇಡ ಸಚ್ಚಿದಾನಂದವೇ ಕಾವ್ಯಕ್ಕೆ ಗುರಿಯು ಎಂಬ ಪಲ್ಲವಿಯನ್ನು ಇಲ್ಲಿಯೂ ಇನ್ನೊಮ್ಮೆ ಹಾಡೋಣ.

ನಮ್ಮ ವಾಙ್ಮಯ ಮಾರ್ಗದಲ್ಲಿ ಇಲ್ಲಿ ಚಿಕ್ಕದೊಂದು ಕವಲಿದೆ. ಸರ್ವಜ್ಞ, ಕನಕದಾಸ, ಪುರಂದರದಾಸರಂಥವರ ಕಾವ್ಯಗಳೇ ಈ ಕವಲು ದಾರಿಯೊಳಗಿನ ಕೈಗಂಬಗಳು; ಉಜ್ವಲವಾಗಿ ಹೊಳೆಯುವ ವಿದ್ಯುದ್ದೀಪಗಳು. ಸರ್ವಜ್ಞ ಸ್ವಾಮಿಯು ಈ ಕವಲು ದಾರಿಯ ಸಂದಿನಲ್ಲಿ ನಿಂತು ಎಚ್ಚರಿಕೆ! ನಮ್ಮನ್ನು ಮರೆತೀರಿ! ಎಂದು ಹೇಳುವಂತಿದ್ದಾನೆ. ಇವರು ಹುಟ್ಟು ಕವಿಗಳು; ಕಲಿತು ಕವಿಗಳಾದವರಲ್ಲ. ಪ್ರಪಂಚವನ್ನು ನೋಡಿದಾಗ ತಮ್ಮ ಮನಸ್ಸಿಗೆ ಹೊಳೆದುದನ್ನೇ ಕುದಿದುಕ್ಕುವ ಉಜ್ವಲವಾದ ಭಕ್ತಿರಸದ ಪ್ರವಾಹವನ್ನೇ ಹಿಂದುಮುಂದು ನೋಡದೆ ವ್ಯಾಕರಣ ಛಂದಸ್ಸು ಕವಿ ಸಮಯಗಳ ಭಯ ಭೀತಿಗಳಿಲ್ಲದೆ ಹಾಡಿ ಆನಂದಪಟ್ಟ ಋಷಿಕಲ್ಪರಿವರು. ಇವರಲ್ಲಿ ಸರ್ವಮಾನ್ಯವಾದ ಕವಿತ್ವವಿದೆ. ಇವರ ನುಡಿಗಳಲ್ಲಿ ನಾವು ಕನ್ನಡ ನುಡಿಗಳ ಗಂಡುತನವನ್ನು ಕಾಣಬಹುದು; ಭಾಷೆಯ ಜೀವಾಳವನ್ನು ನೋಡಬಹುದು; ಸತ್ಯವಿದೆ, ಕಲ್ಯಾಣವಿದೆ, ಸೊಬಗಿದೆ. ಆದುದರಿಂದ ಇದೂ ನಮಗೆ ಸತ್ಯಂ ಶಿವಂ ಸುಂದರಂ!

ನಮ್ಮ ಹಿಂದಣ ವಾಙ್ಮಯವನ್ನು ಕುರಿತು ನಾವು ಈ ರೀತಿ ಎಷ್ಟು ಎತ್ತಿ ಮನ್ನಿಸಿ ಬಣ್ಣಿಸಿದರೂ ಅದು ಹಲವರಿಗೆ ಅದೊಂದು ಅಭಿಮಾನದ ಮಾತೆನಿಸಬಹುದೆಂಬ ವಿಚಾರದಿಂದ ಆ ಹಿಂದಿನ ಮಹಾ ಕವಿಗಳ ವಿಚಾರವನ್ನೇ– ಅವರ ಮಾತುಗಳನ್ನೇ– ಒಂದೊಂದು ಉಪ್ಪೇಪಕ್ಕೆ ಒಂದೊಂದು ಸಮಾಧಾನವೆಂದು ಉದಹರಿಸುವೆನು.

ನಮ್ಮ ಪ್ರಾಚೀನ ವಾಙ್ಮಯವೆಲ್ಲ ಪದ್ಯರೂಪವಾಗಿದೆ. ಅವರು ಗದ್ಯಗಳನ್ನು ರಚಿಸಲೇ ಇಲ್ಲ ಎಂಬುದು ನಿರಾಧಾರವಾದ ಮಾತು. ಇದಕ್ಕೆ ನೃಪತುಂಗನ ಕವಿರಾಜಮಾರ್ಗದಲ್ಲಿಯ ಒಂದು ಪದ್ಯವನ್ನು ಉದಾಹರಣೆಯಾಗಿ ಹೇಳುವೆನು.

ವಿಮಳೋದಯ ನಾಗಾರ್ಜುನ। ಸಮೇತ ಜಯಬಂಧು ದುರ್ವಿನೀತಾದಿಗಳೀ।
ಕ್ರಮದೊಳ್ ನೆಗಳ್ದ ಗದ್ಯಾ। ಶ್ರಯಗುರುತಾ ಪ್ರತೀತಿಯಂ ಕೈಕೊಂಡರ್॥

ಇವರು ನಮ್ಮ ಪ್ರಾಚೀನ ಗದ್ಯಕಾವ್ಯಗಳ ಕವಿಗಳು– ಇವರಿಗೆ ಗದ್ಯಾಶ್ರಯ ಗುರುತಾ ಪ್ರತೀತಿಯಿದ್ದಿತು. ನೃಪತುಂಗನ ಅಭಿಪ್ರಾಯದಂತೆ ಇನ್ನೆಷ್ಟೊ ಮಹಾ ಕವಿಗಳು ಸಕಲ ಭಾಷಾ ಲೌಕಿಕ ಸಾಮಯಿಕಾದಿಗಳನ್ನು ತಿಳಿದು ಮಹಾ ಗದ್ಯ ಕಾವ್ಯಗಳನ್ನು ರಚಿಸಿದ್ದರೆಂಬುದು ಸಿದ್ಧವಾಗುವುದು. ಅವು ನಮಗೆ ಉಪಲಬ್ಧವಾಗಿಲ್ಲವೆಂದ ಮಾತ್ರಕ್ಕೆ ನಮ್ಮವರು ಈ ದಾರಿಯನ್ನು ಕಂಡವರೇ ಅಲ್ಲವೆಂದು ಹೇಳುವುದು ಹೇಗೆ?

ಇನ್ನು ಎರಡನೆಯ ಮಾತು— ನಮ್ಮ ಕಾವ್ಯಗಳೆಲ್ಲ ಪಂಡಿತರಿಗಾಗಿಯೇ ಬರೆದುವು. ಅವು ಜನಸಾಮಾನ್ಯಕ್ಕೆಲ್ಲ ಆನಂದವನ್ನು ಕೊಡುವಂತೆ ಸತ್ಯಂ ಶಿವಂ ಸುಂದರಂ! ಆದುವಲ್ಲ, ಎಂಬುದು, ಇದಕ್ಕೂ ಒಂದು ಆಧಾರವನ್ನು ಕೊಡೋಣ.

ಅತಿ ಗಂಭೀರ ಮೃದೂಕ್ತಿ ವಕ್ತ್ರದೊಳೊಡಂಬಟ್ಟೊಪ್ಪೆ ಕೇಳ್ದಂ ಬಹು।
ಶ್ರುತನಲ್ಪಶ್ರುತನೆನ್ನದಾರಕವಿಗಂ ನುಣ್ಪೆಂಪಿನೊಳ್ ಕೂಡಿ ಪಂ।
ಡಿತರುಂ ಮೂರ್ಖರುಮೆಕ್ಕೆಯಿಂ ಪೊಗಳೆ ಪೇಳಲ್ಬಾಚಿಸಲ್ಮಾಸರ।
ಸ್ಫುತಿಯಂ ಸಾಧಿಸೆ ಸಂದಸಯ್ದು ಸವಣಂಗಕ್ಕಲಂ ಪೆರರ್ಗಕ್ಕುಮೇ॥

ಇದು ಪೊನ್ನನ ಶಾಂತಿಪುರಾಣ (೧–೮) ದೊಳಗಣ ಕವಿತೆ.

ಕವಿಗಳು ಕಾವ್ಯವನ್ನು ಬರೆವಾಗ ಯಾವ ದೃಷ್ಟಿಯನ್ನಿಟ್ಟುಕೊಂಡು ಬರೆಯಬೇಕೆಂಬ ಸಾಮಾನ್ಯ ನಿಯಮವನ್ನು ಹೇಳುವ ಕವಿತೆಯಿದು. ಇದರಿಂದ ನಾವು ಹಿಂದಣವರ ಮೇಲೆ ಹೇರುವ ಆರೋಪದ ಭಾರವು ಎಷ್ಟು ಅನ್ಯಾಯವಾದುದೆಂಬುದನ್ನು ತಾವೇ ಊಹಿಸಿಕೊಳ್ಳಿ.

ಇನ್ನು ಕೊನೆಯ ಮಾತು— ನಮ್ಮ ಎಲ್ಲ ಕಾವ್ಯಗಳೂ ಒಂದೇ ಮಾದರಿಯಾಗಿವೆ. ಪಂಪಭಾರತವನ್ನೋ ಗದಾಯುದ್ಧವನ್ನೋ ಓದಿಬಿಟ್ಟರೆ ಸಾಕು. ಮಿಕ್ಕವೆಲ್ಲಾ ಅನು ಕರಣ. ಇದಕ್ಕೂ ಆ ನಮ್ಮ ಹಿಂದಣ ಮಹಾಕವಿಗಳೇ ಏನು ಸಮಾಧಾನ ಹೇಳುವರೋ ನೋಡೋಣ.

ಕವಿತ್ವವೆಂಬುದು ಎಂದೂ ಹಳೆಯದಾಗದು. ಅದೊಂದು ಚಿರಂತನ ಸತ್ಯ. ತ್ರಿಕಾಲಾ ಬಾಧಿತವಾದುದು. ಅಂದಿನದು ಇಂದಿನದು ಎಂಬ ಭೇದವು ಅದಕ್ಕಿಲ್ಲ. ಸಮುದ್ರ ಸೂರ್ಯ ಚಂದ್ರರು ನಕ್ಷತ್ರ ಇವೆಲ್ಲಾ ಹಿಂದೆ ಇದ್ದಂತೆಯೇ ಇಂದಿಗೂ ಇವೆ ಎಂದು ಇವು ನನುಗೆ ಹಳೆಯ ವೇನು ? ಮಹಾಕವಿ ಪಂಪನು ಆದಿಪುರಾಣದಲ್ಲಿ ಈ ಮಾತನ್ನು ಹೇಳಿಯೇ ಇದ್ದಾನೆ. "ಇದು ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ ಜಗಕ್ಕೆ...." ಎಂಬುದು ಆತನ ಹೇಳಿಕೆ. ಸಮುದ್ರವು ಅದೇ ಆಗಿದ್ದರೂ ತರಂಗಮಾಲೆಗಳಿಂದ ಅದು ಕ್ಷಣ ಕ್ಷಣಕ್ಕೂ ಹೊಸತೆನಿಸು ವಂತೆ ವರ್ಣಿತ ವಿಷಯ ಕ್ರಮ ಇವು ಒಂದೇ ಆದರೂ ಕವಿ ಕಾವ್ಯ ವಿಭೇದಗಳಿಂದ ಅವು ಭಿನ್ನ ವಾಗಿಯೇ ಇರುವವು. ಆದುದರಿಂದ ಪಂಪಭಾರತವೋ ಗದಾಯುದ್ಧವೋ ಒಂದನ್ನು ಓದಿಬಿಟ್ಟರೆ. ಸಾಕು; ಮಿಕ್ಕ ಹಳೆಯ ಕಾವ್ಯಗಳ ಕಂತೆ ನಮಗೇಕೆ ಬೇಕು ಎಂಬುದು ಉಚಿತವಲ್ಲ. ಹಿಂದಣ ಕಾವ್ಯಗಳ ವಿಷಯದಲ್ಲಿ ಇಷ್ಟೆಲ್ಲ ಸಮಾಧಾನಗಳನ್ನು ಹೇಳಿದರೂ ಆ ವಿಷಯದಲ್ಲಿ ನಾವೊಂದು ಮಾತನ್ನು ಮರೆಯುವಂತಿಲ್ಲ. ನಮ್ಮ ಅಭಿಮಾನದ ದೃಷ್ಟಿಯ ಮೇಲಣ ಚಿಕ್ಕ ಪರೆಯೊಂದನು ನಾವು ಜಲ್ಲಗಳೆಯಲಾರೆವು. ಆ ಕಾವ್ಯಗಳು ಬಹು ವಿಸ್ತಾರವಾದುವು. ಕಥಾ ಭಾಗವನ್ನು ತಿಳಿಯಲು ಧಾವಿಸುವ ಮನಸ್ಸಿಗೆ ಅಲ್ಲಲ್ಲಿಗಿರುವ ಅತಿ ವಿಸ್ತಾರವಾದ ವರ್ಣನೆಗಳು ತುಸು ಬೇಸರವನ್ನುಂಟುಮಾಡುವುವು ಎಂಬ ಮಾತು ಸಂಪೂರ್ಣ ಸತ್ಯ. ಒಮ್ಮೊಮ್ಮೆ ಕಾವ್ಯದ ಆನಂದಕ್ಕೂ ಅದರಿಂದಾಗಬೇಕಾದ ಫಲಕ್ಕೂ ಇವು ತಡೆಗಟ್ಟುವಂತಿವೆ. ಆದುದರಿಂದ ಈಚೆಗೆ ಮೈಸೂರ ವಿಶ್ವವಿದ್ಯಾನಿಲಯದವರು ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯವನ್ನೂ ಇನ್ನನೇಕ ಗ್ರಂಥ ಗಳನ್ನೂ ಸಂಕ್ಷೇಪಿಸಿ ಪ್ರಕಟಿಸಿದಂತೆ ನಮ್ಮ ಹಳೆಯ ಕಾವ್ಯವೃಕ್ಷಗಳ ಬಂದಳಿಕೆ ಹತ್ತಿದ ಹಳೆದಾದ ಅಡ್ಡ ತಿಡ್ಡ ಹಬ್ಬಿದ ಟೊಂಗೆಗಳನ್ನು ಕತ್ತರಿಸಿದರೆ ಅವು ಸುಂದರವಾಗಿ ಸುರಮ್ಯವಾಗಿ ಇನ್ನಷ್ಟು ಸತ್ಯಂ ಶಿವಂ ಸುಂದರಂ ಆಗುವವೆಂಬುದರಲ್ಲಿ ಸಂದೇಹವಿಲ್ಲ. ಅವುಗಳಿಗೆ ಅಲ್ಲಲ್ಲಿಗೆ ಮಾರ್ಗದರ್ಶಿ ಯಾದ ಟೀಕೆ ಟಿಪ್ಪಣಿಗಳೂ ಕೂಲಂಕಷವಾದ ವಿಮರ್ಶೆಯೂ ಅವಶ್ಯ.

ಹಿಂದಿನವರು ಇಂದಿನವರಂತೆ ಗದ್ಯದಲ್ಲಿ ಸಾಮಾನ್ಯರಿಗೆ ತಕ್ಕವಾದ ಕಥೆ ಕಾದಂಬರಿಗಳನ್ನು ಹೇಳಿಲ್ಲ ಬಿಡಿ ಕವಿತೆಗಳನ್ನು ಹಾಡಿಲ್ಲ ಎಂಬ ಸಾಹಸದ ಸಿದ್ಧಾಂತವನ್ನು ನಾವೇಕೆ ಸ್ಥಾಪಿಸಬೇಕು ಅಥವಾ ಯಾರಾದರೂ ಸ್ಥಾಪಿಸಲು ಹೊರಟರೆ ನಾವೇಕೆ ಅದನ್ನು ಒಪ್ಪಿಕೊಳ್ಳಬೇಕು ? ಅವು ನಮಗೆ ಉಪಲಬ್ಧವಾಗಿಲ್ಲವೆಂಬುದೊಂದೇ ಮಾತು ಇದಕ್ಕೆ ಸಾಕಷ್ಟು ಬಲವಾದ ಆಧಾರವಾಗದು.

ಇನ್ನು ನಮ್ಮ ಹೊಸ ಸಾಹಿತ್ಯದ ವಿಷಯದ ಆಕ್ಷೇಪಗಳಲ್ಲಿ ಮುಖ್ಯವಾದವುಗಳೆಂದರೆ— ಇಂದಿನದು ಹಿಂದಿನದನ್ನು ಅನುಸರಿಸಿದ ಮಾರ್ಗವಲ್ಲ. ಅದು ಕೇವಲ ಹೊಸದು. ಅನ್ಯರ ಅನು ಕರಣ ಎಂಬುದು ಒಂದು. ಅದು ಅನ್ಯಾಯವಾಗಿ ಹೆಚ್ಚಿಹೋಗಿದೆ. ರಸಕ್ಕಿಂತ ಕಸವೇ ಹೆಚ್ಚು. ಎಂಬವೂ ಇದರೊಳಗಿನದೇ ಇನ್ನೊಂದು ಕವಲು. ಈ ಕ್ರಮದಲ್ಲಿ ನಾವು ಹೇಳಬೇಕಾದ ಸಮಾಧಾನ ಗಳೇನೆಂಬುದನ್ನು ಇನ್ನೊಮ್ಮೆ ನೋಡ ಪ.

(ಮುಂದೆ ಸಾಗುವದು.(

ಕನ್ನಡ 'ವರ್ಧಪ್ರಾಯೋಜ' ಪರೀಕ್ಷೆ ೧೯೪೬

೧ **ಪರೀಕ್ಷೆಯ ವಿಷಯಗಳು:**— (ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯ–ಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳಯ ಮತ್ತು ಹೊಸಗನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉದ್ಯೋದುವಾರರು ಸಮರ್ಥರಾಗಿರಬೇಕು. (ಬ) ವರ್ಧಸಾಹೇಬರು ರಚಿಸಿರುವ ಪ್ರಾಕ್ಕಾವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥ ವಿವರಣೆ, ಟೀಕೆಟಿಪ್ಪಣಿ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. **ಬಹುಮಾನ:**— ಈ ಮೊದಲು ಇದ್ದ ೮೦ ರೂ. ಗಳ ಒಂದೇ ಬಹುಮಾನದ ಬದಲಾಗಿ ಈಗ ಬಹುಮಾನಗಳು ಎರಡು ಎಂದು ಗೊತ್ತಾಗಿದೆ. ಮೊದಲನೆಯ ಬಹುಮಾನ ೫೦ ರೂ. ಎರಡನೆಯ ಬಹುಮಾನ ೩೦ ರೂ. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟನಲ್ಲಿ ೧೦೦ ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟನಲ್ಲಿ ೧೦೦ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿವೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು. ಒಂದುವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಒರಿಯಾಗಿ ವಿಭಜಿಸಿ ಹಂಚಲಾಗುವದು.

೩. **ಅರ್ಜಿಮಾಡತಕ್ಕ ಅವಧಿ:**— ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೪೬ನೆಯ ಇಸವಿಯ ಆಗಷ್ಟ ತಿಂಗಳ ೧ನೆಯ ತಾರೀಖಿನೊಳಗಾಗಿ ಪೆ.ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೆ ದಕ್ಷಿಣಭಾಗ ಧಾರವಾಡ ಇವರಿಗೆ ಮುಟ್ಟುವಂತೆ ಅರ್ಜೀಕಾಸಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ:**— ಧಾರವಾಡ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ೧೯೪೬ನೆಯ ಇಸವಿಯ ಆಗಷ್ಟ ತಿಂಗಳಲ್ಲಿ ನಡೆಯುವದು. ತಾರೀಖು ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

೫. ಪ್ರಶ್ನೆ ಕಾಗದಗಳು:— ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯದು:—ಪ್ರಾಕ್ಕಾವ್ಯಮಾಲೆ ೭೧; ವ್ಯಾಕರಣ ಮತ್ತು ಛಂದಸ್ಸು ೩೦.

ಎರಡನೆಯದು:— ಹಳಗನ್ನಡ ನಿಬಂಧ ೫೦; ಕನ್ನಡಬಾವುಟದಲ್ಲಿಯ ಕವಿತಾಭಾಗ. ೭೦; ಹಳಗನ್ನಡ ಅಪರಿಚಿತ ಗದ್ಯಭಾಗಗಳು ೩೦.

ಮೂರನೆಯದು:— ಹೊಸಗನ್ನಡ ನಿಬಂಧ ೭೫; ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ರಿಚಯ ೭೫.

*ಕನ್ನಡ ಬಾವುಟದಲ್ಲಿಯ ಕವಿತಾ ವಿವರಣೆ:—(೧) ರಾಷ್ಟ್ರಕೂಟ ರಾಜನ ಶಾಸನ. ಪುಟ ೫ (೨) ಕನ್ನಡ ನಾಡಿನ ಚೆಲುವು. ಪುಟ ೧೭–೨೦ ಪೂರ್ಣ (೩) ಬಸವಣ್ಣನವರ ಗುಣ. ಪುಟ ೪೫ (೪) ಮಹಾದೇವಿಯಕ್ಕ ಪುಟ ೪೬–೪೯ ಪೂರ್ಣ (೫) ಕನಕದಾಸರು ಪುಟ ೫೯–೬೧ ಪೂರ್ಣ (೬) ಅರುಣೋದಯ ಪುಟ ೭೭ (೭) ಕರ್ಣಾಲದ ವೈಭವ ಪುಟ ೧೦ (೮) ಕೊಡಗು ಪುಟ ೧೦೨ (೯) ತೆಂಕಣಗಾಳಿಯೂಟ ಪುಟ ೧೦೬ (೧೦) ಕುಮಾರವ್ಯಾಸ ಪುಟ ೧೨೧ (೧೧) ಬೇಲೂರಿನ ಶಿಲಾಬಾಲಿಕೆಯರು ಪುಟ ೧೩೬,

ಈ ಕವಿತಾ ಭಾಗವನ್ನು ಸಂಪೂರ್ಣ ಅಭ್ಯಾಸ ಮಾಡಿರಬೇಕು; ಮೂರನೆಯ ಕಾಗದದ ವಿಷಯದಲ್ಲಿ ೭೫ ಗುಣಗಳ ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯಪರಿಚಯ, ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

ಗವ್ಹರ್ನಮೆಂಟ ಟ್ರೇನಿಂಗ್ ಕಾಲೇಜ
ಫಾರ್ ಮೆನ್ ಧಾರವಾಡ, ೧೪-೧೨-೪೫

Sd/ H. B. Umadi
ಪ್ರಿನ್ಸಿಪಾಲರು

ನಮ್ಮ ವಿದ್ಯಾಧಿಕಾರಿಗಳು.

ನಮ್ಮ ಇಲಾಖೆಯ ಡೈರೇಕ್ಟರ ಸಾಹೇಬರಾಗಿದ್ದ **ಶ್ರೀ. ಎಸ್. ಎನ್. ಮೂಸ,** ಸಿ. ಐ. ಇ. ಎಮ್. ಎ., ಐ. ಇ. ಎಸ್. ಅವರು ಬರುವ ಸಪ್ಟಂಬರ ತಿಂಗಳಿನಿಂದ ಸೇವಾ ನಿವೃತ್ತರಾಗುವರು; ಮತ್ತು ಅದಕ್ಕೆ ಪೂರ್ವಾವಧಿಯಾಗಿ ರಜೆಯ ಮೇಲೆ ಹೋಗಿರುವರು; ಆದ್ದರಿಂದ ಅವರ ಸ್ಥಳಕ್ಕೆ **ಶ್ರೀ. ಆರ್. ಪಿ. ಪಟವರ್ಧನ** ಎಮ್. ಎ. ಅವರು ನೇಮಕ ಪಟ್ಟಿದ್ದಾರೆ.

ಶ್ರೀ ಮೂಸ ಅವರು ವಿದ್ಯಾ ಇಲಾಖೆಯಲ್ಲಿ ಬೇರೆ ಬೇರೆ ತರಗತಿಗಳಲ್ಲಿ ೨೧ ವರ್ಷ ಕೆಲಸ ಮಾಡಿ ಅನುಭವ ಪಡೆದ ತರುವಾಯ ಆರು ವರ್ಷಗಳ ಕೆಳಗೆ ಶ್ರೀ. ವಿಲಿಯಮ್ ಗ್ರೀವ್ಸ ಸಾಹೇಬರು ಸೇವಾನಿವೃತ್ತರಾದ ಬಳಿಕ ಡೈರೇಕ್ಟರರ ಸ್ಥಾನಕ್ಕೆ ನೇಮಕ ಪಟ್ಟಿದ್ದರು. ಇವರ ಆಳಿಕೆಯಲ್ಲಿ ನಮ್ಮ ಇಲಾಖೆಯ ವಿದ್ಯಾವಿಷಯಕ ಪ್ರಗತಿಯು ಎತ್ತಿ ತೋರಿಸುವಷ್ಟು ಉತ್ತಮವಾಗಿ ಸಾಗಿತ್ತು. ಮಹಾಯುದ್ಧದಂಥ ಕಷ್ಟಕರವಾದ ಪರಿಸ್ಥಿತಿಯಲ್ಲಿಯೂ ಕೂಡ ಎಲ್ಲವೂ ಸುಗಮವಾಗಿ ಸಾಗಜೇಕಾದರೆ ಅದಕ್ಕೆ ಯೋಗ್ಯ ವ್ಯವಸ್ಥಾಪಕರು ಅತ್ಯವಶ್ಯವಷ್ಟೇ? ಶ್ರೀ. ಮೂಸ್ ಅವರ ಆಳಿಕೆಯು ಆ ದೃಷ್ಟಿಯಿಂದ ಅತಿ ಮಹತ್ವದ್ದೆನಿಸುವದು.

ಇವರ ಆಳಿಕೆಯಲ್ಲಿ ನಮ್ಮ ಇಲಾಖೆಯಲ್ಲಿ ಶೈಕ್ಷಣಿಕ ಸರ್ವತೋಮುಖ ಪ್ರಗತಿಯಂತೂ ಆಗೇ ಆಯಿತು; ಮೇಲಾಗಿ ಮುಂದೆ ಹೇಳುವ ಮೂರು ಸಂಗತಿಗಳಿಂದ ಅದು ಚಿರಸ್ಮರಣೀಯವಾಗಿದೆ. (೧) ಕಾಂದೆವಲಿಯಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣವನ್ನು ಕೈಕೊಳ್ಳುವ ಶಿಕ್ಷಕರಿಗೆ ಶಿಕ್ಷಣ ಕೊಡುವ ಸಂಸ್ಥೆಯನ್ನು ಸ್ಥಾಪಿಸಿದ್ದು. (೨) ಪುಣೆಯ ಡೆಕ್ಕನ್ ಕಾಲೇಜಿನಲ್ಲಿಯ ಸಂಶೋಧನ ಶಾಖೆಯನ್ನೂ ಕರ್ನಾಟಕ ಕಾಲೇಜಿನಲ್ಲಿಯ ಕನ್ನಡ ಸಂಶೋಧನ ಶಾಖೆಯನ್ನೂ ಪ್ರಾರಂಭಿಸಿದ್ದು. (೩) ಶಾಸ್ತ್ರೀಯ ವಿಷಯದ ಮೂಲ ತತ್ವಗಳ ಸಂಶೋಧನೆಗಾಗಿ 'ಟಾಟಾ ಇನ್‌ಸ್ಟಿಟ್ಯೂಟ' ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದು. ಕೊನೆಯ ಸಂಸ್ಥೆಯು ಅಖಿಲ ಭಾರತ ದೊಳಗಿನ ಅತ್ಯುನ್ನತ ತರಗತಿಯ ಬುದ್ಧಿ ಶಾಲಿಗಳ ಪ್ರಗತಿಯ ಕಾರ್ಯಕ್ಕೆ ನೆರವು ಕೊಡುವಂತಿರುವದರಿಂದ ತುಂಬ ಮಹತ್ವದ್ದಾಗಿದೆ.

ಈ ರೀತಿಯಾಗಿ ಆರು ವರ್ಷಗಳವರೆಗೆ ಇಡಿಯ ಇಲಾಖೆಯ ಶೈಕ್ಷಣಿಕ ವ್ಯವಸ್ಥೆ ಪ್ರಗತಿಗಳ ಭಾರವನ್ನು ವಹಿಸಿ ದಕ್ಷತೆಯಿಂದ ಕಾರ್ಯಮಾಡಿ ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗಿ ಸೇವಾನಿವೃತ್ತರಾಗುತ್ತಲಿರುವ ಶ್ರೀ. ಮೂಸ್ ಸಾಹೇಬರ ಮುಂದಿನ ಆಯುಷ್ಯವು ತುಂಬ ಸುಖಕರವಾಗಲೆಂದೂ ಅದರ ಸ್ಥಾನಕ್ಕೆ ಬಂದಿರುವ ಶ್ರೀಮಾನ್ ಪಟವರ್ಧನ ಸಾಹೇಬರ ಆಳಿಕೆಯು ರಾಜ ಪ್ರಜಾರಂಜಕವಾಗಿ ದೇಶೋನ್ನತಿಗೆ ತುಂಬ ಪೋಷಕವಾಗಲೆಂದೂ ಹಾರೈಸುವೆವು.

ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿದ್ದ ಶ್ರೀ. ಉಮಡಿರಾಯರು ಪೆನ್‌ಶನ್ ಮೇಲೆ ಹೋಗುವರಾದ್ದರಿಂದ ಅವರ ಸ್ಥಳಕ್ಕೆ **ಶ್ರೀ. ಎಸ್. ಜಿ. ಬೈಚವಾಳೆ** ಎಮ್. ಎ. ಅವರು ನೇಮಕ ಹೊಂದಿದ್ದಾರೆ.

ನಮ್ಮ ಟ್ರೇನಿಂಗ್ ಕಾಲೇಜದಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಶ್ರೀ. ರೋಹಿಡೇಕರ ಇವರಿಗೆ ತಾಳಿಕೋಟೆಯ ಟ್ರೇನಿಂಗ್ ಕಾಲೇಜಕ್ಕೂ ಶ್ರೀ. ಎನ್.ಆರ್. ಹಿರೇಮಠ ಇವರಿಗೆ ಇಲ್ಲಿಯ ಮೂಲ ಶಿಕ್ಷಣ ಕೇಂದ್ರಕ್ಕೂ ಶ್ರೀ. ಡೆವಿಡ್ ಇವರಿಗೆ ಫಿಜಿಕಲ್ ಇನ್‌ಸ್ಪೆಕ್ಟರರ ಸ್ಥಳಕ್ಕೂ ವರ್ಗವಾದ್ದರಿಂದ ಟ್ರೇ. ಕಾಲೇಜ ಪ್ರಾಥ್ಯ. ಸ್ಕೂಲುಗಳ ಶಿಕ್ಷಕರೂ ಶಿಕ್ಷಕ ವಿದ್ಯಾರ್ಥಿಗಳೂ ಸತ್ಕಾರ ಕೂಟವನ್ನು ಏರ್ಪಡಿಸಿ ಎಲ್ಲರಿಗೂ ಶುಭವನ್ನು ಕೋರಿ ಬೀಳ್ಕೊಟ್ಟರು. ಮತ್ತು ಅವರ ಸ್ಥಳಕ್ಕೆ ನೇಮಕ ಹೊಂದಿದ ಹೊಸ ಶಿಕ್ಷಕರನ್ನು ತುಂಬ ಉತ್ಸಾಹದಿಂದ ಸ್ವಾಗತಿಸಿದರು.

ಧಾರವಾಡ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ ೧೯೪೫.

ಡಿ. ಎಸ್. ಬಿ. ಧಾರವಾಡ ಅ. ಶಿ. ಭೀವ.ನಗೌಡರ ಳಟ್ಟಿ ಬ. ಭೀ. ಸಣ್ಣತಿಳವಳ್ಳಿ ಜಿಜಳ **ಚ. ಬ.** ಬೆಟದೂರ ಳಜಿ ಚಿ. ಸಿ ತೋಟೆರ ಜಳತಿ ದ್ಯಾ ತಿ. ಒಡ್ಡರ ಳಟಲ ಫ. ಸಿ. ಮಳ್ಳಪ್ಪನವರ ಳಳಟ್ಟಿ ಗ. ಭೀ. ತಳವಾರ ಜಿಖಿಗ ಮ. ಆ. ಹಾಳಕೇರಿ ಜಿಗಲ ಮ. ನಿ. ಹೊನ್ನಿಹಳ್ಳಿ ಳಳಲ ಪ್ರ. ಹ ಹೊನ್ನಿಗನೂರ ಜಿತಿಟ ಪು. ವೀ. ನೇಕಾರ ಖಿಜಿ ರಾ. ಶಿ. ನರೇಗಲ್ಲ ಜಿಂಟಿ. ರೇ. ಬ. ಬಣಕಾರ ಳಖಿಗ ರೂ. ಮ. ಚನವೀರಗೌಡರ ಜಿಜಟ ಸಂ. ಸಿ ಹಿರೇಮಠ ಳಜಿಳ ಶಂ. ಬು. ಬಾಳೊಜಿ. ಳಟಿತಿ ಶಾ. ವೀ ಜಂಗಮ ಳಗಿಜ ಶಿ. ಲಿಂ. ಗುಡ್ಡೀಮಠ ಳಜಿಳ ವೀ. ಬ. ಹೆಡಿಯಾಲ ಳಜಿಟ ಯ. ಫ. ಕೋಲ, ಕಾರ ಳಳಿತಿ.

ಡಿ. ಎಸ್. ಬಿ. ಬೆಳಗಾವಿ ಅ. ಸಿ ಕಂಡರಟ್ಟಿ ಜಲಜ ಬ. ಚ. ಉಳ್ಳೇಗಡ್ಡಿ ಳಜಿಜ ಭೀ. ನಿಂ ಪೂಜಾರ ಳಟಿಳ ಚ. ನಿಂ. ಗೂಳಪ್ಪನವರ ೪ಟಿಜ ದ. ಬಾ. ಪೋಳ ಜಿಗಿಖ ಧೂಂ. ಕಾ. ವೈದ್ಯ ೨ಖಿಜ ಫ. ಫ. ಬುಕ್ಕಿಟಗಾರ ಳಳಂ ಗಂ. ವೀ. ಬೆಟಗೇರಿ ಜಿಗಂ ಗೋ. ಭ. ಹಿರೇಮನಿ (ಮಾದಿಗ) ಜಿಖಿಲ ಈ. ಮಾ. ಕಾಂಬಳೇ (ಹೊಲೇರ) ಜಿಂಟಿ ಕಾ. ವಿ. ಪತ್ತಾರ ಳಳರ್ಜ ಕೃ. ಕ. ಗಲಗಲಿ ಜಿಟಿತಿ ಮನಗೂಳ ಜಿಳಳ ಮ. ದ. ಕುಲಕರ್ಣಿ ಳಲಗಿ ಮಾ. ಸಾ. ಕಲಾಲ ಳರ್ಗಿ ರಂ. ರಾ. ಕಮಲದಿನ್ನಿ ಜಿಗಟ ರು. ಸಿ. ಬಾನಿ ಳರ್ಜಿ ಸಂ. ಮ. ಭೀವಾರಿ ಳಟಲ ಸಂ. ತ. ಬಡೆಮ್ಮಿ ಳಲಗಿ ಸಾ. ಈ. ದೇಶಮುಖ ಳರ್ಜಲ ಸಿ. ಮು. ಬಸೆಟ್ಟಿ ಜಿಗಿಜ ಸಿ. ಸಂ. ಖಡಬಡಿ ಳಗಿಲ ಶ್ರೀ. ಶೆ. ಕುಲಕರ್ಣಿ ಜಿಖಿಟ ವೆಂ. ಬ. ಹೂಲಿ ಳಟರ್ಜ ವೆಂ. ರಾ. ಜೋಶಿ ಳಟಿಳ.

ಡಿ. ಎಸ್. ಬಿ. ವಿಜಾಪುರ ಅ. ಮ. ಪಾಟೀಲ ಳಖಿತಿ ಆ. ಸೋ. ಪಾಟೀಲ ಜಿಗಿತಿ ಬ. ಬೊ. ಹಿರೇಮಠ ಳಜಿಗ ಭೀ. ರಂ. ಮುಂಗಲಗಿ ಜಿಂಲ ಬೀ. ಮ. ನಾಗನೂರ ಜಿಜರ್ ದ್ವೈ. ನಾ. ಜಹಾಗೀರದಾರ ಜಿಳಳ ಫ. ಲ. ಉಪ್ಪಾರ ಳಳಖಿ ಗಂ. ಅ. ಪಾಟೀಲ ಳಜಿಟ ಗೋ. ರಾ. ಅಷ್ಟಪುತ್ರೆ ಳಲಂ ಹ. ಚಾ. ಮಾಸಾಬತಿ ಜಿಂರ್ ಈ. ಬ. ಹೊಳಿ ಳಟಂ ಇ. ಸಾ. ಸಂಗಮ ಳಳಲ ಕ. ಚ. ಪಡಪದ ಳರ್ಜಿ ಕೃ ಅ. ಪಾಟೀಲ ಜಿಗಿತಿ ಲಿಂ. ಭೀ. ನಾಕೆತ್ತಿನವರ ಜಿಂಲ ಮ. ಚ. ಪಾಟೀಲ ಳರ್ಜಿ ಮು. ಸಿ. ರಕರಡ್ಡಿ ಳಲಲ ಮು. ಗು. ಕೋರಿ ಜಿಗಿಜ ನಿಂ. ಬ. ಬಿರಾದಾರ ಳಖಿಂ ಪ. ವಾ. ಮೋರೆ ಳಗಿಜ ಪೀ. ಬಾ. ಹೊಲೇರ ಖಿಜಿ ರಾ. ರಂ ಕುಲಕರ್ಣಿ ಳಗಿಟ ರಂ. ರಾ. ತುಂಗಳ ಜಿತಿಜ ಸಂ. ಭೀ. ಮುಕಾರ್ತಾಳ ಳಟಟ ಸಂ. ಈ. ಲಿಂಗದಳ್ಳಿ ಳಟಿಳ ಶಾ. ವೆಂ. ತೋಳಮಟ್ಟಿ ಳಲಳ ಸಿ. ಧ. ಗದ್ದನಕೇರಿ ಳಟಿಟ ತ. ನಿಂ. ದುಡ್ಯಾಳ ಳತಿಳ ವೀ. ಗು. ಜಂಗಿನ ಳಖಿಟ ವೀ. ತೀ. ಕಣಬೂರ ಳಜಿಜ ವೀ. ಕ.ಮಠಪತಿ ಳಟಿಗ.

ಡಿ. ಎಸ್. ಬಿ. ಕಾರವಾರ ಅ. ಹ. ಶಟ್ಟಿ ಜಿಟಿಖ ಜೆಂ. ದ. ಗಾವಕರ ಜಿಖಿಜ ಗಂ. ವೀ. ಗೋಡ ಬೋಲೆ ಳಟಿಟ ಗಂ. ವೀ. ದೇವಳ ಳಲಂ ಗೋ. ದೇ. ನಾಯಿಕ ಳಜಿಗ ಗು. ಗ. ಸಾವಂತ ಳಳಲ ಜೋ. ಬಿ. ನಾಯಕ ಜಿತಿಟ ಲ. ಘಾ. ನಾಯಕ ಳಟಿಖ ಮಂ. ನಾ. ಲಕ್ಕುಮನೆ ಳಲಟ ನಾ. ವಿ. ಮಡಿವಾಳ ಳರ್ಗಿ ಪು. ನಾ. ನಾಯಕ ಳಜಿಟ ಶಾಂ. ಘೆ. ಬೀಡಿಕರ ಳಜಿಟ ಶಿ. ನಾ. ಗಾವಕರ ಳತಿಳ ಶಿ. ನಾ. ಪಟಗಾರ ಳಟಿಗ ಶಿ. ಶಂ. ಹಬ್ಬು ಜಿತಿಗ ಶ್ರೀ. ಸು ಬಡಾಲ ಳಲಳ ವಿ. ಸು, ಮುಸಣ್ಣಾ ಳಟಿಗ.

ಡಿ. ಎಸ್. ಬಿ. ಸೊಲ್ಲಾಪುರ ಧು. ಜ. ಉಕ್ಕಲಿ ೫೧೦ **ಮ್ಯು. ಸ್ಕೂ. ಬೋ. ಧಾರವಾಡ** ಚಿ. ಜಿ. ಯರಗುಪ್ಪಿ ಳಳಲ. **ಮ್ಯು. ಸ್ಕೂ. ಬೋ.** ಹುಬ್ಬಳ್ಳಿ ಕ. ಮ. ಯಡ್ರಾವಿ ಳ್ಳಷ ಲ. ರಾ. ಖರಾಡೆ ಳಂಲ ರು. ಮ. ಅರ್ಕಸಾಲಿ ಳಗಟ ರು. ಫ. ಮತದ ಳಒಗ. **ಮ್ಯು. ಸ್ಕೂ. ಬೋ. ಗದಗ** ಗು. ಬ. ಪೂಜಾರ ೬೨೦ ಕ. ಸಿ. ಪಾಟೀಲ ೫೩೭ ಲ. ಯ. **ಕಾಮರಡ್ಡಿ** ೫೧೭ ಮೈ. ಲಿ. ಪಾಟೀಲ ೫೩೪ ರಾ. ಲಿ. ಭಗವತಿ ೫೨೩. **ಮ್ಯು. ಸ್ಕೂ. ಬೋ. ವಿಜಾಪುರ** ಭಾ. ಅ. ಜೋಗುಳ ಳಳಒ. **ಮ್ಯು. ಸ್ಕೂ. ಬೋ. ಸೊಲ್ಲಾಪುರ** ಭೀ. ಕ. ರವಿ ೫೭ಳ. **ಮ್ಯು. ಸ್ಕೂ, ಬೋ. ಮುಂಬಯಿ** ಹ. ಕೃ. ಮುಳವಾಡ ೫೧೫. **ವಿಜಾಪುರ ಸೆಟಲಮೆಂಟಿ.** ವೀ. ಬ. ಹಾದೀಮನಿ ಳ೭೩. **ಖಾಸಗೀ ಸಂಸ್ಥೆಗಳು (ಧಾರವಾಡ)** ನ. ರಾ. ಹುಬ್ಬಳ್ಳಿ ಳ೦೦ ವೀ. ಗಂ. ಜೋಗೊಂಡರ ೫೫ಲ. **ಖಾಸಗೀ ಸಂಸ್ಥೆಗಳು (ಹುಬ್ಬಳ್ಳಿ)** ಅ. ಗು. ಮತದ ಳ್ಳ೧ ಫ. ರೇ ಹರಣೇನವರ ಳಒಒ. **ಖಾಸಗೀ ಸಂಸ್ಥೆಗಳು (ಬೆಳಗಾವಿ)** ಭೀ. ಲ. ನಾಯಕ ಳಳ೧ ವೀ. ರಾ. ಪತ್ತಾರ ೫೩ಲ ವೀ. ಬ. ಪುಣೇದ ಳ್ಳ೨. **ಖಾಸಗೀ ಸಂಸ್ಥೆಗಳು (ವಿಜಾಪುರ)** ಸಂ. ಬ. ಗೋಲಪ್ಪನವರ ಳಒ೩ ಸಂ. ರಾ. ದ್ಯಾಮವ್ವನ ಗುಡಿ ೫೨೨ ಶಂ. ಕೇ. ದೀಕ್ಷಿತ ರೊಟ್ಟಿ ಳಟ೧. **ಖಾಸಗೀ ಸಂಸ್ಥೆಗಳು (ಕಾರವಾರ)** ಗ. ವೆಂ. ಪಂಡಿತ ಳಒಲ ನಾ. ಗ. ಶೇಟ ೫೫ಟ. **ಹಳೆಯ ವಿದ್ಯಾರ್ಥಿಗಳು (ಎಕ್ಸ ಸ್ಟೂಡಂಟ್ಸ) ಧಾರವಾಡ ಬೋರ್ಡ** ಜಂ. ಯ. ಚನ್ನಪ್ಪಗೌಡರ ಳ೨೭ ಬ. ಹಾ. ಹನಮನಹಳ್ಳಿಮಠ ಳಷ೧ ಗು. ಲಿಂ. ವಸ್ತ್ರದ ಪಾಸ ಹ. ದು. ಚಲವಾದಿ ಪಾಸ ರಾ. ಬ. ಬೂದಿಹಾಳ ವಾಸ **ಬೆಳಗಾವಿ ಬೋರ್ಡ** ಗ. ಮು. ಬೆನಕೊಪ್ಪ ಪಾಸ ಮ. ಮು. ಲಿಂಗದಳ್ಳಿ ೩೯೨ ಸಾಂ. ಲಿಂ. ಹೊನ್ನಕಾಂಬಳೆ ಳಷ೫ ಸಾ. ತ. ಜೋಲಾಪುರಿ ಪಾಸ ತು. ಮೆ. ದಾಸರ ೩೭೯ **ವಿಜಾಪುರ ಬೋರ್ಡ** ಬ. ಗೂ. ಹುನಗುಂಡಿ ಳಗಒ ಧುಂ. ವೀ. ಮುರಡಿ ಳ್ಳ೯ **ಕಾರವಾರ ಬೋರ್ಡ** ಅ. ನಾ. ಥೊಂಗಡೆಕರ ೩೭ಲ ವಿ. ನಾ. ನಾಯಕ ಪಾಸ **ಧಾರವಾಡ ಮ್ಯು. ಸ್ಕೂ. ಬೋ.** ದ. ಚಿ. ಕುಲಕರ್ಣಿ ಪಾಸ **ಬೆಳಗಾವಿ ಖಾಸಗಿ** ಭೀ. ಗೋ. ಲಂಕೆಣ್ಣವರ ೫೫೩.

ಟೀಪು— ಕೆಳಗೆ ಕಾಣಿಸಿದ ಏಳು ಮಂದಿ ಶಿಕ್ಷಕ ವಿದ್ಯಾರ್ಥಿಗಳಿಗೆ ಅವರ ಹೆಸರಿನ ಮುಂದೆ ತೋರಿಸಿದ ವಿಷಯದಲ್ಲಿ ಮಾತ್ರ ಮುಂದಿನ ವರ್ಷ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಿಗಿಯ್ಯು ಕೊಡಲ್ಪಟ್ಟಿದೆ.

ಅ. ದು ಆರಾದ್ರಿಮಠ (ಬೆ. ಬೋ.) ಭೂಗೋಲ ಗಂ. ಬ. ಗಡದವರ (ಬೆ. ಬೋ.) ಗಣಿತ, ಭೂಮಿತಿ, ಜವಾಖರ್ಚು ಗಂ. ಸ. ದಾದುಗೋಳ (ಬೆ. ಬೋ.) ನಾಯಿನ್ಸ ಈ. ಉ. ನೇಕಾರ (ಬೆ. ಬೋ.) ಸಾಯಿನ್ಸ ಜ. ತು. ನಿಂಬರಗಿ (ವಿ. ಬೋ.) ನಾಯಿನ್ಸ ಗ. ಲಿಂ. ಹಿರೇಮಠ (ಗಪಗ ಮ್ಯು.) ಇತಿಹಾಸ ಗುಂ. ಗೋ. ಕುಲಕರ್ಣಿ (ಬೆ. ಬೋ.) ಭೂಗೋಲ.

ಸರ್ಟಿಫಿಕೇಟ ಪರೀಕ್ಷೆಯಲ್ಲಿ ಪಾರಿತೋಷಿಕಗಳನ್ನು ಪಡೆದವರು.

೧. ಜಾಯಿಲ್ಸ ಪ್ರಾಯಿಜ ಶಿಕ್ಷಣದಲ್ಲಿ ಮೊದಲನೆಯ ನಂಬರು ೧೬ ರೂ. ೪ ಅ.
ಜಿ. ಬಿ. ಪೂಜಾರ ಗದಗ ಮ್ಯುನಸಿಪಾಲಟಿ.

೨. ಜನರಲ್ ಪ್ರಾಯಿಜ ನಂಬರು ೧, ಶಿಕ್ಷಣದಲ್ಲಿ ಎರಡನೆಯ ನಂಬರು ೧೨ ರೂ.
ಖಿ. ಬಿ. ಸಣ್ಣತಿಳವಳ್ಳಿ ಡಿ. ಎಸ್. ಬಿ. ಧಾರವಾಡ.

೩. ಸರ್ ಜೇಮ್ಸ ಮಾಂಟೇಥ ಪ್ರಾಯಿಜ ನಂಬರು ೧, ಕನ್ನಡದಲ್ಲಿ ಮೊದಲನೆಯ ನಂಬರು ೧೫ ರೂ.

ಪಿ. ಎಚ್. ಹೊನ್ನಿಗನೂರ ಡಿ. ಎಸ್. ಬಿ. ಧಾರವಾಡ ಮತ್ತು ಜಿ. ಬಿ. ಪೂಜಾರ ಗದಗ ಮ್ಯು.
ಇವರಿಬ್ಬರಲ್ಲಿ ಸರಿಯಾಗಿ ಹಂಚಿದೆ.

೪. ಸರ್ ಜೇಮ್ಸ ಮಾಂಟೇಥ ಪ್ರಾಯೋಜ ನಂಬರು ೨, ಕನ್ನಡದಲ್ಲಿ ೨ನೆಯ ನಂಬರು ೧೩ ರೂ.
ಸಿ. ಎಸ್. ತೋಟರ ಡಿ. ಎಸ್. ಬಿ. ಧಾರವಾಡ.

೫. ಜನರಲ್ ಪ್ರಾಯಿಝು ನಂಬರು ೨, ಗಣಿತ ಶಾಸ್ತ್ರೀಯ ವಿಷಯಗಳಲ್ಲಿ ಮೊದಲನೆಯ ನಂಬರು
೧೨ ರೂ. ಜಿ. ಬಿ. ಪೂಜಾರ ಗದಗ ಮ್ಯು.

೬. ಜನರಲ್ ಪ್ರಾಯಿಝು ನಂಬರು ೩, ಚಿತ್ರಕಲೆ, ಕೈಕೆಲಸಗಳಲ್ಲಿ ಮೊದಲನೆಯ ನಂಬರು
೧೨ ರೂ. ಬಿ. ಕೆ. ರವಿ ಸೊಲ್ಲಾಪುರ ಮ್ಯು.

೭. ಚಾಟಫೀಲ್ಡ ಮೆಮೋರಿಯಲ್ ಪ್ರಾಯಿಝು, ಜನರಲ್ ಪ್ರೊಫೆಸಿಯನ್ಸಿ ೧೬ ರೂ. ಜಿ. ಬಿ
ಪೂಜಾರ ಗದಗ ಮ್ಯು.

ಪ್ರಿನ್ಸಿಪಾಲ ಎ.ಕ

ಪತ್ರಗಳ ಮುಖ್ಯಾಂಶಗಳು.

ಸಿಗ್ನಾವಿ — ಈ ತಾಲೂಕಿನ ಪ್ರಾಥಮಿಕ ಶಾಲೆಗಳ ಎರಡನೆಯ ವಾರ್ಷಿಕ ಪಂದ್ಯಾಟಗಳ
ಕೂಟವು ಹಂದಿಗನೂರದ ಶ್ರೀಮಂತ ಸರದಾರ ದೇಸಾಯಿಯವರ ಹಿರಿಯತನದಲ್ಲಿ ೨೩-೨-೪೫
ನೆಯ ದಿವಸ ನೆರವೇರಿತು. ೧೦೧ ಎತ್ತುಗಳನ್ನು ಹೂಡಿ ಶೃಂಗರಿಸಲ್ಪಟ್ಟ ಗಾಡಿಯಲ್ಲಿ ಅಧ್ಯಕ್ಷರನ್ನು
ಮೆರವಣಿಗೆ ಆಯಿತು. ಆಟ-ಸಂಭಾಷಣೆ-ಮೆಚ್ಚುಗೆಗಳಾದ ನಂತರ ಈ ಊರಲ್ಲಿ ಇಂಗ್ಲಿಷ ಶಾಲೆ
ಯೊಂದನ್ನು ಸ್ಥಾಪಿಸುವದರ ಬಗೆಗೆ ವಿಚಾರ ವಿನಿಮಯವಾಯಿತು. ಈ ಕೂಟಕ್ಕಾಗಿ ಬಂದ ೫೦೦
ವಿದ್ಯಾರ್ಥಿಗಳಿಗೆ ಪುರಪ್ರಮುಖರೂ ಶ್ರೀ. ನರಸಿಂಹಯ್ಯ ಸಬ್ ಡಿವ್ಹಿಜನಲ್ ಆಫೀಸರರ ಡಿ. ಎಲ್.
ಬಿ. ಧಾರವಾಡ ಅವರೂ ಕೂಡಿ, ಪುಕ್ಕಟೆಯಾಗಿ ಊಟ ಮತ್ತು ಫಲಾಹಾರದ ವ್ಯವಸ್ಥೆಯನ್ನು
ಮಾಡಿದ್ದರು. ಇದೊಂದು 'ಮಕ್ಕಳ ಹಬ್ಬ' ಎಂದು ತಿಳಿದು ಎಲ್ಲರೂ ಆನಂದದಿಂದ ಎರಡು ದಿನ
ಗಳನ್ನು ಕಳೆದರು. — ಶ್ರೀ. ಗ ಕೃ. ರಾನಡೆ, ಪಂದ್ಯಾಟ ಕವೀಟ ಮೆಂಬರ್

ಹಿರಿಯಬಾಗೇವಾಡಿ (ಬೆಳಗಾವಿ ತಾಲೂಕ) — ಭಾಗದ ಶಿಕ್ಷಕರ ಸಮ್ಮೇಲನವು
೨೪-೨-೧೯೪೫ನೆಯ ದಿವಸ ಶ್ರೀ. ಮೆಣಸಿ ಆ. ಡೆ. ಎ. ಇ. ಸಾಹೇಬರು ಅವರು ಹಿರಿಯತನದಲ್ಲಿ
ಸಾಂಗವಾಯಿತು. ಮಾದರಿಯ ಪಾಠಗಳ ವಿಮರ್ಶೆಯನ್ನು ಅಧ್ಯಕ್ಷರು ಮಾಡಿದರು. ಅದು
ಮನನೀಯವಾಗಿತ್ತು. ಈ ಸಂದರ್ಭದಲ್ಲಿ ತಾಲೂಕಿನ ಇತರ ಅಧಿಕಾರಿಗಳೂ ಬೆಳಗಾವಿ ಟ್ರೇ. ಕಾ. ದ
ಶಿಕ್ಷಕ-ವಿದ್ಯಾರ್ಥಿಗಳೂ ಅಕಸ್ಮಾತ್ತಾಗಿ ಆಗಮಿಸಿದ್ದರಿಂದ ಸಭೆಗೆ ಒಳ್ಳೆಯ ಕಳೆಯು ಬಂದಿತ್ತು.
.... ಶ್ರೀ. ರಾ. ಬ. ಪಾಟೀಲ, ಆ ಮಾಸ್ತರ.

ಯರಮುಖ (ಕಾರವಾರ ಜಿಲ್ಲೆ) — ಈ ಊರ ಶಾಲೆಗೆ ಶ್ರೀ. ಸು. ತಿ. ದೇಸಾಯಿ ಎಂಬ
ಮಾಸ್ತರರು ವರ್ಗವಾಗಿ ಬಂದಂದಿನಿಂದ ಉಪಕರಣ, ಶಾರೀರಿಕ ಶಿಕ್ಷಣ, ಹೂದೋಟ ಮೊದಲಾದ
ವಿವಿಧ ಚಟುವಟಿಕೆಗಳನ್ನು ಕೈಕೊಂಡಿದ್ದು ಅವು ಮೇಲಧಿಕಾರಿಗಳ ಮತ್ತು ಊರ ಹಿರಿಯರ
ಮೆಚ್ಚಿಕೆಗೆ ಪಾತ್ರವಾಗಿವೆ. — ಶ್ರೀ. ಎನ್. ಟಿ. ದೇಸಾಯಿ, ಸ್ಕೂಲ ಪಂಚರು.

ಗುಡೂರು (ವಿಜಾಪುರ ಜಿಲ್ಲೆ)—ಭಾಗದ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ೨೫-೨-೪೫ನೆಯ ದಿವಸ ಬಾಗಲಕೋಟೆಯ ಟ್ರೇ. ಕಾ. ದ ಪ್ರಿನ್ಸಿಪಾಲರ ಹಿರಿಯತನದಲ್ಲಿ ಚೆನ್ನಾಗಿ ಸಾಗಿತು. ಶಿಕ್ಷಣಾಧಿಕಾರಿಗಳೂ ಊರ ಹಿರಿಯರೂ ಬಂದಿದ್ದರು. ವಾಕ್‌ಸ್ಪರ್ಧೆ, ಕಾವ್ಯಗಾಯನ, ಶಾರೀರಿಕ ಚಟುವಟಿಕೆ, ನಾಟಕ, ಮಾದರಿಯ ಪಾಠಗಳು ಚೆನ್ನಾಗಿ ಆದವು. ಕುಮಾರಿ ಸರೋಜನಾ ರಾಯ್ ಬಾಗಿ ಅವರು ತಮ್ಮ ಪಾರ್ಟನ್ನು ಪರಿಣಾಮಕರವಾಗಿ ಮಾಡಿದರು. ಶ್ರೀಮಂತ ಗಣಪತಸಾ

ನರು ಸಮ್ಮೇಲನಕ್ಕೆ ಬಂದ ಶಿಕ್ಷಕ-ಶಿಕ್ಷಕಿಯರಿಗೆಲ್ಲ ಎರಡೂ ಊಟಗಳನ್ನು ಪುಕ್ಕಟೆಯಾಗಿ ಕೆದರು. — ಶ್ರೀ. ಹ. ಪಾ. ಭಟ್ಟಿ, ಪೇನಶನರ ಮಾಸ್ತರರು.

ಕುಂಡಚಿ (ಅಥಣಿ ತಾಲೂಕು)— ಶಾಲೆಯ ಇನ್‌ಸ್ಪೆಕ್ಶನ್ನವು ೧೬-೨-೪೫ ನೆಯ ದಿವಸ ಯಿತು. ರಾತ್ರಿಯಲ್ಲಿ ಶ್ರೀ. ಮಾಲಗಾರ ಮಾಸ್ತರರ ಮುಂದಾಳುತನದಲ್ಲಿ 'ಅಹಿಂಸಾ ವಿಜಯ' ೀಳೂರ ಕೊಡಗೂಸು' ಎಂಬ ಏಕಾಂಕ ನಾಟಕಗಳಾದವು. ಅವುಗಳನ್ನು ಕಂಡು ಊರ ರಯರು ಆನಂದಪಟ್ಟು ೨೭ ರೂ. ರೋಖ ಕೊಟ್ಟಿದ್ದಲ್ಲದೆ. ೧೪೦ ರೂ. ಗಳ ವಾಗ್ದಾನವನ್ನೂ ಡಿದ್ದಾರೆ. ಈ ಹಣದಿಂದ ಧರ್ಮಾರ್ಥ ವಾಚನಾಲಯವು ಸ್ಥಾಪಿತವಾದತಕ್ಕದ್ದಿದೆ.

— ಶ್ರೀ ಮು.ರಾ. ಪಟ್ಟಣಶೆಟ್ಟಿ ಕುಡಚಿ

ನಾಗಾವಿ (ಧಾರವಾಡ ಜಿಲ್ಲೆ)— ಶಾಲೆಯ ಹುಡುಗರು ಹುಲಕೋಟಿಯಲ್ಲಿ ೨೪-೨-೪೫ ರು ದಿವಸ ಗದಗ ತಾಲೂಕ ಪಂದ್ಯಾಟದಲ್ಲಿ ತೋರಿಸಿದ ಸಾಂಘಿಕ ಚಟುವಟಿಕೆ, ಶಿಸ್ತು, ಪದ್ಧತಿ ಲಿಗಳಲ್ಲಿ ತೋರಿಸಿದ ಜಾಣತನಕ್ಕಾಗಿ ಸ್ಪೇಶಲ್ ಬೆಳ್ಳಿಯ ಕಪ್ಪು, ಮೆಡಲ್ಲು, ಸರಟೇಫಿಕೇಟುಗಳು ರಕಿದವು. — ಶ್ರೀ. ಶಿ. ಬ. ಅಂಗಡಿ ಮಾಸ್ತರರು

ಕುಂಡಚಿ (ಬೆಳಗಾವಿ ತಾಲೂಕು) ಶಾಲೆಯ ವಿದ್ಯಾರ್ಥಿಗಳಿಗೆ ಜನವರಿ ೨೧ನೆಯ ದಿವಸ ಗಾವಿ ಮ್ಯುನಿಸಿಪಲ್ ಸೀಮೆಯೊಳಗಿನ ಹಾಗು ಕುಡಚಿ ಶಾಲೆಯ ಪ್ರಾ. ಶಾ. ಗಳ ಓಟ ತ, ಲಾಂಗ, ಲೇಝೀಮ ಮೊಲಾದ ಪಂದ್ಯಾಟಗಳಲ್ಲಿ ಜನರಲ್ ಚಾಂಪಿಯನ್ ಶಿಪ್ ದೊರಕಿತು ರಿಂದ ಆನಂದ ಹೊಂದಿ ಈ ಊರ ಕುಲಕರ್ಣಿ ಮಹಾದೇವಪ್ಪನವರು ೫ ರೂ. ಮೆಚ್ಚುಗೆ ಟ್ಟರು. — ಶ್ರೀ. ಡಿ. ಡಿ. ವಾಟೀಲ ಜೇ. ಸ್ಕೂ. ಕ. ಕುಡಚಿ

ಸಾಂತಿ— ಶಾಲೆಯ ಮಕ್ಕಳ ಶಾರೀರಿಕ ಚಟುವಟಿಕೆಗಳನ್ನು ಕಂಡು ಊರ ಹಿರಿಯರು ೀಜನ ಕೊಡುತ್ತಿದ್ದಾರೆ. ಆಟದ ಸಲಕರಣೆಗಳಿಗಾಗಿ ಧನಸಹಾಯವನ್ನು ಮಾಡಿದ್ದಾರೆ.

— ಶ್ರೀ. ಮು. ಕೃ. ಮಣ್ಣೂರ ಅ ಮಾಸ್ತರ

ಬಾದಾಮಿ— ಈ ಭಾಗದ ಶಿಕ್ಷಣ ಸಮ್ಮೇಲನವು ೨-೩-೪೫ ನೆಯ ದಿವಸ ಡಿ. ಎ. ಇ. ಾದ ಶ್ರೀ ವಾಳವೇಕರ ಸಾಹೇಬರ ಹಿರಿಯತನದಲ್ಲಿ ಸಾಗಿತು. ಇಪ್ಪತ್ತು ಶಾಲೆಗಳ ಶಿಕ್ಷಕರೂ, ಣಾಧಿಕಾರಿಗಳೂ, ಪ್ರತಿಷ್ಠಿತ ಗೃಹಸ್ಥರೂ ಆಗಮಿಸಿದ್ದರು. ಚಿಕ್ಕ ಪ್ರದರ್ಶನ, ಮಾದರಿಯ ', ಭಾಷಣ, ನಾಟಕ ಮೆಚ್ಚುಗೆಗಳನ್ನು ಕೊಡುವದು ಇವೆಲ್ಲವೂ ಪ್ರೇಕ್ಷಣೀಯವಾದ್ದವು.

— ಶ್ರೀ. ಸಿ. ಸ. ಆಂಬೀಗೇರ.

ಮಳಗಿ— (ಕಾರವಾರ ಜಿಲ್ಲೆ) ಊರಲ್ಲಿ ೧೬-೩-೪೫ ನೆಯ ದಿವಸ ಲಿ. ಡ್ಕೆ ಎ. ಇ. ಾದ ಉಣಕಲ್ಲ ಸಾಹೇಬರ ಹಿರಿಯತನದಲ್ಲಿ ಸಭೆಯಾಯಿತು. ಸುಮಾರು ಐದಾರುನೂರು ು ಬಂದಿದ್ದರು. ಶಾಲೆಯ ಏಳಿಗೆಯ ವಿಷಯದಲ್ಲಿ ಭಾಷಣ ಮತ್ತು ಚರ್ಚೆಗಳಾದವು. ಮುದಕಪ್ಪನವರು ಜಾಣ ವಿದ್ಯಾರ್ಥಿಗಳಿಗೆ ಮೆಚ್ಚುಗೆಯನ್ನು ಕೊಟ್ಟರು.

— ಶ್ರೀ. ಲ. ರೆ. ಕಾಮತ ಮಾಸ್ತರರು

ಕೋಟಿಉಮಚಗಿ— (ಧಾರವಾಡ ಜಿಲ್ಲೆ) ಮೋಹನ ವಾಚನಾಲಯಕ್ಕೆ ಈ ವರ್ಷದಲ್ಲಿ ಾರವರಿಂದ ೫೦ ರೂ. ಧನಸಹಾಯವು ದೊರಕಿದೆ. ಇಟಲಿಯ ಸಮರ ಭೂಮಿಯಲ್ಲಿರುವ ಯ ಶ್ರೀ. ಎಸ್. ಎಚ್. ಕುಲಕರ್ಣಿ ಅವರು ೫ ರೂ. ಕಳಿಸಿದ್ದಾರೆ.

— ಶ್ರೀ. ಲ. ವಿ. ಘಾಟಿಕ ಮಾಸ್ತರರು ಕಾರ್ಯದರ್ಶಿಗಳು

ಧಾರವಾಡ ಡಿಸ್ಟ್ರಿಕ್ಟ ಸ್ಕೌಟ್ ಹೆಡ್‌ಕ್ವಾರ್ಟರ್ಸ— ಹುಬ್ಬಳ್ಳಿ ಮ್ಯು. ಸ್ಕೂ. ಬೋ. ನವರು ೩-೪೫ ನೆಯ ದಿವಸ ತಮ್ಮ ಎಲ್ಲ ಪ್ರಾ. ಶಾ. ಗಳ ಸ್ಕೌಟ ಪಥಕಗಳು ಹಿಂದುಸ್ತಾನ ಸ್ಕೌಟ

ಸಂಸ್ಥೆಯಲ್ಲಿ ಸೇರಿ ಕೆಲಸ ಮಾಡತಕ್ಕದ್ದೆಂದು ಗೊತ್ತುವಳಿಯನ್ನು ಪಾಸು ಮಾಡಿದರು. ೧೯೩೯ ರಿಂ
ಳಲ ರವರೆಗೆ ಬಿಡನ್ ಪಾವೆಲ್ ಸಂಸ್ಥೆಗೆ ಸೇರಬೇಕೆಂಬ ನಿರ್ಣಯದಿಂದ ಸ್ಕೌಟ ಮಾಸ್ತರರಿಗೆ ಕೆಲ
ಮಾಡಲು ಸಾಧ್ಯವಾಗಿದ್ದಿಲ್ಲ. ಈಗ ಮಾರ್ಗವು ಸುಗಮವಾಯಿತು. ಹಿ. ಸ್ಕೌ. ಸಂಸ್ಥೆಯ ನೇತೃತ್ವ
ದಲ್ಲಿ ರಾಷ್ಟ್ರೀಯ ತಳಹದಿಯ ಮೇಲಿನ ಶಿಕ್ಷಣವು ಪ್ರಗತಿಪರವಾಗಿ ಸಾಗಬಹುದೆಂದು ಆಶಿಸಲಾಗಿದೆ
ಈ ಉದಾಹರಣೆಯನ್ನು ಹಿಂದುಸ್ತಾನ ಸ್ಕೌಟ ಸಂಸ್ಥೆಯಲ್ಲಿ ಸೇರದೆಇದ್ದ ಇನ್ನೂ ಒಂದೆರಡ
ಬೋರ್ಡಿನವರು ಅನುಸರಿಸಬೇಡವೇ? —ಶ್ರೀ. ಕೆ. ಜಿ. ಹಲಸಗಿ ಅರ್ಗನಾಯಿಝರ

ಹುಕ್ಕೇರಿ---ಶಾಲೆಯಲ್ಲಿ ಈ ಭಾಗದ ಸುಮಾರು ೫೦ ಶಿಕ್ಷಕರ ಸಮ್ಮೇಲನವು ಅ. ಡೆ. ವಿ. ಇ
ಅವರು ಆರ್. ಆರ್. ಪಾಟೀಲ ಸಾಹೇಬರ ಹಿರಿತನದಲ್ಲಿ ಸಾಗಿತು. ಕಲಿಸುವ ಪಾಠಗಳು; ಬಾಲಕ
ವರ್ಗದಲ್ಲಿಯ ಪ್ರಗತಿ ಹುಡುಗರ ಸಂಖ್ಯೆಯನ್ನು ಬೆಳೆಯಿಸುವದು ಮೊದಲಾದವುಗಳ ಚರ್ಚೆ
ಕಾವ್ಯ ಗಾಯನ, ಏಕಾಂಕನಾಟಕ ಮೊದಲಾದವುಗಳು ಯಶಸ್ವಿಯಾಗಿ ಸಾಗಿದವು.

:ಹೆಡ್ ಮಾಸ್ತರ ಕ. ಗ. ಮ. ಶಾ. ಹುಕ್ಕೇ

ಹೊನ್ನಾವರ—ಶಾಲೆಯಲ್ಲಿ ೧೭-೩-೪೫ನೆಯ ದಿವಸ ಡೆ. ಎ. ಇ. ಅವರಾದ ಶ್ರೀ ಕರ್ಜ
ರಾಯರಿಗೆ ಧಾರವಾಡಕ್ಕೆ ವರ್ಗವಾದ ನಿಮಿತ್ತ ಬೀಳ್ಕೊಡುಪ ಸಮಾರಂಭವಾಯಿತು. ಶ್ರೀ ಡಿ.
ನಾಯಿಕ ಅವರು ಪದ್ಯಗಳನ್ನು ರಚಿಸಿ ಅರ್ಪಿಸಿದರು —ಶ್ರೀ. ಹೆಡ್‌ಮಾಸ್ತರ ಹೊನ್ನಾವ

ಕಲಾದಗಿ (ವಿಜಾಪುರ ಜಿಲ್ಲೆ)— ಶಾಲೆಗೆ ೨೫-೪-೪೫ನೆಯ ದಿವಸ ಪ್ರಾಂತ ಆಫೀಸ
ರಾದ ಶ್ರೀ. ಸತ್ತೀಗೇರಿ ಅವರು ಸಂದರ್ಶನವಿತ್ತರು. ಆಹಾರಧಾನ್ಯಗಳನ್ನು ಹೆಚ್ಚಿಗೆ ಬೆಳೆಯುವ
ಪ್ರಚಾರಕ್ಕಾಗಿ ಬರೆದ 'ಅನ್ನದೇವ' ಎಂಬ ಏಕಾಂಕ ನಾಟಕವನ್ನು ಶಾಲೆಯ ಮುಕ್ಕಳು ಮಾಸ
ತೋರಿಸಿದರು. ಇದರಿಂದ ಆನಂದಭರಿತರಾಗಿ ೫೦ ರೂ. ಗಳನ್ನು ಶಿಕ್ಷಕರಿಗೂ-ಬಾಲಕರಿಗನು
ಹಂಚಿಕೊಟ್ಟರು. —ಶ್ರೀ. ಶಿ. ರು. ವಿರಕ್ತಮಠ ಹೆ. ಮಾ

ಕೊಡಗಾನೂರು (ವಿಜಾಪುರ ಜಿಲ್ಲೆ)— ಶಾಲಾವಾಚನಕ್ಕೆ ಶ್ರೀ. ಏ. ಬಿ. ಜೋಶಿ
ತಾಳೀಕೋಟೆ ಇವರು ದರ್ಶನವಿತ್ತು ಸಮಾಧಾನವನ್ನು ವ್ಯಕ್ತಮಾಡಿದರು.

—ಶ್ರೀ. ಕಾರ್ಯದರ್ಶಿಗಳು

ಗರಗ (ಧಾರವಾಡ ತಾಲೂಕ)— ಶಾಲೆಗೆ ೨೮-೪-೪೫ನೇಯ ದಿವಸ ಶಾಲಾ ಸಮಿ
ಯವರು ಭೆಟ್ಟಿಕೊಟ್ಟರು. ಈ ವರ್ಷದ ಪರೀಕ್ಷೆಯ ಪರಿಣಾಮವನ್ನು ಆಗ ಹೇಳಲಾಯಿತ್ತು
ಮೂಲ ಉದ್ಯೋಗದಲ್ಲಿ ಪ್ರಥಮಸ್ಥಾನ ಪಡೆದವನಿಗೂ ವರ್ಗದಲ್ಲಿ ಪ್ರಥಮಸ್ಥಾನ ಪಡೆದವನಿಗೂ
ಜಾಣ ಬಡ ವಿದ್ಯಾರ್ಥಿಗಳಿಗಾಗಿಯೂ ಶ್ರೀ. ಕುರ್ತಿಶಂಕರಿಪ್ಪನವರು ೧೦ ರೂ. ದುಂಡಯ್ಯನವರು
೫ ರೂ. ಶ್ರೀ. ಮಾಳಾಪುರ ವೀರಪ್ಪನವರು ೨ ರೂ. ಕೊಟ್ಟರು. ಪುಸ್ತಕಗಳ ರೂಪದಲ್ಲಿ
ಹಲವರು ಸಹಾಯ ಮಾಡಿದರು. —ಶ್ರೀ. ಚ. ಅ. ಗೋಗೇರಿ ಹೆ. ಮಾ

ಸಾಭಾರ-ಸ್ವೀಕಾರ

ಜನಾಂಗಗಳ ಪರಿಚಯ:— ಹೊಸ ವಿದ್ಯಾಸ ಪತ್ರಿಕೆಯನ್ನು ಅನುಸರಿಸಿ ಕನ್ನಡ
ಎರಡನೆಯ ಇಯತ್ತೆಯ ಬಾಲಬಾಲಕಿಯರ ಸಲುವಾಗಿ ಜಗತ್ತಿನ ಜನಾಂಗಗಳ ಪರಿಚಯ
ವನ್ನು ಪ್ರಾದೇಶಿಕ ಪದ್ಧತಿಯಿಂದ ಶ್ರೀ. ಬಸವಕುಮಾರ ಕೌಜಗಿರಿ ಇವರು ಬರೆದಿದ್ದಾರೆ
ಗದಗದ ಪ. ಚಿ. ಶಾಬಾದಿಮಠ ಅವರು ಪ್ರಕಟಿಸಿರುವರು. ಪುಟ ೨೬. ಬೆಲೆ ೪ ಆಣೆ.

ಮಕ್ಕಳ ಮನಸ್ಸು ಮುಖಮಲ್ಲಿನಹಾಗೆ

(ಸಾಕ್ಷರಿಗಳಾದ ಪ್ರಬುದ್ಧರಿಗಾಗಿ)

ಮೂಸೂರು ಮಲೆನಾಡಿನ ಒಂದು ಹಳ್ಳಿ. ಒಕ್ಕಲುತನದ ಊರು. ಅಂದು ಕ್ಷಯ್ಯತೃತೀಯೆ. ಮುಂಜಾನೆ ಎಲ್ಲರೂ ಹೊಲಕ್ಕೆ ಹೋಗಿ ಬಿತ್ತಿಗೆಯ ಮುಹೂರ್ತ ಮಾಡುವರು ಮಧ್ಯಾಹ್ನ ಹಬ್ಬದ ಊಟ. ಸಾಯಂಕಾಲಕ್ಕೆ ಎಲ್ಲರೂ ಸಿಂಗಾರಾಗಿ ಮಕ್ಕಳು ಮರಿಗಳನ್ನೂ ಸಿಂಗರಿಸಿಕೊಂಡು ಗುಡಿಗೆ ಹೋಗಿ ಬರುವರು. ಹಿಂದಿನ ಕಾಲದ ಈ ನಡತೆಯೇ ಇಂದಿಗೂ ನಡೆದು ಬಂದಿದೆ, ಆ ಊರಲ್ಲಿ.

ಸಾವಕ್ಕನೂ ಸರಸಕ್ಕನೂ ಓರಗೆಯ ಗೆಳತಿಯರು ಒಬ್ಬಳಿಗೆ ಐದು ತುಂಬಿದೆ. ನ್ನೊಬ್ಬಳಿಗೆ ಆರು ನಡೆದಿದೆ. ಇಬ್ಬರೂ ತಾಯಂದಿರ ಸಂಗಡ ಗುಡಿಗೆ ಹೋದವರು ರುಗಿ ಮನೆಗೆ ಹೊರಟಿದ್ದರು. ಅಂದು ಇಳಿಹೊತ್ತಿನಲ್ಲಿ ಚೆನ್ನಾಗಿ ಮಳೆಯಾಗಿತ್ತು. ೂರ ಹೊಲಸೆಲ್ಲ ತೊಳೆದುಹೋಗಿತ್ತು. ಅಲ್ಲಿ ಇಲ್ಲಿ ಚಿಕ್ಕ ದೊಡ್ಡ ಗುಂಡಿಗಳಲ್ಲಿ ಕೆಂಪು ಡಿನೀರು ನಿಂತಿತ್ತು. ದಾರಿಯ ಬದಿಯಲ್ಲಿ ನಿಂತಿರುವ ನೀರು ನೋಡಿ ಆ ಮಕ್ಕಳ ನಸ್ಸು ಅತ್ತ ಹೊರಳಿತು. ಸಾವಕ್ಕನು ಹೊಸ ಇಳಕಲ್ ಕಿರಿಗೆಯನ್ನು ಉಟ್ಟಿದ್ದಳು. ರಸಕ್ಕನು ಹೊಸ ಪರಿಕರ ಉಟ್ಟು ಮುಖಮಲ್ಲಿನ ಜಾಕೀಟು ತೊಟ್ಟಿದ್ದಳು. ಇಬ್ಬರೂ ಗುತ್ತ ನೀರಿಗೆ ಇಳಿದರು.

'ಅಕ್ಕಾ ನನ್ನ ಜಾಕೀಟಿಗೆ ಕೆಸರು ಸಿಡಿಸಬೇಡ ಅವ್ವ ಬಡಿದಾಳು. ಹತ್ತು ರೂಪಾಯಿ ಕೊಟ್ಟು ಹೊಲಿಸಿದ್ದಾಳಂತೆ.'

''ನನ್ನದು ಹೊಸ ಕಿರಿಗೆ. ನಮ್ಮವ್ವ ಇಪ್ಪತ್ತು ರೂಪಾಯಿ ಕೊಟ್ಟು ತಂದಿ ದ್ದಳಂತೆ.''

ಸರಸಕ್ಕನು ಹೀಗೆ ಮಾತಾಡುತ್ತಿರುವಾಗಲೇ ಸಾವಕ್ಕನ ಮನಸ್ಸು ಹತ್ತು ರೂಪಾ ಯಿಯ ಜಾಕೀಟನ್ನೂ ಇಪ್ಪತ್ತು ರೂಪಾಯಿಯ ಕಿರಿಗೆಯನ್ನೂ ಮರೆತು ಬಿಟ್ಟಿತ್ತು. ವಳು ನೀರಿನಲ್ಲಿ ದೊಪ್ಪನೆ ಕಾಲು ಅಪ್ಪಳಿಸಿದಳು. ಸರಸಕ್ಕನ ಮೈತುಂಬ ಹೊಲಸು ಡಿ ಸಿಡಿಯಿತು. ಮುಖಮಲ್ಲಿನ ಜಾಕೀಟೂ ರಾಡಿಯಾಯಿತು. ಸಾವಕ್ಕನ ಕಿರಿಗೆಯೂ ೀಯ್ದು ತಪ ತಪ ನೀರು ಸುರಿಯಹತ್ತಿತು.

'ಏನೇ ಇದು?' ಎಂದು ಸರಸಕ್ಕನು ಜಾಕೀಟು ತೋರಿಸುತ್ತ ಅಳುಮೋರೆ ಾಡಿ ಸಿಟ್ಟಿಗೆದ್ದು ಏರಿ ಬಂದಳು.

ಸಾವಕ್ಕನು ತನ್ನ ತಪ್ಪಿಗಾಗಿ ನಾಚಿಕೊಂಡು ಹೆದರಿ ಓಡಿದಳು. ಸರಸಕ್ಕನ ಯಿ ಈರವ್ವನು ದೂರದಿಂದಲೇ ಇದನ್ನೆಲ್ಲ ನೋಡುತ್ತಿದ್ದವಳು ಸಾವಕ್ಕನನ್ನು ಹಿಡಿದು ಲ್ಲಿಸಿ 'ಏನೇ ಗಯ್ಯಾಳಿ, ಹತ್ತು ರೂಪಾಯಿಯ ಮಲ್ಲಿನ ಜಾಕೀಟು ಕೆಡಿಸಬೇಕೆ? ೀಕರವನ್ನಾದರೂ ಒಗೆದು ಹಾಕಬಹುದು, ಎನ್ನುತ್ತ ಸಿಟ್ಟಿನ ಭರದಲ್ಲಿ ಅವಳ ಹೆಡ ಿಗೆ ಒಂದು ಏಟು ಕೊಟ್ಟಳು.

ಸಾವಕ್ಕನು ದೊಡ್ಡ ದನಿ ತೆಗೆದು ಅಳಹತ್ತಿದಳು. ಅವಳ ತಾಯಿ ತುಂಗವ್ವನು ಹತ್ತಿರದಲ್ಲೇ ಇದ್ದವಳು ಅಲ್ಲಿಗೆ ಬಂದೇಬಿಟ್ಟಳು. ಅವಳ ಬಾಯಿ ಬಲು ಹಗುರ ಒಮ್ಮೆಲೆ ನಾಮಾವಳಿಯನ್ನೇ ಆರಂಭಿಸಿದಳು. ಬಾಯಿಗೆ ಬಾಯಿ ಹತ್ತಿ ಜಗಳಕ್ಕೆ ನೊದಲಾಯಿತು. ಒಣಿಯ ಜನರೆಲ್ಲ ಕೂಡಿದರು. ಎರಡು ಗುಂಪಾಗಿ ಒಬ್ಬರನ್ನೊಬ್ಬರು ಕೈಮೂಡಿ ಒದರಾಡಿ ಬಯ್ದಾಡಹತ್ತಿದರು. ಮೂಲ ಕಲಹದ ಕಾರಣವಾಗಲಿ ಅದಕ್ಕೇನು ಸಮಾಧಾನವೆಂಬುದಾಗಲಿ ಯಾರಿಗೂ ಗೊತ್ತಿಲ್ಲ. ಗಂಡಸರೂ ಬಂದರು. ಕೈಗೆ ಕೈ ಹತ್ತುವ ಹೊತ್ತು ಬಂದುಬಿಟ್ಟಿತು.

ಸಾವಕ್ಕನ ಅಜ್ಜಿ ಗೌರಮ್ಮನು ನಡುವೆ ಬಂದು "ಏನಿರೇ, ಈರವ್ವಾ, ತುಂಗಮ್ಮಾ, ಮಲ್ಲಮ್ಮಾ, ಏನು ಗದ್ದಲವಿದು? ಹಬ್ಬದ ದಿನ! ಬಿತ್ತಿಗೆಯ ಮುಹೂರ್ತದ ಸಂಗಡಲೇ ಕಲಹದ ಮುಹೂರ್ತವನ್ನೂ ಮಾಡುವಿರಾ" ಎಂದು ಮುಂತಾಗಿ ಗದ್ದರಿಸಿದಳು. ಮುದುಕಿಯ ಮಾತನ್ನು ಕೇಳುವವರೇ ಇಲ್ಲ. ಮಾತಿಗೆ ಮಾತು ಬೆಳೆಯುತ್ತಲೇ ಇತ್ತು.

ಇತ್ತ ಸರಸಕ್ಕನು ತನ್ನ ಮಲ್ಲಿನ ಜಾಕೀಟು ಕೊಡವಿ ಕೆಸರನ್ನೆಲ್ಲ ಉದುರಿಸಿದಳು. ಜಾಕೀಟು ಮೊದಲಿನಂತೆ ಹಚ್ಚಹಸುರಾಗಿ ಚೆಂದ ಕಾಣಿಸಹತ್ತಿತು; ಅದನ್ನು ನೋಡಿ ಸಾವಕ್ಕನಿಗೂ ಸಂತೋಷವಾಯಿತು. ಇಬ್ಬರೂ ಮತ್ತೆ ನೀರಿನತ್ತ ನಡೆದರು. ಅಲ್ಲಿಯೇ ಬಿದ್ದಿರುವ ಕಟ್ಟಿಗೆ ಪರಟಿಗಳನ್ನು ತಕ್ಕೊಂಡು ಬದುವು ಕೆದರಿ ನೀರಿಗೆ ದಾರಿ ಮಾಡಿದರು. ನೀರು ಸಳಸಳ ಹರಿಯಹತ್ತಿತು. ಒಂದೊಂದು ಚಿಕ್ಕ ಕಾಲುವೆಯೇ ಆಯಿತು. ಸರಸಕ್ಕನು ಕೈಯೊಳಗಿನ ಪರಟಿಯನ್ನು ಹರಿಗೋಲು ಮಾಡಿ ತೇಲಿಬಿಟ್ಟಳು. ಹರಿಗೋಲು ಗರಗರ ತಿರುಗುತ್ತ ಕಾಲುವೆಯಲ್ಲಿ ಸಾಗಿತು. ಸರಸಕ್ಕನೂ ಸಾವಕ್ಕನೂ ಅದರೊಡನೆ ನಗುತ್ತ ಕೆಲೆಯುತ್ತ ಜಪ್ಪಾಳೆ ಇಕ್ಕುತ್ತ ಸಾಗಿದರು.

ಗೌರಮ್ಮನು— "ಇನ್ನಾದರೂ ನೋಡಿರೇ, ನೀವು ಯಾರ ಸಲುವಾಗಿ ಕಲಹಾಡುತ್ತಿರುವಿರೋ ಅವರೇ ಹೀಗೆ ಆನಂದದಿಂದ ನಲಿಯುತ್ತಿರುವಾಗ ನೀವೇನು ಊರನ್ನು ಒಡೆಯುವ ಕೆಲಸ ನಡಿಸಿದ್ದೀರಿ. ಸರಸಕ್ಕನ ಮಲ್ಲಿನ ಜಾಕೀಟು ನೋಡಿರಿ. ಅದು ಈಗಲೂ ಹೊಸದಾಗಿಯೇ ಇದೆ. ಅದು ಮೇಲೆ ಬಿದ್ದ ಕೆಸರನ್ನು ಅಂಟಿಸಿಕೊಳ್ಳಲೇ ಇಲ್ಲ. ಹಾಗೆಯೇ ಮಕ್ಕಳ ಮನಸ್ಸು. ಅದು ಹೊರಗಿನ ಹೊಲಸನ್ನು ಒಳಗೆ ತಕ್ಕೊಳ್ಳುವದೇ ಇಲ್ಲ. ನೀವಾವರೂ ಹೀಗೆಯೇ ಇರಬೇಕು. ಎಂದರೆ ಮಾತ್ರ ನಾಲ್ಕು ದಿನ ಸುಖದಿಂದ ಬಾಳುವಿರಿ. ನಡೆಯಿರಿ; ಮನೆಗೆಲಸಗಳಲ್ಲಿ ತೊಡಗಿರಿ" ಎಂದು ಬೆದರಿಸಿದಳು.

ಎಲ್ಲರ ಮೋರೆಯ ಮೇಲೆ ನಗೆ ಉಕ್ಕಿತು. ಕಲಹವನ್ನು ಮರೆತು "ಮಕ್ಕಳ ಮನಸ್ಸು ಮುಖಮಲ್ಲಿನ ಹಾಗೆ. ಮಕ್ಕಳ ಜಗಳದಲ್ಲಿ ಹಿರಿಯರು ಕೈಹಾಕುವದು ಶುದ್ಧ ತಪ್ಪು" ಎನ್ನುತ್ತ ತಮ್ಮ ತಮ್ಮ ಮನೆಗಳಿಗೆ ನಡೆದರು.

ನಮ್ಮ ಹಳ್ಳಿಗಳಲ್ಲಿಯೂ ಅನೇಕ ಸಾರೆ ಇಂಥ ಕಲಹದ ಸಂದರ್ಭಗಳು ಒದಗುತ್ತಿರುವವಲ್ಲವೇ?

ಗಣಿತ ಶಿಕ್ಷಕ

●

೪೧೨ ಪುಟಗಳು ☜ ಬೆಲೆ ೧ ರೂ. ೫ ಆಣೆ. ☞ ೫-೬-೭ನೆಯ ಇ. ಗಳಿಗಾಗಿ

೨—೩ ಕ್ಲಾಸುಗಳು ಒಬ್ಬ ಮಾಸ್ತರನ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ ಶಿಕ್ಷಕನಾಗಿ ಸಹಾಯಕವಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ. ಈಗಿನ ತುಟಾಗ್ರತೆಯ ಕಾಲದಲ್ಲಿ ವೆಚ್ಚಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ☜ ಬೆಲೆ ಕಡಿಮೆ ☞ ವೆಚ್ಚವಿಲ್ಲದೆ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲಬೆಲೆಯನ್ನು ಮುನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದಿಡಿರಿ. ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಸಾಲೆಗಳಲ್ಲಿ ವ್ಯವಸ್ಥೆಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ

ವಿಳಾಸ:— ಬ. ದು. ಹಿರೇಮಠ, ಮಾಸ್ತರ ವಿಜಾಪುರ.

ಹೊಸ ಪುಸ್ತಕಗಳಿಗೆ ತ್ವರೆಮಾಡಿರಿ! ಲಾಭಪಡೆಯಿರಿ!

ಹೊಸ ಪದ್ಧತಿಯ
(೧) ಹಿಂದೀ ಜಮಾಖರ್ಚು ಭಾಗ ೧
(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫-೬ನೆಯ ಇಯತ್ತೆಯವರಿಗೂ ಹೆಣ್ಣುಮಕ್ಕಳ ಮುಲ್ಕೀ ಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೮ ಆಣೆ.

೨. ಆರಂಭದ ಜಮಾಖರ್ಚು: ೪ನೆಯ ಇಯತ್ತೆಯವರಿಗೆ ಉಪಯೋಗವಿದೆ. ಬೆಲೆ : ೩ ಆಣೆ.

೩. ಅಂಗಸಾಧನ ಶಿಕ್ಷಕ : ... ಬೆಲೆ : ೪ ಆಣೆ.

೪. ಗಣಿತಪಾಠ ಸಂಗ್ರಹ : ಇದು ಈಗಿನ ಪರೀಯ ಪದ್ಧತಿಯಂತಿರುವದರಿಂದ ಸ್ಕಾಲರ ಮತ್ತು ಮುಲ್ಕೀ ಪರೀಕ್ಷೆಯವರಿಗೆ ಉಪಯುಕ್ತವಿದೆ.

ಬೆಲೆ: ೪ ಆಣೆ

ಹೊಸ ಪದ್ಧತಿಯ
ಹಿಂದೀ ಜಮಾಖರ್ಚು ಭಾಗ ೨
(ವ್ಯಾಪಾರಿ ಜಮಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮುನಿಯಾರ್ಡರ, ಬಡ್ಡೀ ಆಕರಣೆ ಜಮಾಖರ್ಚಿನ ಇತರ ವಹಿಗಳು, ಯಾದಿಗಳ ನಮೂನೆಗಳು, ಪ್ರಶ್ನೆಗಳು, ಪ್ರಶ್ನೆಕಾಗದಗಳು ಇರುವವಲ್ಲದೆ, ಒಕ್ಕಲತನ ಒಲವಿನ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಬರೆದ ಜಮಾಖರ್ಚು ಅಂದರೆ ಡೇಲಿ ಲೇಬರ ಶೀಟು, ವೀಕಲಿ ಮಸ್ಟರ ರೋಲ್, ಕಲ್ಟಿವೇಶನ್ ಶೀಟು ಮುಂತಾದವುಗಳ ಪತ್ರಿಕೆಗಳೂ ಕಲಿಯಲಾಯಿತು, ಬಾಡಿಗೆಯ ಪತ್ರಗಳ ನಮೂನೆಗಳೂ ಇರುವವರಿಂದ ಇದು ೭ನೆಯ ಇಯತ್ತೆಯವರಿಗೂ, ಅಗ್ರಿಕಲ್ಚರಲ್ ಬಾಯಸ್ಕ್ಲಾಸಿನವರಿಗೂ ಉಪಯುಕ್ತವಿದೆ. ಸ್ವಲ್ಪಪ್ರತಿಗಳಿರುವದರಿಂದ ನಮೂನೆಗಾಗಿ ಒಂದನ್ನಾದರೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ : ೮ ಆಣೆ.

ವಿಳಾಸ:— ರಾ. ವಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದು ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦-೫-೦
ಕವಿತಾ ಕುಸುಮ ಮಂಜರಿ ಭಾಗ ೨ .... ೦-೫-೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್ ಬೋರ್ಡುಗಳು ೫-೬-೭ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ಪ್ರಾಥಮಿಕ ಶಿಕ್ಷಣದರ್ಪಣ ಜೂನ್ ತಿಂಗಳ ಅಂಕದ ೨೪ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ವಾರಲಿಕ್ಕೆ ದೊರೆಯುವವು.

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಣಕೆಯೂ ಸಮಾವೇಶವಾಗಿವೆ.)

ಸಂಪಾದಕರು :

ಶ್ರೀನಿವಾಸ ಗುರಾಚಾರ್ಯ ಬೈಚವಾಳ, ಎಂ.ಎ.

ಪರಿವಿಡಿ

ನಂ.	ವಿಷಯ	ಪುಟ
	ನಮ್ಮ ಮಾತು	೧
	ಸಾರ್ಜಂಟ ಯೋಜನೆಯ ವಿಹಂಗಮ ನೋಟ ...	೪
	ಸಾರ್ಜಂಟ ಯೋಜನೆಯ ಮುಖ್ಯಾಂಶಗಳು	೫
	ಕತ್ತೆ (ಕವಿತೆ)	೭
	ಕನ್ನಡ—ಕರ್ನಾಟಕ .... ——	೮
	ಪ್ರೌಢ ವಿದ್ಯಾರ್ಥಿಯ ಪ್ರೌಢಿ (ಕವಿತೆ)	೯
	ಕೋಗಿಲೆ	೧೧
	ಶ್ರೀ. ರಾ. ಪು. ಪಟವರ್ಧನ ಎಂ. ಎ. (ಡಿ. ಪಿ. ಆಯ್. ಅವರ ಪರಿಚಯ)	೧೩
	ಹಿಂದೂ ಸ್ತ್ರೀಯರ ಹಕ್ಕು ಬಾಧ್ಯತೆ	೧೪
	ಸೇವಾನಿವೃತ್ತ ಪ್ರಿನ್ಸಿಪಾಲ ಶ್ರೀ. ಹುಚ್ಚರಾವ ಉಪಾಡಿ (ಪರಿಚಯ) ...	೧೬
	ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ	೧೮
	" ಸಮಯೋಚಿತ ಸಾಧ್ಯರ್ಥಗಳ ಸುಲಲಿತ ಸಹಾಯ "	೨೫
	ತಪ್ಪು ಯಾರದು ? (ಸಾಕ್ಷರಿಗಳಾದ ಪ್ರಬುದ್ಧರಿಗಾಗಿ)	೨೭

— ಪತ್ರಗಳ ಮುಖ್ಯಾಂಶಗಳು —

ಉಗಾರ (ಬೆಳಗಾಂವಿ ಜಿಲ್ಲೆ)— ಶಾಲೆಯಲ್ಲಿ ೧೩-೬-೪೫ ನೆಯ ದಿವಸ ಶ್ರೀಮಂತ ಪ್ರೇವ.ಚಂದ ಶಹಾ ಅವರು ತಮ್ಮ ಮಗನು ಮ್ಯಾಟ್ರಿಕ್ ಪಾಸಾದುದರ ಆನಂದದಿಂದ ಪ್ರಾಥಮಿಕ ಶಾಲೆಯ ಬಾಲಬಾಲಿಕೆಯರಿಗೆ ಫಲಾಹಾರವನ್ನೂ ಗಡಿಯಾರ ದುರಸ್ತಿಗಾಗಿ ೫ ರೂಪಾಯಿಗಳನ್ನೂ ಕೊಟ್ಟರು. ಶ್ರೀ. ವಿಜಿ ಅಣ್ಣಾರಾಯರು.

ಗದಗ—ಬಾಲಬಾಲಿಕೆಯರಿಂದ ಆರಂಭವಾಗಿ ತೀರ ಮೇಲಿನ ತರಗತಿಯ ವರೆಗೂ ಉಪಯೋಗಿಸುವ ಪಠ್ಯಪುಸ್ತಕಗಳಲ್ಲಿ " ವ, ಮ, ಸ, ಷ " ಅಕ್ಷರಗಳು (ಹಾಗೂ ಅವುಗಳ ಗುಣಿತಗಳು) ಬೇರೆ ಬೇರೆಯಾಗಿವೆ. ಆ ಅಕ್ಷರಗಳನ್ನು ಒಂದೇ ರೀತಿಯಲ್ಲಿ ಅಚ್ಚು ಹಾಕಿಸಿ ವಿದ್ಯಾರ್ಥಿಗಳ ತೊಂದರೆ ದೂರ ಮಾಡಬೇಕೆಂದು ಪಠ್ಯ ಪುಸ್ತಕ ಪ್ರಕಾಶಕರಿಗೆ ಸೂಚಿಸಬಯಸುವೆ. —ಶ್ರೀ. ಕುಲಕರ್ಣಿ ಕೇಶವರಾಯರು.

ಬಾಗಲಕೋಟೆ—ಸೆಂಟ್ರಲ್ ಸ್ಕೂಲಿನಲ್ಲಿ ಕರ್ತವ್ಯದಕ್ಷ ಶಿಕ್ಷಕರಾಗಿದ್ದ ಶ್ರೀ. ಬಸಯ್ಯನವರು ಮಠ ಇವರಿಗೆ ವರ್ಗವಾದುದರಿಂದ ಬಸವೇಶ್ವರ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರ ಹಿರಿಯತನದಲ್ಲಿ ಸಭೆ ನೆರೆದು ಬೀಳ್ಕೊಡುವ ಸಮಾರಂಭವಾಯಿತು.

ಶ್ರೀ. ಶಿ. ಹ. ಪಾಟೀಲ.

ನೇಗಿನಹಾಳ (ಬೈಲಹೊಂಗಲ ತಾಲೂಕು.)—ಒಕ್ಕಲುತನಸಂಘದ ಚೇರಮನ್ನರಾದ ಶ್ರೀ. ದಿವಾಣರ ಚೆನ್ನಬಸಪ್ಪನವರು ತಮ್ಮ ಪರಿವಾರದೊಡನೆ ಬಾಲ ಬಾಲಕಿಯವರ ಶಾಲೆಗಳಿಗೆ ದಯಮಾಡಿಸಿ ಬಾಲಕರ ಶಾಲೆಗೆ ೩೩ ರೂ. ೧೪ ಆಣೆ. ೬ ಪೈ. ಗಳ, ಹಾಗು ಬಾಲಿಕೆಯರ ಶಾಲೆಗೆ ೧೪ ರೂ. ೧೦ ಆಣೆಗಳ, ಒಟ್ಟು ೪೮ ರೂ. ೪ ಆಣೆ. ೬ ಪೈ. ಗಳ ಪಾಟಿ ಪುಸ್ತಕಗಳನ್ನು ಬಡ ಮಕ್ಕಳಿಗೆ ಕೊಟ್ಟು ಪ್ರೋತ್ಸಾಹಿಸಿದರು. —ಶ್ರೀ. ಬ. ಚ. ಕುಂಕೂರ. ಮಾಸ್ತರರು.

ಕಾಖಂಡಕಿ (ವಿಜಾಪುರ ಜಿಲ್ಲೆ)—ಒಕ್ಕಲತನದ ಒಲವಿನ ಶಾಲೆಯಿಂದ ಈ ವರ್ಷ ಪಾ. ಶಾ. ಪ್ರ. ಪತ್ರಪರೀಕ್ಷೆಗೆ ಕುಳಿತು ೧೨ ವಿದ್ಯಾರ್ಥಿಗಳಲ್ಲಿ ೧೦ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು. ಇದರ ಶ್ರೇಯಸ್ಸು ಶ್ರೀ. ಯಾಳವಾರ, ಶ್ರೀ. ತುಂಗಳ ಅವರಿಗೆ ಸಲ್ಲುವದು

—ಶ್ರೀ. ಎಸ್. ಬಿ. ಕೋರಿ. ಚೇರಮನ್ ಮಲ್ಲಿಕಾರ್ಜುನ ವಾಚನಾಲಯ

ನಾವಲಗಟ್ಟಿ (ಬೈಲಹೊಂಗಲ ತಾಲೂಕು)—ಶಾಲೆಯ ಬಡಮಕ್ಕಳ ಪಾಟಿ, ಸೇನಸೀಲು ಪುಸ್ತಕಗಳಿಗಾಗಿ ಶ್ರೀ ಮೊಖಾಶಿ ವೀರಪ್ಪನವರು ೧೦ ರೂ. ಕೊಟ್ಟರು. ಊರ ಹಿರಿಯರು ಗ್ರಾಮವಾಚನಾಲಯದ ಸ್ಥಾಪನೆಗಾಗಿ ಯತ್ನಿಸುತ್ತಿದ್ದಾರೆ. ಇದೆಲ್ಲಕ್ಕೂ ಮೆ. ಅಂಗಡಿ. ಅ. ಡೆ. ಎ. ಇ. ಬೆಳಗಾವಿ ಅವರ ಉಪದೇಶವೇ ಕಾರಣವಾಯಿತು. —ಹೆಡ್ ಮಾಸ್ತರರು.

ಪಳಸಂಗ (ಸೊಲ್ಲಾಪುರ ತಾಲೂಕು)—೨೬-೬-೪೫ ನೆಯ ದಿವಸ ಶಾಲೆಯ ೭ ನೆಯ ಹುಟ್ಟು ಹಬ್ಬದ ಸಮಾರಂಭವು ಶ್ರೀ. ಭೂಮ್ಯಾ ವಕೀಲರ ಅಧ್ಯಕ್ಷತೆಯಲ್ಲಿ ಜರುಗಿತು. ಆ ವೇಳೆಯಲ್ಲಿ ಶ್ರೀ. ಜಿನರಾಜ ಹೆಗಡೆ. ಎಂ. ಎಲ್. ಏ. ಅವರು ಆಗಮಿಸಿದ್ದರು. ಬಾಲ ಬಾಲಿಕೆಯರ ಸಂವಾದ. ಹಾಡು, ಆಟಗಳಿಂದ ಸಮಾರಂಭವು ಒಳ್ಳೆಯ ಸಡಗರದಿಂದ ಸಾಗಿತು. ಶ್ರೀ. ಹಿರಿಯರ ಮಠ ದೊಡ್ಡಯ್ಯನವರು ಸಂತೋಷಭರಿತರಾಗಿ ೫ ರೂಪಾಯಿಗಳನ್ನು ಬಾಲ ಬಾಲಿಕೆಯರ ಸಿಹಿತಿನಿಸಿಗಾಗಿ ಕೊಟ್ಟರು. —ಶ್ರೀ. ರಂ. ರ. ಜಹಾಗೀರದಾರ ಹೆಡ್ ಮಾಸ್ತರರು.

ಕೋಟಿಉಮಚಗಿ (ಗದಗ ತಾಲೂಕ)—ಮೋಹನ ವಾಚನಾಲಯಕ್ಕೆ ಗದುಗಿನ ಮ್ಯು. ಪಾ. ನಾಟವೆ ಅವರು ಬೆಟ್ಟಿಕೊಟ್ಟು ೧೦ ರೂ. ಕೊಟ್ಟರು. ಇದರಂತೆ ಪ್ರತಿವರ್ಷವೂ ಕೊಡುವೆನೆಂದು ತಿಳಿಸಿದ್ದಾರೆ. ಗ್ರಾಮಪಂಚಾಯತಿಯ ಸರಪಂಚರಾದ ಶ್ರೀ. ಶಿರೂರ ತನವರು ೧೯-೬-೪೫ ನೆಯ

ರಕ್ಷಾಪತ್ರದ ೩ನೆಯ ಪುಟ ನೋಡಿರಿ.]

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಶ್ರೀನಿವಾಸ ಗುರಾಚಾರ್ಯ ಬೈಚವಾಳ ಎಂ. ಎ.

ಕೂಗುವೊಂದಾಗಿ । ಕರುಳೊಂದಾಗಿ । ಹೃದಯದನುರಾಗವೊಂದಾಗಿ
ಸಂಘಟಿತ ಬಲಿಯುತರಾಗಿ । ರಾಗ ವಿದ್ವೇಷ ಮತ್ಸರ
ಮದಂಗಳ ನೀಗಿ । ಸಾಗಲನುವಾಗಿರೈ । ಭೋಗಬಿಟ್ಟೀಳಿರೈ ।
ಕನ್ನಡಮ್ಮನ ಕುವರರೇ ॥

—ಋಗ್ವೇದ.

ಂಪುಟ ೮೪ } ಜುಲೈ, ಅಗಸ್ಟ, ಸಪ್ಟಂಬರ ೧೯೪೩ } ವರ್ಷ ೧೦ ಸಂ. ೪–೫–೬

ನಮ್ಮ ಮಾತು :

'ಪ್ರಾಥಮಿಕ ಶಿಕ್ಷಣ' ದ ಸಂಪಾದನದ ಭಾರವನ್ನು ನನಗಿಂತ ಮೊದಲಿನ ಸಮರ್ಥ ಂಪಾದಕರು ಹೊತ್ತುಕೊಂಡು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದಿರುವರು. ಈ ಸಂಚಿಕೆ ಯಿಂದ ಅದರ ಭಾರವು ನಮ್ಮ ಮೇಲೆ ಬಿದ್ದಿದೆ. ಹಿಂದಿನ ಸಂಪಾದಕರಂತೆಯೆ ನಾವೂ ಈ ಭಾರವನ್ನು ಶಕ್ತ್ಯಾನುಸಾರವಾಗಿ ನಿರ್ವಹಿಸಿಕೊಂಡು ಹೋಗಿ ನಮ್ಮ ಕರ್ತವ್ಯವನ್ನು ಸಮಾಧಾನಕಾರಕವಾಗಿ ನೆರವೇರಿಸುವೆವೆಂಬ ಭರವಸೆಯೂ ನಮಗುಂಟು. ಸಂಪಾದಕನು ನುರಿತ ಲೇಖಕನೇ ಆಗಿದ್ದುಕೊಂಡು ಸಂಪಾದನೆಯ ಕಾರ್ಯವನ್ನು ಚೆನ್ನಾಗಿ ಬಲ್ಲವನಾಗಿರ ಬೇಕೆಂಬುದು ನಿಜ. ಆದಾಗ್ಯೂ ನಾವು ನಮ್ಮ ಬರೆಹಗಳ ಮುಖಾಂತರವಾಗಿ ಮತ್ತು ವಿಶೇಷ ವಾಗಿ ನುರಿತ ಲೇಖಕರ ಲೇಖನಗಳನ್ನು ಸಂಪಾದಿಸಿ ಪ್ರಾಥಮಿಕ ಶಿಕ್ಷಣದ ಪವಿತ್ರಕಾರ್ಯ ವನ್ನು ನೆರವೇರಿಸಲು ಮನಃಪೂರ್ವಕವಾಗಿ ಪ್ರಯತ್ನಿಸುವೆವೆಂದು ಭರವಸೆಯನ್ನು ಕೊಡಬಲ್ಲೆವು. ಆದರೆ ನಮ್ಮೀ ಕಾರ್ಯದಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿಯೂ—ವಿಶಾಲವಾದ ಶಿಕ್ಷಣ ಕ್ಷೇತ್ರ ದಲ್ಲಿಯೂ—ದುಡಿಯುವಂಥವರೂ ನಮ್ಮ ನಾಡಿನ ಶಿಕ್ಷಣ ಪ್ರೇಮಿಗಳೂ ಲೇಖನ-ಕವನ ಹಾಗು ಲಹರಿಗಳ ಮುಖಾಂತರ ನೆರವಾಗಿ ನಮ್ಮ ಭಾರವನ್ನು ಹಗುರು ಮಾಡಬೇಕೆಂದು ಬಿನ್ನ ವಿಸಿಕೊಳ್ಳುವೆವಲ್ಲದೆ ಈ ವರೆಗೆ ಪ್ರಾಥಮಿಕ ಶಿಕ್ಷಣದ ಮುನ್ನಡೆಗೆ ನೆರವಾದವರು ಇನ್ನು ಮುಂದೆಯೂ ಹಾಗೆಯೇ ನೆರವಾಗಬೇಕೆಂದು ಪ್ರಾರ್ಥನೆ.

ಯುದ್ಧೋತ್ತರ ಶಿಕ್ಷಣ ಪುನರ್ರಚನೆ :

ದ್ವಿತೀಯ ಜಾಗತಿಕ ಮಹಾಯುದ್ಧದಲ್ಲಿ ಮಿತ್ರರಿಗೆ ವಿಜಯ ದೊರೆತುದು ನಮ್ಮೆಲ್ಲರಿಗೂ ಸಂತೋಷದ ಸಂಗತಿಯಾಗಿರುವುದು. ಈ ಯುದ್ಧದಲ್ಲಿ ಆಗುತ್ತಿದ್ದ ಲಕ್ಷಾಂತರ ಜನರ ಕೊಲೆಯನ್ನು

ನಿಲ್ಲಿಸಿದುದಕ್ಕಾಗಿ ದೇವರನ್ನು ನಾವು ಎಷ್ಟು ಸ್ಮರಿಸಿದರೂ ತೀರದು. ಮೇಲಾಗಿ ಸಾರ್ಜಂಟ್ ಕಮಿಟಿಯ ಶಿಕ್ಷಣ ಯೋಜನೆಗೆ ಇನ್ನು ಅನುಕೂಲ ಪರಿಸ್ಥಿತಿಯು ಒದಗಿದುದರಿಂದ ಸಂತೋಷವು ಮಿಕ್ಕಿದೆ. ಸಾರ್ಜಂಟ್ ಶಿಕ್ಷಣ ಸಮಿತಿಯ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಅತ್ಯಂತ ಪ್ರಮುಖ ಸ್ಥಾನವನ್ನು ಕೊಡಲಾಗಿದೆ. ಶ್ರೀ ಸಾರ್ಜಂಟರವರ ಶಿಕ್ಷಣಯೋಜನೆಯನ್ನು ಯಶಸ್ವಿಯನ್ನಾಗಿ ಮಾಡಲು 'ಪ್ರಾಥಮಿಕ ಶಿಕ್ಷಣ' ವು ತನ್ನ ಶಕ್ತಿಮೀರಿ ದುಡಿದು ಪ್ರಾಥಮಿಕ ಶಿಕ್ಷಣದ ಮಟ್ಟವನ್ನೂ ಪ್ರಾಥಮಿಕ ಶಿಕ್ಷಕರ ಜ್ಞಾನ-ಜೀವನದ ಮಟ್ಟವನ್ನೂ ಏರಿಸಲು ಪ್ರಯತ್ನಿಸುವುದೆಂದು ಇಲ್ಲಿ ಹೇಳದೆ ಇರಲಾರೆವು.

ನಮ್ಮ ಕರ್ತವ್ಯ :

ಪ್ರಾಥಮಿಕ ಶಿಕ್ಷಣವು ಉಚ್ಚ ಶಿಕ್ಷಣಕ್ಕೆ ತಳಹದಿ. ಇದರ ಬಗ್ಗೆ ಅಲಕ್ಷ ಮಾಡುವದೆಂದರೆ ನಮ್ಮ ಭಾವಿ ಉತ್ಕರ್ಷಯ ಮೇಲೆ ನಾವೇ ನೀರು ಎರಚಿದಂತೆ. ಪ್ರಾಥಮಿಕ ಶಿಕ್ಷಣವು ಒಳ್ಳೆಯದಾದಷ್ಟೂ ನಮ್ಮ ಜೀವನವು ಒಳ್ಳೆಯದಾಗುವುದು. ಇದನ್ನು ನಾವು ಮರೆಯದೆ ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕು. ಪ್ರಾಥಮಿಕ ಶಿಕ್ಷಣವು ಈಗ ಜೀವಕಳೆಯಿಲ್ಲದುದಾಗಿದೆ. ಅದರಲ್ಲಿ ಜೀವಕಳೆಯನ್ನು ತುಂಬುವುದೇ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ನಮ್ಮ ಕರ್ತವ್ಯದ ಹೊಣೆಯನ್ನು ತಿರಿತುಕೊಂಡು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿಯತಕ್ಕವರೆಲ್ಲರೂ ತಮ್ಮ ಶಕ್ತ್ಯಾನುಸಾರವಾಗಿ ತಮ್ಮ ಕರ್ತವ್ಯವನ್ನು ಮಾಡಿ ಪ್ರಾಥಮಿಕ ಶಿಕ್ಷಣ ವೃಕ್ಷವು ಹೂ ಕಾಯಿ ಬಿಡುವಂತೆ ಮಾಡಬೇಕೆಂದು ನಾವು ನಮ್ರವಾಗಿ ಸೂಚಿಸ ಬಯಸುತ್ತೇವೆ.

ಹೊಸ ಯೋಜನೆ :

ಇಂದು ಕಾಲವು ಭರದಿಂದ ಬದಲಾವಣೆಯನ್ನು ಹೊಂದುತ್ತಿದೆ. ಜೀವನದ ನಾನಾ ಕ್ಷೇತ್ರಗಳಲ್ಲಿ ಹೊಸತನವು ಬರುವ ಮುಂಬೆಳಗ ಲಕ್ಷಣಗಳು ಕಾಣತೊಡಗಿವೆ. ಆ ಕಾಲಕ್ಕೆ ನಾವು ನಮ್ಮೆಲ್ಲರನ್ನು ಯೋಗ್ಯರನ್ನಾಗಿ ಮಾಡಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ವಿಚಾರ ಮಾಡಿ ನುರಿತ ಲೇಖಕರು ಬರೆದ ಲೇಖನಗಳನ್ನೂ ಸಂಪಾದಿಸಿಕೊಡುವ ಏರ್ಪಾಟನ್ನೂ ಮಾಡಲಾಗಿದೆ. ಪ್ರಾಥಮಿಕ ಶಿಕ್ಷಣವನ್ನು ಸರ್ವಾಂಗ ಸುಂದರವಾಗಿ ಮಾಡುವ ಎಲ್ಲ ಯೋಜನೆಗಳನ್ನು ಈಗ ಕೈಕೊಳ್ಳಲಾಗಿದೆ. ನಮ್ಮೀ ಯೋಜನೆಯನ್ನು ಓದುಗರು ಸ್ವಾಗತಿಸುವರೆಂದು ಹಾರೈಸುವೆವು. ಇದೇ ಸಂಚಿಕೆಯಲ್ಲಿ ಬರುವಂತೆ ಸಕಾಲಕ್ಕೆ ಪ್ರಾಥಮಿಕ ಶಿಕ್ಷಕರ ಮೇಲಿನ ಪ್ರೇಮದಿಂದ ಲೇಖನಗಳನ್ನು ಬರೆದುಕೊಟ್ಟ ಪ್ರೊ. ಆರ್ ವಿ. ಜಾಗಿರದಾರ, ಪ್ರೊ. ರಂ. ಶ್ರೀ. ಮುಗಳಿ, ಶ್ರೀ. ಎನ್. ಕೆ. ಕುಲಕರ್ಣಿ, ಶ್ರೀ. ಹುಲಿಕವಿ ಅವರಿಗೆ ನಾವು ಅಭಿನಂದನೆಗಳನ್ನು ಸಲ್ಲಿಸುತ್ತೇವೆ

ಅಭಿನಂದನೆ :

ಮುಂಬಯಿ ಪ್ರಾಂತದ ಡಾಯರೆಕ್ಟರರಾದ ಶ್ರೀ. ಮೂಸರವರು ಸೇವಾ ನಿವೃತ್ತರಾದ ಬಳಿಕ ಅವರ ಸ್ಥಳದಲ್ಲಿ ಶ್ರೀ. ಆರ್. ಪಿ ಪಟವರ್ಧನ ಅವರು ನೇಮಿಸಲ್ಪಟ್ಟಿರುವುದು ನಮಗೆಲ್ಲರಿಗೂ ಸಂತೋಷದ ಸಂಗತಿಯಾಗಿದೆ. ಅವರನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ ಮತ್ತು ಅವರ ನೇತೃತ್ವದಲ್ಲಿ ನಮ್ಮ ನಾಡಿನ ಶಿಕ್ಷಣವು ಇತೋಪ್ಯಧಿಕವಾಗಿ ಬೆಳೆಯುವುದೆಂದು ಹಾರೈಸುತ್ತೇವೆ.

ಬೇಸಿಕ್ ಟ್ರೇನಿಂಗ ಸೆಂಟರ ಸಂಸ್ಥೆಯು ಬೆಳೆದಿದೆ. ಅದರ ಹೆಡ್ಮಾಸ್ತರರಾಗಿದ್ದ ಶ್ರೀ ಆರ್. ಪ್ಪಿ. ದೇಸಾಯಿ ಅವರು ಈಗ ಪ್ರಿನ್ಸಿಪಾಲರಾಗಿದ್ದಾರೆ. ತಾಳಿಕೋಟೆಯಲ್ಲಿ ಹೊಸದಾಗಿ ಒಂದು ಸರಕಾರೀ ಟ್ರೇನಿಂಗ ಕಾಲೇಜು ಸ್ಥಾಪಿತವಾಗಿದೆ. ಅದಕ್ಕೆ ಶ್ರೀ. ಕೆ. ಜಿ. ಕುರ್ತಕೋಟಿಯವರು ಪ್ರಿನ್ಸಿಪಾಲರಾಗಿದ್ದಾರೆ. ಇವರಿಬ್ಬರನ್ನೂ ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ ಮತ್ತು ಈ ಎರಡೂ ಟ್ರೇನಿಂಗ ಸಂಸ್ಥೆಗಳು ಊರ್ಜಿತವಾಗಲೆಂದು ಹಾರೈಸುತ್ತೇವೆ.

ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

ಬೇಸಿಗೆಯ ಸೂಟಿಯ ನಂತರ ಕಾಲೇಜು ಪ್ರಾರಂಭವಾದ ಕೂಡಲೇ ವಾಡಿಕೆಯಂತೆ ಕಾಲೇಜದ ವಿದ್ಯಾರ್ಥಿನಿಯರ ಸಲುವಾಗಿ ಪ್ರಾಸ್ತಾವಿಕ ಭಾಷಣಗಳ ಮಾಲೆಯೊಂದನ್ನು ಏರ್ಪಡಿಸಲಾಗಿತ್ತು. ಈ ಭಾಷಣಗಳ ಉದ್ದೇಶವು ಹೊಸದಾಗಿ ಬಂದ ವಿದ್ಯಾರ್ಥಿನಿಯರಿಗೆ ಕಾಲೇಜದ ಪಠ್ಯ ಹಾಗೂ ಪಠ್ಯೇತರ ವಿಷಯಗಳ ರೂಪರೇಷೆಯ ಕಲ್ಪನೆಯನ್ನು ಮಾಡಿ ಕೊಡುವದಾಗಿತ್ತು. ಕಾಲೇಜದ ಶಿಕ್ಷಕ ಶಿಕ್ಷಕಿಯರೆಲ್ಲರೂ ತಮ್ಮ ವಿಷಯಗಳ ರೂಪರೇಷೆ, ಆ ವಿಷಯಗಳನ್ನು ಕಲಿಸುವ ಪದ್ಧತಿ, ಪಾಠಟಿಪ್ಪಣಿಗಳನ್ನು ತಯಾರಿಸುವ ಕ್ರಮ, ಪಾಠ ಪರಿಶೀಲನೆ, ಶಿಸ್ತು ಮುಂತಾದ ವಿಷಯಗಳನ್ನು ವಿವೇಚಿಸಿದರು. ಜೂನ ತಿಂಗಳ ಕೊನೆಗೆ ಕಾಲೇಜದ ಪ್ರತಿಯೊಂದು ವರ್ಗದ ವಿದ್ಯಾರ್ಥಿನಿಯರು ಒಂದೊಂದು ಚಿಕ್ಕ ನಾಟಕವನ್ನೂ ಜೊತೆಗೆ ಮನೋರಂಜಕ ಕಾರ್ಯಕ್ರಮಗಳನ್ನೂ ಮಾಡಿ ತೋರಿಸಿದರು. ಮತ್ತು ೧೫ ದಿನಕ್ಕೊಮ್ಮೆ ಯಂತೆ ಯುದ್ಧದ ಸುದ್ದಿ ಹಾಗೂ ಇತರ ಮಹತ್ವದ ಸುದ್ದಿಗಳ ವಿಮರ್ಶೆಯನ್ನು ಮಾಡ ಲಾಯಿತು.

ಜುಲೈ ೨೫ನೆಯ ತಾರೀಖಿನ ದಿನ ಈ ಸಂಸ್ಥೆಯ ವಕ್ತೃತ್ವ ಸಂಘದ ಪ್ರಾರಂಭೋತ್ಸವವು ಬಿ. ಇ. ಬೋರ್ಡ ಆಫ್ಸ್ ಕಾಲೇಜದ ಪ್ರಿನ್ಸಿಪಾಲರಾದ ಶ್ರೀಮಾನ್ ಬಿ ಎಂ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ನೇರವೇರಿತು ಅಧ್ಯಕ್ಷರು ಸಂಸ್ಥೆಯನ್ನೂ ಅದರ ನಾನಾ ಚಟುವಟಿಕೆಗಳನ್ನ ಕಂಡು ತಮಗಾದ ಆನಂದಾತಿಶಯವನ್ನು ವ್ಯಕ್ತ ಮಾಡಿದರು; ಮತ್ತು ಹಿಂದುಳಿದ ಸ್ತ್ರೀ ಸಮಾಜದ ಉನ್ನತಿಯಿಂದಲೇ ನಮ್ಮ ನಾಡು ಉತ್ಕರ್ಷ ಹೊಂದುವದೆಂದೂ, ಆದುದರಿಂದ ನಮ್ಮ ನಾಡಿನ ಸ್ತ್ರೀಪುರುಷರಲ್ಲಿ ಪರಸ್ಪರ ವಿಶ್ವಾಸ, ಸಹಕಾರ ಬೆಳೆಯಬೇಕೆಂದೂ, ಅಂಥ ಕೆಲಸವನ್ನು ಈ ಸಂಸ್ಥೆಯು ಮಾಡುತ್ತಿರುವದರಿಂದ ತಮಗೆ ಪರಮಾನಂದವಾಗಿದೆಯೆಂದೂ ಮುಂತಾಗಿ ಮನನೀಯ ಭಾಷಣ ಮಾಡಿದರು.

ಸಪ್ಟೆಂಬರ ೧೯ನೆಯ ತಾರೀಖಿನ ದಿನ ಧಾರವಾಡ ಜುವೆನಾಯಿಲ ಕೋರ್ಟಿನ ಪ್ರೊಬೇಶನ್ ಆಫೀಸರರಾದ ಶ್ರೀಮಾನ್ ಬೆಳಗಾಂವಕರ ಅವರು "ಮಕ್ಕಳ ಕಾಯಿದೆ" (Bombay Children Act) ಎಂಬ ವಿಷಯವನ್ನು ಕುರಿತು ಬೋಧಪ್ರದವಾದ ಭಾಷಣವನ್ನು ಮಾಡಿ ದರು. ಚಿಕ್ಕ ಮಕ್ಕಳು ಮಾಡಬಹುದಾದ ತಪ್ಪುಗಳು, ಅವುಗಳ ಕಾರಣಗಳು, ಅವುಗಳ ನಿಬಂಧಕ್ಕಾಗಿ ಮತ್ತು ಅವುಗಳನ್ನು ತಿದ್ದುವದಕ್ಕಾಗಿ ಸರಕಾರದವರು ಮಾಡಿದ ಯೋಜನೆ ಗಳು, ಮತ್ತು ಚಿಕ್ಕ ಮಕ್ಕಳ ವಿಷಯದಲ್ಲಿ ತಂದೆ-ತಾಯಿಗಳ, ಪಾಲಕರ, ಹಾಗೂ ಶಿಕ್ಷಕರ ಜವಾಬ್ದಾರಿಕೆ ಇವೇ ಮುಂತಾದ ಸಂಗತಿಗಳನ್ನು ಉದಾಹರಣೆ ಸಹಿತವಾಗಿ ಶ್ರೀ. ಬೆಳಗಾಂವಕರ ಅವರು ವಿವರಿಸಿದರು.

ಈ ಸಂಸ್ಥೆಯ ಸುವರ್ಣ ಮಹೋತ್ಸವವನ್ನು ಬೇಗನೆ ಜರುಗಿಸುವದನ್ನು ನಿರ್ಧರಿಸಿದೆ. ಸ್ಥಳವಾದ ದಿನವನ್ನೂ ಕಾರ್ಯಕ್ರಮವನ್ನೂ ಸಕಾಲದಲ್ಲಿ ಪ್ರಕಟಿಸಲಾಗುವದು.

E. S. Elijah

Lady Supdt. T. C. W. Dharwar

ಸಾರ್ಜಂಟ್ ಯೋಜನೆಯು ವಿಹಂಗಮ ನೋಟ

ಸದ್ಯದ ಪ್ರಾಥಮಿಕ ಶೈಕ್ಷಣಿಕ ಸ್ಥಿತಿ	ಸಾರ್ಜಂಟ್ ಯೋಜನೆಯು ಪ್ರಕಾರ ಶೈಕ್ಷಣಿ ಪುನರ್ರಚನೆಯಲ್ಲಿ ಆಗಬಹುದಾದ ಸ್ಥಿತಿ
(೧) ೭ ವರ್ಷದ ಅವಧಿ.	(೧) ೮ ವರ್ಷದ ಅವಧಿ.
(೨) ಒಕ್ಕಲತನವನ್ನು ಒಳಗೊಂಡಿದೆ; ಆದರೆ ಒತ್ತಾಯ ಪಡಿಸಿಲ್ಲ. (ಮಹತ್ವವಿಲ್ಲ.)	(೨) ಒಕ್ಕಲತನವಲ್ಲದೆ ಸಾಮಾನ್ಯ ವಿಷಯಗ ಜೊತೆಗೆ ಇನ್ನಿತರ ಯಾವುದಾದರೊಂದ ಕೈಕೆಲಸವನ್ನು ಸೂಚಿಸಿದೆ.
(೩) ಒತ್ತಾಯ ಹಾಗು ಪುಕ್ಕಟೆಯಿಲ್ಲ	(೩) ಒತ್ತಾಯ ಹಾಗು ಪುಕ್ಕಟೆ ಶಿಕ್ಷಣ.
(೪) ಕೇವಲ ೧೦೦ಕ್ಕೆ ೫೦ ರಷ್ಟು ತರಬೇತು ಹೊಂದಿದ ಶಿಕ್ಷಕರು.	(೪) ಎಲ್ಲರೂ ತರಬೇತು ಹೊಂದಿದ ಶಿಕ್ಷ ಶಿಕ್ಷಕಿಯರು.
(೫) ಕನ್ನಡ ಪ್ರಾ.ಶಾ ಪ್ರ. ಪತ್ರ ಪರೀಕ್ಷೆ ಪಾಸಾದವರು ಶಿಕ್ಷಕರಾಗಲು ಯೋಗ್ಯರು.	(೫) ಮ್ಯಾಟ್ರಿಕ್ ಪರೀಕ್ಷೆ ಪಾಸಾದವರೇ ಶಿಕ್ಷ ರಾಗಲು ಯೋಗ್ಯರು.
(೬) ಎರಡು ವರ್ಷ ತರಬೇತು ಹೊಂದುವ ಅವಧಿ; ಇದಾದರೂ ಎಲ್ಲರಿಗೂ ಅನ್ವಯಿಸುವದಿಲ್ಲ.	(೬) ಎರಡು ಅಥವಾ ಮೂರು ವರ್ಷ ತರಬೇ ಹೊಂದುವ ಅವಧಿ; ಎಲ್ಲರಿಗೂ ಅನ್ವಯ ಸುವದು.
(೭) ವೈದ್ಯಕೀಯ ಪರೀಕ್ಷೆಯ ಅವಶ್ಯಕತೆಯಿಲ್ಲ.	(೭) ವೈದ್ಯಕೀಯ ಪರೀಕ್ಷೆಯು ಅವಶ್ಯ ದದ್ದು; ಹಾಗು ವಿದ್ಯಾರ್ಥಿಗಳಿಗೆ ಪುಕ್ಕ ಔಷಧ ಒದಗಿಸುವ ವ್ಯವಸ್ಥೆ ಇರುವದು.
(೮) ಕನ್ನಡ ನಾಲ್ಕನೆಯ ಇಯತ್ತೆಯನ್ನು ಪಾಸಾದವರಿಗೂ ಹಾಗೂ ಫೀ ಕೊಡಲಿಕ್ಕೆ ಯೋಗ್ಯರಿದ್ದವರಿಗೂ ಮಾಧ್ಯಮಿಕ ಶಿಕ್ಷಣವನ್ನು ಪಡೆಯುವ ಅನುಕೂಲತೆಯಿತ್ತು.	(೮) ಕನ್ನಡ ೫ನೆಯ ಇಯತ್ತೆಯ ನಂತ ಮಾಧ್ಯಮಿಕ ಶಾಲೆಗೆ ಉಮೇದವಾರರನ್ (ವಿದ್ಯಾರ್ಥಿಗಳನ್ನು) ಆರಿಸುವದು.
(೯) ಬುದ್ಧಿವಂತರಿದ್ದರೂ ಬಡತನದಲ್ಲಿ ಬೆಳೆದ ಮಕ್ಕಳಿಗೆ ಮಾಧ್ಯಮಿಕ ಶಿಕ್ಷಣದ ಲಾಭ ವಿಲ್ಲ.	(೯) ಬಡ ಹಾಗು ಆರಿಸಿದಂಥ ವಿದ್ಯಾರ್ಥಿಗಳ ಪುಕ್ಕಟೆಯಾಗಿ ಮಾಧ್ಯಮಿಕ ಶಿಕ್ಷಣ ಲಾಭ ದೊರಕಿಸಿಕೊಡುವದು.

ಸ್ವಲ್ಪದರಲ್ಲಿಯೇ ಹೇಳಬೇಕೆಂದರೆ ಮೇಲಿನ ಯೋಜನೆಯು ರಾಷ್ಟ್ರೀಯ ಶಿಕ್ಷಣದ ತಳ
ದಿಯನ್ನು ಅವಲಂಬಿಸಿದೆ; ಆದರೆ ಈಗಿದ್ದ ಶಿಕ್ಷಣದ ಯೋಜನೆಯು ಈ ತೆರನಾಗಿಲ್ಲ.

ಜಪಾನದ ಕೂಡ ನಡೆದ ಯುದ್ಧವು ಮುಗಿದಿದೆ. ಈ ನವ ಶಿಕ್ಷಣದ ಯೋಜನೆ
ಏರ್ಪಾಡು ತೀವ್ರವೇ ಆಗಲೆಂದು ಎಲ್ಲರೂ ಹಾರೈಸುವದು ಸ್ವಾಭಾವಿಕ.

ಸಾರ್ಜಂಟ್ ಯೋಜನೆಯ ಮುಖ್ಯಾಂಶಗಳು

[ಶ್ರೀ. ಸಾರ್ಜಂಟರು ಭಾರತದ ಮುಂದೆ ಒಂದು ಶಿಕ್ಷಣಯೋಜನೆಯನ್ನು ಇಟ್ಟಿರುವರು. ಅದು ಉತ್ತಮವಾಗಿರುವುದೆಂದು ನಮ್ಮ ನಾಡಿನ ಮುಖಂಡರು ಅಭಿಪ್ರಾಯಪಟ್ಟಿರುವರು. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಸಂಬಂಧವಿರುವ ಅಂಶಗಳನ್ನು ಮಾತ್ರ ಇಲ್ಲಿ ಕ್ರೋಡೀಕರಿಸಿ ಕೊಡಲಾಗಿದೆ.—ಸಂ.]

೧ನೆಯ ಪ್ರಕರಣ

(ಅ) ದೇಶದಲ್ಲಿಯ ೬ರಿಂದ ೧೪ನೆಯ ವರ್ಷಗಳೊಳಗಿನ ಗಂಡು ಹಾಗು ಹೆಣ್ಣು ಮಕ್ಕಳ ಸಲುವಾಗಿ ಸಾರ್ವತ್ರಿಕ ಒತ್ತಾಯದ ಪುಕ್ಕಟೆಯ ಶಿಕ್ಷಣ ಪದ್ಧತಿಯನ್ನು ಶಕ್ಯವಿದ್ದಷ್ಟು ಶೀಘ್ರವಾಗಿ ರೂಢಿಯಲ್ಲಿ ತರತಕ್ಕದ್ದು. ಸಾಕಷ್ಟು ತರಬೇತು ಪಡೆದ ಶಿಕ್ಷಕರನ್ನು ಪೂರೈಸುವುದು ಕಠಿಣವಾದುದರಿಂದ ನಾಲ್ವತ್ತು ವರುಷಗಳಕಿಂತ ಕಡಿಮೆ ಅವಧಿಯಲ್ಲಿ ಈ ಯೋಜನೆಯು ಸಾಧ್ಯವಾಗಲಾರದು.

(ಬ) ಶಿಕ್ಷಣದ ಸ್ವರೂಪವು ಸೆಂಟ್ರಲ ಅಡ್ವಿಜರಿ ಬೋರ್ಡಿನವರು ನೇಮಿಸಿದ ಎರಡು ಸಮಿತಿಗಳು ತಮ್ಮ ವರದಿಯಲ್ಲಿ ಮೂಲಶಿಕ್ಷಣದ ಬಗ್ಗೆ ಸೂಚಿಸಿದ ಸಾಮಾನ್ಯ ತತ್ತ್ವಗಳನ್ನೇ ಅನುಸರಿಸಬೇಕು.

(ಕ) ಭಾವಿ ನಾಗರಿಕರಲ್ಲಿ ಅನೇಕರ ಶಿಕ್ಷಣದ ಕೊನೆಯು ಪೀನಿಯರ ಬೇಸಿಕ ಶಾಲೆಯಲ್ಲಿ ಮುಗಿಯುವದರಿಂದ ಆ ಶಾಲೆಗಳು ಒಳ್ಳೇ ಮಹತ್ವವುಳ್ಳವುಗಳೆಂದು ಗಣಿಸಿ ಅವುಗಳಿಗೆ ಉದಾರ ಧನಸಹಾಯವನ್ನೂ ಉತ್ತಮ ಶಿಕ್ಷಕರನ್ನೂ ಪೂರೈಸಬೇಕು.

(ಡ) ಶಿಕ್ಷಕನೇ ಎಲ್ಲ ಶಿಕ್ಷಣದ ಮೂಲಾಧಾರ. ಶಿಕ್ಷಕರ ಮುಖ್ಯವಾಗಿ ಪ್ರಾಥಮಿಕ ಶಿಕ್ಷಕರ ಸದ್ಯದ ಸ್ಥಾನಮಾನವೂ ಸಂಬಳವೂ ಶೋಚನೀಯ ಸ್ಥಿತಿಯಲ್ಲಿವೆ. ಶಿಕ್ಷಕರ ತರಬೇತು ಪೂರೈಕೆ (Recruitment) ಮತ್ತು ನೌಕರಿಯ ಕರಾರುಗಳ ಬಗ್ಗೆ ೧೪ನೆಯ ಪ್ರಕರಣದಲ್ಲಿ ಸೆಂಟ್ರಲ್ ಅಡ್ವಿಜರಿ ಬೋರ್ಡಿನವರು ನಿರ್ಧರಿಸಿದ ಮಟ್ಟುಗಳು ರಾಷ್ಟ್ರೀಯ ಶಿಕ್ಷಣದ ಯಶಸ್ಸಿಗೆ ಬೇಕಾದ ತೀರ ಕಡಿಮೆಯ ಬೇಡಿಕೆಗಳು. ಇವುಗಳನ್ನು ಸಾರ್ವತ್ರಿಕವಾಗಿ ಅಂಗೀಕರಿಸಬೇಕು.

(ಈ) ತರಬೇತು ಹೊಂದಿದ ಶಿಕ್ಷಕಿಯರ ಸಂಖ್ಯೆಯು ದೊಡ್ಡ ಪ್ರಮಾಣದಿಂದ ಬೆಳೆಯುವದು ಅವಶ್ಯ.

(ಫ) ಈ ಪ್ರಕರಣದಲ್ಲಿಯ ಸೂಚನೆಗಳು ರೂಢಿಯಲ್ಲಿ ಬರಬೇಕಾದರೆ ವಾರ್ಷಿಕ ವೆಚ್ಚವು ಸುಮಾರು ೨೦೦ ಕೋಟಿ ರೂಪಾಯಿಗಳಾಗಬಹುದು.

೩ನೆಯ ಪ್ರಕರಣ

(ಅ) ಯಾವದೇ ರಾಷ್ಟ್ರೀಯ ಶಿಕ್ಷಣ ಪದ್ಧತಿಗೆ ಬೆಂಬಲವಾಗಿ ಪ್ರಾಥಮಿಕ ಶಿಕ್ಷಣದಕ್ಕಿಂತ ಮುಂಚಿತವಾಗಿ ಶಿಶುವಿಹಾರ (Nurcing School) ಶಾಲೆಗಳ ಅಥವಾ ವರ್ಗಗಳ ಯೋಗ್ಯ ಏರ್ಪಾಡನ್ನು ಮಾಡುವದು ತೀರ ಅವಶ್ಯ. ಈ ದಿಶೆಯಲ್ಲಿ ಸದ್ಯದ ಪೂರೈಕೆಯು ತೀರ ಕಡಿಮೆಯೆಂದು ಹೇಳಬಹುದು.

(ಬ) ಯೋಗ್ಯವಾದ ಅಂತರದಲ್ಲಿ ಸಾಕಷ್ಟು ಚಿಕ್ಕಮಕ್ಕಳು ದೊರೆಯುವ ಪಟ್ಟಣಗಳ ಪ್ರತ್ಯೇಕ ಶಿಶುಶಾಲೆಗಳನ್ನು ಅಥವಾ ಶಾಖೆಗಳನ್ನು ತೆರೆಯಬಹುದು. ಉಳಿದ ಭಾಗಗಳಲ್ಲಿ ವರ್ಗಗಳನ್ನು ಜೂನಿಯರ ಬೇಸಿಕ್ ಶಾಲೆಗಳಿಗೆ ಜೋಡಿಸಬಹುದು.

(ಕ) ಶಿಶುಶಾಲೆ ಅಥವಾ ವರ್ಗಗಳಲ್ಲಿ ಅವಶ್ಯವಾಗಿ ಶಿಶುಶಿಕ್ಷಣದ ಬಗ್ಗೆ ವಿಶೇ ತರಬೇತನ್ನು ಪಡೆದ ಶಿಕ್ಷಕಿಯರೇ ಕಲಿಸತಕ್ಕದ್ದು.

(ಡ) ಎಲ್ಲ ಅವಸ್ಥೆಗಳಲ್ಲಿ ಪೂರ್ವಪ್ರಾಥಮಿಕ ಶಿಕ್ಷಣವು ಪುಕ್ಕಟೆಯಾಗಿರಬೇಕ ಶಾಲೆಗಳಲ್ಲಿ ಹಾಜರ ಇರುವದನ್ನು ಕಡ್ಡಾಯವನ್ನಾಗಿ ಮಾಡುವದು ಸಮಂಜಸವಾಗಿ ತೋ ದಿದ್ದರೂ ಮನೆಗಳು ಅಸಮಾಧಾನಕರ ಸ್ಥಿತಿಯಲ್ಲಿದ್ದ ಮತ್ತು ತಾಯಂದಿರು ಕೆಲಸಕ್ಕೆ ಹೊರ ಹೋಗುವ ರೂಢಿಯಲ್ಲಿದ್ದ ಕ್ಷೇತ್ರಗಳಲ್ಲಿ ವಿಶೇಷವಾಗಿ ತಾಯಿತಂದೆಗಳಿಗೆ ತಮ್ಮ ಮಕ್ಕಳನ್ನ ಸ್ವಸಂತೋಷದಿಂದ ಶಾಲೆಗೆ ಕಳುಹಿಸಲು ಉತ್ತೇಜಿಸುವ ಶಕ್ಯವಿದ್ದಷ್ಟು ಪ್ರಯತ್ನಗಳನ್ನ ಮಾಡದೆ ಇರಕೂಡದು.

(ಈ) ಈ ತರಗತಿಯಲ್ಲಿಯ ಶಿಕ್ಷಣದ ಮುಖ್ಯ ಉದ್ದೇಶವು ಚಿಕ್ಕಮಕ್ಕಳಿಗೆ ಸಾಮೂಹಿ ಅನುಭವಗಳನ್ನು ಪೂರೈಸಿಕೊಡುವದೇ ಹೊರತು ನಿಯಮಬದ್ಧ ಶಿಕ್ಷಣಕ್ರಮವಿರಬಾರದು.

(ಫ) ಸಾಮಾನ್ಯವಾಗಿ ೩ರಿಂದ ೬ ವಯಸ್ಸಿನ ಅವಧಿ ಎಂದು ಕಲ್ಪಿಸಿ ಶಿಶುಶಾಲೆಗಳ ಮತ್ತು ವರ್ಗಗಳಲ್ಲಿ ೧,೦೦೦೦೦ ಸ್ಥಳಗಳ ಏರ್ಪಾಡಿನ ವ್ಯವಸ್ಥೆ ಮಾಡಲಾಗಿದೆ.

(ಗ) ಈ ಪ್ರಕರಣದಲ್ಲಿಯ ಸೂಚನೆಗಳು ತುಂಬ ಕಾರ್ಯರೂಪದಲ್ಲಿ ಬರಲು ಒಟ್ಟಿನ ೩೧,೮೪೦೦೦೦ ರೂಪಾಯಿಗಳ ವೆಚ್ಚವು ತಗಲುವದು.

೬ನೆಯ ಪ್ರಕರಣ

ಪ್ರೌಢಶಿಕ್ಷಣ.

(ಅ) ಪ್ರೌಢ ಶಿಕ್ಷಣಸಮಿತಿಯ ವರದಿಯಲ್ಲಿ ತೋರಿಸಿದ ಸೂಚನೆಗಳಂತೆ ವಿಶಾ ಕ್ಷೇತ್ರದ ವ್ಯವಸ್ಥೆಯನ್ನು ರಾಷ್ಟ್ರೀಯ ಶಿಕ್ಷಣದ ಮುಖ್ಯ ಅಂಗವನ್ನಾಗಿ ಮಾಡಬೇಕು. ಸದ್ಯ ಹಿಂದುಸ್ತಾನದಲ್ಲಿ ನಿರಕ್ಷರಿಗಳ ಸಂಖ್ಯೆಯ ಪ್ರಮಾಣವು ಹೆಚ್ಚಾಗಿದ್ದುದರಿಂದ ಈ ಯೋಜನೆಗ ತೀರ ಅವಶ್ಯವಾಗಿವೆ.

(ಬ) ಸಾಕ್ಷರತೆಯು ಕೇವಲ ಸಾಧನವಾಗಿರಬೇಕೇ ಹೊರತು ಮುಖ್ಯ ಉದ್ದೇಶವಾ ಕೂಡದು. ನಿರಕ್ಷರತೆಯನ್ನು ಹೋಗಲಾಡಿಸಬೇಕೆಂಬ ಧ್ಯೇಯವನ್ನು ಪ್ರಾಮುಖ್ಯವಾಗಿಟ್ಟು ಕೊಂಡಾಗ್ಯೂ ಪ್ರೌಢ ಶಿಕ್ಷಣದ ನಿಜವಾದ ಉದ್ದೇಶವು ಮೊದಲೇ ಸಾಕ್ಷರಿಗಳಾದವರ ಶಿಕ್ಷಣ ಬಗ್ಗೆ ಲಕ್ಷ್ಯವನ್ನು ಪೂರೈಸುವದಾಗಿರಬೇಕು. ನಿರಕ್ಷರತೆಯು ಕಡಿಮೆಯಾಗುತ್ತ ಹೋದಹಾ ಈ ಕಾರ್ಯವು ಮುಂದುವರಿಯುತ್ತ ಬೆಳೆಯಬೇಕು.

(ಕ) ಮೂಲಕೇಂದ್ರ ಶಿಕ್ಷಣವು ಸಾರ್ವತ್ರಿಕವಾದಾಗ್ಯೂ (೧೦ ವರ್ಷದಿಂದ ಳಂರ ವರೆ ಇರುವವರ) ನಿರಕ್ಷರಿಗಳ ಸಂಖ್ಯೆಯು ೯ ಕೋಟಿಗಿಂತ ಮಿಕ್ಕುವದರಿಂದ ಅವರ ಬಗ್ಗೆ ಶಿಕ್ಷಣ ಯೋಜನೆಯನ್ನು ಮಾಡುವದು ಅವಶ್ಯ. ಈ ಸಮಸ್ಯೆಯನ್ನು ಬಿಡಿಸಲು ೨೦ ವರ್ಷಗಳ ತನ ಸಾಗುವ ಪ್ರಯತ್ನವನ್ನು ಮಾಡಬೇಕಾಗುವದು. ಇಂಥ ಪ್ರಯತ್ನವನ್ನು ಮಾಡುವ ಮುನ್ ಬೇಕಾದ ಶಿಕ್ಷಕರ ಪುರವಠೆ, ತರಬೇತು ಮುಂತಾದ ಪೂರ್ವ ಸಿದ್ಧತೆಗಾಗಿ ೫ ವರ್ಷಗಳ ಅವ ಯನ್ನು ಉಪಯೋಗಿಸಬೇಕಾಗುವದು.

(ಚ) ಉಳಿದ ಎಲ್ಲ ಶಾಖೆಗಳಂತೆ ಈ ಶಿಕ್ಷಣದ ಶಾಲೆಯಲ್ಲಿ ಸಹ ಶಿಕ್ಷಕನ ಗುಣ ವೈಶಿಷ್ಟ್ಯವು ತೀರ ಮಹತ್ವವಾದ ವಿಷಯ. ಯೋಗ್ಯತರದ ಶಿಕ್ಷಕರನ್ನು ಮತ್ತು ಮುಖ್ಯವಾಗಿ ಶಿಕ್ಷಕಿಯರನ್ನು ದೊರಕಿಸುವ ಮಹತ್ವವನ್ನು ಯಾವ ಕಾರಣದಿಂದಲೂ ಅವಹೇಲನ ಮಾಡ ಕೂಡದು.

(ಈ) ಪ್ರಾಥ ಶಿಕ್ಷಣದ ಹೊಣೆಯನ್ನು ಸರಕಾರವೇ ವಹಿಸತಕ್ಕದ್ದು. ಆದರೆ ಶಕ್ಯವಿದ್ದಲ್ಲಿ ಸಾಸಗಿ ವ್ಯವಸ್ಥೆಯ ಮಂಡಳಿಗಳ ಸಹಾಯವನ್ನು ಪಡೆಯಲೇಬೇಕು.

(ಛ) ಈ ಪ್ರಕರಣದಲ್ಲಿಯ ಸೂಚನೆಗಳನ್ನು ರೂಢಿಯಲ್ಲಿ ತರಲು ಪ್ರತಿವರ್ಷ ೩ ಕೋಟಿ ರೂಪಾಯಿಗಳು ಬೇಕಾಗುವವು. ಸಾಕ್ಷರತೆಯ ಅಭಿಯೋಗದ ಪರಮ ಉನ್ನತಾವಸ್ಥೆಯಲ್ಲಿ ಈ ಖರ್ಚು ೨೫ರಿಂದ ೩೦ ಲಕ್ಷದ ವರೆಗೆ ಹೆಚ್ಚಾಗಬಹುದು. ಆದರೆ ೨೦ ವರ್ಷಗಳ ಸರಾಸರಿ ಖರ್ಚು ೩ ಕೋಟಿಗಿಂತ ಸ್ವಲ್ಪ ಕಡಿಮೆಯಾಗಬಹುದು.

ಕತ್ತೆ

ಹೊಸಯುಗದ ಕವಿಯೊಬ್ಬ ಕೂತು ರಚಿಸಿದ ನಿಂತು :
ಕವನಕ್ಕೆ ವಿಷಯವನು " ಕಾವ್ಯಸ್ಫೂರ್ತೀಯ ಕಾವೆ
ಹುಡುಕುತ್ತ ದುಡುಕುತ್ತ ನಿನಗೆ ಬರ್ಪುದೆ ಸಾವೆ ?
ಹೊರಟೆರಲು ಬೀದಿಯಲಿ ನಿನ್ನ ಹೆಸರಿನ ಸುತ್ತೆ
ಕಂಡನೊಂದಕೊ ಕತ್ತೆ ಎಂಥ ಪ್ರಾಸದ ಭತ್ತೆ
ಅಲ್ಲಿ ಬಿದ್ದಿದೆ ಸತ್ತೆ ! ಹಬ್ಬಿಹುದು ಎಲ ಕತ್ತೆ !
ವಿಷಯ ಸಿಕ್ಕಿತು ಎಂದು ಎಷ್ಟು ಬಣ್ಣಿಸೆ ಮತ್ತೆ
ಹಾರಿದನು ಸಾರಿದನು ಹೊಸ ಪ್ರಾಸ ಹರಿಸುತ್ತೆ
ಸತ್ತ ಕತ್ತೆಯ ಬಳಿಗೆ ನೀ ಬರುವಿ ನನ್ನತ್ತೆ

ಇಂಥ ನೀನೇಕೆ ಸತ್ತೆ ? ?
ನೀನು ಕತ್ತನು ಎತ್ತೆ
ಅಗಸ-ಬಟ್ಟೆಯ ಹೊತ್ತೆ
ಏನು ದೊರೆಯದೆ ಭತ್ತೆ
ದುಡಿವೆ ಹೆರವರ ಸೊತ್ತೆ
ಭೂಮಿತಾಯಿಯ ನತ್ತೆ
ನಗಸುವರ ನಗೆಹುತ್ತೆ
ನಿನ್ನಿಂದ ಜಗಕೆ ಸವಿತುತ್ತೆ
ನೀ ಸಾಯೆ ಅಂತೆ ನಾನತ್ತೆ ! "

—ರಂ. ಶ್ರೀ. ಮು.

ಕನ್ನಡ—ಕರ್ನಾಟಕ

ಈ ಹೊತ್ತು ಜಗತ್ತಿನಲ್ಲಿ ರಾಷ್ಟ್ರೀಯತೆ–ಅಂತರ–ರಾಷ್ಟ್ರೀಯತೆ–ವಿಶ್ವಸಂಘಟನೆ ಮೊದಲಾ
ದೊಡ್ಡ ದೊಡ್ಡ ವಿಷಯಗಳ ವಿಚಾರ ನಡೆದಾಗ ನಾನು 'ಕನ್ನಡ–ಕರ್ನಾಟಕ' ಎ
ಮಾತನ್ನೆತ್ತಿ, ಆ ವಿಚಾರದಲ್ಲಿಯೆ ಸುತ್ತಾಡತೊಡಗಿದರೆ ಅನೇಕರಿಗೆ ಆಶ್ಚರ್ಯವಾಗಬಹುದ
ನಾನಾಗಲಿ ನನ್ನವರಾಗಲಿ ಹಿಂದುಳಿದವರು ಎಂಬುದರ ಲಕ್ಷಣ ಇದು ಎನ್ನಿಸಬಹುದು. ನಿ
ಆ ಮಾತನ್ನು ನಾನು ಅರಿತಿರುವೆ. ಇಷ್ಟೇ ಅಲ್ಲ, ಆ ಮಾತು ನನ್ನ ಟೀಕಾಕಾರರಿಗೂ ಅನ್ವಯಿ
ವುದು ಎಂಬುದನ್ನೂ ಅರಿತಿರುವೆ; ನನಗಿಂತಲೂ ನನ್ನ ಟೀಕಾಕಾರರಿಗೆಯೆ ಅವರ ಟೀಕೆ ಜೆಚ್ಚಾ
ಅನ್ವಯಿಸುವುದು ಎಂಬುದನ್ನೂ ಅರಿತಿರುವೆ ಎಂದು ಎಚ್ಚರ ಕೊಡಬಹುದಾಗಿದೆ. ಯಾಕೆಂದ
ಹಿಂದು-ಮುಸಲ್ಮಾನರು ಬಡಿದಾಡುವಾಗ, ರಶಿಯ ದೇಶವು ಆತ್ಮರಕ್ಷಣೆಗಾಗಿ ರಾಷ್ಟ್ರೀಯತೆ
ಮೊರೆಹೊಕ್ಕಾಗ, ಇಂಗ್ಲಂಡದ ಕೂಲಿಕಾರರು ಹಾಂಗಕಾಂಗವನ್ನು ಮತ್ತೆ ಆಳಲು ಬಯಸುವಾ
ಅಮೆರಿಕೆಯು ಅ್ಯಟಂ ಬಾಂಬನ್ನು ಚಂಡಿನಂತೆ ಪುಟಿಸುವಾಗ ರಾಷ್ಟ್ರೀಯತೆ–ಅಂತರರಾಷ್ಟ್ರೀಯ
ವಿಶ್ವಸಂಘಟನೆ ಮೊದಲಾದುವು ದೊಡ್ಡ ವಿಷಯಗಳಂತೂ ಅಲ್ಲವೇ ಅಲ್ಲ. ಸಣ್ಣ ವಿಷಯಗಳನ್ನೆ
ಕೂಡ ಅರಿಯದವರ ಬುದ್ಧಿಯ ಬೂಟಾಟಿಕೆ ಎಂದು ತಿಳಿಯಬಾರದೇಕೆ? ಕನ್ನಡ–ಕರ್ನಾಟಕ
ಎಂಬುದು ಸಣ್ಣ ವಿಷಯವೇನೋ ನಿಜ; ಆದರೆ ವಿಚಾರದ ಪ್ರಾಮಾಣಿಕತೆಯಿಂದ, ಭಾವನೆಯ
ವಿಶಾಲತೆಯಿಂದ ಪ್ರೇರಿತವಾದ ವಿಷಯ ಎಂದು ಖಂಡಿತವಾಗಿ ಹೇಳಬಹುದು. ಅದಕಾಗಿಯೆನಿ
ಅದು ಮಾನವನ ಜೀವನದ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾದ ವಿಚಾರ ಎಂದ
ಹೇಳಬಹುದು.

ಕನ್ನಡ ಎಂಬುದು ಭಾಷೆಯ ವಿಷಯ. ಮಾನವನಿಗೂ ಅವನ ಭಾಷೆಗೂ ಇದ್ದ ಸಂಬಂಧ
ವಿಷಯ. ಜೀವನಕ್ಕೂ ಅದರ ಸಹಜವಿಕಾಸವಾದ ತಾಯ್ನುಡಿಗೂ ಇದ್ದ ಸಂಬಂಧದ ವಿಷಯ
ಭಾಷೆ ಎಂಬುದು ಮಾನವಪ್ರಾಣಿಗೆ ಎಷ್ಟು ಸಹಜವಾದುದೊ ಅಷ್ಟೆ ವಿಶಿಷ್ಟವಾದುದು. ಭಾ
ಯಿಂದ ಮಾನವನಿಗೆ ಹೊರಜಗತ್ತಿನಲ್ಲಿಯ ವಸ್ತುಗಳ ಪರಿಚಯ ಇಲ್ಲವೆ ಅರಿಕೆಯಾಗುವುದ
ನಿಜ. ಆದರೆ ಮುಂಯ್ಗುಡುವ ಬೆಕ್ಕಿಗೆ, ಬೊಗಳುವ ನಾಯಿಗೆ, ಕೂಗುವ ಕಾಗೆಗೆ ಕೂ
ಬಾಹ್ಯಪರಿಚಯಾತ್ಮಕ ಭಾಷೆ ಇದೆ ಎಂಬುದನ್ನು ನಾವು ಮರೆಯುವಂತಿಲ್ಲ. ಮಾನವನಿಗೆ ಭಾ
ವೈಶಿಷ್ಟ್ಯವಾದುದು ಬೇರೊಂದು ಕಾರಣಕ್ಕಾಗಿ; ಅದೆಂದರೆ, ಒಳಗಿನ ಭಾವನೆಗಳನ್ನ
ಅರಿತು ವಿಂಗಡಿಸುವ ಶಕ್ತಿ ಮಾನವನ ಭಾಷೆಯಾಗಿದೆ. ಭಾಷೆಯು ಈ ತರಹದ ಶಕ್ತಿಯಾಗಿ
ಯೆಂದೇ—ಕೇವಲ ಆ ಭಾಷೆಯ ಸಹಾಯದಿಂದ—ಮಾನವನಿಗೆ ವಿಚಾರ ಮಾಡುವ ಮ
ಕಲ್ಪನೆ ಕಟ್ಟುವ ಹೊಸತೊಂದು ಶಕ್ತಿ ಬಂದಿದೆ. ನನ್ನ ಕಲ್ಪನೆ, ನನ್ನ ವಿಚಾರ—ಇವೆರಡೂ ನ
ಭಾಷೆಯನ್ನೇ ಆವಲಂಬಿಸಿವೆ. ಎಂದರೆ ನನ್ನ ಸುಖದುಃಖದ ವಿಚಾರ, ನನ್ನ ಸ್ವರ್ಗ-ನರಕಗ
ಕಲ್ಪನೆ ನನ್ನ ತಾಯ್ನುಡಿಯ ಪ್ರವಾಹದಲ್ಲಿಯೆ ಹರಿದು ಬಂದಿವೆ. ಆದುದರಿಂದ, ನಾ
ವಿಚಾರವಂತನೆನ್ನಿಸುವುದು, ನಾನು ಧರ್ಮವಂತನೆನ್ನಿಸುವುದು ನನ್ನ ತಾಯ್ನುಡಿಯ ಬಲದಿಂದ
ಹೀಗಿರುವಾಗ ತಾಯ್ನುಡಿಯ ಪ್ರಶ್ನೆಯು ದೊಡ್ಡದಲ್ಲ, ಮಹತ್ತ್ವದ್ದಲ್ಲ ಎಂದು ಹೇಳಬಹುದ
ಉಪಯೋಗಿಸದಿರುವಾಗ ಕಸುವನ್ನು ಕಳೆದುಕೊಳ್ಳುವ ಅನೇಕ ಶಕ್ತಿಗಳನ್ನು ನಾವು ನೋಡ
ತ್ತೇವೆ. ವ್ಯಕ್ತಿಯ ವಿದ್ಯೆಯೂಡ ವ್ಯವಹಾರವಿಲ್ಲದಿದ್ದರೆ ಮಸುಕಾಗುತ್ತ ಮಾಯವಾಗುವುದ
ಆದರೆ, ನುಡಿಯ ಶಕ್ತಿಯೆ ಬೇರೆ. ಕಳೆದ ಎರಡು ಶತಮಾನ ಕನ್ನಡವು ಅಸ್ತಿತ್ವದಲ್ಲಿ
ಇರಲಿಲ್ಲ. ನಡುವೆ ಕಡಿದುಂತಿದ್ದರೂ ಇಂದಿನ ಕನ್ನಡವು ಪರಂಪರೆಯನ್ನು ಹಿಡಿದುಕೊಂ

ಬೆಳೆದಿದೆಯಲ್ಲವೆ ? ಇಂತಹ ಅಜರಾಮರ ಶಕ್ತಿಯಾಗಿದೆ ತಾಯ್ನುಡಿ ಎಂಬುದು. ನಿಸರ್ಗದ ಶಕ್ತಿಯಾಗಿದೆ. ತಾಯ್ನುಡಿ ಎಂಬುದು ಸುತ್ತಮುತ್ತಲಿನ ಶಾಶ್ವತ ಸಂಪ್ರದಾಯದ ಪರಿಪಾಕ.

ಕರ್ನಾಟಕ ಎಂಬ ಇನ್ನೊಂದು ವಿಚಾರವೆ ಈ ಸುತ್ತುಮುತ್ತಲಿನ ಶಾಶ್ವತ ಸಂಪ್ರದಾಯ; ಕನ್ನಡ ನುಡಿಯು ಕರ್ನಾಟಕ ಎಂಬ ಸುತ್ತುಮುತ್ತಲಿನ ಪರಿಪಾಕ. ಕನ್ನಡದ ಕನ್ನಡತನ ಎಂಬುದೆ ಕರ್ನಾಟಕ ಎಂದು ಹೇಳಬಹುದು. ಕಳೆದ ಎರಡು ಸಾವಿರ ವರ್ಷಗಳಲ್ಲಿ ನೂರಾರು ಪರಚಕ್ರಗಳ ದಾಳಿಗಳಾಗಿವೆ; ಹತ್ತಾರು ಪ್ರಭಾವಶಾಲಿಗಳಾದ ಪರಭಾಷೆಗಳು ಗಡುಚಿಕ್ಕಿವೆ; ಅನೇಕ ಪರಕೀಯ ಸಂಸ್ಕೃತಿಗಳು ಬಿರುಗಾಳಿಯಂತೆ ಬೀಸಿವೆ. ಆದರೂ ನಮ್ಮ ಕನ್ನಡತನ ಎಂಬುದು ಎಷ್ಟರ ಮಟ್ಟಿಗೂ ಕುಗ್ಗಿಲ್ಲ, ಕುಂದಿಲ್ಲ. ದೇವ-ಸ್ವರ್ಗ-ನರಕ ಎಂಬ ಆರ್ಯ ಸಂಸ್ಕೃತಿಯ ವಿಚಾರಗಳಿಗೆ ಇವುವರೆಗೂ ಶಿಚ್ಚಗನ್ನಡ ಹೆಸರು ಹುಟ್ಟಿಲ್ಲ; ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂಬ ಪ್ರಾಮಾಣಿಕತೆ ಬಿಟ್ಟಿಲ್ಲ. ಸೋದರಮಾವನ ಮಗಳನ್ನು ಮದುವೆಯಾಗುವುದನ್ನು ಹಿಡಿದು ಷಟ್‌ಪದಿಯನ್ನು ರಚಿಸುವವರೆಗಿನ ಕನ್ನಡರ ಕನ್ನಡತನ, ಕನ್ನಡರ ಸುತ್ತುಮುತ್ತಲು ಕರ್ನಾಟಕ ನಿಚ್ಚಳವಾಗಿ, ನಿರಾಮಯವಾಗಿ ನಡೆದುಬಂದಿವೆ. ಕನ್ನಡತನ ಒಂದು ಎಂದರೆ ಕರ್ನಾಟಕ ಒಂದು ಎಂದಂತೆ. ಕನ್ನಡತನ ಶಾಶ್ವತ ಎಂದರೆ ಕರ್ನಾಟಕವೂ ಶಾಶ್ವತ ಎಂದಂತೆ. ಹೀಗಿರುವಾಗ ಕರ್ನಾಟಕವು ಒಂದು, ಕರ್ನಾಟಕವು ನಮ್ಮದು, ನಾವು ಕನ್ನಡಿಗರು ಎಂಬುದು ಬರಿಯ ಪ್ರಾಮಾಣಿಕತೆಯಲ್ಲ, ಬಹಳೇ ದೊಡ್ಡದಾದ ಮಾತು ಎಂದು ಖಂಡಿತವಾಗಿ ಹೇಳಬಹುದು. ನಿಸರ್ಗಸಹಜವಾದ ಈ ಪ್ರಾಮಾಣಿಕತೆಯಿಲ್ಲದವನು ಹಿಂದುಸ್ತಾನವು ನನ್ನದು ಎಂದು ರಾಷ್ಟ್ರೀಯ-ನಾಗಬಯಸಿದರೆ, ಜಗತ್ತು ಒಂದು ಎಂದು ವಿಶ್ವಸಂಘಟಕನಾಗಬಯಸಿದರೆ ಅವನ ಬಯಕೆ ಹುಚ್ಚುತನದ ಲಕ್ಷಣವೆನ್ನಿಸುವುದು. ' ನನ್ನಹು ' ಎಂಬುದರ ಅನುಭವ ಮತ್ತು ಅರಿಕೆ ಇಲ್ಲದೆ ಎಲ್ಲವೂ ನನ್ನದು ' ಎಂದರೆ ಅದು ತತ್ವಜ್ಞಾನವಲ್ಲ, ತಪ್ಪಿದ ಜ್ಞಾನ. ತಲೆಯೆ ಇಲ್ಲದವನು ಟೊಪ್ಪಿಗೆ ನನ್ನದು ' ಎಂದರೆ ಅದೆಂತಹ ಜ್ಞಾನ ?

—ಶ್ರೀರಂಗ.

ಪ್ರೌಢವಿದ್ಯಾರ್ಥಿಯ ಪ್ರೌಢಿ

ಚಿಕ್ಕತನದೊಳು ಸಾಲೆಗಲಿಯದೆ ।
ಲಿಕ್ಕಪತ್ರವನೋದು ಬರಹವ- ।
ನಕ್ಕರಂಗಳ ಹೆಸರುಗಳನೂ ತಿಳಿಯಲಾರದೆ ನಾ ।
ಜೊಕ್ಕ ದನದಂತಿದ್ದೆನಕಟಾ ! ।
ಮಿಕ್ಕದನು ನಾನೇನ ಹೇಳಲಿ ।
ತಕ್ಕದಾರಿಯ ಹಿಡಿದು ಗೆಳೆಯರೆ ಕಲಿಯ ಯತ್ನಿಸಿರಿ ॥ ೧ ॥

ಮುದುಕತನದೊಳು ಸಾಲೆಗಲಿಯಲು ।
ಮೊದಮೊದಲು ನಾಚುತ್ತ ಬಲ್ಲರ ।
ಮುದದ ಮಾತನ್ನಲ್ಲಗಳೆಯುತ್ತಿದ್ದೆನಕಟಕಟಾ ! ॥
ಅದನು ತೊರೆದೊಗೆದೊಮ್ಮನದೆ ನಾ ।
ನೊದಗಿದಂತಹ ಕಾಲದೊಳು ಕಲಿ- ।
ವುದಕೆ ತೊಡಗಿದೆನದರ ಫಲವನು ಪೇಳ್ವೆ ನಿಮಗೀಗ ॥ ೨ ॥

ಸಾಲೆಯೊಳು ಮೊದಲನೆಯ ದಿನದಲಿ ।
ಕಾಲನಿಡುತಲೆ ಖಿನ್ನನಾದೆನು ।
ಪೇಳಲೇನಯ್ ಮೂವರೇ ನನ್ನೊಡನೆ ಕಲಿವವರು ॥
ಮೂಲದಲ್ಲಿಯ ತುಸುಹುರುಪು ತಾಂ ।
ತಾಳಲಿಲ್ಲವು ಕಲಿವ ನೆವದಿಂ ।
ವೇಳೆಗಳೆವುದು ದಡ್ಡತನವೆಂದೆನಿಸಿತಾಗೆನಗೆ ॥ ೩ ॥

ದುಡಿದು ದಣಿದಿಹ ಕಾಲದೊಳು ಮೇಣ್ ।
ಬಿಡುವು ದೊರೆತಿಹ ಸಮಯದೊಳು ನಾ ।
ಬಿಡದೆ ವಿಶ್ರಮಿಸುವದೆ ಮಿಗಿಲೆಂದಾಗ ಭಾವಿಸಿದೆಂ ॥
ಕಡೆಗೆ ಗುರುಗಳ ಬೋಧೆಯಾಲಿಸಿ ।
ಕಡೆಗಣಿಪುದಲ್ಲುಚಿತವೆನುತಲಿ ।
ನಡೆಯತೊಡಗಿದೆ ನಿತ್ಯಸಾಲೆಗೆಯೊಲ್ಲದೊಲ್ಲದಲೆ ॥ ೪ ॥

ಹೆಸರ ಬರೆಯಲು ಕಲಿಸಲಾರಂ.. ।
ಭಿಸಿದ ಕೂಡಲೆಯೆನ್ನ ಮನದೊಳು ।
ಹೊಸದೆನಿಸ ಭಾವನೆಯು ಹುಟ್ಟಿತು ಹೋಯ್ತು ಬೇಸರವು ॥
ಹೆಸರ ಬರೆಯಲು ಕಲಿತ ಬಳಿಕಾಂ ।
ಹೊಸ ಮನುಜನಾದಂತೆ ತೋರಿತು ।
ಪುಸಿಯಿದಲ್ಲವು ಕಡುಹುರುಪಿನಿಂ ಮುಂದೆ ಸಾಗಿದೆನು ॥ ೫ ॥

ಬರೆಯತೊಡಗಿದೆನಕ್ಷರಂಗಳ ।
ಗುರುತು ಹಿಡಿಯಲು ಮೊದಲುಮಾಡಿದೆ ।
ಹರುಷವಾಯಿತು ಮನಕೆಯೌದಾಸೀನ್ಯ ದೂರಾಯ್ತು ॥
ಹುರುಪು ಹೆಚ್ಚಿತು ನೆರೆಹೊರೆಯ ಗೆಳೆ ।
ಯರನು ಕಲಿಯಲು ಬೋಧಿಸಿದೆನಾ ।
ನರಳಿತೆನ್ನಯ ಮನವು ಮೂಸಚತುಷ್ಟಯಾವಧಿಯೊಳ್ ॥ ೬ ॥

ಅಂಕೆ ಮಗ್ಗಿಗಳನ್ನು ಮುಗಿಸಿದೆ- ।
ನಂಕಗಣಿತಕೆ ಮೊದಲು ಮಾಡಿದೆ ।
ಮಂಕುತನವದು ಮಾಯವಾಗಲು ಹಿಗ್ಗಿದೆನು ಮನದೆ ॥
ಶಂಕೆ ಬೇಡಯ್ ಕಲಿಯದಿರುವಾ ।
ಕೊಂಕುಕೊರತೆಯು ಬಹಳ ದೊಡ್ಡದು ।
ಬಿಂಕದಿಂದಲಿ ಬಾಳಬೇಕಯ್ ಕಲಿತು ಸತ್ಪಥದೆ ॥ ೭ ॥

ಮಾನವನೊಳಂ ಪಶುವಿನೊಳಗಂ ।
ಜ್ಞಾನವೇ ತಾಂ ಭೇದವೆನಿಕುಂ ।
ಜ್ಞಾನಮೂಲವದೋದುಬರೆವುದು ಲೆಕ್ಕಮಾಡುವದು ॥
ಏನನುಂ ಕಲಿಯದ ನರನು ಸುಖ ।
ಹೀನನಪ್ಪನು ಜಗದೊಳವನಿಗೆ ।
ಮಾನಮರ್ಯಾದೆಗಳು ದೊರೆಯವು ತಿಳಿದು ವರ್ತಿಸಿರಿ ॥ ೮ ॥

ಇತರ ದೇಶದ ಜನರದೆಷ್ಟೋ।
ಚತುರತೆಯಗಳಿಸಿರುವರಯ್ ನಾ-।
ವಶಿಶಯದ ಮೂಢತೆಯಲೇ ತೊಳಲುತ್ತಲಿರುತಿಹೆವು ॥
ಹಿತವಿದಲ್ಲವು ಕಲಿಯದಿರುವದು।
ಜತನದಿಂದಲಿ ವಿದ್ಯೆ ಕಲಿಯುತ।
ಸತತ ಯತ್ನವ ಮಾಡಿ ಮಿತ್ರರೆ ಹಿತವ ಸಾಧಿಪುದು ॥ ೯ ॥

ಹಿಂದುದೇಶನಿವಾಸಿಗಳೆ ನಾ।
ವಂದನೆಯ ಮಾಡುತ್ತಿ ಪೇಳುವೆ।
ಹಿಂದೆ ಬೀಳದೆ ಮುಂದೆ ಸಾಗಿರಿ ವಿದ್ಯೆ ಕಲಿಯುತಲೆ ॥
ಬಾಂಧವರೆಯಾಲಸ್ಯ ತೊರೆಯಿರಿ-।
ಯೊಂದೆ ಮನದಿಂ ಕೆಲಸಮಾಡಿರಿ-।
ಯೆಂದಿಗೂ ಸುಖವಪ್ಪುದೆಂತಡಕದು ಅಹಿತದಾಗರವು ॥ ೧೦ ॥

ಬೆಳಗಾವ
೨೪-೭-೧೯೪೫

ಪ. ಭೀ. ಹುಲಿಕವಿ
ಸರದಾರ್ಸ ಹಾಯಸ್ಕೂಲು

ಕೋಗಿಲೆ ★

ಶ್ರೀ. ಎನ್. ಕೆ ಕುಲಕರ್ಣಿ ಎಂ. ಎ; ಬಿ. ಟಿ.

ಅಂಬಿಕಾತನಯದತ್ತರ ಕೋಗಿಲೆಯೆಂಬ ಅದೊಂದು ಪಾಳೀ ಪಾಠದ ವಿಷಯವಾಗಿತ್ತು. ಶಿಕ್ಷಕರಿನ್ನೂ ಬಂದಿರಲಿಲ್ಲ. ಊರ ಹೊರಗಿನ ಶಾಲೆ. ಸುತ್ತಲೂ ಮಾವಿನ ಮರಗಳು ಕೆದಿವೆ. ವಸಂತವಾಸ ಮರ ಮರದಲ್ಲಿಯೂ ಚಿಗುರುತ್ತಲಿದೆ. ಮಾಮರದ ಮಕರಂದ ಸಿಕಕೆ ಅಮೃತವನ್ನು ಬೀರುತ್ತಿದೆ. ಮುಂದವಾದ ಸುಳಿಗಾಳಿಗೆ ಹಸಿರಿಲೆಗಳು ಬಳಕುತ್ತಿವೆ. ಶಾಂತವಾದ ಬೆಳಕು.

ವರ್ಗದಲ್ಲಿ ಶಿಕ್ಷಕರಿನ್ನೂ ಬಂದಿಲ್ಲ. ಯಾವುದೋ ಮರದ ಮೇಲಿಂದ 'ಕುಹೂ ಕುಹೂ' ದು ಕೂಗು ಕೇಳಿಬರುತ್ತಿತ್ತು. ಎಲ್ಲ ಹುಡುಗರೂ ಕಿಟಕಿಯ ಹೊರಗೇ ಇಣುಕುತ್ತಿದ್ದರು. ಮನೋಹರ ಧ್ವನಿ ಅವರೆಲ್ಲರ ಚಿತ್ತವನ್ನು ಸೆಳೆದಿತ್ತು. ಒಬ್ಬಿಬ್ಬರು ಹೊರಗೆ ಓಡಿ ಮರನೇರಿ ಸಂಗೀತ ಪಕ್ಷಿಯನ್ನು ಶೋಧಿಸಹತ್ತಿದರು.

ವರ್ಗದ ಕತ್ತಲಕೋಣೆಯಲ್ಲಿ ಸೇಂಗಾ ಸೊಪ್ಪೆಗಳು, ಕಾಗದದ ತುಂಡುಗಳು ಚಾಪೆಯ ಲೆ ಬಿದ್ದಿವೆ. ಹಾಸಿದ ಚಾಪೆ ಮಸಿಯಿಂದ ಮಳುಗಿದೆ. ಬಾಕುಗಳೆಲ್ಲ ಅಸ್ತವ್ಯಸ್ತವಾಗಿವೆ. ಬ ಕುಂಟೆ ಚೇಷ್ಟೆಯ ಹುಡುಗ ಕರಿ ಹಲಗೆಯ ಮೇಲೆ ಒಂದು ಕೋಗಿಲೆಯ ಚಿತ್ರವನ್ನು ದಿದ್ದಾನೆ. ಅದರ ಮುಂದೆ ಒಬ್ಬ ಶಿಕ್ಷಕರ ಮೂಗನ್ನಿಷ್ಟೆ ರೇಖಿಸಿದ್ದಾನೆ.

ಬಗಲೊಳಗೊಂದು ಭವ್ಯವಾದ ರಟ್ಟಿನ ಮೇಲೆ ಬರೆದ ಒಂದು ಕೋಗಿಲೆಯ ಚಿತ್ರ. ಒಂದು ರುಳಿಯ ಹಲಗೆ ಇನ್ನೊಂದು ಬಗಲಲ್ಲಿ ಮೂರು ನಾಲ್ಕು ಪುಸ್ತಕಗಳು. ಒಂದು ಚತ್ತರಿಗೆ. ೋತರದ ಅಂಚು ಕಾಲಲ್ಲಿ ತೊಡಕುತ್ತಿರಲು ಮುಗ್ಗರಿಸುತ್ತ ಶಿಕ್ಷಕರು ಪ್ರವೇಶಿಸಿದರು. ಡುಗರೆಲ್ಲ ಖೊಳ್ಳನೆ ನಕ್ಕುಬಿಟ್ಟರು. ಹೊರಗೆ 'ಕುಹೂ ಕುಹೂ' ಸಪ್ಪಳ.

ಶಿಕ್ಷಕರಿಗೆ ಬ್ರಹ್ಮಾಂಡ ಸಿಟ್ಟು ಬಂತು. ಬಹಿಷ್ಕೃತವಾದ ಬೆತ್ತ ಕೈಯಲ್ಲಿಲ್ಲವಲ್ಲ ಎ
ಹಲಹಲಿಸಿದರು. ಅವಡುಗಚ್ಚಿ ಕೆಂಗಣ್ಣು ಗರಗರನೆ ತಿರುವುತ್ತ 'ಎದ್ದು ನಿಲ್ಲಿರಿ- ಅಂಕಿ ಎಣಿ
ಎಂದು ಗರ್ಜಿಸಿದರು. ಹುಡುಗರು ಅಂಕಿ ಎಣಿಸುತ್ತಿರುವಾಗಲೆ ಶಿಕ್ಷಕರ ದೃಷ್ಟಿ ಹಲಗೆ
ಮೇಲಿನ ಚಿತ್ರದ ಕಡೆಗೆ ಸುಳಿಯಿತು. ಹೊರಗೆ 'ಕುಹೂ ಕುಹೂ' ಸಪ್ಪಳ.

'ಈ ಚಿತ್ರ ಯಾರು ಬರೆದಿದ್ದೀರಿ?' ಎಂದು ಕಂಡವರ ಕಿವಿ ಹಿಂಡಿದರು. ಹುಡುಗರ ಚ
ಹೊರಗೇ ಇತ್ತು. ಮಾಮರದ ಹಸಿರು, ಮಧುರ ವಾಸನೆ, ಕುಹೂ ಕುಹೂ ಕೂಗು

ಅಂಕಿ ಎಣಿಸುವಾಗ ಒಬ್ಬ 'ನಾಕೊ' ಎಂದ. ಅವನನ್ನು ಗಕ್ಕನೆ ನಿಲ್ಲಿಸಿ ಹತ್ತು
'ನಾಲ್ಕು' ಎಂದು ನಾಲಗೆ ಹೊರಳಾಡಿಸಿ ತಿದ್ದಿ ಹೇಳಿದರು. ಹಲಗೆಯ ಮೇಲಿನ ಚಿತ್ರವ
ತಾವೇ ಅಳಿಸಿದರು. ಪಾಠಕ್ಕೆ ಆರಂಭವಾಯಿತು.

'ಸತ್ತವರಿಗೆ ಅನ್ನ ಕೊಡುವುದಕ್ಕೆ ಏನು ಅನ್ನುತ್ತಾರೆ?' ಯಾರಿಗೂ ಹೇಳಲಿಕ್ಕೆ ಬರದೆ
ಶಿಕ್ಷಕರು ಕೆಟ್ಟ ಮೋರೆ ಮಾಡಿದರು. 'ಸತ್ತವರಿಗೆ ಎಂಥ ಪಿಂಡ ಕೊಡುತ್ತಾರೆ?' ಸುಧಾ
ಪ್ರಶ್ನೆ ಕೇಳಿದರು. ಒಬ್ಬ ಹುಡುಗ ಕಳ್ಳನೋಟದಿಂದ ಹೊರಗಿನ ಪ್ರಕೃತಿಯ ಚೆಲುವ
ನಿರೀಕ್ಷಿಸುತ್ತಿದ್ದ.

'ಹೇಳಿರಿ, ಸತ್ತವರಿಗೆ ಎಂಥ ಪಿಂಡ ಕೊಡುತ್ತಾರಿ?' ಗದ್ದರಿಸಿದರು ಶಿಕ್ಷಕ
'ಕಾಗೆ ಪಿಂಡರಿ'— ಶಿಕ್ಷಕರ ಸುದ್ದಿವಕ್ಕೆ ಒಬ್ಬ ಹೇಳಿದ.

'ಶಾಬಾಸ್. ಕಾಗೆಯ ಹಾಗೇ ಇರುವ ಇನ್ನೊಂದು ಪಕ್ಷಿ ಯಾವುದು?' ಹುಡುಗ
ಹೇಳಲಿಕ್ಕೆ ಬರಲಿಲ್ಲ.

ಕೆಂಪು ಬಣ್ಣದಿಂದ ಬರೆಯಿಸಿಕೊಂಡು ಬಂದ ಚಿತ್ರವನ್ನು ಗೋಡೆಗೆ ಹಾಕಿ 'ಇದಾವ ಚಿತ್ರ
ಎಂದು ಆರ್ಭಟಿಸಿ ಕೇಳಿದರು.

'ತುರಾಯಿಯಿಲ್ಲದ ಹುಂಜ.' ಕೋಗಿಲೆಯ ಚಿತ್ರ ಬರೆದ ಬಾಲಕ ಉತ್ತರ ಹೇಳಿದ.

'ಕತ್ತೆ! ಇದು ಕೋಗಿಲೆಯ ಚಿತ್ರವಲ್ಲವೇನು?' ಎಂದರು ಶಿಕ್ಷಕರು. ಹೊ
'ಕುಹೂ ಕುಹೂ' ಕೂಗು ಏಕತಾನದಿಂದ ನಿನದಿಸುತ್ತಿತ್ತು. ಶಿಕ್ಷಕರು ಶಬ್ದಾರ್ಥದ ಪಟ್ಟಿಯ
ಹಲಗೆಯ ಮೇಲೆ ಬರೆದರು. ಹುಡುಗರಿಗೆ ಮೌನ ವಾಚನ ಕೊಟ್ಟರು.

ಪಿಸು ಪಿಸು ಮಾತಿನೊಡನೆ ಹುಡುಗರ ಮೌನ-ವಾಚನ ಸಾಗಿತ್ತು. ಹೊ
'ಕುಹೂ ಕುಹೂ' ಎಂಬ ಕಲಕಂಠನಿನಾದ ಸರಾಗವಾಗಿ ಸಾಗಿತ್ತು.[1]

[1] ಒಂದು ಮರಾಠಿಯ ಕತೆ ಕೇಳಿ ಸ್ಫೂರ್ತವಾದುದು.

ಶ್ರೀ. ರಾಮಕೃಷ್ಣ ಪುರುಷೋತ್ತಮ ಪಟವರ್ಧನ ಎಂ. ಎ.

ಮುಂಬಯಿ ಪ್ರಾಂತದ ಶಿಕ್ಷಣಖಾತೆಯ ಡಾಯರೆಕ್ಟರರು.

[ಮರಾಠಿ ಪ್ರಾಥಮಿಕ ಶಿಕ್ಷಣದ ಸಂಪಾದಕರ ಕೃಪೆಯಿಂದ]

ಕೆಲವು ವರ್ಷಗಳ ಪೂರ್ವದಲ್ಲಿ ಹಿಂದುಸ್ತಾನದಲ್ಲಿ ಶಿಕ್ಷಣ ಖಾತೆಯ ಡೈರೆಕ್ಟರರು ಯುರೋಪಿಯನ್ನರೇ ಆಗಿರುತ್ತಿದ್ದರು. ಇತ್ತೀಚೆಗೆ ಕೆಲವು ವರ್ಷಗಳಿಂದ ಭಾರತೀಯರಿಗೂ ಡಾಯರೆಕ್ಟರರ ಸನ್ಮಾನವು ದೊರಕುತ್ತಿರುವುದು ಸಂತೋಷದ ಸಂಗತಿಯಾಗಿದೆ. ಮೈಸೂರು ಮೂಸರವರು ಮುಂಬಯಿ ಪ್ರಾಂತದ ಮೊಟ್ಟಮೊದಲನೆಯ ಭಾರತೀಯ ಡಾಯರೆಕ್ಟರರಾದರು. ಇವರ ನಂತರ ಈ ಸ್ಥಳಕ್ಕೆ ಬಂದವರು ಶ್ರೀ. ಆರ್. ಪಿ. ಪಟವರ್ಧನ ಅವರು. ಇವರು ಶಿಕ್ಷಣ ಖಾತೆಯಲ್ಲಿ ತೋರಿಸುತ್ತಿದ್ದ ಆಸ್ಥೆ, ಕರ್ತವ್ಯದಕ್ಷತೆ, ಶಿಕ್ಷಣಪ್ರಸಾರದ ಕಳಕಳಿ, ವಿದ್ವತ್ತೆ, ಕಾರ್ಯಕುಶಲತೆ ಮೊದಲಾದ ಗುಣಗಳಿಗೆ ಮೆಚ್ಚಿ ಸರಕಾರವು ಇವರನ್ನು ಡಾಯರೆಕ್ಟರರನ್ನಾಗಿ ಮಾಡಿ ಶ್ರೇಯೋಭಾಗಿಯಾಯಿತು.

ಶ್ರೀ. ಪಟವರ್ಧನ ಅವರು ರತ್ನಾಗಿರಿ ಹಾಯಸ್ಕೂಲಿನ ಕೀರ್ತಿವೆತ್ತ ವಿದ್ಯಾರ್ಥಿ ಆಗಿದ್ದರು ಮತ್ತು ೧೯೦೮ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಮೊದಲನೆಯ ಸ್ಥಳವನ್ನು ಪಡೆದು ಉತ್ತೀರ್ಣರಾದರು. ಶ್ರೀ. ಜಗನ್ನಾಥ ಶಂಕರಶೇಟ ಸಂಸ್ಕೃತ ಸ್ಕಾಲರಶಿಪ್ಪನ್ನು ಪಡೆದವರು ಇವರೇ ಮೊದಲಿಗರು. ವಿಶ್ವವಿದ್ಯಾಲಯದಲ್ಲಿಯೂ ಸನ್ಮಾನೀಯ ಯಶಸ್ಸನ್ನು ಸಂಪಾದಿಸಿ ಆಕ್ಸಫರ್ಡ ವಿಶ್ವವಿದ್ಯಾಲಯದ ಎಂ. ಎ ಪದವಿಯನ್ನು ಪಡೆದು ನಮ್ಮ ದೇಶಕ್ಕೆ ಗೌರವವನ್ನು ತಂದರು. ಇವರು ಕಾಲೇಜುಗಳಲ್ಲಿ ಕೆಲವು ವರ್ಷ ಪ್ರೊಫೆಸರರಾಗಿಯೂ ಕೆಲವು ವರ್ಷ ಕರ್ನಾಟಕ ಕಾಲೇಜದ ಪ್ರಿನ್ಸಿಪಾಲರಾಗಿಯೂ ಕಾರ್ಯವನ್ನು ಮಾಡಿ ಕೀರ್ತಿಯನ್ನು ಪಡೆದರು. ಸರಕಾರವು ಮೊದಲು ಇವರನ್ನು ಡೆಪುಟಿ ಡಾಯರೆಕ್ಟರರನ್ನಾಗಿ ನೇಮಿಸಿ ಗೌರವಿಸಿತು. ಈ ಇವರು ಮುಂಬಯಿ ಇಲಾಖೆಯ ಶಿಕ್ಷಣ ಖಾತೆಯ ಡಾಯರೆಕ್ಟರರಾಗಿ ನಿಯಮಿಸಲ್ಪಟ್ಟಿರುವ ರಿಂದ ನಮಗೆಲ್ಲರಿಗೂ ಆನಂದವಾಗಿದೆ. ಇವರ ಈ ಉತ್ಕರ್ಷೆಗಾಗಿ ನಾವು ಪ್ರಾಥಮಿಕ ಶಿಕ್ಷಣಾಧಿಕಾರವಾಗಿ ಇವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ದೇವರು ಇವರಿಗೆ ಆಯುರಾರೋಗ್ಯವನ್ನು ದಯಪಾಲಿಸಿ ಯುದ್ಧೋತ್ತರ ಪುನರ್ರಚನೆಗೆ ಅನ್ವಯಿಸುವ ನಮ್ಮ ಪ್ರಾಂತದ ಶಿಕ್ಷಣವನ್ನು ಮೇಲ್ಮಟ್ಟಕ್ಕೇರಿಸುವ ಕಾರ್ಯದಲ್ಲಿ ಯಶಸ್ಸನ್ನು ನೀಡಲಿ ಎಂದೂ ಹಾರೈಸುತ್ತೇವೆ.

ಹಿಂದೂ ಸ್ತ್ರೀಯರ ಹಕ್ಕು ಬಾಧ್ಯತೆ

(ರಾವ್ ಕಮೀಟಿಯ ಸೂಚನೆಗಳು)

★

ಶ್ರೀ. ಗುರುನಾಥ ಜೋಶಿ, ಅಧ್ಯಾಪಕ ಟ್ರೈ. ಕಾ. ಧಾರವಾಡ.

ಹಿಂದೂ ಸ್ತ್ರೀಯರ ಸ್ಥಿತಿಗತಿಯನ್ನು ಸುಧಾರಿಸುವುದಕ್ಕಾಗಿ ನಮ್ಮ ದೇಶದಲ್ಲಿ ಅನೇಕ ಕಾಯಿದೆಗಳು ಮಾಡಲ್ಪಟ್ಟಿವೆ. ಪ್ರತಿಯೊಂದು ಪ್ರಗತಿಶೀಲ ಕಾಯಿದೆಯನ್ನು ವಿರೋಧಿಸುವ ಪ್ರವೃತ್ತಿಯು ನಮ್ಮ ಜನರಲ್ಲಿ ಇದ್ದುದು ಇತಿಹಾಸವನ್ನು ಅಭ್ಯಸಿಸುವವರಿಗೆ ಗೊತ್ತಾಗದೆ ಇರದು. ಈಗ ನಮ್ಮ ಸರಕಾರದ ಎದುರಿಗೆ ರಾವ್ ಕಮೀಟಿಯು ಹಿಂದೂ ಕೋಡ ಬಿಲ್ ಎಂಬ ಒಂದು ಗೊತ್ತುವಳಿಯನ್ನು ಇಟ್ಟಿರುವದು. ಇದನ್ನು ಕೂಡ ಈಗ ಅನೇಕ ಮುಂದಾಳುಗಳು ವಿರೋಧಿಸುತ್ತಿರುವರು.

೧೯ನೆಯ ಶತಮಾನದ ಮಧ್ಯದಲ್ಲಿ ಪತ್ನಿಯು ಮೃತ ಪತಿಯ ಕೂಡ 'ಸತಿ' ಹೋಗಬೇಕಾಗುತ್ತಿತ್ತು. ಇದರ ವಿರುದ್ಧವಾಗಿ ರಾಜಾ ರಾಮಮೋಹನರಾಯರು ಹೋರಾಡಿದರು. ಧರ್ಮದ ಗುತ್ತಿಗೆ ಹಿಡಿದವರು ಅವರನ್ನು ವಿರೋಧಿಸಿದರು. ಆದಾಗ್ಯೂ ರಾಮಮೋಹನರಾಯರು 'ಸತಿ' ಹೋಗುವಿಕೆಯ ವಿರುದ್ಧವಾಗಿ ಕಾಯಿದೆಯನ್ನು ಪಾಸುಮಾಡಿಸಿದರು.

ಪಂಡಿತ ಈಶ್ವರಚಂದ್ರ ವಿದ್ಯಾಸಾಗರರು ವಿಧವಾ-ವಿವಾಹವನ್ನು ಸಮರ್ಥಿಸಿದರು. ಇದಕ್ಕೆ ವಿರುದ್ಧವಾಗಿಯೂ ರೂಢಿವಾದಿ ಧರ್ಮಧುರಂಧರರು ಈಶ್ವರಚಂದ್ರರ ಮೇಲೆ ಕೋಪದ ಕಿಡಿಗಳನ್ನು

ಾಂದರು. ಆದಾಗ್ಯೂ ೧೮೫೬ರಲ್ಲಿ ವಿಧವಾ-ವಿವಾಹದ ಕಾಯಿದೆಯು ಮುಂಜೂರಾಗಿ, ವಿಧವಾ-ವಿವಾಹವು ಶಾಸ್ತ್ರಸಮ್ಮತವಾಗಿ ಹೋಯಿತು. ಇದೇ ೀತಿಯಾಗಿ ಮಹಾದೇವ ಗೋವಿಂದ ರಾನಡೆ, ಶ್ರೀಮತಿ ರಮಾಬಾಯಿ ರಾನಡೆ ಮೊದಲಾದವರು ಸಮಾಜ ಸುಧಾಣೆಯ ದೀವಟಿಗೆಯನ್ನು ಹಿಡಿದು ಮಾರ್ಗ ತೋರಿದರು. ಹರವಿಲಾಸ ಸಾರಡಾ ಅವರು ಬಾಲಿಕಾ – ಬಾಲ ವಿವಾಹದ ವಿರುದ್ಧವಾಗಿ 'ಸಾರಡಾ' ಕಾಯಿದೆಯನ್ನು ವಾಸು ಮಾಡಿಸಿ ಪ್ರೌಢ ವಿವಾಹಕ್ಕೆ ಪ್ರೋತ್ಸಾಹನೆಯನ್ನು ಕೊಟ್ಟರು ಆದರೆ ಈಗ ಈ ರಾವ ಕಮೀಟಿಯು ಹಿಂದೂ ಸ್ತ್ರೀಯರ ಸುಧಾರಣೆಗಾಗಿ ಯಾವ ವಿಧಾನಗಳನ್ನು ತನ್ನ ಬಿಲ್ಲಿನಲ್ಲಿ ಮಂಡಿಸಿದೆಯೆಂಬುದನ್ನು ನೋಡೋಣ

ಭಾರತದ ಜಾಗ್ರತ ಮಹಿಳೆಯರು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಆಂದೋಲನವನ್ನು ಮಾಡಿದರು ಆದರ ಪರಿಣಾಮ ಸ್ವರೂಪವಾಗಿ ೧೯೪೧ರಲ್ಲಿ ಭಾರತಸರಕಾರವು ಹಿಂದೂ ಲಾ ಕಮೀಟಿಯನ್ನು ಸ್ಥಾಪಿಸಿತು. ಅದರ ಅಧ್ಯಕ್ಷರು ಸರ್. ಬಿ. ಎನ್. ರಾವ್ ಅವರು. ಆದ್ದರಿಂದ ಈ ಕಮೀಟಿಗೆ ರಾವ ಕಮೀಟಿ ಎಂದು ಹೆಸರು ಬಂದಿತು.

ಹಿಂದೂ ಸಮಾಜದೊಳಗಿನ ಸ್ತ್ರೀಯರ ಅಸಮಾನತೆಯನ್ನು ದೂರ ಮಾಡುವುದೇ ಈ ಕಮೀಟಿಯ ಉದ್ದೇಶ ಆಸ್ತಿಯ ಉತ್ತರಾಧಿಕಾರ, ವಿವಾಹ, ವಿವಾಹ-ಸಂಬಂಧ-ವಿಚ್ಛೇದ ಸ್ತ್ರೀಧನ ಮೊದಲಾದ ವಿಷಯಗಳನ್ನು ನಿರ್ಣಯಿಸುವುದೂ ಈ ಕಮೀಟಿಯ ಗುರಿ. ರಾವ ಕಮೀಟಿಯು ಮಂಡಿಸಿದ ಬಿಲ್ಲು ಪಾಸಾದರೆ ಅದು ಬೌದ್ಧ, ಜೈನ, ಸಿಕ್ಖರಿಗೂ ಅನ್ವಯಿಸುವುದು.

ಹಿಂದೂ ಕಾಯಿದೆಗೆ ಅನುಸಾರವಾಗಿ ಅಂತರಜಾತೀಯ ವಿವಾಹವು ನಿಷಿದ್ಧವೆಂದು ಪರಿಗಣಿಸಲ್ಪಟ್ಟಿದೆ. ಈ ಕಮೀಟಿಯ ಬಿಲ್ಲು ಅಂತರಜಾತೀಯ ವಿವಾಹವನ್ನು ಮನ್ನಿಸುತ್ತದೆ. ಕಕ್ಕ-ಸೋದರನ ಮಗಳು, ಕಕ್ಕನ ಮಕ್ಕಳ ನಡುವಿನ ವಿವಾಹವನ್ನು ತ್ಯಾಜ್ಯಮಾಡಿದೆ. ಇದೇ ೀತಿಯಾಗಿ ತಂದೆಯಿಂದ ಏಳು ಪೀಳಿಗೆಗಳ ವರೆಗೆ ಅರ್ಥಾತ್ ಸಪಿಂಡ, ತಾಯಿಯ ಕಡೆಯಿಂದ ಐದು ಪೀಳಿಗೆಗಳ ವರೆಗೆ, ತಂದೆ ತಾಯಿಯ ಪಕ್ಷಗಳ ನಡುವೆ ಒಬ್ಬನೇ ಪೂರ್ವ ಪುರುಷನು ಇರುವವರಲ್ಲಿ ವಿವಾಹ ಸಂಬಂಧವು ಆಗಬಾರದೆಂದು ವಿಧಿಸುತ್ತದೆ.

ಮೋಸದಿಂದ, ಬಲಾತ್ಕಾರದಿಂದ ಮಾಡಿದ ಮದುವೆಯನ್ನು ರಾವ್ ಬಿಲ್ಲು ಮನ್ನಿಸುವುದಿಲ್ಲ. ಪತಿಯು ನಪುಂಸಕನಾಗಿದ್ದರೆ, ಪರಧರ್ಮವನ್ನು ಸ್ವೀಕರಿಸಿದರೆ, ೭ ವರ್ಷಗಳ ವರೆಗೆ ಕುಚ್ಚನಾಗಿದ್ದರೆ, ಕುಷ್ಠರೋಗ ಹಾಗೂ ಯೌನ ಸಂಬಂಧ ರೋಗವುಳ್ಳವನಿದ್ದರೆ, ಅಕಾರಣವಾಗಿ ಪತ್ನಿಯನ್ನ ಬಿಟ್ಟು, ಎಲ್ಲಿಗಾದರೂ ಹೋಗಿಬಿಟ್ಟರೆ, ಉಪಪತ್ನಿಯನ್ನು ಇಟ್ಟುಕೊಂಡಿದ್ದರೆ, ಪತ್ನಿಗೆ ಶಾರೀರಿಕ ಕಷ್ಟಗಳನ್ನು ಕೊಡುತ್ತಿದ್ದರೆ ಸ್ತ್ರೀಗೆ ಕಾಯಿದೆಗೆ ಅನುಸಾರವಾಗಿ ತನ್ನ ರಕ್ಷಣೆಯನ್ನು ಮಾಡಿಕೊಳ್ಳಲು ಈ ಮಸೂದೆಯು ಇಂಬುಗೊಡುತ್ತದೆ. ಪತ್ನಿಯು ತನ್ನ ಪತಿಯಿಂದ ದೂರ ಇರಲು ಬಯಸಿದರೆ ಪೋಟಗಿಯನ್ನು ಪಡೆಯ ಬಹುದಾಗಿದೆ, ಸಂಬಂಧ-ವಿಚ್ಛೇದವನ್ನು ಮಾಡಲಿಕ್ಕೂ ಈ ಬಿಲ್ಲಿನಿಂದ ಸ್ತ್ರೀಗೆ ಅಧಿಕಾರವಿರುತ್ತದೆ.

ಹಿಂದೂ ಧರ್ಮಕ್ಕನುಸಾರವಾಗಿ ಗಂಡಸು ತನಗೆ ಬೇಕಾದಷ್ಟು ಮದುವೆಯನ್ನು ಮಾಡಿಕೊಳ್ಳಬಹುದು. ಇದರಿಂದಾಗಿ ಲಕ್ಷಾಂತರ ಸ್ತ್ರೀಯರು ಸಧವೆಯರಾಗಿದ್ದಾಗ್ಯೂ ವಿಧವೆಯರಂತೆ ಜೀವನಮಾಡುತ್ತಿರುವರು. ಅವರನ್ನು ಈ ಮಸೂದೆಯು ರಕ್ಷಿಸುತ್ತದೆ. ಪತಿಯಾಗಲಿ ಪತ್ನಿಯಾಗಲಿ ಇಬ್ಬರೂ ಜೀವಿಸಿರುವ ವರೆಗೆ ದ್ವಿತೀಯ ವಿವಾಹವನ್ನು ಮಾಡಿಕೊಳ್ಳಲಿಕ್ಕೆ ಈ ಬಿಲ್ಲು ಅಧಿಕಾರವನ್ನು ಕೊಡುವದಿಲ್ಲ. ಹೀಗೆ ಈ ಮಸೂದೆಯು ಸ್ತ್ರೀಯರಿಗೆ ಪುರುಷನಿಗೆ ಸಮನಾದ

ಅಧಿಕಾರವನ್ನು ಕೊಡುತ್ತದೆ. ಈ ಮಸೂದೆಯು ವರದಕ್ಷಿಣೆ ಮತ್ತು ಕನ್ಯಾಶುಲ್ಕ ಪದ್ಧತಿಯನ್ನು ತೊಡೆದು ಹಾಕುತ್ತದೆ.

ಆಸ್ತಿಯ ಉತ್ತರಾಧಿಕಾರ ಮತ್ತು ದತ್ತಕವನ್ನು ಕುರಿತು ಈ ಮಸೂದೆಯು ಏನನ್ನು ಹೇಳುವುದು ? ಸದ್ಯದ ಹಿಂದು ಕಾಯಿದೆಗೆ ಅನುಸಾರವಾಗಿ ಸ್ತ್ರೀಗೆ ಸಂಪತ್ತು—ಆಸ್ತಿಯ ಮೇಲೆ ಯಾವ ಅಧಿಕಾರವೂ ಇಲ್ಲ; ಗಂಡನು ಮೃತ್ಯುಪತ್ರನನ್ನು ಮಾಡದೆ ಸತ್ತುಹೋದರೆ ಪತ್ನಿ ಅವನ ಆಸ್ತಿಯ ಮೇಲೆ ಯಾವ ಬಗೆಯ ಅಧಿಕಾರವೂ ಇರುವುದಿಲ್ಲ; ಮಗಳಿಗೆ ವಿವಾಹ ವರೆಗೆ ಹೊಟ್ಟೆಹೊರೆದುಕೊಳ್ಳಲಿಕ್ಕೆ ಮಾತ್ರ ಹಣವನ್ನು ಕೊಡಲಾಗುತ್ತದೆ; ವಿಧವೆಗೆ ಗಂ ಮಕ್ಕಳು ಇಲ್ಲದಿದ್ದರೆ ದೂರದ ನೆಂಟರೇ ಆಸ್ತಿಗೆ ಒಡೆಯರಾಗುತ್ತಾರೆ; ಪತ್ನಿಗೆ, ಪುತ್ರಿಗೆ, ಅಥವ ತಾಯಿಗೆ ಏನೂ ಸಿಕ್ಕುವುದಿಲ್ಲ.

೧೯೩೭ ರಲ್ಲಿ ಆದ ಹಿಂದೂ ವಿಧವಾ ಉತ್ತರಾಧಿಕಾರ ಕಾನೂನಿಗೆ ಅನುಸಾರವಾಗಿ ವಿಧವೆ ಪತಿಯ ಆಸ್ತಿಯಲ್ಲಿ ಸ್ವಲ್ಪ ಸಾಲಿನ ಅಧಿಕಾರವು ಸಿಕ್ಕಿದೆ. ಹಾಗಾದರೆ ಭೂಮಿ ಮೊದಲಾ ಸ್ಥಾವರ ಆಸ್ತಿಯ ಮೇಲೆ ಯಾವ ಅಧಿಕಾರವೂ ಇಲ್ಲವೇ ?

ಹೆಂಗಸು ತಾನು ದುಡಿದು ಗಳಿಸಿದ ಹಣಕ್ಕೆ, ಆಕೆಗೆ ದೊರೆತ ಕಾಣಿಕೆ, ಮತ್ತು ವಿವಾಹದ ವರದಕ್ಷಿಣೆಯನ್ನು ಕೊಟ್ಟಬಳಿಕ ಅದರ ಬದಲಾಗಿ ಆಕೆಯ ಮೈಮೇಲೆ ಇಟ್ಟ ಆಭರಣ ಸ್ತ್ರೀಧನವೆಂದು ಹೇಳುವರು. ಹೆಂಗಸು ತಾನು ಜೀವಿಸಿರುವವರೆಗೆ 'ಸ್ತ್ರೀಧನ'ವನ್ನು ಉ ಯೋಗಿಸಬಲ್ಲಳು. ಸದ್ಯದಲ್ಲಿ ಇರುವ ಕಾನೂನಿಗೆ ಅನುಸಾರವಾಗಿ ಅದನ್ನು ಮಾರುವ ಅಥವ ಅಡುವು ಇಡುವ ಅಥವಾ ಕಾಣಿಕೆ ಕೊಡುವ ಅಧಿಕಾರವಿಲ್ಲ. ಆದರೆ ರಾವ್ ಮಸೂದೆಯು ಪುರುಷನಿಗೆ ತನ್ನ ಆಸ್ತಿಯ ಮೇಲೆ ಇರುವಷ್ಟು ಅಧಿಕಾರವನ್ನೇ ಸ್ತ್ರೀಗೆ ಸ್ತ್ರೀಧನದ ಮೇಲೆ ಕೊಟ್ಟಿ ಅಲ್ಲದೆ ಈ ಮಸೂದೆಗೆ ಅನುಸಾರವಾಗಿ ಪ್ರತಿಯೊಬ್ಬ ಮಗನಿಗೆ ಸಿಕ್ಕುವಷ್ಟು ಪಾಲು ಪತ್ನಿಗೂ ದೊರೆಯುವುದು; ಪ್ರತಿಯೊಬ್ಬ ಮಗಳಿಗೆ ಮಗನ ಅರ್ಧದಷ್ಟು ಆಸ್ತಿಯು ಸಿಕ್ಕುವದು. ಆಕೆಯ ತೀರಿದ ಬಳಿಕ ಆಕೆಯ ಆಸ್ತಿಯಲ್ಲಿ ಎರಡು ಭಾಗಗಳನ್ನು ಮಾಡಲಾಗುವುದು—(೧) ಪತಿಯಿಂ ದೊರೆತ ಆಸ್ತಿ, ಧನ. (೨) ಸ್ತ್ರೀಧನ; ಪತಿಯಿಂದ ದೊರೆತ ಆಸ್ತಿ-ಧನವು ಗಂಡುಮಕ್ಕಳಿಗ ಹೆಣ್ಣುಮಕ್ಕಳಿಗೂ ಸಿಕ್ಕುವದು: ಸ್ತ್ರೀಧನವು ಆಕೆಯ ಪುತ್ರ. ಪುತ್ರಿ, ತಾಯಿಗೆ ಹಂಚಲ್ಪಡುವುದ್ದ ಇದರಲ್ಲಿ ಮಗಳಿಗೆ ಒಂದು ಪಾಲು ಸಿಕ್ಕರೆ ಮಗನಿಗೆ ಅರ್ಧ ಪಾಲು ಸಿಕ್ಕುವದು.

ಕೊನೆಯಲ್ಲಿ ಒಂದು ಮಹತ್ವಪೂರ್ಣವಾದ ವಿಷಯವೂ ಹೇಳಲ್ಪಟ್ಟಿದೆ—ವಿಧವಾ ಪುತ್ರಿಗೆ ಪತಿಯಿಂದಾಗಲಿ ಪುತ್ರನಿಂದಾಗಲಿ ಯಾವ ಸಹಾಯವೂ ಜೀವನಕ್ಕಾಗಿ ದೊರಕುವಂತಿಲ್ಲದಿದ್ದ ತಂದೆಯ ಅಥವಾ ತಾಯಿಯ ಆಸ್ತಿಯಿಂದ ಜೀವನಾಂಶವು ಸಿಕ್ಕುವುದು.

ಜಾರಜ ಅವಿವಾಹಿತ ಪುತ್ರಿಗೂ ಜಾರಜ ಅಪ್ರಬುದ್ಧ ಪುತ್ರನಿಗೂ ಜೀವನಕ್ಕಾಗಿ ವೆಚ್ಚ ಸಿಕ್ಕುವುದು.

ಪತಿಯು ದತ್ತಕ ತೆಗೆದು ಕೊಳ್ಳುವುದು ಬೇಡವೆಂದು ಹೇಳದೆ ಸತ್ತರೆ ಪತ್ನಿಗೆ ದತ್ತಕ ತೆಗೆ ಕೊಳ್ಳಲು ಅಧಿಕಾರವಿರುವುದು. ವಿಧವೆಯು ಪುನರ್ವಿವಾಹ ಮಾಡಿಕೊಂಡರೆ, ಆಕೆಯ ಮೊದಲಿನ ಗಂಡನಿಗೆ ಇದ್ದ ಮಗನಿಗೆ ಮಗನು ಇಲ್ಲದಿದ್ದರೆ ಮತ್ತು ವಿಧವಾ ಸೊಸೆಯು ಇದ್ದ ದತ್ತಕ ತೆಗೆದುಕೊಳ್ಳಲು ಅಧಿಕಾರವಿರುವುದಿಲ್ಲ. ಈ ಲೇಖನದಲ್ಲಿ ಕೆಲವು ಮುಂಖ್ಯಾಂಶಗಳನ್ನು ಮಾತ್ರ ಸಂಗ್ರಹಿಸಿ ಕೊಡಲಾಗಿದೆ. ಈ ಮಸೂದೆಯೊಳಗೆ ಕೆಲವು ವಿಷಯಗಳು ಹೆಚ್ಚ ಚರ್ಚಾತ್ಮಕವೂ ನಾಡಿನ ಅನೇಕ ಮುಖಂಡರಿಗೆ ಒಪ್ಪಿಗೆಯಿಲ್ಲದವೂ ಆಗಿವೆ. ಅವುಗಳನ್ನು ಇಲ್ಲಿ ಸಂಗ್ರಹಿಸಿ ಚರ್ಚಿಸುವುದಕ್ಕೆ ಇಲ್ಲಿ ಸ್ಥಾನವೂ ಇಲ್ಲ ಮತ್ತು ನಮಗೆ ಚರ್ಚೆಯಲ್ಲಿ ಬೀಳು ಅಗತ್ಯವೂ ಇಲ್ಲದ್ದರಿಂದ ಬಿಟ್ಟುಬಿಡಲಾಗಿದೆ.

ಸೇವಾ-ನಿವೃತ್ತ ಪ್ರಿನ್ಸಿಪಾಲ

ಶ್ರೀ. ಹುಚ್ಚರಾಪ ಭೀಮರಾವ ಉಮುಡಿ ಎಂ. ಎ.



ಧಾರವಾಡದ ಗುಡು ಮಕ್ಕಳ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಉಮಡಿ ಎಚ್ಚರಾಯರು ೫೬-೬-೧೯೪೫ರಿಂದ ಸೇವಾನಿವೃತ್ತರಾದರು.

ಶ್ರೀ. ಹುಚ್ಚರಾಯರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಗಳು ಧಾರವಾಡದಲ್ಲಿಯೇ ಯಿತು. ಬಳಿಕ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಗಣಿತ ವಿಷಯವನ್ನು ತೆಗೆದುಕೊಂಡು ೧೯೨೮ರಲ್ಲಿ ಬಿ. ಎ. ಪದವಿಯನ್ನು ಪಡೆದರು. ಬಳಿಕ ಒಂದು ವರುಷದ ವರೆಗೆ ವಿಕ್ಟೋರಿಯಾ ಹಾಯಸ್ಕೂಲಿನಲ್ಲಿ ಅಧ್ಯಾಪನಕಾರ್ಯವನ್ನು ಸರ್ವರ ಮನಸೋಇಚ್ಛೆಯಂತೆ ಮಾಡಿ ತಮ್ಮ ಪ್ರತಿಭೆಯನ್ನು ಕನ್ನಡ ಜನಕ್ಕೆ ತೋರಿಸಿದರು. ೧೯೨೯ರಲ್ಲಿ ಮುಂಬಯಿ ಸರಕಾರದ ಶಿಕ್ಷಣ ಖಾತೆಯಲ್ಲಿ ರಿ ಧಾರವಾಡ ಬೆಳಗಾವಿ, ವಿಜಾಪುರಗಳ ಹಾಯಸ್ಕೂಲುಗಳಲ್ಲಿ ತಮ್ಮ ಕರ್ತವ್ಯವನ್ನು ಪ್ರಶಂಸನೀಯ ರೀತಿಯಲ್ಲಿ ಜರಗಿಸುತ್ತ ೧೯೩೬ ರಲ್ಲಿ ಎಂ. ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಆದರ್ಶ ಶಿಕ್ಷಕನು ಆಜನ್ಮ ವಿದ್ಯಾರ್ಥಿಯೆಂಬುದನ್ನು ತಮ್ಮ ಸಹೋದ್ಯೋಗಿಗಳಿಗೆ ಮನವರಿಕೆ ಮಾಡಿಕೊಟ್ಟರು. ಬಳಿಕ ಟ್ರೇನಿಂಗ ಕಾಲೇಜಿನಲ್ಲಿಯೂ ಹಾಯಸ್ಕೂಲಿನಲ್ಲಿಯೂ ಶಿಕ್ಷಕ ವೃತ್ತಿಯನ್ನು ಮಾಡಿದರು. ೧೯೩೫ರಿಂದ ಟ್ರೇನಿಂಗ ಕಾಲೇಜಿನಲ್ಲಿಯೇ ಪ್ರಾಥಮಿಕ ಶಿಕ್ಷಕರಿಗೆ ವಿದ್ಯಾದಾನ ಮಾಡುತ್ತ ೧೯೪೫ರಲ್ಲಿ ಪ್ರಿನ್ಸಿಪಾಲರಾದರು. ಟ್ರೇನಿಂಗ ಕಾಲೇಜಿನಲ್ಲಿಯೇ ಕೆಲಸ ಮಾಡುತ್ತಿರುವಾಗ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತೆ 'ದೇಶಿ ಜನಾಖರ್ಚು' ಎಂಬ ಪುಸ್ತಕವನ್ನು ಬರೆದರು. ಇದೂ ಅಲ್ಲದೆ 'ಪ್ರಾಥಮಿಕ ಶಿಕ್ಷಣ'ದಲ್ಲಿ ನಾನಾ ವಿಷಯಗಳನ್ನು ಕುರಿತು ಅನೇಕ ಲೇಖನಗಳನ್ನು ಬರೆದರು. ಈಗ ಒಂದು ಅಂಕಗಣಿತವನ್ನು ಬರೆಯುತ್ತಿರುವರು. ಹೀಗೆಯಾಗಿ ನಮ್ಮ ಕನ್ನಡ ನಾಡಿನ ಜ್ಞಾನದ ಬೆಳವಣಿಗೆಗೆ ಮತ್ತು ಕನ್ನಡ ಸಾಹಿತ್ಯದ ಸಲುವಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಶ್ರೀ. ಉಮಡಿಯವರ ಜೀವನವು "ಸರಳ ಜೀವನ ಮತ್ತು ಉದಾತ್ತ ವಿಚಾರ" ಎಂಬ ಮಾತಿನ ಪ್ರತ್ಯಕ್ಷ ದೃಷ್ಟಾಂತವಾಗಿದೆ. ಇವರ ಪ್ರಫುಲ್ಲಿತ ಮುಖವೂ ಮುಖದಲ್ಲಿಯ ಮುಗುಳ್ನ ಹೂ-ನಗೆಯ ಸೌರಭವೂ ಅವರಲ್ಲಿ ಪ್ರೇಮಾದರಗಳನ್ನು ಹುಟ್ಟಿಸುತ್ತವೆ ಅವರ ಭವ್ಯ ದೇಹವೂ ಮಂದವಾದ ಗಂಭೀರ ನಡಿಗೆಯೂ ಮಿತವಾದ ನಗೆಮಾತುಗಳೂ ಅವರ ವ್ಯಕ್ತಿತ್ವದ ಹಿರಿಮೆಯನ್ನೇ ಸೂಚಿಸುವ ಚಿನ್ಹಗಳೆಂದು ಅನಿಸದೆ ಇರಲಾರದು. ಇವರು ಅನೇಕರಿಗೆ ಆದರ್ಶಪುರುಷರಾಗಲು ಇವರಲ್ಲಿದ್ದ ಅನೇಕ ಗುಣಗಳೇ ಕಾರಣವು. ನಿರ್ವಿಕಲ್ಪ ಮನಸ್ಸಿನಿಂದ ವಿಚಾರ ಮಾಡಿ ಸತ್ಯವನ್ನು ಕಂಡುಹಿಡಿಯುವ ಅಗಾಧ ಶಕ್ತಿಯು ಇವರಲ್ಲಿ ಒಡೆದುಕಾಣುತ್ತದೆ. ಗಣಿತವು ಇವರ ಅತ್ಯಂತ ಮೆಚ್ಚಿನ ವಿಷಯವಾದರೂ ಕಲಾಭಿರುಚಿಗೂ ಸೌಂದರ್ಯೋಪಾಸನೆಗೂ ಇವರ ಹೃದಯದಲ್ಲಿ ಅಗ್ರಸ್ಥಾನವಿದೆ. ಇವರು ತಮ್ಮ ಸುತ್ತಮುತ್ತಲಿನ 'ದಡ್ಡ'ರನ್ನು ಕಂಡು ಯಾವಾಗಲೂ ಕನಿಕರಪಡುತ್ತಾರೆ. 'ದಡ್ಡ'ರ ದಡ್ಡತನವನ್ನು ಹೋಗಲಾಡಿಸಿ ಅವರಲ್ಲಿ ತಿಳಿವಿನ ಹೊಂಬೆಳಕನ್ನು ಮೂಡಿಸಬೇಕೆಂಬ ಕಳಕಳಿಯು ಶಿಕ್ಷಕರಿವರ ಇಳಿವಯಸ್ಸಾದರೂ ಇವರ ಜ್ಞಾನತೃಷೆಯು ಹಿಂಗಿಲ್ಲ ಪರರಿಗೆ ಕಲಿಸುವ ಭರದಲ್ಲಿ ತಾವು ಕಲಿಯಬೇಕಾದುದೇನೂ ಇಲ್ಲವೆಂಬ ಭಾವವು ಇವರಲ್ಲಿಲ್ಲ. ವಿನಯವೇ ಇವರ ಜೀವನದ ಅಡಿಗಲ್ಲು. ತಾವು ಅಜನ್ಮ ವಿದ್ಯಾರ್ಥಿಗಳೇ ಎಂಬುದನ್ನು ಅವರು ಮರೆತಿಲ್ಲ. ರೂಢಿಯಾಚಾರಗಳ ವ್ಯೋಹಿಸುವ ಸಾಂಪ್ರದಾಯ ಶರಣರೂ ಅಲ್ಲ; ಹೊಸದೆಲ್ಲವೂ ಒಳ್ಳೆಯದೆಂದು ತಬ್ಬಿಕೊಂಡು ಕೊಂಡಾಡುವ ಸುಖಜೀವಿಗಳೂ ಅಲ್ಲ. ಉಜ್ವಲವಾದ ಪ್ರತಿಭೆ, ವಿನಯ, ಸತ್ಯಸಂಧತೆ ಈ ಗಳ ಸಮಾಗಮದಿಂದ ಇವರ ದೃಷ್ಟಿಕೋನವು ಶಾಸ್ತ್ರೀಯವಾಗಿದೆ. ಹೃದಯವು ವಿಶಾಲವಾಗಿದೆ, ಅಂತಃಕರಣವು ಪರಿಶುದ್ಧವಾಗಿದೆ. ಅಂತೆಯೇ ಇವರು ನಮ್ಮೆಲ್ಲರಿಗೆ ಆದರ್ಶ ಮೂರ್ತಿಗಳು.

ಪರಮಾತ್ಮನು ಇವರಿಗೆ ಆಯುರಾರೋಗ್ಯವನ್ನೂ ಸುಖಶಾಂತಿಯನ್ನೂ ದಯಪಾಲಿಸಲಿ. ಇವರಿಂದ ಕನ್ನಡಮ್ಮನ ಸೇವೆಯು ಇನ್ನೂ ಹೆಚ್ಚಾಗಿ ಆಗಲೆಂದು ಹಾರೈಸುತ್ತೇವೆ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

—: ವಿಷಯಗಳ ಪುನರ್ವರ್ಗೀಕರಣದ ಸಾರಾಂಶ :—

(೧) ಸದ್ಯಕ್ಕೆ ಗಂಡುಮಕ್ಕಳ, ಹೆಣ್ಣುಮಕ್ಕಳ ಹಾಗೂ ಅಗ್ರಿಕಲ್ಚರಲ್ ಬಾಯ್ಸ್ ಮೂರು ಬೇರೆ ಬೇರೆ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗಳು ಇರುತ್ತವೆ. ಗಂಡುಮಕ್ಕಳಿಗೂ ಹೆಣ್ಣುಮಕ್ಕಳಿಗೂ ಸಾಮಾನ್ಯವಾದ ಒಂದೇ ಪರೀಕ್ಷೆಯು—ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯು—ಇರಬೇಕೆಂದು ನಿಶ್ಚಯಿಸಲಾಗಿದೆ. ಮೇಲೆ ಹೇಳಿದ ಮೂರು ಬೇರೆ ಬೇರೆ ಬಗೆಯ ಪರೀಕ್ಷೆಗಳಿಗೆ ನಿಯಮಿಸಿದ ವಿಷಯಗಳ ಪುನರ್ವರ್ಗೀಕರಣವನ್ನು ಸರ್ಕಾರವು ತಮ್ಮ ೨೭ನೆಯ ಎಪ್ರಿಲ್ ೧೯೪೫ನೇ ಇಸ್ವಿಯ ಶಿಕ್ಷಣ ಖಾತೆಯ ಗೊತ್ತುವಳಿ ೬೯೭೨ ರಲ್ಲಿ ಈ ಕೆಳಗಿನಂತೆ ಮಾಡಿದೆ :

ವಿಷಯಗಳು	ಗುಣಗಳು
ಭಾಷಾ :—	
೧ನೆಯ ಕಾಗದ—ಗದ್ಯ, ಪದ್ಯ ಮತ್ತು ವ್ಯಾಕರಣ(ಸಾಮಾನ್ಯ)	೧೦೦
೨ನೆಯ ಕಾಗದ—ನಿಬಂಧ (ನಿಬಂಧ ಅಥವಾ ರಿಪೋರ್ಟು)	೧೦೦
ಗಣಿತ :—	
೧ನೆಯ ಕಾಗದ—ಅಂಕಗಣಿತ	೧೦೦
೨ನೆಯ ಕಾಗದ—ಭೂಮಿತಿ ಜಮಾಖರ್ಚು	೧೦೦
ಇತಿಹಾಸ, ಭೂಗೋಲ :— (ಒಂದು ಕಾಗದ)	೧೦೦
ಶಾಸ್ತ್ರೀಯ ವಿಷಯ :— ಒಂದು ಕಾಗದ	೧೦೦
(ಅ) ಸಾಮಾನ್ಯವಿಜ್ಞಾನ ಮತ್ತು ಆರೋಗ್ಯಶಾಸ್ತ್ರ	
(ಬ) ಕೃಷಿಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ	
(ಕ) ಗೃಹವಿಜ್ಞಾನ ಮತ್ತು ಆರೋಗ್ಯಶಾಸ್ತ್ರ	
೬. **ಕೆಳಗಿನ ಬೇಕಾದ ಒಂದು ವಿಷಯ :—**	೧೦೦
(ಅ) ಕಸೂತಿ	
(ಬ) ಡ್ರಾಯಿಂಗ	
(ಕ) ಪ್ರಾಯೋಗಿಕ ಒಕ್ಕಲತನ	
(ಡ) ಕಟ್ಟಿಗೆಯ ಕೆಲಸ	
(ಈ) ನೂಲುವದು ಮತ್ತು ನೇಯುವದು	
೭. **ಕೆಳಗಿನ ಐಚ್ಛಿಕ ವಿಷಯಗಳನ್ನು ಒಳಗೊಳ್ಳಬಹುದಾದ ಒಂದು ಹೆಚ್ಚಿನ ವಿಷಯ :—**	೧೦೦
(ಅ) ಒಂದು ಹೆಚ್ಚಿನ ಭಾಷೆ	
(ಬ) ಗಾಯನ	
(ಕ) ಕಾಗದ ಮತ್ತು ಬೆತ್ತದ ಕೆಲಸ	
(ಡ) ಹೊಲಿಗೆ	
(ಇ) ಚರ್ಮದ ಕೆಲಸ	

ಪರೀಕ್ಷೆಗೆ ಕೂಡ್ರುವ ಉಮೇದವಾರನು ೫ನೆಯ ಪದರಿನಲ್ಲಿಯ ಬೇಕಾದ ಒಂದು ವಿಷಯವನ್ನೂ ೬ನೆಯ ಪದರಿನಲ್ಲಿಯ ಐಚ್ಛಿಕ ವಿಷಯವಾಗಿ ಬೇಕಾದ ಒಂದು ವಿಷಯವನ್ನು ತೆಗೆದುಕೊಳ್ಳಬಹುದು. ೧, ೨, ೩, ೪ನೆಯ ಪದರಿನಲ್ಲಿಯ ಎಲ್ಲ ವಿಷಯಗಳಲ್ಲಿಯೂ ೫ನೆಯ ಪದರಿನ ಯಾವುದಾದರೊಂದು ವಿಷಯದಲ್ಲಿಯೂ ಏಕಕಾಲಕ್ಕೆ ಪಾಸಾಗಬೇಕು. ಮತ್ತು ೬ನೆಯ ಪದರಿನಲ್ಲಿಯ ಒಂದು ಅಥವಾ ಹೆಚ್ಚು ವಿಷಯಗಳಲ್ಲಿ ಪಾಸಾದರೆ ಆಯಾ ವಿಷಯಗಳಲ್ಲಿ ಪಾಸಾದ ಸಂಗತಿಯನ್ನು ಪ್ರಾಥಮಿಕ ಶಾಲಾ ಪ್ರಮಾಣಪತ್ರದಲ್ಲಿ ಕಾಣಿಸಲಾಗುವುದು.

(೨) ೧೯೪೬ನೆಯ ಇಸವಿಯಲ್ಲಿ ಇಡಲಾಗುವ ಗಂಡು ಮತ್ತು ಹೆಣ್ಣು ಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರದ ಪರೀಕ್ಷೆಗಳು ೧ನೆಯ ಫ್ಯಾರಾದಲ್ಲಿ ಕಾಣಿಸಿದ ವಿಷಯಗಳ ಮೇರೆಗೆ ನಡೆಯುವುವು.

—(ಸಹಿ) ಜಿ. ಎನ್. ಅಯ್ಯರ
ವಿದ್ಯಾಖಾತೆಯ ಡಾಯರೆಕ್ಟರರ ಪರವಾಗಿ

ಮೇ। ಡಾಯರೆಕ್ಟರ ಸಾಹೇಬರು ಮೇಲಿನಂತೆ ಹುಕುಮು ಕೊಟ್ಟನಂತರ ತಾ. ೧೪-೭-೪೬ನೆಯ ದಿನ ಬರೆದ ಪತ್ರದಲ್ಲಿ ಈ ರೀತಿಯಾಗಿ ಹುಕುಮನ್ನು ಕೊಟ್ಟಿದ್ದಾರೆ:—

೫ನೆಯ ಸದರಿನಲ್ಲಿಯ ಕಟ್ಟಿಗೆಯ ಕೆಲಸ, ನೂಲುವದು ಮತ್ತು ನೇಯುವುದು; ೬ನೆಯ ಸದರಿನಲ್ಲಿಯ ಕಾಗದ ಮತ್ತು ಬೆತ್ತದ ಕೆಲಸ, ಹೊಲಿಗೆ ಮತ್ತು ಚರ್ಮದ ಕೆಲಸ ಈ ವಿಷಯಗಳ ಪಾಠಕ್ರಮಗಳು ಸಿದ್ಧವಾಗುವುದಕ್ಕೆ ಇನ್ನೂ ಸ್ವಲ್ಪ ಅವಧಿ ಬೇಕಾಗಿರುವುದರಿಂದ ೫ನೆಯ ಸದರಿನಲ್ಲಿಯ ಕಸೂತಿ, ಡ್ರಾಯಿಂಗ ಮತ್ತು ಪ್ರಾಯೋಗಿಕ ಒಕ್ಕಲುತನ; ೬ನೆಯ ಸದರಿನಲ್ಲಿಯ ಹಿಂದುಸ್ತಾನಿ ಅಥವಾ ಮುಸಲ್ಮಾನ ವಿದ್ಯಾರ್ಥಿಗಳಿಗಾಗಿ ಯಾವುದಾದರೊಂದು ಪ್ರಾದೇಶಿಕ ಭಾಷೆ (ಉರ್ದೂ ಶಾಲೆಗಳ ಮುಸಲ್ಮಾನ ವಿದ್ಯಾರ್ಥಿಗಳಿಗಾಗಿ), ಸಂಗೀತ ಈ ವಿಷಯಗಳು ಹಾಗೂ ೧, ೨, ೩, ೪ನೆಯ ಸದರಿನ ಎಲ್ಲ ವಿಷಯಗಳಲ್ಲಿ ೧೯೪೬ರಲ್ಲಿ ಪ್ರಾಥಮಿಕ ಶಾಲಾ ಪ್ರಮಾಣಪತ್ರದ ಪರೀಕ್ಷೆಗಳು ನಡೆಯುವುವು. ಪ್ರಾಥಮಿಕಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯಲ್ಲಿ ಇಯತ್ತೆಗಳ ಪ್ರಕಾರ ಕೊಟ್ಟ ಅಭ್ಯಾಸಕ್ರಮವನ್ನು ಅನುಸರಿಸಬೇಕು. ೫ನೆಯ ಸದರಿನಲ್ಲಿಯ ಪ್ರಾಯೋಗಿಕ ಒಕ್ಕಲುತನದ ಬಗ್ಗೆ ಅಗ್ರಿಕಲ್ಚರಲ್ ಬಾಯಸ್ ಶಾಲೆಗಳಿಗಾಗಿ ಮತ್ತು ಬೇಸಿಕ್ ಶಾಲೆಗಳಿಗಾಗಿ ಇಯತ್ತೆಗಳ ಪ್ರಕಾರ ಸಿದ್ಧಗೊಳಿಸಿದ ಅಭ್ಯಾಸಕ್ರಮಗಳಲ್ಲಿ ಯಾವುದಾದರೂ ಒಂದನ್ನು ಅನುಸರಿಸಬೇಕು. ೫ನೆಯ ಸದರಿನಲ್ಲಿಯ ಕಸೂತಿ ಮತ್ತು ೬ನೆಯ ಸದರಿನಲ್ಲಿಯ ಸಂಗೀತ ವಿಷಯಗಳನ್ನು ಸದ್ಯಕ್ಕೆ ಹೆಣ್ಣು ಮಕ್ಕಳ ಶಾಲೆಗಳಲ್ಲಿಯಲ್ಲದೆ ೫ನೆಯ ಸದರಿನಲ್ಲಿಯ ಡ್ರಾಯಿಂಗು ಮತ್ತು ೬ನೆಯ ಸದರಿನಲ್ಲಿಯ ಹಿಂದುಸ್ತಾನಿ ಅಥವಾ ಯಾವುದಾದರೊಂದು ಹೆಚ್ಚಿನ ಪ್ರಾದೇಶಿಕ ಭಾಷೆಯನ್ನು ಗಂಡು ಮಕ್ಕಳ ಶಾಲೆಗಳಲ್ಲಿಯೂ ಕಲಿಸುವ ಏರ್ಪಾಡನ್ನು ಮಾಡತಕ್ಕದ್ದು. ಸಂಗೀತ ಮತ್ತು ಕಸೂತಿಗಾಗಿ ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಅಭ್ಯಾಸ ಪತ್ರಿಕೆಯನ್ನು ಉಪಯೋಗಿಸತಕ್ಕದ್ದು.

—(ಸಹಿ) ಎಸ್. ಎಸ್. ಸಾತಪುತೆ
ಡಾಯರೆಕ್ಟರರ ಪರವಾಗಿ

ನಮ್ಮ ಕಾಲೇಜದಲ್ಲಿಯ ಚಟುವಟಿಕೆಗಳು

೧. **ಔದ್ಯೋಗಿಕ ಶಿಕ್ಷಣದ ಯೋಜನೆ**:— ೩೦-೬-೪೫ನೆಯ ದಿವಸ ಹುಬ್ಬಳ್ಳಿಯ ರಿಶಪ್ಪನ್ ಡಿಪೋದ ಮುಖ್ಯಾಧಿಕಾರಿಗಳಾದ ಶ್ರೀ. ವಾಯ್. ಎಲ್. ಸಂಗೊಳ್ಳಿ ಅವರು ದಯೆ ಮಾಡಿಸಿ ಪ್ರಿನ್ಸಿಪಾಲರಾದ ಶ್ರೀ. ಬೈಚವಾಳರಾಯರ ಹಿರಿಯತನದಲ್ಲಿ ಭಾಷಣವಿತ್ತರು. ಅದರ ಮುಖ್ಯ ಅಂಶಗಳು ಹೀಗಿನೆ:—

ಶಿಕ್ಷಕನು ರಾಷ್ಟ್ರವನ್ನು ಕಟ್ಟುವವನು. ಅವನ ಮೇಲೆ ಮಕ್ಕಳ ಹೊಣೆಯು ಬಹಳ ಕಾಲಕ್ಕೆ ತಕ್ಕ ಮಾರ್ಗವನ್ನು ಯೋಜಿಸಬೇಕಾಗುವದು. ರಾಷ್ಟ್ರೋದ್ಧಾರದ ಉದ್ದೇಶದಿಂದ

ರ್ಜ ಹಾಕಿ ಪ್ರಯತ್ನಬಟ್ಟು ಶಿಕ್ಷಕವೃತ್ತಿಯನ್ನು ಕೈಕೊಂಡವರು ಎಷ್ಟು ಜನರಿದ್ದಾರೆ? ರದೇಶಗಳಲ್ಲಿ ಶಿಕ್ಷಕವೃತ್ತಿಗೆ ಜನರನ್ನು ಆರಿಸುವಾಗ ಉಳಿದ ವೃತ್ತಿಗಳಿಗಿಂತ ಹೆಚ್ಚು ಚಿಕಿತ್ಸೆ ುಂದ ಆರಿಸುವರು.

ನಮ್ಮ ದೇಶದಲ್ಲಿ ಸರಕಾರದವರು ೧೯೪೪ಳಂದಿಂದ ಔದ್ಯೋಗಿಕ ಶಿಕ್ಷಣದ ಕಡೆಗೆ ಹೆಚ್ಚು ಮನವಿತ್ತಿದ್ದಾರೆ. ಇದು ಒಂದು ಸುಸಂಧಿಯು. ನಮ್ಮ ದೇಶದ ಮುಂದಾಳುಗಳು ಈಗಿನ ಕ್ಷಣದಲ್ಲಿ ತಿದ್ದುಪಡೆಯಾಗಿ ಪ್ರತಿಯೊಬ್ಬರಿಗೂ ಉದ್ಯೋಗ ಶಿಕ್ಷಣ ದೊರೆಯಬೇಕೆಂದು ಹಳ ಪ್ರಯತ್ನಿಸಿದರು. ಕೆಲವು ಉಮೇದವಾರರಿಗಾಗಿ ಬೇಕಾದಷ್ಟು ಫೀ ಹಣವನ್ನು ೂಟ್ಟದ್ದಲ್ಲದೆ ಪರದೇಶಗಳಿಗೆ ಕೂಡ ಕಳಿಸಿ ಕಷ್ಟಪಡಬೇಕಾಯಿತು.

ಈಗ ಕಾಲಮಹಿಮೆಯಿಂದ ಉದ್ಯೋಗ ಶಿಕ್ಷಣ ಪಡೆಯುವದು ಸುಲಭವಾಗಿದೆ. ಊಟ-ಟ್ಟೆ-ಔಷಧ-ಪ್ರಯಾಣದ ವೆಚ್ಚ ಇವೆಲ್ಲವನ್ನು ಸರಕಾರದವರೇ ಪುಕ್ಕಟೆಯಾಗಿ ಕೊಡುವರಲ್ಲದೆ ೀಲೆ ಕೈತುಂಬ ಸಂಬಳ ದೊರೆಯುವದು, ಇಷ್ಟೇ ಅಲ್ಲ. ಯುದ್ಧಾನಂತರದಲ್ಲಿ ಈ ತರದ ಕ್ಷಣ ಪಡೆದವರಿಗೆ ಮೊಟ್ಟಮೊದಲು ಹೆಚ್ಚು ಅನುಕೂಲತೆಗಳನ್ನು ಮಾಡಿಕೊಡುವರು. ುದಾಹರಣೆಗಾಗಿ ಹೇಳುವದೇ ಆದರೆ-ಇಂಗ್ರಜಿ ಕಲಿತ ಪ್ರಾಥಮಿಕ ಶಿಕ್ಷಕರು ಔದ್ಯೋಗಿಕ ಕ್ಷಣ ಪಡೆದು ಯಾಂತ್ರಿಕ ವಿಭಾಗದಲ್ಲಿ ಉತ್ತೀರ್ಣರಾಗಿದ್ದರೆ ಅಂಥವರು ಇನ್ನು ಮುಂದೆ ಳ್ಳಿಗಳ ಕೇಂದ್ರಸ್ಥಳಗಳಲ್ಲಿ ಸ್ಥಾಪಿತವಾಗಲಿರುವ ಯಾಂತ್ರಿಕ ಶಿಕ್ಷಣ ಶಾಲೆಗಳ ಮುಖ್ಯಾಧಿ ಾರಿಗಳಾಗಿ ಹೆಚ್ಚು ಸಂಬಳವನ್ನು-ಸುಖವನ್ನು ಪಡೆಯಬಹುದು.

ಈಗಿನ ಯೋಜನೆಯಲ್ಲಿ ೧೬ರಿಂದ ೪೦ರ ವರೆಗಿನ ವಯಸ್ಸಿನ ಸ್ತ್ರೀಪುರುಷರಿಗೆಲ್ಲ ,ವೇಶವಿದೆ. ನಿರಕ್ಷರಿಯಿಂದ ಘನವಿದ್ವಾಂಸರ ವರೆಗೆ ಎಲ್ಲರಿಗೂ ತಕ್ಕ ಶಿಕ್ಷಣ-ಕಾರ್ಯಗಳಿವೆ. ಶಕ್ತರಿಗೂ ಕಡಿಮೆ ತೂಕವುಳ್ಳವರಿಗೂ ಸರಕಾರದವರು ಕೆಲವು ಕಾಲ ವಿಶ್ರಾಂತಿಗ್ರಹದಲ್ಲಿಟ್ಟು ಬಲರನ್ನಾಗಿ ಮಾಡಿ ನಂತರ ಕಲಿಸುವರು. ಕೆಲಸದ ಮೇಲೆ ಇರುವಾಗ ಸಾಕಷ್ಟು ಪೂರ್ಣ ಂಬಳದ ರಜೆಯು ದೊರೆಯುವದು.

ಹಿಂದುಸ್ತಾನಕ್ಕೆ ಸ್ವರಾಜ್ಯ ಸಿಕ್ಕಬಳಿಕಾದರೂ ಔದ್ಯೋಗಿಕ ಶಿಕ್ಷಣ ಬೇಕೇ ಬೇಕು. ಈ ಕ್ಷಣ ಪಡೆದವರು ತಾವು ಸುಖಿಗಳಾಗುವದಲ್ಲದೆ ಮನೆಯವರನ್ನೂ ಸಮಾಜವನ್ನೂ ರಾಷ್ಟ್ರ ನ್ನೂ ಸುಖಿಯಾಗಿ ಮಾಡುವರು. ಅಗತ್ಯವಿದ್ದವರಿಗೆ ಬೇಕಾದ ಮಾಹಿತಿಯನ್ನು ಟಿಕ್ನಿಕಲ್ ಧಿಕಾರಿಗಳೂ ಜಿಲ್ಲೆಯ ಡೆ ಎ. ಇ. ಅವರೂ ಪೂರೈಸುವರು. ಶಿಕ್ಷಕರು ತಮ್ಮ ವಾಣಿಯ ಲದಿಂದ ಈ ವಿಷಯವನ್ನು ಪರರಿಗೆ ಸರಿಯಾಗಿ ತಿಳಿಸಬೇಕು. ಅನುಕೂಲ ಉತ್ಸಾಹ-ಆಸಕ್ತಿ ಳಿದ್ದ ಶಿಕ್ಷಕರು ಸ್ವತಃ ಉದ್ಯೋಗ ಶಿಕ್ಷಣ ಪಡೆದು ರಾಷ್ಟ್ರೋದ್ಧಾರವನ್ನು ಮಾಡಬೇಕು.

೨. **ಶಿಕ್ಷಣದಲ್ಲಿ ಯುದ್ಧೋತ್ತರ ಪುನರ್ರಚನೆ** :— ೧೦-೭-೪೫ ನೆಯ ದಿನಸ ು ಎಸ್. ಸ್. ನೆಗಳೂರ ಎಸ್. ಎ. ಧಾರವಾಡ ಮಿಶನ್ ಹೈಸ್ಕೂಲದ ಅಧ್ಯಾಪಕರು ನ್ಸಿಪಾಲರಾದ ಶ್ರೀ. ಬೈಚವಾಳರಾಯರ ಹಿರಿಯತನದಲ್ಲಿ ಭಾಷಣ ಮಾಡಿದುದರ ಮುಖ್ಯ ಂಶಗಳು ಹೀಗಿವೆ :—

ಹಿಂದುಸ್ತಾನವು ಭೂಮಿಯಲ್ಲಿಯ ಉಳಿದ ದೇಶಗಳಲ್ಲಿಯ ಚಟುವಟಿಕೆಗಳನ್ನು ಲಕ್ಷಿಸದೆ ಕಾಕಿಯಾಗಿ ಉಳಿಯುವಂತಿಲ್ಲ. ಅವುಗಳಲ್ಲಿಯ ವಿದ್ಯೆ-ವ್ಯಾಪಾರ-ಕಲೆ-ಕೈಗಾರಿಕೆ ಮೊದಲಾದವು

ಗಳನ್ನು ಪರೀಕ್ಷಿಸಿ ತನ್ನಲ್ಲಿ ತಕ್ಕ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾಗುವದು. ಹೀಗೆ ಪುನರ್ರಚನೆಗೆ ಯಾವಾಗಲೂ ಅವಕಾಶವಿದ್ದೇ ಇರುವದಾದರೂ ಸದ್ಯದ ಶಿಕ್ಷಣಕ್ರಮ-ವ್ಯವಸ್ಥೆಗಳಲ್ಲಿ ಅದನ್ನು, ಯಾರು ಮಾಡಬೇಕು? ಹೇಗೆ ಮಾಡಬೇಕು? ಮೊದಲಾದ ಪ್ರಶ್ನೆಗಳು ಅಳವಂದ ಅಭ್ಯಾಸವಿಲ್ಲದೆ ಬಿಡುವಂತಿಲ್ಲ.

ಈಗಿನ ಸಮಯವು ಪುನರ್ರಚನೆಗೆ ಅನಕೂಲವಿದೆಯೇ? ಅದನ್ನು ಯಾರು ಯಾವ ರೀತಿಗಳಲ್ಲಿ ಮಾಡಬೇಕು? ಇವು ಮುಖ್ಯಪ್ರಶ್ನೆಗಳಾಗಿವೆ. ಇದುವರೆಗೆ ನಮ್ಮಲ್ಲಿ ಆದ ಯೋಜನೆಗಳನ್ನೆಲ್ಲ ಬಹುಶಃ ಇಗ್ಲೀಷರೇ ಮಾಡಿದರು. ಅವರಲ್ಲಿ ಮುಖ್ಯವಾಗಿ ಲಾರ್ಡ್ ಮೆಕಾಲೆಯವರ ಹೆಸರನ್ನು ನಾವು ಮರೆಯುವಂತಿಲ್ಲ. ಅವರ ಕಾಲದಲ್ಲಿ ಪ್ರಚಾರ ಪಡಿಸಿದ ಯೋಜನೆಯು ರಾಜಪ್ರಜರಿಗೆಲ್ಲ ಸುಖಕರವಾಗಿದ್ದರೂ ಬರಬರುತ್ತ ನಿರುಪಯುಕ್ತವಾಗಹತ್ತಿತು. ಕಲಿಸುವದೆಲ್ಲವೂ ಕೇವಲ ಪರೀಕ್ಷೆಗಳಿಗಾಗಿಯೇ ಆಯಿತಲ್ಲದೆ ಜೀವನ ಸಮಸ್ಯೆಗಳಿಗೆ ಕಡಿಮೆ ಸಂಬಂಧವು ಬರುಹತ್ತಿದೆ. ವಿದ್ಯಾರ್ಥಿಗಳು ವಿಚಿತ್ರ ರೀತಿಯಿಂದ ಅಭ್ಯಾಸಮಾಡಹತ್ತಿದರು. ವಿದ್ಯಾರ್ಜನೆಗೆ ಬುದ್ಧಿಬಲಕ್ಕಿಂತ ಧನಬಲವೇ ಮುಖ್ಯವಾಯಿತು.

ಈ ಸ್ಥಿತಿಯನ್ನು ಸುಧಾರಿಸುವ ಸಲುವಾಗಿ. ಮಹಾನುಭಾವರಾದ ಸಾರ್ಜಂಟರು ಒಂದು ಒಳ್ಳೆಯ ವರದಿಯನ್ನು ಸಿದ್ಧಪಡಿಸಿದ್ದಾರೆ. ವಿಶಾಲವಾದ ಉನ್ನತ ಸ್ಥಿತಿಗೇರಿದ ಇಂಗ್ಲಂಡದಲ್ಲಿ ತಲೆಗೆ ೩೫ ರೂ ವೆಚ್ಚಬಂದರೂ. ಅಲ್ಲಿಯ ಶಿಕ್ಷಣಕ್ರಮವು ಇನ್ನೂ ತೃಪ್ತಿಕರವಿಲ್ಲವಂತೆ. ಆದರೆ ನಮ್ಮಲ್ಲಿ ತಲೆಗೆ ೮ ಅಣೆ ೯ ಪೈ ವೆಚ್ಚಬರುವಾಗ ಅಂಥದರಿಂದ ಹೇಗೆ ಸಮಾಧಾನವಾದೀತು! ಹೀಗಿದ್ದರೂ ಈ ಯೋಜನೆಯಲ್ಲಿ ಶಿಶುಶಿಕ್ಷಣ, ಪ್ರಾಥಮಿಕ ಶಿಕ್ಷಣ, ಮೇಲಿನತರಗತಿಯ ಶಿಕ್ಷಣ, ಕೈಗಾರಿಕೆಯ ಶಿಕ್ಷಣ ಇವೆಲ್ಲವನ್ನೂ ವಿಶಾಲದೃಷ್ಟಿಯಿಂದ ಏನೇಚಿಸಲಾಗಿದೆ. ಒಂದಕೊಂದರ ಸುಸಂಬಂಧವನ್ನೂ ಕಾಯ್ದುಕೊಳ್ಳಲಾಗಿದೆ. ಹಣವೇ ಪ್ರಾಧಾನ್ಯವಾಗಿರದೆ, ಬಡ-ಜಾಣ ಮಕ್ಕಳಿಗೆ ಮುಂದುವರಿಯಲಿಕ್ಕೆ ಅನುಕೂಲತೆಗಳನ್ನು ಮಾಡಿಕೊಡಲಾಗಿದೆ.

ಈ ಯೋಜನೆಯಲ್ಲಿ ದೋಷಗಳೇ ಇಲ್ಲವಂತಲ್ಲ, ಸ್ತ್ರೀಶಿಕ್ಷಣವನ್ನು ವಿಶೇಷವಾಗಿ ಚರ್ಚಿಸಿಲ್ಲ. ಧಾರ್ಮಿಕ ಶಿಕ್ಷಣದ ಸೇರ್ಪಡೆ ಇಲ್ಲ. ಹೀಗೆ ಇದ್ದರೂ ಯುದ್ಧ ಪೂರ್ವದಲ್ಲಿ ಪರದೇಶಗಳಲ್ಲಿ ದೊರಕುತ್ತಿದ್ದ ಶಿಕ್ಷಣದ ಮಟ್ಟಿನವರೆಗೆ ಇನ್ನು ಯುದ್ಧಾನಂತರದಲ್ಲಿಯಾದರೂ ನಮ್ಮ ದೇಶವು ಹೋಗಿ ಮುಟ್ಟಲಿ.

೩. **ಪ್ರಗತಿಶೀಲ ಸಾಹಿತ್ಯ** :— ತಾ. ೧೧-೮-೪೫ ನೆಯ ದಿವಸ ಶ್ರೀ. ಬೆಟಗೇರಿ ಕೃಷ್ಣಶರ್ಮರು ಹಿರಿಯ ಅಧ್ಯಾಪಕರಾದ ಶ್ರೀ. ರಾಯಣ್ಣನವರ ಹಿರಿಯ ತನದಲ್ಲಿ ಭಾಷಣಮಾಡಿದರು. ಅವರ ವ್ಯಾಖ್ಯಾನಗಳು ಹೀಗಿವೆ :—

ಈಗ ವಿಪರೀತಕಾಲ. ಹೊಸ ಕವಿಗಳು ಹಳಯದನ್ನೆಲ್ಲ ಹೊಳೆಯಲ್ಲಿ ಹಾಕು ಅನ್ನುವರು ಪೂರ್ವದ ಕವಿಗಳಾದರೋ ತಮಗಿಂತ ಹಿಂದಿನವರನ್ನು ಹೊಗಳಿ ತಮ್ಮ ಬರೆಹವನ್ನು ಪರಿಶೀಲಿಸಲು ವಿಜ್ಞಜ್ಞನರನ್ನು ವಿನಯದಿಂದ ಪ್ರಾರ್ಥಿಸುತ್ತಿದ್ದರು. ಹಾಗಾದರೆ ಹಿಂದಿನ ರೀತಿಯು ಸರಿಯಾದುದೋ ಇಂದಿನವರ ರಗಳೆ ಸರಿಯಾದುದೋ? ಇವು ತಿಳಿಯದೆ ಹೋಗಿ, ಯಾರು ಈ ವಿಷಯದಲ್ಲಿ ಮನಸ್ಸು ಹಾಕಿ ಕಾರ್ಯಮಾಡಬೇಕಾದ್ದಿತೋ ಅವರು ಕಾರ್ಯಮಾಡದೆ ಇಲ್ಲವೆ ಅಯೋಗ್ಯ ಪ್ರಚಾರದಲ್ಲಿ ತೊಡಗಿದ್ದಾರೆ.

ಸಾಹಿತ್ಯವೆಂದರೇನು? ಅದರ ಭೇದಗಳು ಯಾವವು? ಇವುಗಳನ್ನು ತಿಳಿಯುವದು ಎಲ್ಲ
ಅತ್ಯವಶ್ಯ. ರಸಾತ್ಮಕವಾದ ವಾಕ್ಯವಾಗಲಿ ಪ್ರಬಂಧವಾಗಲಿ ಕವಿತೆಯಾಗಲಿ ಸಾಹಿತ್ಯವು.
ದ್ಯ ಸಾಹಿತ್ಯವು ಮನಸ್ಸು, ಬುದ್ಧಿ ಹೃದಯಗಳನ್ನು ಸಂತುಷ್ಟಗೊಳಿಸುವದು. ಈಗ ಹಲವರು
ರೊಟ್ಟಿಯನ್ನು ಒದಗಿಸುವ ಬರೆಹವಷ್ಟೇ ಪ್ರಗತಿಶೀಲ ಸಾಹಿತ್ಯವೆಂದು ಹೇಳುವರು.
ನ ಕವಿಗಳು ಅರಸು ಅರಸಿ ಸಿರಿವಂತರನ್ನು ದೇವರನ್ನು ಹೊಗಳುವವರಲ್ಲಿಯೇ. ತಮ್ಮ
ನ್ನು ಪೆಚ್ಚು ಮಾಡಿದರು. ಸಮಾಜದಲ್ಲಿಯ ಬಡವರನ್ನೂ ಕೂಲಿಕಾರರನ್ನೂ ಉದ್ಧರಿಸಲು
ಲಿಲ್ಲ. ಧರ್ಮದ ನೆವದಿಂದ ಜಗಳಾಟವನ್ನೇ ಎಬ್ಬಿಸಿದರಲ್ಲದೆ. ಪತ್ಕರ ಉದ್ಧಾರವು
ವಾಗಿರಲಿಲ್ಲ. ಹೀಗೆ ಪ್ರಗತಿಶೀಲರ ಆಕ್ಷೇಪವಿದೆ. ಪೂರ್ವಕಾಲದಲ್ಲಿ ಕೂಳಿನ ಗೋಳು ಇರ
ಟ್ಟಿಯ ಬರಗಾಲವಿರಲಿಲ್ಲ. ಉಣಲು ತಿನಲು ತೊಡಲು ಉಡಲು ಸಮೃದ್ಧವಿದ್ದ ಬಳಿಕ
ಇಹ ಪರ ಪುರಾಣ ದೇವರ ಬೆನ್ನುಹತ್ತಿದರು. ಅದು ಅವರಿಗೆ ಕ್ರಮವಾಗಿಯೇ ಇತ್ತು.
ಗಾಗಿ ಗೋಳಾಡುವವರಲ್ಲಿಂದ ನಿಜವಾದ ಸಾಹಿತ್ಯವು ಹುಟ್ಟುವದೇ? ಸಾಹಿತ್ಯವು ಯಾವಾ
ಪ್ರಗತಿಶೀಲವಾಗಿಯೇ ಇರುವದು. ಹುಟ್ಟಿದವರೆಲ್ಲ ಬದುಕಬೇಕು. ಅವರಿಗೆ ಅನ್ನ ವಸ್ತ್ರ
ಸಂತತಿಯ ಸಂವರ್ಧನೆಗಾಗಿ ಹೆಣ್ಣುಗಂಡುಗಳಲ್ಲಿ ಆಕರ್ಷಣೆ ಬೇಕು. ಜಂಗುಳಿ ಹೋಗಿ
ಬ ರಚನೆಯಾಗಬೇಕಾದರೆ ಪದ್ಮಿಣಿಗಳ ಬೆಳೆವಣಿಗೆಯಾಗಬೇಕು.

ಪ್ರಗತಿಶೀಲ ಸಾಹಿತ್ಯ! ಪ್ರಗತಿಶೀಲ ಸಾಹಿತ್ಯ!! ಎಂದು ಕೂಗಾಡುವವರಾದರೂ ಏನು
ವರು ನೋಡುವಾ. ಶ್ರೀಮಂತರನ್ನು ಹೊಡೆದುಹಾಕಿರಿ, ವೈವಾಹಿಕ ಸಂಬಂಧವನ್ನು ಹರಿದು
ುರಿ. ಶ್ರಮಜೀವಿಗಳ ಸುಖವನ್ನು ಹೆಚ್ಚಿಸಿರಿ.

ಪ್ರಾಚೀನಕಾಲದಲ್ಲಿ ವರ್ಣವ್ಯವಸ್ಥೆ ಇದ್ದಾಗ ಬುದ್ಧಿವಂತರ ಸಂಖ್ಯೆಯು ಕಡಿಮೆಯಾಗಿತ್ತು.
ುದ ಜ್ಞಾನೋಪಾರ್ಜನೆಯು ಸರಿಯಾಗಿ ಸಾಗಿತು. ಬಲವಂತರಿಂದ ದೇಶದ ರಕ್ಷಣೆಯಾಗುತ್ತಿತ್ತು.
ಾರಿಗಳಿಂದ ಸಂಪತ್ತು ಬೆಳೆಯಿತು. ಶ್ರಮಜೀವಿಗಳಿಂದ ಎಲ್ಲರಿಗೂ ಸುಖವಾಯಿತು. ಈ ವ್ಯವ-
ಾ ತಿಕಾಲಾಬಾಧಿತವಾಗಿ ಉಳಿಯದೆ ಗೌತಮಬುದ್ಧನಿಂದ ಹೊಸತರದ ಸಮಾಜ ನಿರ್ಮಾಣ
ುತು. ಆಶ್ರಮವ್ಯವಸ್ಥೆಯು ಇಲ್ಲದ್ದರಿಂದ ನಿರುದ್ಯೋಗಿಗಳ ಸಂಖ್ಯೆ ಬೆಳೆದು ದುರ್ದೆಸೆ ವ್ಯಾಪ್ತ
ುತು. ಈ ನಂತರ ಜಾತಿಯುಕ್ತ ಸಮಾಜಪದ್ಧತಿಯು ಪ್ರಾರಂಭವಾಯಿತು. ಉದ್ಯೋಗದಿಂದ
ಗಳು ಬಳಕೆಯಲ್ಲಿ ಬಂದವು. ಇದರಿಂದ ಕಲಾಕೌಶಲ್ಯಗಳು ಬೆಳೆದವು, ಆದರೆ. ಮುಸಲ್ಮಾನ
ೃಧರ್ಮಗಳ ಸಂಪರ್ಕ-ಆಘಾತಗಳಿಂದ ಹಿಂದು ಧರ್ಮದ ಜಾತಿಯುಕ್ತ ಪದ್ಧತಿಯು ಸಡಿಲಾ
.. ಬೇಕಾದವರು ಬೇಕಾದ ಉದ್ಯೋಗ ಕೈಕೊಳ್ಳಬಹುದಾದ್ದರಿಂದ ಸಂಪತ್ತಿನ ಹಾಗು ಅನ್ನದ
ಣವು ಸರಿಯಾಗಿ ಸಾಗದಾಗಿದೆ. ವೈವಾಹಿಕ ಸಂಬಂಧವನ್ನೇ ಪ್ರಾಮುಖ್ಯವಾಗಿಟ್ಟುಕೊಳ್ಳದ
ು ನಮ್ಮಲ್ಲಿ ಸೂರಕ್ಕೆ ೫೦ ಕಿಂತ ಹೆಚ್ಚು ಜನರಿದ್ದಾರೆ. ಹೀಗಿದ್ದರೂ ಪ್ರಗತಿಶೀಲಸಾಹಿತ್ಯದ
ಿಬ್ಬಿಸುವವರು ಹೇಳುವಂತೆ ರಶಿಯಾದೇಶದ ಉದಾಹರಣೆಯು ನಮಗೆ ಸರಿಹೊಂದುವದಿಲ್ಲ.
ಿ ಸಂಪ್ರದಾಯ ಪ್ರಿಯರು ಜಾತಿಕಳೆದರೂ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದೇವೆ. ರಶಿಯಾ
ತನ್ನ ದೇಶವನ್ನು ತಾನೇ ಆಳುವ ಶಕ್ತಿಯಿದೆ. ಶ್ರೀಮಂತ, ಜಮೀನದಾರ, ಬಡರೈತ, ಕೂಲಿ-
ಹೀಗೆ ಎರಡೇ ಪುಗಡಗಳಿದ್ದವು. ಅವುಗಳಲ್ಲಿ ಸಾಮಾಂತ್ತಿಕ ಅಂತರವು ಬಹಳವಾಗಿತ್ತು.
ಲ್ಲಿ ವ್ಯಕ್ತಿಯ ಉನ್ನತಿಗೆ ಸಾಕಷ್ಟು ಅವಕಾಶವಿದೆ.

ಈಗ ಸಾಹಿತ್ಯದಲ್ಲಿ ಹಳ್ಳಿಗರ ಜೀವನಕ್ರಮ ಸುಧಾರಣೆಗಳನ್ನು ಚಿತ್ರಿಸಲು ಯಾರು ಬೇಡ
ುತ್ತಾರೆ? ಹಳ್ಳಿಗಳಲ್ಲಿ ದುಡ್ಡಿದ್ದ ಸಾವುಕಾರನು ಬಡವರನ್ನು ಹಿಚುಕುತ್ತಿದ್ದಾನೆ. ಬುದ್ಧಿಯು

ಮೂಲ ಶಿಕ್ಷಣ ಕೇಂದ್ರ, ಧಾರವಾಡ

ಕಾರ್ಯಕಲಾಪಗಳು

ನಮ್ಮ ಕೇಂದ್ರವು ಸ್ಥಾಪಿತವಾಗಿ ಐದಾರು ವರ್ಷಗಳಾದರೂ ಎರಡನೆಯ ವರ್ಷ ಒಂದೇ ವರ್ಗ ಮಾತ್ರ ಇತ್ತು. ಈ ವರ್ಷದಿಂದ ಒಂದನೆಯ ವರ್ಷದ ಒಂದು ವರ್ಗವನ್ನ ಜೋಡಿಸಲಾಗಿದೆ. ಈ ವರ್ಗಕ್ಕೆ ಪ್ರಾ. ಶಾ. ಪ್ರಮಾಣಪತ್ರ ಪರೀಕ್ಷೆ ಪಾಸಾದವರನ್ನು ಆರಿ ಕೊಳ್ಳಲಾಗಿದೆ. ಈ ಕೇಂದ್ರದ ಸಲುವಾಗಿಯೆ ಧಾರವಾಡದ ನಗರ ಸಭೆಯವರು ೧೯೩ ರಲ್ಲಿ ಒಂದು ಪ್ರಾಯೋಗಿಕ ಶಾಲೆಯನ್ನು ಗುಲಗಂಜಿಕೊಪ್ಪದಲ್ಲಿ ಹೊಸದಾಗಿ ತೆರೆದರ ಇಲ್ಲಿ ನೂಲುವ ಮೂಲ ಉದ್ಯೋಗವನ್ನು ಕಲಿಸಲಾಗುತ್ತಿದೆ. ಈ ವರ್ಷ ಮಾಳಾಪುರ ಶಾ ಯೊಂದು ಹೊಸದಾಗಿ ಸೇರಿದೆ. ಅಲ್ಲಿ ಒಕ್ಕಲತನದ ಮೂಲ ಉದ್ಯೋಗವನ್ನು ಹೊಸದಾ ಪ್ರಾರಂಭಿಸುವುದಿದೆ. ಈ ಕೇಂದ್ರದಲ್ಲಿ ಸದ್ಯಕ್ಕೆ ಎರಡನೆಯ ವರ್ಷದಲ್ಲಿ ೨೭, ಒಂದನೆಯ ವರ್ಷದಲ್ಲಿ ೩೯ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.

ಆಗಸ್ಟ ತಿಂಗಳಲ್ಲಿ ಶ್ರೀಮಾನ್ ಎಲ್. ಆರ್. ದೇಸಾಯಿ ಅವರು ಈ ಕೇಂದ್ರಕ್ಕೆ ಸಂದರ್ಶ ಇತ್ತಾಗ ವಿವಿಧ ವಿನೋದಾವಳಿಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವು ಪ್ರೇಕ್ಷಕರ ಮನಸ್ಸನ್ನು ಸೆಳೆದು ತುಂಬಾ ಯಶಸ್ವಿಯಾಯಿತು. ಮಾನ್ಯ ಅತಿಥಿಗಳು ವರ್ಧಾ ಶಿಕ್ಷಣ ಯೋಜನೆಯ ತತ್ವಗಳನ್ನು ಸರಳ ಹಿಂದೀ ಭಾಷೆಯಲ್ಲಿ ತಿಳಿಸಿ ಹೇಳಿದರು.

ವಿದ್ಯಾರ್ಥಿಗಳಲ್ಲಿ ನೈಸರ್ಗಿಕ ಸೌಂದರ್ಯವನ್ನು ಸವಿಯುವ ಶಕ್ತಿಯನ್ನು ಬೆಳೆಸ ಹತ್ತಿಕೊಳ್ಳ, ಕೆಲಗೇರಿ, ಸಾರಸ್ವತಪುರ ಮುಂತಾದ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಶಿಕ್ಷಕರ ಕರೆದುಕೊಂಡು ಹೋಗಿದ್ದರು. ವಿದ್ಯಾರ್ಥಿಗಳು ಪ್ರವಾಸದ ಆನಂದವನ್ನು ಅನುಭವಿಸಿದರ

ಕೇಂದ್ರದ ಅಭ್ಯಾಸಕ್ರಮದಲ್ಲಿ (೧) ತೋಟಗಾರಿಕೆ ಹಾಗೂ ಒಕ್ಕಲತನ; (೨) ನೂಲು ವದು ಹಾಗು ನೇಯುವದು; ಹೀಗೆ ಎರಡು ಭಾಗಗಳಿವೆ. ಇದು ವರೆಗೆ ತಾಂತ್ರಿಕವಾ ನಡೆಯುತ್ತಿದ್ದ ವ್ಯವಸಾಯಗಳು ಸಜೀವ ಕಲೆಗಳಾಗಿ ಪರಿಣಮಿಸಿ ವ್ಯಕ್ತಿಯಲ್ಲಿ ಹುದುಗಿ ಎಲ್ಲ ಶಕ್ತಿಗಳನ್ನು ವ್ಯಕ್ತಗೊಳಿಸುವಂತೆ ಮಾಡಿ ಕಾಯಕವೇ ಕೈಲಾಸವೆಂಬ ತತ್ತ್ವವನ್ನ ಕಾರ್ಯರಂಗಕ್ಕೆ ತಂದಿವೆ.

R. V. Desai

Principal, B. T. C. Dharwar

"ಸಮಯೋಚಿತ ಸಾದೃಶ್ಯಗಳ ಸುಲಲಿತ ಸಹಾಯ"

"Apt illustrations' Artful Aid."

ಶ್ರೀ. ಕೆ. ಬಿ. ತೇರಗಾಂವಕರ; ಬಿ. ಎಸ್. ಸಿ. ಬಿ. ಟಿ. ಬೇಸಿಕ್ ಸುಪರವಾಯಿಜರ.

ಶಾಲೆಯಲ್ಲಿ ಪಾಠಗಳನ್ನು ಹೇಳಿಕೊಡುವಾಗ ಸಾಮಾನ್ಯವಾಗಿ ಶೈಕ್ಷಣಿಕ ಉಪಕರಣಗಳನ್ನು ಉಪಯೋಗಿಸುವ ರೂಢಿಯುಂಟು. ಕೆಲವು ಉತ್ಸಾಹಿ ಶಿಕ್ಷಕರಲ್ಲಿ ಇವುಗಳನ್ನು ಉಪಯೋಗಿಸುವದರಲ್ಲಿ ಮಿತಿಯು ಕಂಡುಬರುವದಿಲ್ಲ. ಉಳಿದ ಕೆಲವರ ಶೈಕ್ಷಣಿಕ ಉಪಕರಣಗಳೆಂದರೆ ತಾವು ಉಪಯೋಗ ಮಾಡಬಹುದಾದ ಖಡು ಮತ್ತು ಕಪ್ಪುಹಲಿಗೆ ಮಾತ್ರ. ಕೆಲವರು ಯಾವ ತರದ ಶೈಕ್ಷಣಿಕ ಉಪಕರಣಗಳನ್ನೂ ತಯಾರಿಸುವ ಅಥವಾ ಉಪಯೋಗ ಮಾಡುವ ಗೊಡವೆಗೆ ಹೋಗುವದಿಲ್ಲ.

ಪಾಠಗಳನ್ನು ಹೆಚ್ಚು ಮನೋರಂಜಕವಾಗುವಂತೆ ಮತ್ತು ಬೋಧನಕ್ರಮವು ಹೆಚ್ಚು ಸ್ಪಷ್ಟ ಹಾಗು ಪರಿಣಾಮಕಾರಿಯಾಗುವಂತೆ ಮಾಡಲು ಉಪಕರಣಗಳು ಅವಶ್ಯವೆಂಬ ಮಾತು ನಿರ್ವಿವಾದವು. ಬಾಲಕರ ವಯೋಮರ್ಯಾದೆ, ಬುದ್ಧಿಮರ್ಯಾದೆಗನುಸರಿಸಿ ಉಪಯೋಗಿಸಬಹುದಾದ ಉಪಕರಣಗಳ ಪ್ರಕಾರ ಹಾಗು ಪ್ರಮಾಣಗಳಲ್ಲಿ ಬದಲಾವಣೆಯಾಗಬಲ್ಲದು. ಕೆಳಗಿನ ವರ್ಗದ ಬಾಲಕರಿಗೆ ಪೃಥ್ವಿಯ ಬಗ್ಗೆ ಹೇಳಿಕೊಡುವಾಗ ನಾವು ಗ್ಲೋಬನ್ನೂ ಉಪಯೋಗಿಸುತ್ತೇವೆ. ಆದರೆ ಮೇಲಿನ ವರ್ಗದಲ್ಲಿ ಆ ಬಗ್ಗೆ ನಕಾಶವನ್ನು ಉಪಯೋಗಿಸುವೆವು. ಇದಲ್ಲದೆ ವಾಕ್ಯವಿಭಜನೆಯಲ್ಲಿ ಕೆಳಗಿನ ವರ್ಗಕ್ಕೆ ಸ್ಥೂಲವಾನದಿಂದ ಕರ್ತೃ, ಕರ್ಮ, ಕ್ರಿಯಾಪದಗಳನ್ನು ವಿಂಗಡಿಸಿ ಹೇಳುವಾಗ ತರತರದ ಬಣ್ಣಗಳನ್ನು ಉಪಯೋಗಿಸುತ್ತೇವೆ. ಆದರೆ ಮೇಲಿನ ವರ್ಗಕ್ಕೆ ವಾಕ್ಯವಿಭಜನೆಯನ್ನು ಹೇಳಿಕೊಡುವಾಗ ಸಾದಾ ಬೆಳ್ಳಗಿನ ಖಡುವಿನಿಂದ ಕಪ್ಪು ಹಲಿಗೆಯ ಮೇಲೆ ತಿಳಿಸುತ್ತೇವೆ. ಇದರಂತೆ ಬಾಲಕರ ಬುದ್ಧಿಮರ್ಯಾದೆಗನುಸರಿಸಿ ಉಪಕರಣಗಳ ಸಂಖ್ಯೆಯನ್ನು ವಿಂತಿಗೊಳಿಸಬಹುದು. ಉದಾ:- ಕೆಳಗಿನ ವರ್ಗದ ಬಾಲಕರಿಗೆ ಚಿಮಣಿ ಎಣ್ಣೆಯ ಪಂಪಿನ ರಚನೆ ಮತ್ತು ಕಾರ್ಯವನ್ನು ಹೇಳಿಕೊಡುವಾಗ ಡಬ್ಬಿಯಿಂದ ಎಣ್ಣೆಯು ಪಂಪಿನಲ್ಲಿ ಪಟಲದ ಮುಖಾಂತರ ಹೇಗೆ ಸೇರಿಬರುತ್ತದೆಂಬುದನ್ನು ತೋರಿಸಲು ಒಂದು ಪಟ, ಮೇಲೆ ಆ ಪಂಪಿನಲ್ಲಿದ್ದ ಎಣ್ಣೆಯು ಬಾಟ್ಲಿಯಲ್ಲಿ ಹೇಗೆ ಬೀಳುವದೆಂಬದನ್ನು ತೋರಿಸುವ ಇನ್ನೊಂದು ಪಟ, ಹೀಗೆ ಎರಡು ಪಟಗಳನ್ನು ಉಪಯೋಗಿಸಬಹುದು; ಆದರೆ ಮೇಲಿನ ವರ್ಗಕ್ಕೆ ಇದೇ ಮಾತನ್ನೂ ಹೇಳಿಕೊಡಬೇಕಾದಾಗ ಚಿಮಣಿಎಣ್ಣೆಯ ಪಂಪಿನಲ್ಲಿಯ ಪಟಲ ಮತ್ತು ಬೆಣೆಗಳ ಅನ್ಯೋನ್ಯ ಸಂಬಂಧವನ್ನು ತೋರಿಸುವ ಒಂದೇ ಪಟವನ್ನು ಉಪಯೋಗಿಸಿ ಪಾಠವನ್ನು ಪರಿಣಾಮಕಾರಿಯಾಗಿ ಮಾಡಬಹುದು. ಉಪಕರಣಗಳನ್ನು ಆರಿಸುವದಕ್ಕಿಂತ ಮಹತ್ವದ ಮಾತೆಂದರೆ ಅವುಗಳನ್ನು ಯೋಗ್ಯಕಾಲಕ್ಕೆ ಸರಿಯಾದ ರೀತಿಯಿಂದ ತೋರಿಸುವದು ಮತ್ತು ಶೈಕ್ಷಣಿಕ ದೃಷ್ಟಿಯಿಂದ ಉಪಯೋಗಿಸುವದು. ಅನೇಕ ಸಾರೆ ನಾವು ಸರಿಯಾದ ಉಪಕರಣಗಳನ್ನು ಸಿದ್ದಗೊಳಿಸಿಕೊಂಡಾಗ್ಯೂ ಅವುಗಳನ್ನು ಸರಿಯಾದ ಸಂದರ್ಭದಲ್ಲಿ ಮತ್ತು ಯೋಗ್ಯವಾದ ಕ್ರಮದಲ್ಲಿ ಉಪಯೋಗಿಸದ್ದರಿಂದ ಪಾಠಗಳು ಪರಿಣಾಮಕಾರಿಯಾಗುವದರ ಬದಲು ನೀರಸ ಹಾಗೂ ಯಾಂತ್ರಿಕವಾಗಿ ಹೋಗುವವು.

ಉಪಕರಣಗಳು ಹೇಗೆ ಇರಬೇಕು? ಅವುಗಳನ್ನು ಹೇಗೆ ಉಪಯೋಗಿಸಬೇಕು? ಯಾವ ಸಂದರ್ಭದಲ್ಲಿ ಅವುಗಳನ್ನು ಉಪಯೋಗಿಸಬೇಕು? ಹೀಗೆ ಕೆಲವು ಪ್ರಶ್ನೆಗಳನ್ನು ಮುಂಚಿತವಾಗಿ ವಿಚಾರದಲ್ಲಿಟ್ಟುಕೊಂಡು ಪಾಠ ಸಾಗಿಸಬೇಕಾಗುವದು. ಉದಾಹರಣೆಗಾಗಿ ೬ನೆಯ ಮತ್ತೆಗೆ ಪಾಣಿಪತ್ತಿನ ಮೂರನೆಯ ಕಾಳಗದ ಬಗ್ಗೆ ಪಾಠ ಕೊಡುವದಿದೆ ಎಂದು ಕಲ್ಪಿಸುವಾ.

ಕಾಳಗದಲ್ಲಿ ಎರಡೂ ಕಡೆಯವರ ದಂಡುಗಳು ಬೀಡು ಬಿಟ್ಟದ್ದನ್ನು ಕಾಲ್ಬಲ, ಅಶ್ವಬಲ ತೋಪು, ಕಾದಿಟ್ಟ ಸೈನ್ಯ ಮುಂತಾದವುಗಳನ್ನು ತೋರಿಸುವ ನಕ್ಷೆಯನ್ನಾಗಲಿ ಇಲ್ಲವೆ ಚಿತ್ರವನ್ನಾಗಲಿ ಶಿಕ್ಷಕರು ದೊರಕಿಸಿರುವರೆಂದು ತಿಳಿಯೋಣ. ಹಾಗಾದರೆ ಈ ಚಿತ್ರ ಇಲ್ಲವೆ ನಕ್ಷೆಯನ್ನು ಯಾವ ಸಂದರ್ಭದಲ್ಲಿ ಉಪಯೋಗಿಸಬೇಕು? ಪೂರ್ವ ಪೀಠಿಕೆಯಲ್ಲಿ ಚಿತ್ರವನ್ನು ತೋರಿಸಿ ಪಾಠಸಾಗಿಸಬೇಕೇ? ಇಲ್ಲವೆ ಶಿಕ್ಷಕನು ಕಾಳಗದ ವರ್ಣನೆಯನ್ನು ನಿರೂಪಿಸುವಾಗ ಉಪಯೋಗಿಸಬಹುದೋ? ಅಥವಾ ಪಾಠ ಮುಗಿದನಂತರ ಉಪಸಂಹಾರದ ಮೆಟ್ಟಿನಲ್ಲಿ ಉಪಯೋಗಿಸಬಹುದೋ? ಯಾವ ಪ್ರಸಂಗದಲ್ಲಿ ಉಪಯೋಗಿಸಿದರೆ ತಕ್ಕ ಪರಿಣಾಮವಾಗುವದು? ಪ್ರಸಂಗವು ಸ್ವಾಭಾವಿಕವಾಗಿ ಬರುವಂತಿದ್ದರೆ ಅವನ್ನು ಉಪಯೋಗಿಸಬೇಕೋ? ಇಲ್ಲವೆ ತಮ್ಮ ಹತ್ತಿರ ಸುಂದರವಾದ ಚಿತ್ರವಿದೆ, ಬಾಲಕರು ಅದನ್ನು ನೋಡಿ ಆನಂದಪಡಲೆಂದು ಪ್ರಸಂಗವನ್ನು ಬುದ್ಧಿಪೂರ್ವಕವಾಗಿ ತಂದುಕೊಳ್ಳಬೇಕೋ? ಮುಂತಾದ ಪ್ರಶ್ನೆಗಳನ್ನು ನಾವು ಮುಂಚಿತವಾಗಿ ನಿರ್ಧರಿಸಬೇಕು. ಅನೇಕ ಸಾರೆ ಸಾಕಷ್ಟು ಉಪಕರಣ ನಕ್ಷೆ ಮುಂತಾದವುಗಳನ್ನು ಸಂಗ್ರಹಿಸಿಕೊಂಡಾಗ್ಯೂ ಯಾವ ಪ್ರಸಂಗದಲ್ಲಿ ಉಪಯೋಗಿಸಬೇಕೆನ್ನುವದರ ಬಗ್ಗೆ ಪೂರ್ವ ಆಲೋಚನೆ ಇಲ್ಲದಿರುವದಕ್ಕಾಗಿ ಉಪಯೋಗಿಸುವ ಕ್ರಮದಲ್ಲಿ ತಪ್ಪು ತಡೆಗಳುಂಟಾಗುತ್ತವೆ. ಇಲ್ಲವೆ ಉಪಕರಣಗಳು ಉಪಯೋಗಿಸಲ್ಪಡದೆ ಹಾಗೇ ಉಳಿಯುವ ಸಂಭವವಿರುತ್ತದೆ. ಸರಿಯಾದ ಉಪಕರಣಗಳನ್ನು ಆರಿಸಿಕೊಳ್ಳುವ ಸಂಗತಿಯು ಸರಿಯಾದ ಸಂದರ್ಭದಲ್ಲಿ ಉಪಯೋಗಿಸುವ ಜಾಣ್ಮೆಯಷ್ಟೇ ಮಹತ್ವದ್ದಿರುವದು.

ಉಪಕರಣಗಳನ್ನು ಹೇಗೆ ಉಪಯೋಗಿಸಬೇಕೆನ್ನುವದೂ ಕೂಡ ಮಹತ್ವದ್ದಿರುವದೆಂಬುದನ್ನು ಬೇರೆ ಹೇಳಬೇಕಿಲ್ಲ. ಶಿಕ್ಷಕನು ಚಿತ್ರವನ್ನು ತಾನು ಬಾಲಕರಿದ್ದಡೆಗೆ ಹೋಗಿ ತೋರಿಸಬೇಕೋ, ಅವರನ್ನು ತಾನಿದ್ದೆಡೆಗೆ ಕರೆದುತೋರಿಸಬೇಕೋ, ಇಲ್ಲವೆ ಉಪಕರಣವನ್ನು ಒಂದು ಕಡೆಗೆ ಇಟ್ಟು ಬಾಲಕರಿಗೆ ಅಲ್ಲಿಗೆ ಹೋಗಿ ನೋಡಲು ಹೇಳಬೇಕೋ ಎನ್ನುವ ಮಾತುಗಳು ಉಪಕರಣಗಳ ಗಾತ್ರ ಮತ್ತು ಪಾಠದಲ್ಲಿ ಅವುಗಳ ಸ್ಥಾನವನ್ನು ಅವಲಂಬಿಸಿರುವವು ಉದಾ:—ಕಾಂಡಗಳ ಬೆಳವಣಿಗೆ, ಬೇರುಗಳ ಕಾರ್ಯ ಇಲ್ಲವೆ ಪಾರಿವಾಳ, ನಾಯಿ ಮುಂತಾದವುಗಳ ನಿರೀಕ್ಷಣೆ ಇವುಗಳ ಬಗ್ಗೆ ಪಾಠ ನಡೆದಾಗ ಉಪಯೋಗಿಸಲ್ಪಡುವ ಉಪಕರಣಗಳನ್ನು ಯಾವವು ಹಾಗೂ ಅವುಗಳನ್ನು ಹೇಗೆ ಉಪಯೋಗಿಸಬೇಕು? ಸಾಮಾನ್ಯವಾಗಿ ಪ್ರತ್ಯಕ್ಷ ವಸ್ತುಗಳಿಂದ ಹೆಚ್ಚು ಪರಿಣಾಮಕಾರಿಯಾದ ಸಂವೇದನೆ ಮತ್ತು ಜ್ಞಾನಗ್ರಹಣವಾಗುವದೆಂದು ಎಲ್ಲರೂ ನಂಬುವರು. ಪ್ರತ್ಯಕ್ಷ ವಸ್ತುವೆಂದರೆ ನಾವು ವರ್ಗದಲ್ಲಿ ಬೇರೆ ಬೇರೆ ಪ್ರಕಾರದ ಕಾಂಡಗಳನ್ನೂ ಬೇರುಗಳನ್ನೂ ತಂದು ಬಾಲಕರಿಗೆ ನಿರೀಕ್ಷಿಸಲು ಹಚ್ಚುವದಕ್ಕಿಂತ ಅವುಗಳನ್ನು ಅವುಗಳ ಸ್ವಾಭಾವಿಕ ಸ್ಥಿತಿಯಲ್ಲಿ, ಸ್ವಾಭಾವಿಕ ಪರಿಸ್ಥಿತಿಯಲ್ಲಿ ನಿರೀಕ್ಷಿಸಲು ಬಾಲಕರಿಗೆ ಹೇಳಿದರೆ ಪಾಠಗಳು ಹೆಚ್ಚು ಪರಿಣಾಮಕಾರಿ ಮತ್ತು ಮನೋರಂಜಕವಾಗುವದಿಲ್ಲವೇ? ಪಾರಿವಾಳ, ಬಾತುಗೋಳಿ ಮುಂತಾದವುಗಳ ಬಗ್ಗೆ ಜ್ಞಾನಮಾಡಿಕೊಡುವಾಗ ಸಂಗ್ರಹಿಸಿಟ್ಟ ಅವುಗಳ ಮಾದರಿ (ಮಾಡೆಲ್) ಗಳನ್ನು ವರ್ಗದಲ್ಲಿ ತೋರಿಸುವದಾಗಲಿ ಇಲ್ಲವೆ ಪ್ರತ್ಯಕ್ಷ ಸಜೀವ ಪಾರಿವಾಳ ಮತ್ತು ಬಾತುಗೋಳಿಯನ್ನು ವರ್ಗದಲ್ಲಿ ತಂದಿಟ್ಟುಕೊಂಡು ಅದರ ಬಗ್ಗೆ ಬಾಲಕರಿಗೆ ನಿರೀಕ್ಷಿಸಲು ಹಚ್ಚುವದಕ್ಕಿಂತ ಬಾಲಕರನ್ನು ಅವುಗಳು ಇರುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವುಗಳನ್ನು ಅವುಗಳ ಸ್ವಾಭಾವಿಕ ಸ್ಥಿತಿ ಮತ್ತು ಸನ್ನಿವೇಶದಲ್ಲಿ ಕಾಣುವದು ಹೆಚ್ಚು ಸಮಂಜಸವಾಗುವದೆಂಬುದರಲ್ಲಿ ಸಂದೇಹವಿಲ್ಲ.

ಚಿತ್ರ, ನಕ್ಷೆ, ಮಾದರಿ ಮುಂತಾದವುಗಳನ್ನು ತೋರಿಸಬೇಕಾದಾಗ ಕೆಳಗಿನ ಸೂಚನೆಗಳನ್ನು ಗಮನಿಸಬೇಕು.

ಚಿತ್ರ, ನಕ್ಷೆ ಉಪಕರಣಗಳು ಸಾಕಷ್ಟು ದೊಡ್ಡವೂ ಮನಸ್ಸನ್ನು ವಿಶೇಷ ಪರಿಶ್ರಮವಿಲ್ಲದೆ ಆಕರ್ಷಿಸುವಂಥವೂ, ಸೌಮ್ಯ ಬಣ್ಣದಿಂದ ಚಿತ್ರಿತವಾದವೂ, ಇಚ್ಛಿತ ವಿಷಯಗಳನ್ನು ಪರಿಣಾಮಕಾರಿಯಾಗಿ ಸ್ಪಷ್ಟೀಕರಿಸುವಂಥವೂ ಸುಸ್ಪಷ್ಟವೂ ಬೋಧಪ್ರದವೂ ಆಗಿರಬೇಕು.

ಅನಾವಶ್ಯಕ ವಿವರಣೆಗಳು ಮುಖ್ಯ ವಿಷಯದ ಕಡೆಗೆ ಭರದಿಂದ ಸಾಗಿಹೋಗುವ ಲಕ್ಷ್ಯವನ್ನು ತಮ್ಮ ಕಡೆಗೆ ಸೆಳೆಯುವಂತಿರಬಾರದು.

ಅಯೋಗ್ಯ ವರ್ಣಸಂಯೋಜನೆ, ಅವ್ಯವಸ್ಥಿತ ಜೋಡಣೆ, ಅಸಂಬದ್ಧತೆ ಮುಂತಾದ ಪಾಠದ ಮುಖ್ಯ ಉದ್ದೇಶವನ್ನು ವಿಫಲಗೊಳಿಸುವಂತಹ ದೋಷಗಳಿರಕೂಡದು.

ಪಾಠವು ಚಿತ್ರ, ಉಪಕರಣಗಳ ಕೇವಲ ತಾಂತ್ರಿಕ ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ಪಾಠವೆಂದರೆ ಉಪಕರಣಗಳ ಹೊರೆಯೆಂಬ ಸಾಮಾನ್ಯ ತಪ್ಪನ್ನು ಎಲ್ಲ ಹೊಸ ಶಿಕ್ಷಕರು ಮಾಡುತ್ತಾರೆ. ಬಹಳ ಉಪಕರಣಗಳನ್ನು ಸಂಗ್ರಹಿಸಿದರೆ ಪಾಠವು ಬಹಳ ಪರಿಣಾಮಕಾರಿಯಾಗುವದೆಂದು ಎಂದೂ ಭಾವಿಸಕೂಡದು ನಿರ್ದಿಷ್ಟವಾದ ಪರಿಣಾಮ ಫಲಗಳನ್ನು ಕೊಡುವಂತೆ ಯೋಗ್ಯ ಸಮಯ ಸನ್ನಿವೇಶಗಳಿಗೆ ಸಮರ್ಪಕವಾಗುವಂತಹ ಉಪಕರಣಗಳೇ ಸರಿಯಾದ ಸಾಧನಗಳು.

ನಿದರ್ಶನಗಳನ್ನು ಉಪಯೋಗಿಸುವದರಲ್ಲಿ ತಮ್ಮ ಕೌಶಲ್ಯದ ಪರೀಕ್ಷೆಗಾಗಿ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳಬಹುದು. ಇಂಥ ಸ್ವಯಂ ವಿಮರ್ಶೆಯ ಲಾಭವು ಎಲ್ಲರಿಗೂ ಅವಶ್ಯವಾದುದು.

(೧) ನಾನು ಉಪಯೋಗಿಸಿದ ನಿದರ್ಶನಗಳು ಸ್ಪಷ್ಟವಾಗಿವೆಯೆ ? ಅವಶ್ಯಕವಾಗಿವೆಯೇ ? ಸಾಕಷ್ಟಿವೆಯೆ? ಮತ್ತು ಅವು ನಿಜವಾಗಿಯೂ ಪ್ರಸ್ತುತ ವಿಷಯದ ಮೇಲೆ ಬೆಳಕನ್ನು ಬೀರುತ್ತವೆಯೇ?

(೨) ಶಾಬ್ದಿಕ ನಿದರ್ಶನಗಳನ್ನು ಮತ್ತು ಬಳಕೆಯ ಉದಾಹರಣೆಗಳನ್ನು ಯೋಗ್ಯ ಸಮಯದಲ್ಲಿ ಕೊಡುವ ಜಾಣ್ಮೆಯು ನನ್ನಲ್ಲಿ ಇದೆಯೇ ?

(೩) ನಿದರ್ಶನಗಳು ಮಕ್ಕಳನ್ನು ದಂಗುಗೊಳಿಸುವಂಥವಿರುವವೋ ? ಅಥವಾ ನಿಜವಾಗಿಯೂ ಬೋಧಪ್ರದವಾಗಿರುವವೋ ?

(೪) ನಿದರ್ಶನಗಳು ಪಾಠದ ಮುಖ್ಯ ಪ್ರತಿಪಾದಿತ ವಿಷಯಕ್ಕೆ ತಡೆಯಾಗುವಂಥವಿರುವವೋ ? ಪಾಠವು ಅಸಂಬದ್ಧ ನಿದರ್ಶನಗಳ ಪ್ರದರ್ಶನವಾದಂತಾಗುವವೊ ? ಅಥವಾ ಪ್ರತಿಪಾದಿತ ವಿಷಯವು ಮಕ್ಕಳ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡುವದೋ ?

ತಪ್ಪು ಯಾರದು ?

ಮಹಾತ್ಮಾ ಗಾಂಧೀಜಿಯವರ ಹೆಸರನ್ನು ನಾವೆಲ್ಲರೂ ಕೇಳಿದ್ದೇವೆ. ದೊಡ್ಡ ದೊಡ್ಡ ಊರುಗಳ ಜನರು ಅವರನ್ನು ನೋಡಿಯೂ ಇದ್ದಾರೆ. ಆ ಮಹಾಪುರುಷನ ಯದ ಒಂದು ಮಾತನ್ನು ಇಲ್ಲಿ ಹೇಳುವೆವು.

ಇಲ್ಲಿಂದ ಉತ್ತರಕ್ಕೆ ದೂರದಲ್ಲಿ ಚಂಪಾರಣ್ಯವೆಂಬ ಒಂದು ಜಿಲ್ಲೆಯು ಇರುವದು. ಎರು ೨೫ ವರುಷಗಳ ಹಿಂದೆ ಅಲ್ಲಿಯ ಜನರಿಗೆ ಅತಿಶಯ ಕಷ್ಟವೊದಗಿತ್ತು. ಬಂಡಹಾಕಿದ ಶ್ರೀಮಂತರಿಂದ ಬಡವರಾದ ಕೂಲಿಕಾರರಿಗೆ ಅನ್ಯಾಯವಾಗಿ ಅವರ ನವು ಬಲು ಕಷ್ಟಕ್ಕೊಳಗಾಗಿತ್ತು. ಜನರ ಕಷ್ಟವನ್ನು ಕೇಳಿದೊಡನೆ ಮಹಾತ್ಮಾ ಕರುಳು ಕರಗುವದು. ಚಂಪಾರಣ್ಯದ ಜನರ ದುಃಖದ ಸ್ಥಿತಿಯನ್ನು ಕೇಳಿ ಮಹಾತ್ಮೆಯು ಏನಾದರೂ ಮಾಡಿ ಅವರನ್ನು ಉಳಿಸಿಕೊಳ್ಳಬೇಕೆಂದು ಚಂಪಾರಣ್ಯಕ್ಕೆ ಟನು.

ಎಲ್ಲಿ ಮಹಾತ್ಮಾಜಿಯೋ ಅಲ್ಲಿ ಜನಸಂದಣಿ ತಪ್ಪಿದ್ದಲ್ಲ. ಅನೇಕ ದೊಡ್ಡ ದೊಡ್ಡ ಅತನನ್ನು ಹಿಂಬಾಲಿಸಿದರು. ನೆರೆಹೊರೆಯ ಎಷ್ಟೋ ಜನರು ಅತನನ್ನು ನೋಡು ರೆಂದೇ ಚಂಪಾರಣ್ಯಕ್ಕೆ ಹೊರಟರು. ಮಹಾತ್ಮಾಜಿಯು ಕುಳಿತು ಪ್ರವಾಸ ಮಾಡು ಗಾಡಿಯಲ್ಲುಂತೂ ಜನರಿಗೆ ನಿಲ್ಲುವದಕ್ಕೂ ಸ್ಥಳವಿರಲಿಲ್ಲ.

ಮಹಾತ್ಮಾಜಿಯು ನಮ್ಮದೇಶದ ಬಡತನದ ನಿವಾರಣೆಗೆ ಹಗಲಿರುಳೂ ಚಿಂತಿಸು. ಜನತೆಯು ಬಡತನವನ್ನು ಕಳೆಯುವದು ಮುಂಬಾಳುಗಳ ಮೊದಲ ಕೆಲಸ'

ಎಂದು ಆತನ ಭಾವನೆ. ಹಾಗೆ ಜನರ ಜೀವನದ ಮಟ್ಟವನ್ನು ಸುಧಾರಿಸುವ ವರೆ
ತಾನು ಬಡವರಿಗಿಂತಲೂ ಬಡವನಾಗಿ ಬಾಳುವೆನೆಂದು ಆತನು ಆಣೆಮಾಡಿ ನಡ
ತ್ತಿದ್ದಾನೆ. ಆದುದರಿಂದ ಉಗಿಬಂಡಿಯಲ್ಲಿ ಪ್ರವಾಸ ಮಾಡುವಾಗ ಯಾವಾಗಲೂ
ಜನರು ಕೂಡ್ರುವ ಮೂರನೆಯ ತರಗತಿಯ ಡಬ್ಬಿಯಲ್ಲಿಯೇ ಪ್ರವಾಸ ಮಾಡುವನು.

ಮಹಾತ್ಮಾಜಿಯು ಪ್ರವಾಸ ಮಾಡುತ್ತಿದ್ದ ಉಗಿಬಂಡಿಯು ಒಂದು ಚಿಕ್ಕ ಸ್ಟೇ
ನ್ನಿಗೆ ಬಂದು ನಿಂತಿತು. ಜನರು ತಂಡ ತಂಡವಾಗಿ ಬಂಡಿಯಲ್ಲಿ ನುಗ್ಗಿದರು. ಹಳ್ಳಿ
ರೈತನೊಬ್ಬನು ಬಂಡಿಯ ಆ ತುದಿಯಿಂದ ಈ ತುದಿಯ ವರೆಗೂ ಓಡಾಡಿದ
ಎಲ್ಲಿಯೂ ಸ್ಥಳವಿರಲಿಲ್ಲ. ಒಂದು ಚಿಕ್ಕ ಡಬ್ಬಿಯಲ್ಲಿಸೂತ್ರ ಜನ–ದಟ್ಟಣೆ ತುಸು ಕಡಿ
ಯಾಗಿತ್ತು. ರೈತನು ಅವಸರದಿಂದ ಬಾಗಿಲ ತೆರೆದು ಡಬ್ಬಿಯೊಳಗೆ ನುಗ್ಗಿದನು.
ಒಬ್ಬ ಸಾದಾ ಉಡುಗೆ ತೊಡುಗೆಯವನು ಕಾಲು ಚಾಚಿ ಕುಳಿತಿರುವದನ್ನು ಕಂ
" ಏನಯ್ಯಾ ಬಂಡಿಯಲ್ಲಿ ನಿಲ್ಲುವದಕ್ಕೂ ಸ್ಥಳವಿಲ್ಲದಿರುವಾಗ ಹೀಗೆ ಕಾಲು ಚಾ
ಕುಳಿತಿರುವದೇ ? ಸರಿಯಾಗಿ ಕೂಡ್ರು " ಎಂದು ನಿಷ್ಠುರವಾಗಿ ನುಡಿದನು. " ಹೌದು
ಇಬ್ಬರು ಕೂಡ್ರುವ ಸ್ಥಳದಲ್ಲಿ ನಾನೊಬ್ಬನೇ ಕೂಳಿತದ್ದು ತಪ್ಪಾಯಿತು. ಬಾ, ಕುಳ್ಳ
ಮೈಯ್ಯಲ್ಲಿ ತುಸು ಚೆನ್ನಾಗಿಲ್ಲ " ಎಂದು ನುಡಿದು ಮುದುಡಿಕೊಂಡು ಕುಳಿತು ಆತ
ಸ್ಥಳ ಕೊಟ್ಟನು. ರೈತನು ಹೆಗಲಮೇಲಿನ ಕಂಬಳಿಯನ್ನು ಬಾಕಿನ ಮೇಲೆ ಒಗೆ
ತದರ ಮೇಲೆ ಕುಳಿತನು. ಅಲ್ಲಿ ಕುಳಿತ ಎಲ್ಲರೂ ಒಬ್ಬರ ಮೋರೆಯನ್ನೊಬ್ಬರು ನೋ
ಮಿಕಿ ನೋಡಹತ್ತಿದ್ದರು. ಮಹಾತ್ಮಾಜಿಯ ಮುಖ ಮುದ್ರೆಯನ್ನು ನೋಡಿ ಯಾ
ಅವನೊಡನೆ ಮಾತಾಡಲಿಲ್ಲ.

ಉಗಿಬಂಡಿಯು ಸ್ಟೇಶನ್ ಬಿಟ್ಟ ಸಾಗಿತು. ರೈತನು ಅದರ ತಾಳಕ್ಕೆ ಸರಿಯ
ಹಾಡ ತೊಡಗಿದನು. ಅವನು ಮಹಾತ್ಮಾಜಿಯನ್ನು ನೋಡಲು ಹೊರಟಿದ್ದನು

" ಗಾಂಧಿ ಮಹಾತ್ಮನ ವಂದಿಸಿರೆಲ್ಲರು । ಹೊಂದಿರಿ ಸುಖ ಸಂಪತ್ತುಗಳ ॥ ೧
ಬಡವರ ತಾತನು ಬಡವರ ತಂದೆಯು । ಬಡಜನರತಿ ಹಿತ ಚಿಂತಕನು. " ॥ ೨

ಗಾಡಿಯು ಮುಂದಿನ ಸ್ಟೇಶನ್ನಿನಲ್ಲಿ ನಿಂತಿತು. ನೆರೆದ ಜನರೆಲ್ಲರೂ ಮಹಾ
ಗಾಂಧಿಯವರಿಗೆ ಜಯವಾಗಲಿ ! ಎಂದು ಜಯಘೋಷ ಮಾಡಿದರು. ರೈತನೂ ಕಿ
ಲ್ಲಿಂದಲೇ ದೊಡ್ಡ ಧ್ವನಿಯಿಂದ ಮಹಾತ್ಮಾ ಗಾಂಧಿಯವರಿಗೆ ಜಯವಾಗಲಿ ! ಎ
ಗಂಟಲು ಒಡೆಯುವ ಹಾಗೆ ಕೂಗಿದನು. ದೊಡ್ಡ ದೊಡ್ಡ ಜನರು ಆ ಡಬ್ಬಿಯ ಮು
ನೆರೆದರು. ಅವರ ಮಾತು ಕತೆಗಳಿಂದ ರೈತನಿಗೆ ತಾನು ನಿಷ್ಠುರವಾಗಿ ನುಡಿದು ಸ
ಕುಳಿಸಿದ ವ್ಯಕ್ತಿಯೇ ಮಹಾತ್ಮಾಜಿಯೆಂಬುದು ತಿಳಿಯಿತು. ಆಗ ಅವನು ಮಹಾತ್
ಜಿಯ ಕಾಲ ಮೇಲೆ ಬಿದ್ದು ತನ್ನ ತಪ್ಪನ್ನು ಕ್ಷಮಿಸಬೇಕೆಂದು ಪರಿ ಪರಿಯಿಂದ ಬೇ
ಕೊಂಡನು. "ಅಣ್ಣಾ ನಿನ್ನದೇನು ತಪ್ಪು? ನಮ್ಮದೇಶವೇ ಇಂಥ ತಪ್ಪು ಅಡಿಗಡಿಗೆ ಮಾ
ತ್ತಿದೆ. ಬಡಜನರ ಪ್ರವಾಸಕ್ಕೆ ಸಾಕಷ್ಟು ಅನು–ಕೂಲತೆ ಮಾಡಿ ಕೊಡದೆ ಹ
ಕೋಟಿ ಹಣಗಳಿಸುವ ಕಂಪನಿಯವರ ತಪ್ಪಲ್ಲವೇ? ಅದಕ್ಕೆ ಅವಕಾಶ ಕೊಡು
ಜನರ ತಪ್ಪಲ್ಲವೇ? ಅದನ್ನು ಕಂಡೂ ಕಾಣದಂತಿರುವದು ಅಧಿಕಾರಿಗಳ ತಪ್ಪಲ್ಲವೆ
ಎನ್ನುತ್ತ ಮಹಾತ್ಮಾಜಿಯು ಬಂಡಿಯಿಂದ ಕೆಳಗಿಳಿದನು.

ಆ ಹಳ್ಳಿಯ ರೈತನು ಮಾಡಿದಂಥ ತಪ್ಪುಗಳನ್ನು ನಾವೂ ಹಲವು ಸಾರಿ ಮಾ
ರುವೆವಲ್ಲವೇ ? ಹಿಡಿ ಅಕ್ಕಿಯನ್ನೋ ಜೋಳವನ್ನೋ ಬೇಡಲು ಬಂದ ಬಡವ ದಾಸ
ನನ್ನು ಬೈದು ಕಳಿಸುತ್ತೇವೆ. ಗುಡಿಯಲ್ಲಿ ಕುಳಿತು ಉಣ್ಣುವ ದೇವರ ಮುಂದೆ ಕೈ
ಹೋಳಿಗೆಗಳ ಎಡೆ ಮಾಡುತ್ತೇವೆ.

ದಿವಸ ಕ. ಗ. ಮ. ಶಾಲೆಗೆ ಬಿಟ್ಟಿಕೊಟ್ಟು ಳಿ. ವಾಟಿ ಲ ಪುಸ್ತಕಗಳನ್ನು ಜಾಣರಾದ ಬಡ ಮಕ್ಕಳ, ಉರ್ದು, ನಾರಾಯಣಪುರ ಶಾಲೆಗಳಲ್ಲಿಯೂ ಪಾಟಿ ಪುಸ್ತಕಗಳನ್ನು ಕೊಟ್ಟರು.

—ಶ್ರೀ. ಲ. ವಿ. ಘಾಟಕ ಹೆಡ್ ಮಾಸ್ತರರು

ದೇವಲಾಲಪುರ (ಬೈಲಹೊಂಗಲ ತಾಲೂಕ)—ಗ್ರಾಮಪಂಚಾಯತ ಸರಪಂಚರಾದ ಶ್ರೀ. ದೇಶನೂರ ಸಿದ್ಧರಾಮಪ್ಪನವರು ಶಾಲೆಗೆ ಭೆಟ್ಟಿಕೊಟ್ಟು ಬಡ ಹುಡುಗರಿಗಾಗಿ ೧೮ ರೂಪಾಯಿಗಳ ಪಾಟಿ ಪುಸ್ತಕ ಮೊದಲಾದವುಗಳನ್ನು ಕೊಟ್ಟರು. ಇದು ಅವರಿಗೆ ಭೂಷಣವು

—ಶ್ರೀ. ಕೆ. ಜಿ. ಕುಲಕರ್ಣಿ ಹೆಡ್‌ಮಾಸ್ತರರು.

ಗೋಕಾಕ— ಕನ್ನಡ ಗಂಡುಮಕ್ಕಳ ಮೂರನೆಯ ನಂಬರ ಶಾಲೆಯಲ್ಲಿ ಅ. ಡೆ. ಎ. ಇ. ಅವರಾದ ಶ್ರೀ. ಗೊಳಸಂಗಿ ಅವರ ಪ್ರೇರಣೆಯಿಂದ ಆಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀ. ಜಗತಾಪ ಸಾಹೇಬರ ಹಿರಿಯತನದಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವು ೨೩-೭-೪೫ನೆಯ ದಿವಸ ವಿಜೃಂಭಣೆಯಿಂದ ಜರುಗಿತು. ಅನೇಕ ಶೈಕ್ಷಣಿಕ ಚಟುವಟಿಕೆಗಳು ನಡೆದುವು. ಸಮ್ಮೇಲನದ ವೆಚ್ಚಕ್ಕಾಗಿ ಇಲ್ಲಿಯ ಕೆಳಗಿನ ನೇಟಿಯ ಕೆಲವು ಶಿಕ್ಷಣಪ್ರೇಮಿಗಳು ಉದಾರ ಮನಸ್ಸಿನಿಂದ ೫೭ ರೂಪಾಯಿಗಳನ್ನು ದಯಪಾಲಿಸಿದ್ದರು.

—ಶ್ರೀ. ಬಿ. ಎಸ್. ಗಣಾಚಾರಿ ಹೆಡ್‌ಮಾಸ್ತರರು.

ಧಾರವಾಡ—ಮ್ಯು. ಸ್ಕೂ. ಬೋರ್ಡಿನ ವತಿಯಿಂದ ಳನೆಯ ವಾರ್ಡಿನ ಜನರ ಸಭೆಯು ಯಲ್ಲಾಪುರದಲ್ಲಿ ೩೦-೭-೪೫ ನೆಯ ದಿವಸ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ. ಹರ್ತಿ ಸಾಹೇಬರ ಹಿರಿಯತನದಲ್ಲಿ ಆಯಿತು. ಒತ್ತಾಯದ ಶಿಕ್ಷಣದಿಂದಾಗುವ ಲಾಭಗಳನ್ನು ತಿಳಿಸಿ ಹೇಳಲಾಯಿತು.

—ಕ. ಬಿ. ಮುಮ್ಮಿಗಟ್ಟಿ ಹೆ. ನೂ. ಶಾ. ನಂ. ಶಾಲೆ.

ಖನಗಾವಿ—(ಗೋಕಾಕ ತಾಲೂಕ)ಊರಲ್ಲಿ ೭-೮-೪೫ ನೆಯ ದಿವಸ ಅ. ಡೆ. ಎ. ಇ. ಅವರಾದ ಶ್ರೀ. ಅಂಗಡಿ ಅವರ ಹಿರಿಯತನದಲ್ಲಿ ಊರ ಜನರ ಸಭೆ ನೆರೆದು ಶಿಕ್ಷಣದ ಕುಂದು ಕೊರತೆಗಳ ವಿಚಾರ ನಡೆದು ಶಾಲೆಗಾಗಿ ಹೊಸ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆಂದು ಊರಹಿರಿಯರು ಒಪ್ಪಿಕೊಂಡರು.

—ಶ್ರೀ. ಯರಗುರವಿ ಹಲಕಪ್ಪನವರು ಸ್ಕೂಲಪಂಚರು.

ಧಾರವಾಡ—ಮ್ಯುನಸಿಪಲ್ ಶಿ. ಶಿ. ಯರು ೨೮-೭-೪೫ ನೆಯ ದಿವಸ ಕೂಡಿ ಹಿಂದಿನ ಏ. ಓ. ಸಾಹೇಬರಾದ ಹಾರನಹಳ್ಳಿ ಅನಂತರಾಯರ ಅಕಾಲಿಕ ನಿಧನದ ಬಗ್ಗೆ ದುಃಖವನ್ನು ವ್ಯಕ್ತಮಾಡಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

—ಶ್ರೀ ನಾ. ಲ. ಧಾರವಾಡಕರ, ಕಾರ್ಯದರ್ಶಿಗಳು.

ವಾಚನಪಾಠಮಾಲೆ ಮತ್ತು ಕವಿತಾಪಾಠಮಾಲೆ

ಪಂಡಿತ ಪ್ರೊಚಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿ ಪ್ರಕಟಿಸಿದ ಕನ್ನಡ ಗಂಡು ಮತ್ತು ಹೆಣ್ಣು ಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಉಮೇದುವಾರರಿಗೂ ಏಳನೆಯ ಇಯತ್ತೆಯ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿದ್ದು ಬಹುದಿನಗಳಿಂದಲೂ ಪಾಠ ಪುಸ್ತಕದಂತೆ ಉಪಯೋಗಿಸಲ್ಪಡುತ್ತ ಬಂದಿರುವ ಈ ಪುಸ್ತಕದ ಹೊಸ ಮುದ್ರಣದ ಪ್ರತಿಗಳು ಮಾರಲಿಕ್ಕೆ ಸಿದ್ಧವಾಗಿವೆ. ಪ್ರಕಾಶಕರಿಂದಲೂ ಧಾರವಾಡದೊಳಗಿನ ಪುಸ್ತಕ ವ್ಯಾಪಾರಿಗಳಿಂದಲೂ ಪ್ರತಿಗಳನ್ನು ತರಿಸಿಕೊಳ್ಳಬಹುದು.

ಬೆಲೆ: ೧-೮-೦ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮೀಶನ್ ಕೊಡಲಾಗುವುದು.

ಗಣಿತ ಶಿಕ್ಷಕ

★

೪೧೨ ಪುಟಗಳು ⇨ ಬೆಲೆ ೧ ರೂ.೫ ಆಣೆ. ⇦ ೫-೬-೭ನೆಯ ಇ. ಗಳಿಗಾಗಿ

೭-೩ ಕ್ಲಾಸುಗಳು ಒಬ್ಬ ಮಾಸ್ತರನ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ ಶಿಕ್ಷಕನಾಗಿ ಸಹಾಯಕವಾಗಿಲ್ಲವೇ? ೧೦ ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ. ಈಗಿನ ತುಟ್ಟಾಗ್ರತೆಯ ಕಾಲದಲ್ಲಿ ವೆಚ್ಚ ಮಾಡಿದ ಹಣಕ್ಕಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ⇨ ಬೆಲೆ ಕಡಿಮೆ ⇦ ವೆಚ್ಚವಿಲ್ಲದ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ ನಿಮಗೆ ಬೇಕಾಗುಪಷ್ಟು ಪ್ರತಿಗಳ ಮೂಲಬೆಲೆಯನ್ನು ಮನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದಿಡಿರಿ ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕ ವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಸಾಲೆಗಳಲ್ಲಿ ವ್ಯವಸ್ಥೆ ಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೆ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ

ವಿಳಾಸ:— ಬ. ದು. ಹಿರೇಮಠಮಾಸ್ತರ ವಿಜಾಪುರ.

ಹೊಸ ಪುಸ್ತಕಗಳಿಗೆ ತ್ವರೆಮಾಡಿರಿ! ಲಾಭಪಡೆಯಿರಿ!

ಹೊಸಪದ್ಧತಿಯ
(೧) ಹಿಂದೀ ಜಮಾಖರ್ಚು ಭಾಗ ೧
(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫-೬ನೆಯ ಇಯತ್ತೆಯವರಿಗೂ ಹೆಣ್ಣು ಮಕ್ಕಳ ಮುಲ್ಕೀ ಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೮ ಆಣೆ.

೨. ಆರಂಭದ ಜಮಾಖರ್ಚು: ೪ನೆಯ ಇಯತ್ತೆಯವರಿಗೆ ಉಪಯೋಗವಿದೆ. ಬೆಲೆ: ೩ ಆಣೆ.

೩ ಅಂಗಸಾಧನ ಶಿಕ್ಷಕ: ಬೆಲೆ: ೪ ಆಣೆ.

೪. ಗಣಿತಪಾಠ ಸಂಗ್ರಹ: ಇದು ಈಗಿನ ಪರೀಕ್ಷೆಯ ಪದ್ಧತಿಯಂತಿರುವದರಿಂದ ಸ್ಕಾಲರ ಮತ್ತು ಮುಲ್ಕೀ ಪರೀಕ್ಷೆಯವರಿಗೆ ಉಪಯುಕ್ತವಿದೆ.

ಬೆಲೆ: ೪ ಆಣೆ.

ಹೊಸಪದ್ಧತಿಯ
ಹಿಂದೀ ಜಮಾಖರ್ಚು ಭಾಗ ೨
(ವ್ಯಾಪಾರಿ ಜಮಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮನಿಯಾರ್ಡರ, ಬಡ್ಡೀ ಆಕರಣೆ ಜಮಾಖರ್ಚಿನ ಇತರ ವಹಿಗಳು, ಯಾದಿಗಳ ನಮೂನೆಗಳು, ಪ್ರಶ್ನೆಗಳು, ಪ್ರಶ್ನೆಕಾಗದಗಳು ಇರುವವಲ್ಲದೆ, ಒಕ್ಕಲತನ ಒಲವಿನ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಬರೆದ ಜಮಾಖರ್ಚು ಅಂದರೆ ಡೇಲಿ ಲೇಬರ ಶೀಟ, ವೀಕಲಿ ಮಸ್ಟರ ರೋಲ್, ಕಲ್ಟಿವೇಶನ್ ಶೀಟ ಮುಂತಾದವುಗಳ ಪತ್ರಿಕೆಗಳೂ ಕಬುಲಾಯತಿ, ಬಾಡಿಗೆಯ ಪತ್ರಗಳ ನಮೂನೆಗಳೂ ಇರುವದರಿಂದ ಇದು ೭ನೆಯ ಇಯತ್ತೆಯವರಿಗೂ, ಆಗ್ರಿಕಲ್ಚರಲ್ ಬಾಯ್ಸ್ ಕ್ಲಾಸಿನವರಿಗೂ ಉಪಯುಕ್ತವಿದೆ. ಸ್ವಲ್ಪ ಪ್ರತಿಗಳಿರುವದರಿಂದ ನಮೂನೆಗಾಗಿ ಒಂದನ್ನಾದರೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ: ೮ ಆಣೆ.

ವಿಳಾಸ:— ರಾ. ವಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ

Printed by R. G. Hukeri at the Vasant Printing Works Dharwar and Published by S. G. Baichwal, Esq. M. A. Principal Training College For-Men Dharwar, at his Office. 7403-45-1375.

ಕನ್ನಡ



ಸಂಪಾದಕರು :

ಶ್ರೀನಿವಾಸ ಗುರಾಚಾರ್ಯ ಬೈಚವಾಳ,
ಎಂ. ಎ.

★ ಪರಿವಿಡಿ ★

ಸಂಪಾದಕೀಯ, ಸಾರ್ಜಂಟ ಯೋಜನೆ, ಶ್ರೀ. ದಿವಾಕರರ 'ಸಂದೇಶ',
ಪ್ರೊ. ಗೋಕಾಕರ 'ಕರ್ನಾಟಕ' ಮಾಂಟೀಸರಿಯ 'ಮಗುವಿಗೆ
ಸ್ವಾತಂತ್ರ್ಯ', ಶ್ರೀರಂಗರ 'ಗಂಪಸಿನ ಬುದ್ಧಿ
ಮೊಳಕೈ ಕಳಗೆ' ಇತ್ಯಾದಿ.

ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ
ಸುವರ್ಣ ಮಹೋತ್ಸವ ಸಂಚಿಕೆ

— ಪತ್ರಗಳ ಮುಖ್ಯಾಂಶಗಳು —

ಕುಂಭಾರವಾಡಾ (ಕಾರವಾರ ಜಿಲ್ಲೆ) ದಲ್ಲಿಯ ವಿದ್ಯಾಪ್ರೇಮಿಗಳು ಶಾರದಾಪೂಜೆಯ ಕಾಲಕ್ಕೆ ಮಕ್ಕಳ ಆಟಪಾಟಗಳನ್ನು ಕಂಡು ೩೫ ರೂ. ಮೆಚ್ಚುಕೊಟ್ಟರು.

ನೀಲಗುಂದ (ಬಾದಾಮಿ ತಾಲೂಕು)— ಒಕ್ಕಲತನದ ಒಲವಿನ ಶಾಲೆಯಲ್ಲಿ ಈ ವರ್ಷ ಶಿಲಕು ಉಳಿದ ೨೦೭ ರೂ. ಗಳನ್ನು ಮೆ. ಹೆಯಿಲಗೋಳ ಸಾಹೇಬರು ವಿದ್ಯಾರ್ಥಿಗಳಿಗೆ ಹಂಚಿ ಉತ್ತೇಜನ ಕೊಟ್ಟರು.

ನಾಗಾವಿ (ಗದಗ ತಾಲೂಕು)— ಇಲ್ಲಿಯ ಶಾಲಾ ವಾಚನಾಲಯಕ್ಕೆ ಶ್ರೀ. ರಂಗಪ್ಪ ಮುಂದೂರ ಅವರು ೬ ರೂ. ಹಾಗೂ ಜಹಾಗೀರದಾರರು ೧೫ ರೂ. ಕೊಟ್ಟು ಪ್ರೋತ್ಸಾಹಿಸಿದರು.

ಗುರ್ಲಹೊಸೂರು (ಸವದತ್ತಿ ತಾಲೂಕು)— ಶಾಲೆಯಲ್ಲಿ ಪ್ರತಿವರ್ಷದಂತೆ ಪ್ರೊ. ಖರೆ ಅವರು ೩೫ ರೂ. ಗಳ ಪಾಟಿ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಮೆಚ್ಚುಗೆಯಾಗಿ ಕೊಟ್ಟರು.

ಗದಗ— ಬೆಟಗೇರಿಯ ಉರ್ದು ಎರಡನೆಯ ನಂಬರ ಶಾಲೆಯ ವಿದ್ಯಾರ್ಥಿಗಳಿಗಾಗಿ ಶ್ರೀ. ಮಾಲ್ದಾರ ಮತ್ತು ಶ್ರೀ. ಕಲಬುರ್ಗಿ ಅವರು ೧೫ ರೂ. ಗಳ ಸಹಾಯವನ್ನು ಮಾಡಿದರು.

ನಂದೀಕುರಳಿ (ಬೆಳಗಾಂವಿ ಜಿಲ್ಲೆ) —ಶಾಲೆಯಲ್ಲಿ ನಾಗರಪಂಚಮಿಯ ದಿನ ಶ್ರೀ ಚೌಗುಲೆ ಶ್ರೀ. ಮಾಂಗುರೆ ಅವರು ೬೦ ಪಾಟಿ, ೪ ರೂ. ಮಿಠಾಯಿ ಕೊಟ್ಟು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.

ತಬಕದ ಹೊನ್ನಿಹಳ್ಳಿ—ಶಾಲೆಯಲ್ಲಿ ಅಂಕಲಿ ಅಡವಿ ಸ್ವಾಮಿಗಳು ವಿದ್ಯಾರ್ಥಿಗಳಿಗೆ ಉಪದೇಶ ಮಾಡಿ ೨ ರೂ. ಗಳ ಮಿಠಾಯಿಯನ್ನು ತರಿಸಿಕೊಟ್ಟರು.

ಶಿರಸಿಯಲ್ಲಿ ಪ್ರಾ. ಶಾ. ಶಿ. ಶಿ. ಯರ ಸಾಹಿತ್ಯ ಮತ್ತು ಅಭ್ಯಾಸ ಕೂಟವು ಸ್ಥಾಪನೆಯಾಗಿ ಎರಡು ವರ್ಷಗಳಾದವು. ಶ್ರೀ. ಗೋಪಾಳರಾವ ದೇವ ಅವರು ೫ ರೂ. ಕೊಟ್ಟಿದ್ದಾರೆ.

ಭೋಜ (ಚಿಕ್ಕೋಡಿ ತಾಲೂಕು)—ಊರಲ್ಲಿ ಲೋಕಪ್ರಿಯರಾಗಿ ಈಗ ನಿವೃತ್ತರಾದ ಶ್ರೀ. ಹುದ್ದಾರ ಮಾಸ್ತರರಿಗೆ ತಾಂಬೂಲ ಸಮಾರಂಭವಾಯಿತು. ಇವರ ಮಗನ ಶಿಕ್ಷಣದ ಸಹಾಯಕ್ಕಾಗಿ ಶಿಷ್ಯರೂ ಅವರ ಪಾಲಕರೂ ಕೂಡಿ ೪೫೭ ರೂ. ಗಳ ಸಹಾಯವನ್ನು ಮಾಡಿದರು.

ಮಿಶ್ರಿಕೋಟೆ (ಧಾರವಾಡ ಜಿಲ್ಲೆ)— ಶಾಲೆಯಲ್ಲಿ ಗಜಾನನೋತ್ಸವವು ನಡೆದಾಗ ಊರ ಹಿರಿಯರು ೨೦ ರೂ. ಗಳ ಪಾಟಿ ಪುಸ್ತಕಗಳನ್ನು ಬೆಳ್ಳಿಯ ಪದಕಗಳನ್ನು ಕೊಟ್ಟರು.

ಕೋಡ— ಶಾಲೆಯ ಗಜಾನನೋತ್ಸವ ಕಾಲಕ್ಕೆ ಊರ ಹಿರಿಯರು ಪಾಟಿ ಪುಸ್ತಕ ಟೊಪ್ಪಿಗೆಗಳನ್ನು ಕೊಟ್ಟರು.

ಬುಧರಕಟ್ಟಿ(ಬೈಲಹೊಂ ತಾಲೂಕು)—ಧನಂಜಯ ವಾಚನಾಲಯಕ್ಕೆ ಶ್ರೀ. ಅರ್ಜುನಪ್ಪ ಮುತ್ತಗಿ ಅವರು ೧೫೦ ಪುಸ್ತಕಗಳನ್ನು ಕೊಟ್ಟಿರುತ್ತಾರೆ.

ಬೈಲಹೊಂಗಲ – ಕನ್ನಡ ೧೧ನೆಯ ನಂಬರ ಶಾಲೆಯ ಬಾಲಬಾಲಿಕೆಯರು ಏಕಾಂಕ ನಾಟಕಗಳನ್ನು ಅಭಿನಯಿಸಿ ಕೂಡಿಸಿದ ನಿಧಿಯಲ್ಲಿ ಒಂದು ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿ ಸಾಯಿನ್ಸ ಉಪಕರಣಗಳನ್ನು ತರಿಸಿ ಮೆ॥ ಡಿ. ಲೋ. ಬೋ. ಪೈಸಿಡೆಂಟರ ಹೆಸ್ತದಿಂದ ಸಾಯಿನ್ಸ ಕ್ಲಾಸದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಲಾಯಿತು.

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಸಂಪಾದಕರು:

ಶ್ರೀನಿವಾಸ ಗುರಾಚಾರ್ಯ ಬೈಚವಾಳ ಎಂ. ಎ.

ಕೂಗು ಒಂದಾಗಿ । ಕರುಳೊಂದಾಗಿ । ಹೃದಯದನುರಾಗವೊಂದಾಗಿ
ಸಂಘಟಿತ ಬಲಯುತರಾಗಿ । ರಾಗ ದ್ವೇಷ ಮತ್ಸರ
ಮದಂಗಳ ನೀಗಿ । ಸಾಗಲನುವಾಗಿರೈ । ಭೋಗಬಿಟ್ಟೇಳಿರೈ ।
ಕನ್ನಡಮ್ಮನ ಕುವರರೇ ॥

—ಋಗ್ವೇದ.

ಸಂಪುಟ ೮ಳ } ಅಕ್ಟೋಬರ, ನವೆಂಬರ, ಡಿಸೆಂಬರ ೧೯೪೫ } ವರ್ಷ ೧೮ ಸಂ. ೭–೮–೯

ಬೇಂದ್ರೆ ಸತ್ಕಾರ ಸಮಿತಿ

(ಸಾಧನಾ ಪ್ರೆಸ್ಸಿನವರ ಕೃಪೆಯಿಂದ)

ಶ್ರೀ. ಬೇಂದ್ರೆಯವರ ಕವನಗಳನ್ನು ಕೇಳದ ಕನ್ನಡಿಗನಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕುಣಿಯೋಣು ಬಾರ, ಹಳ್ಳದ ದಂಡ್ಯಾಗ, ನನ್ನ ಕೈಯ ಹಿಡಿದಾಕೆ, ಅನ್ನ ಬ್ರಹ್ಮನ ದೇಗುಲದಲ್ಲಿ, ಮೂವತ್ತು ಮೂರು ಕೋಟಿ, ಹಕ್ಕಿ ಹಾರುತಿದೆ ನೋಡಿದಿರಾ ಮುಂತಾದ ಕವನಗಳನ್ನು ಓದಿದ, ಕೇಳಿದ ಜನರ ಹೃದಯ ಕುಣಿದಿವೆ, ಕುಣಿಯುತ್ತಿವೆ. ಕುಣಿಯುತ್ತಿರುವುವು. ಚಿಕ್ಕ ಮಕ್ಕಳಿಂದ ಮೊದಲುಗೊಂಡು ಹಿರಿಯರ ನಾಲಗೆಯ ಮೇಲೂ 'ಕುಣಿಯೋಣು ಬಾರ' ಕವನ ನಲಿದು ಜೀವನದಲ್ಲಿ ರಸವನ್ನು ತುಂಬಿದೆ, ಅವರ ಕಾವ್ಯ-ಸ್ಫೂರ್ತಿ ಕಲ್ಪನಾವಿಲಾಸವು 'ಭೃಂಗದ ಬೆನ್ನೇರಿ' ಬಂದು ಕನ್ನಡ ಸಾಹಿತ್ಯದಲ್ಲಿ ನವಜೀವನ್ಯವನ್ನು ತುಂಬಿದೆ. ಶ್ರೀ. ಬೇಂದ್ರೆಯವರಿಂದ ಸ್ಫೂರ್ತಿಯನ್ನು ಪಡೆದ ಎಷ್ಟೋ ಜನ ಕವಿಗಳಾಗಿದ್ದಾರೆ. ಅವರ ಗೆಳೆಯರ ಗುಂಪಿಗೆ ಗುಂಪೇ ಕವಿಯಾಗಿತ್ತು. ಬೇಂದ್ರೆಯವರು ಕವಿಗಳು ಮಾತ್ರವಲ್ಲ ವಿಮರ್ಶರೂ ಏಕಾಂಕ ನಾಟಕ ಕರ್ತರೂ ಆಗಿದ್ದಾರೆ. ಇವರ ಗದ್ಯವೂ ಪದ್ಯದಷ್ಟೇ ಹೃದ್ಯವಾಗಿದೆ. ಇವರ 'ತಿರುಕರ ಪಿಡುಗನ್ನು' ಓದಿದವರೂ ನೋಡಿದವರೂ ಬಿದ್ದು ಬಿದ್ದು ನಕ್ಕಿದ್ದಾರೆ. ಅವರ ಕೃತಿಗಳು ನಗಿಸಿವೆ, ಅಳಿಸಿವೆ, ಕುಣಿಸಿವೆ, ನಗಿಸುತ್ತಿವೆ, ಅಳಿಸುತ್ತಿವೆ. ಜೀವನದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸುತ್ತ ಬಂದ ಶ್ರೀ. ಬೇಂದ್ರೆಯವರ ಕೃತಿಗಳಲ್ಲಿ ಅನುಭಾವದ ಹೊನಲು

ಹರಿದಿದೆ. ಅವರು ಶಿವಮೊಗ್ಗೆಯ ಸಾಹಿತ್ಯ ಸಮ್ಮೇಲನದಲ್ಲಿ ಭಗೀರಥನಂತೆ ಕನ್ನಡ ಕಾವ್ಯ ಗಂಗೆ (ಗಂಗಾವತರಣ) ಯನ್ನು ಕರೆತಂದು ಕನ್ನಡ ನಾಡಿನಲ್ಲಿ ಹರಿಸಿದ್ದಾರೆ; ಅಲ್ಲದೆ, ಹೊಸ ವಿಚಾರಗಳ ಪ್ರವರ್ತಕರೆಂದೂ ದಾರ್ಶನಿಕರೆಂದೂ ಜಗತ್ಪ್ರಸಿದ್ಧರಾಗಿದ್ದಾರೆ.

ಕವಿ ಬೇಂದ್ರೆಯವರ ೫೦ನೆಯ ಹುಟ್ಟುಹಬ್ಬವನ್ನು ಕನ್ನಡಿಗರು ಆಚರಿಸಿ ಅವರಿಗೆ ಒಂದು ನಿಧಿಯನ್ನು ಅರ್ಪಿಸಬೇಕೆಂದಿದ್ದಾರೆ. ನಿಧಿಯು ಬೇಂದ್ರೆ ವ್ಯಕ್ತಿಗಲ್ಲ, ಕವಿಬೇಂದ್ರೆಗೆ, ಬೇಂದ್ರೆಯ ಕವಿತ್ವಕ್ಕೆ. ಈ ನಿಧಿಯ ಕೆಲವೊಂದು ಭಾಗ ಬೇಂದ್ರೆಯವರಿಗೆ ಸಲ್ಲಬಹುದು. ಉಳಿದೆಲ್ಲ ಭಾಗವನ್ನು ಕನ್ನಡ ಗ್ರಂಥಗಳ ಪ್ರಕಾಶನಕ್ಕೆ ಉಪಯೋಗಿಸಬೇಕೆಂದು ಯೋಜಿಸಲಾಗಿದೆ. ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಅಫಾನ್ಸೊ ಅವರು 'ಸತ್ತಮೇಲೆ ಮರ್ಯಾದೆ ಪಡೆಯುತಕ್ಕ ಕವಿಗಳಿಗಿಂತ ಇದ್ದಾಗ ಸನ್ಮಾನಿತವಾಗುವ ಕವಿ ಬೇಂದ್ರೆ ಧನ್ಯ' ಎಂದು ಹೇಳಿ ಕರ್ನಾಟಕ ಕಾಲೇಜಿನ ವಿದ್ಯಾರ್ಥಿಗಳು ಈ ನಿಧಿಗೆ ಸಹಾಯ ಮಾಡಬೇಕೆಂದು ೧೭-೧೨-೧೯೪೯ನೇ ದಿನ ಹೇಳಿದರು. ಇದಕ್ಕೂ ಪೂರ್ವದಲ್ಲಿ ಕೆ. ಇ. ಬೋರ್ಡ ಆರ್ಟ್ಸ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಬಿ. ಯಂ. ಶ್ರೀಕಂಠಯ್ಯನವರೂ ನಮ್ಮ ಟ್ರೇನಿಂಗ ಕಾಲೇಜಿನಲ್ಲಿ ಕಳೆದ ತಿಂಗಳಲ್ಲಿ ಭಾಷಣ ಮಾಡುತ್ತ ಹೀಗೆಯೇ ಹೇಳಿದರು.

ಬೇಂದ್ರೆಯವರು ನಮ್ಮನ್ನು ಕೈಯೊಡ್ಡಿ ಬೇಡಲು ಬಂದಿಲ್ಲ. ಕವಿ ಬೇಂದ್ರೆಯನ್ನು ಸನ್ಮಾನಿಸುವುದು ನಮ್ಮ ಕರ್ತವ್ಯವೆಂದು ನಾಡಿನ ಹಿರಿಯರು ೧೯೪೯ ಫೆಬ್ರುವರಿ ೧೭ನೆಯ ದಿನ ಅವರ ೫೦ನೆಯ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದಾರೆ. ಪ್ರತಿಯೊಬ್ಬರೂ ಒಂದೊಂದು ಬಿಲ್ಲಿಯಂತೆ ಮುಕ್ತಮನದಿಂದ ಸಹಾಯ ಮಾಡಿದರೆ ಕೂಡ ಮೇರು ಪರ್ವತದಷ್ಟು ನಿಧಿಯು ಸಹಜವಾಗಿ ಕೂಡಬಹುದು. ಎಂದು ಹೇಳಿ ನಾವೂ ಬೇಂದ್ರೆ ಸತ್ಕಾರ ಸಮಿತಿಯ ಯೋಜನೆಗೆ ಬೆಂಬಲವನ್ನು ಕೊಟ್ಟೆವು. ಆದುದರಿಂದ ಪ್ರತಿಯೊಬ್ಬ ಶಿಕ್ಷಕರೂ ವಿದ್ಯಾರ್ಥಿಯೂ ಕನ್ನಡ ಪ್ರೇಮಿಯೂ ಈ ನಿಧಿಗೆ ಸಹಾಯವನ್ನು ಮಾಡಬೇಕೆಂದು ಸೂಚಿಸುತ್ತೇವೆ. ಮತ್ತು ಇದೇ ರೀತಿಯಾಗಿ ಇತರ ಕನ್ನಡ ಕವಿಗಳಿಗೂ ಲೇಖಕರಿಗೂ ಕನ್ನಡ ನಾಡಿನವರು ಸನ್ಮಾನ ಮಾಡಿ ತಮ್ಮ ತಮ್ಮ ಸಾಹಿತ್ಯವನ್ನು ಬೆಳೆಸಿಕೊಳ್ಳುವರೆಂದು ಹಾರೈಸುತ್ತೇವೆ. ಈ ಯುಗದಲ್ಲಿ ಸಂಘಶಕ್ತಿಯ ಎದುರಿಗೆ ಯಾವ ಶಕ್ತಿಯು ಓಡಬಲ್ಲದು?

ಪ್ರೌಢ ಶಿಕ್ಷಣ ವರ್ಗಗಳು

ಟ್ರೇನಿಂಗ ಕಾಲೇಜಿನಲ್ಲಿ ೧೯೪೯ನವಂಬರ ೮ನೆಯ ತಾರೀಖಿನಿಂದ ೨೨ನೆಯ ತಾರೀಖಿನವರೆಗೆ ಪ್ರೌಢ ಶಿಕ್ಷಣ ವರ್ಗಗಳು ನಡೆದುವು. ದಕ್ಷಿಣ ಭಾಗದ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀ. ಎ. ಎನ್. ಸಾನೆ ಅವರು ಪ್ರಾರಂಭೋತ್ಸವವನ್ನು ಜರುಗಿಸಿದರು. ಸೇವಾನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀ. ಬಿ. ಡಿ. ಥಿಟೆ ಅವರು ಮುಕ್ತಾಯ ಸಮಾರಂಭವನ್ನು ನೆರವೇರಿಸುತ್ತ ಪ್ರೌಢ ಶಿಕ್ಷಣದ ಮಹತ್ವವನ್ನು ತಿಳಿಸಿ ಈ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಉಪದೇಶಪರ ಮಾತುಗಳನ್ನಾಡಿದರು. ಧಾರವಾಡ ಜಿಲ್ಲೆಯ ಡಿ. ಇ. ಆಯ್. ಅವರಾದ ಶ್ರೀಮಾನ್ ಬಿ. ಯಂ. ಶಿಂತ್ರೆಯವರ ಸಂಚಾಲಕತ್ವದಲ್ಲಿ ಈ ವರ್ಗಗಳು ಯಶಸ್ವಿಯಾಗಿ ನೆರವೇರಿದವು.

ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನ ಸುವರ್ಣಮಹೋತ್ಸವ

ತಾ. ೨೨-೧೧-೧೯೪೯ನೆಯ ದಿನ ಮುಂಬಯಿ ಇಲಾಖೆಯ ಅಸಿಸ್ಟಂಟ ಡಾಯರೆಕ್ಟರರಾದ ಶ್ರೀ. ಡಿ.ಸಿ.ಸಾವಟೆ ಎಂ. ಎ. (ಕೆಂಬ್ರಿಜ್) ಅವರ ಅಧ್ಯಕ್ಷತೆಯಲ್ಲಿ ಸುವರ್ಣಮಹೋತ್ಸವವು ೨೩-೧೧-೧೯೪೯ನೆಯ ದಿನ ನಮ್ಮ ಭಾಗದ ವಿದ್ಯಾಧಿಕಾರಿಗಳಾದ ಮಿ|| ಎ. ಖಾನ ಅವರ ಧರ್ಮಪತ್ನಿಯವರಾದ ಶ್ರೀಮತಿ ಎಚ್. ಎ. ಖಾನ ಅವರ ಅಧ್ಯಕ್ಷತೆಯಲ್ಲಿ ಮಾತೃದಿನಾಚರಣೆ

ಹಾಗೂ ಪಾರಿತೋಷಕ ಸಮಾರಂಭಗಳೂ ನೆರವೇರಿದವು. ಒಂದು ಒಳ್ಳೆಯ ಪ್ರದರ್ಶನವೂ ಏರ್ಪಡಿಸಲ್ಪಟ್ಟಿತ್ತು. ಎಲ್ಲ ಕಾರ್ಯಕ್ರಮಗಳೂ ವಿಜೃಂಭಣೆಯಿಂದ ಜರುಗಿದವು. ಈ ಸಂಸ್ಥೆಯು ರನ್ನ ಮಹೋತ್ಸವವನ್ನೂ ಜರುಗಿಸಿ ನಮ್ಮ ನಾಡಿನ ಸ್ತ್ರೀ ಶಿಕ್ಷಣಕಾರ್ಯವನ್ನು ಮುನ್ನಡೆಸುವ ಕಾರ್ಯದಲ್ಲಿ ಯಶಸ್ಸನ್ನು ಸಂಪಾದಿಸಲೆಂದೂ ಹಾರೈಸುತ್ತೇವೆ.

ಸಂದರ್ಶನ

ಮುಂಬಯಿ ವಿದ್ಯಾಖಾತೆಯ ಅಸಿಸ್ಟೆಂಟ್ ಡಾಯರೆಕ್ಟರರಾದ ಶ್ರೀಮಾನ್ ಡಿ. ಸಿ. ಪಾವಟೆ ಅವರೂ ಬೇಸಿಕ್ ಎಜ್ಯುಕೇಶನ್ನಿನ ಸ್ಪೇಶಲ್ ಅಫೀಸರರಾದ ಶ್ರೀಮಾನ್ ಎಲ್. ಆರ್. ದೇಸಾಯಿ ಅವರೂ ನಮ್ಮ ಕಾಲೇಜನ್ನೂ ಪ್ರ್ಯಾಕ್ಟಿಸಿಂಗ್ ಸ್ಕೂಲನ್ನೂ ೪-೧೨-೧೯೪೫ನೆಯ ದಿನ ಸಂದರ್ಶಿಸಿ ನಮ್ಮ ಸಂಸ್ಥೆಗಳ ಬಗ್ಗೆ ಸಮಾಧಾನವನ್ನು ವ್ಯಕ್ತಗೊಳಿಸಿದರು. ನಾವು ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿ ನಮ್ಮ ಕೃತಜ್ಞತೆಯನ್ನು ವ್ಯಕ್ತಗೊಳಿಸುತ್ತೇವೆ.

ಅಭಿನಂದನೆ

'ಪ್ರಾಥಮಿಕ ಶಿಕ್ಷಣ'ದ ಹೊದಿಕೆಯ ಮೇಲಿನ ಚಿತ್ರದ ಕಲ್ಪನೆಯನ್ನು ಸೂಚಿಸಿದವರು ಪ್ರೊ. ಆರ್. ವ್ಹಿ. ಜಾಹಗೀರದಾರರು. ಜ್ಞಾನಸೂರ್ಯನ ಕಿರಣಗಳು ಹರಡುತ್ತ ಹೋದಂತೆ ಅಜ್ಞಾನವೆಂಬ ಕಾರ್ಮೋಡವು ಹಿಂದೆ ಸರಿಯುತ್ತ ಹೋಗುವದು ಎಂಬುದೇ ಈ ಚಿತ್ರದ ಭಾವ. ಈ ಸುಂದರ ಭಾವವನ್ನು ಸೂಚಿಸಿದುದಕ್ಕಾಗಿ ನಾವು ಪ್ರೊ. ಜಾಹಗೀರದಾರರಿಗೆ ಹೃತ್ಪೂರ್ವಕವಾಗಿ ಕೃತಜ್ಞರಾಗಿದ್ದೇವೆ.

ಪ್ರೊ. ಜಾಗೀರದಾರರ ಭಾವಕ್ಕೆ ತಮ್ಮ ಚಿತ್ರಕಲಾಕೌಶಲ್ಯದಿಂದ ಮೂರ್ತಸ್ವರೂಪವನ್ನು ಸುಂದರವಾದ ರೀತಿಯಲ್ಲಿ ಕೊಟ್ಟವರು ಕನ್ನಡಿಗರಾದ ಶ್ರೀ. ಉಪಾಧ್ಯೆ ವ್ಹಿ. ಆರ್. ಅವರು ಇವರನ್ನು ನಾವು ಮನವಾರೆ ಅಭಿನಂದಿಸುತ್ತೇವೆ.

ನಮ್ಮ ಕಾಲೇಜಿನ ಅಧ್ಯಾಪಕರಾಗಿರುವ ಶ್ರೀಮಾನ್ ವ್ಹಿ. ಕೆ. ಜವಳಿ ಅವರೂ ಹಿಂದೆ ನಮ್ಮ ಕಾಲೇಜಿನ ಅಧ್ಯಾಪಕರಾಗಿದ್ದು ಈಗ ಎ. ಡಿ. ಇ. ಆಯ್. ಆಗಿರುವ ಶ್ರೀ. ಸಿ. ಎಸ್ ಬೆನ್ನೂರ ಅವರೂ ಅನುಕ್ರಮವಾಗಿ 'ಕನ್ನಡ ಬಾಲಕರ ಬುದ್ಧಿಮಾಪನ' ಮತ್ತು 'ಮುಂಬಯಿ ಇಲಾಖೆಯ

ಶ್ರೀ. ವ್ಹಿ. ಕೆ. ಜವಳಿಯವರು

ಪ್ರಾಥಮಿಕ ಶಿಕ್ಷಣದಲ್ಲಿ ಖಾಸಗಿ ಪ್ರಯತ್ನ ' ಎಂಬ ವಿಷಯಗಳ ಮೇಲೆ ನಿಬಂಧ ಬರೆದುದರಿಂದ ಮುಂಬಯಿ ವಿಶ್ವವಿದ್ಯಾಲಯವು ಇವರಿಗೆ ಎಂ. ಇಡಿ. ಪದವಿಯನ್ನು ಸಲ್ಲಿಸಿದೆ. ನಮ್ಮ ಕಾಲೇಜಿನ ಶಿಕ್ಷಕರು ಇವರಿಬ್ಬರಿಗೂ ಅಭಿನಂದನೆಗಳನ್ನು ಸಲ್ಲಿಸಿ ಸತ್ಕರಿಸಿದರು. ನಾವೂ ಪ್ರಾಥಮಿಕ ಶಿಕ್ಷಣದ ಪರವಾಗಿ ಇವರಿಬ್ಬರನ್ನೂ ಅಭಿನಂದಿಸುತ್ತೇವೆ.

ಭಾರತದ ಸಂಪೂರ್ಣ ಇತಿಹಾಸ

ಭಾರತದ ಮುಖಂಡರಲ್ಲೊಬ್ಬರಾದ ಬಾಬೂ ರಾಜೇಂದ್ರ ಪ್ರಸಾದರು ಭಾರತದ ಸಂಪೂರ್ಣ ಸಮರ್ಪಕ ಇತಿಹಾಸವನ್ನು ಬರೆಯಿಸುವ ಕಾರ್ಯವನ್ನು ಕೈಕೊಂಡಿದ್ದಾರೆ. ಅದರಲ್ಲಿ ಕನ್ನಡ ನಾಡಿಗೂ ಯೋಗ್ಯವಾದ ಸ್ಥಾನವು ದೊರೆಯಬೇಕೆಂಬ ಉದ್ದೇಶದಿಂದ ಕರ್ನಾಟಕ ವಿದ್ಯಾವರ್ಧಕ ಸಂಘದವರು ವಿದ್ವಜ್ಜನರ ಒಂದು ಸಮಿತಿಯನ್ನು ನಿಯಮಿಸಿ ಕನ್ನಡ ನಾಡಿನ ಇತಿಹಾಸವನ್ನು ಬರೆಯಿಸಲು ಉಪಕ್ರಮಿಸಿದ್ದಾರೆ. ಕನ್ನಡ ಇತಿಹಾಸದ ಯಾವ ಮಹತ್ವಪೂರ್ಣವಾದ ಸಂಗತಿಯೂ ಕಣ್ಣು ತಪ್ಪಿ ಹೋಗಬಾರದು ಎಂಬ ಉದ್ದೇಶದಿಂದ ಈ ಸಮಿತಿಯವರು ಕನ್ನಡ ನಾಡಿನ ಇತಿಹಾಸ ಪ್ರೇಮಿಗಳಲ್ಲಿ ಒಂದು ಅರಿಕೆಯನ್ನು ಮಾಡಿಕೊಂಡಿದ್ದಾರೆ. ಅದರ ತಾತ್ಪರ್ಯ ಇಷ್ಟೆ: ಕನ್ನಡಿಗರು ಈ ಸಮಿತಿಗೆ ಐತಿಹಾಸಿಕ ಗ್ರಂಥಗಳನ್ನೂ ಸಲಹೆಗಳನ್ನೂ ಕೊಟ್ಟು ಸಹಾಯಮಾಡಬೇಕು. ಇತಿಹಾಸದ ಮುದ್ರಣ ಕಾರ್ಯಕ್ಕೆ ಸಹಸ್ರಾರು ರೂಪಾಯಿಗಳು ಬೇಕಾಗುವವು. ಅದಕ್ಕಾಗಿ ಧನಸಹಾಯವನ್ನು ಮಾಡಬೇಕು. ಸಮಿತಿಯವರ ವಿನಂತಿಯನ್ನು ಮನ್ನಿಸಿ ಸರ್ವಬಗೆಯಿಂದಲೂ ಅದಕ್ಕೆ ನೆರವಾಗಬೇಕಾದುದು ನಮ್ಮ ಕರ್ತವ್ಯ. ಈ ಪ್ರಸಂಗದಲ್ಲಿ ನಾವು ಕಣ್ಣೆರೆಯದಿದ್ದರೆ ಭಾರತದ ಇತಿಹಾಸದಲ್ಲಿ ನಮ್ಮ ಸ್ಥಾನಮಾನದ ಅರಿವು ಚನ್ನಾಗಿ ಆಗಲಿಕ್ಕಿಲ್ಲ ಅಥವಾ ಕರ್ನಾಟಕದ ಬಗ್ಗೆ ಅಪಪ್ರಚಾರವಾಗಿ ಕರ್ನಾಟಕವು ಕಣ್ಮರೆಯಾಗುವ ಭಯವುಂಟು.

ಆಕಾಶವಾಣಿಯಲ್ಲಿ ಕನ್ನಡದ ಸ್ಥಾನ

ಇದು ವರೆಗೆ ಆಕಾಶವಾಣಿಯಲ್ಲಿ ಕನ್ನಡ ಭಾಷೆಗೆ ಇದ್ದ ಸ್ಥಾನ ಸಾಕಷ್ಟು ಸಮಾಧಾನ ಕರವಿಲ್ಲವೆಂದು ವಿಷಾದಪಡಬೇಕಾಗಿದೆ. ಕನ್ನಡ ಮಾತನಾಡುವವರ ಸಂಖ್ಯೆ ಸುಮಾರು ಎರಡು ಕೋಟಿ ಇದ್ದರೂ ದಿಲ್ಲಿಯ ಕೇಂದ್ರ ಆಕಾಶವಾಣಿ ಸಮಿತಿಯವರು ತೆಲಗು, ಮರಾಠಿ, ಗುಜರಾತಿ ಹಾಗೂ ತಮಿಳು ಈ ಭಾಷೆಗಳಲ್ಲಿ ಸುದ್ದಿಯನ್ನು ಸಾರುವ ಏರ್ಪಾಡು ಮಾಡಿ ಕನ್ನಡದಲ್ಲಿ ಏರ್ಪಾಡು ಮಾಡದೆ ಇರುವುದು ತುಂಬಾ ನೋವನ್ನುಂಟುಮಾಡುತ್ತದೆ. ಈ ತೊಂದರೆಯನ್ನು ತೀವ್ರವಾಗಿ ಆಕಾಶವಾಣಿಯವರು ಹೋಗಲಾಡಿಸುವರೆಂದು ನಾವು ನಂಬಿದ್ದೇವೆ. ನಮ್ಮ ಸಂಸ್ಥೆಯು ಅಚ್ಚ ಕನ್ನಡದ್ದಾಗಿರುವುದರಿಂದ ಕನ್ನಡದಲ್ಲಿ ಸುದ್ದಿ ಸಾರುವ ವ್ಯವಸ್ಥೆಯಾಗದಿದ್ದರೆ ರೇಡಿಯೊ ಇಟ್ಟುಕೊಳ್ಳುವುದು ಕೇವಲ ಭೂಷಣವೇ ಹೊರತು ಉಪಯುಕ್ತತೆಯ ದೃಷ್ಟಿಯಿಂದ ಅದಕ್ಕೆ ಸ್ಥಾನವೇ ಇಲ್ಲವೆಂದು ವಿಷಾದದಿಂದ ಹೇಳಬೇಕಾಗುವದು.

ಅಂತರ್ವಿದ್ಯಾಲಯ ಪಂದ್ಯಾಟಗಳು

೧೯೪೫ ಡಿಸೆಂಬರ ೫, ೬, ೭, ೮ನೆಯ ದಿನ ಧಾರವಾಡ, ಬಾಗಲಕೋಟೆ, ಬೆಳಗಾಂವಿ, ಕೊಲ್ಹಾಪೂರ, ಬಿಜಾಪುರ, ಸಾಂಗಲಿ, ಸಾವಂತವಾಡಿ ಮುಂತಾದ ಕಡೆಗಳಲ್ಲಿಯ ವಿದ್ಯಾಲಯಗಳೊಳಗೆ ಪಂದ್ಯಾಟಗಳು ಕರ್ನಾಟಕ ಕಾಲೇಜಿನ ಪ್ರಾಂಗಣದಲ್ಲಿ ಜರುಗಿದುವು. ಅನೇಕ ಆಟಗಾರರು ಈ ಕಡೆಗಳಿಂದ ಧಾರವಾಡಕ್ಕೆ ಆಗಮಿಸಿದ್ದರು. ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳಿಗೂ ಪ್ರಾಥಮಿಕ ಶಾಲೆಗಳ ಹಾಗೂ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೂ ಪಂದ್ಯಾಟಗಳನ್ನು ನೋಡುವ ಅಪೂರ್ವ ಸುಸಂಧಿಯು ಒದಗಿತು. ಪಂದ್ಯಾಟಗಳ ದೊಡ್ಡ ಕಾರ್ಯಕ್ರಮಗಳನ್ನು ಹೇಗೆ ಏರ್ಪಡಿಸಬೇಕು, ಜೀವನದಲ್ಲಿ ಉದಾರ ವೃತ್ತಿಯನ್ನು ಹೇಗೆ ತಾಳಬೇಕು ಮತ್ತು ಕ್ರೀಡಾಪ್ರವೃತ್ತಿಯು ಜೀವನಸಂಗ್ರಾಮದಲ್ಲಿ ಯಾವ ರೀತಿಯಲ್ಲಿ ಪ್ರತ್ಯಕ್ಷ ಸಹಾಯಕವಾಗುತ್ತದೆ ಎಂಬುದು ಟ್ರೇನಿಂಗ್ ಪಡೆಯುವವರಿಗೆ ತಿಳಿಯಬಂದಿತು. ಓದಿ ಕಲಿ ಎಂಬುದಕ್ಕಿಂತ ನೋಡಿ ಕಲಿ ಎಂಬ ಶಿಕ್ಷಣದ ಒಂದು ತತ್ವವನ್ನು ಈ ಪಂದ್ಯಾಟಗಳು ನಿದರ್ಶನಕ್ಕೆ ತಂದುಕೊಟ್ಟವೆಂದು ಹೇಳಬಹುದು.

ಶಾರೀರಿಕ ಶಿಕ್ಷಣ ದಿನಾಚರಣೆ

ಧಾರವಾಡದ ಶಾರೀರಿಕ ಶಿಕ್ಷಣ ಸಮಿತಿಯ ಪರವಾಗಿ ಮುಂಬಯಿ ಶಾರೀರಿಕ ಶಿಕ್ಷಣ ದಿನಾಚರಣೆಯನ್ನು ತಾ. ೨೨-೧೨-೧೯೪೪ಳಿನೆಯ ದಿನ ಧಾರವಾಡದ ಸರಕಾರಿ ಹೈಸ್ಕೂಲಿನ ಆಟದ ಬಯಲಿನ ಮೇಲೆ ತರುಣ ಮುಂದಾಳುಗಳಾದ ಶ್ರೀ ಕೆ. ಎಫ್. ಪಾಟೀಲ ಬಿ. ಎ. ಅವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಧಾರವಾಡದ ಎಲ್ಲ ಶಿಕ್ಷಣ ಸಂಸ್ಥೆಗಳು ಭಾಗವಹಿಸಿ ಸಪಾರಂಭಕ್ಕೆ ಅಪೂರ್ವ ಶೋಭೆಯನ್ನು ತಂದಿದ್ದವು. ಅಧ್ಯಕ್ಷರು ತಮ್ಮ ಅಮೋಘ ವಾಣಿಯಿಂದ ಉಪದೇಶ ಪರ ಮಾತುಗಳನ್ನು ಹೇಳಿದರು. ಎಲ್ಲ ಕಾರ್ಯಕ್ರಮಗಳು ಒಳ್ಳೇ ಯಶಸ್ವಿಯಾಗಿ ನೆರವೇರಿಸಲ್ಪಟ್ಟವು.



(ವೇದಿಕೆಯ ಮೇಲೆ) ಶ್ರೀ. ಕೆ. ಎಫ್. ಪಾಟೀಲ ಅವರು (ಭಾಷಣ ಮಾಡುತ್ತಿರುವರು.)
(ಕೂತವರು) ಮಿಸ್ ಎಲಾಯಿಜ್ಯಾ, ಶ್ರೀ. ಎಸ್. ಜಿ. ಬೈಜವಾಳ
ಮತ್ತು ಶ್ರೀ. ಪ್ಹಿ. ಆರ್. ಮುನ್ಶೋಳಕರ.

ವಿದ್ಯಾರ್ಥಿ-ವಿದ್ಯಾರ್ಥಿನಿಯರ ಕವಾಯತಿನ ನಿಶಾನವು ನೋಟ

ಕನ್ನಡ ಸಾಹಿತ್ಯ ಸಮ್ಮೇಲನ

(‘ಜಯಕರ್ನಾಟಕ’ದ ಕೃಪೆಯಿಂದ)

ಶ್ರೀ ಟಿ. ಪಿ. ಕೈಲಾಸಂ ಅವರು

ಕನ್ನಡ ಸಾಹಿತ್ಯ ಸಮ್ಮೇಲನದ ೨೯ನೆಯ ಅಧಿವೇಶನವು ಈ ಸಲ ಮದ್ರಾಸದಲ್ಲಿ ತಾ. ೨೬-೧೨-೪೫ರಿಂದ ಮೂರು ದಿನಗಳ ವರೆಗೆ ನಡೆಯಿತು. ಕನ್ನಡ ಏಕಾಂಕ ನಾಟಕಗಳ ಪ್ರವರ್ತಕರಾಗಿ ಏಕಾಂಕ ನಾಟಕಗಳಲ್ಲಿ ಕ್ರಾಂತಿಯನ್ನುಂಟುಮಾಡಿದ ಅದ್ವಿತೀಯ ಪ್ರತಿಭಾ ಶಾಲಿಗಳಾದ, ಪರನಾಡುಗಳಲ್ಲಿಯೂ ತಮ್ಮ ಲಿಂಗ್ವಿಸ್ಟಿಕ್ ಕೃತಿಗಳಿಂದ ಇಬ್ಸನ್, ಶೆಕ್ಸಪಿಯರ ಮತ್ತು ಬ ಮುಂತಾದ ಪ್ರಭೃತಿಗಳ ಕೂಡ ಹೆಗಲಿಗೆ ಹೆಗಲು ಹಚ್ಚುವಷ್ಟು ಯೋಗ್ಯತೆಯುಳ್ಳವರಾಗಿ ಕನ್ನಡದ ಕೀರ್ತಿಯನ್ನು ಹಬ್ಬಿಸಿದ, ನಗದವರನ್ನು ನಗಿಸಬಲ್ಲ **ಶ್ರೀ. ಟಿ. ಪಿ. ಕೈಲಾಸಂ** ಅವರು ಈ ಸಾಹಿತ್ಯ ಸಮ್ಮೇಲನಕ್ಕೆ ಅಧ್ಯಕ್ಷರಾದುದು ಸಂತೋಷದ ಸಂಗತಿ. ಇದುವರೆಗೆ ಸಮ್ಮೇಲನದ ಅಧ್ಯಕ್ಷ ಪೀಠವನ್ನು ಅಲಂಕರಿಸಲು ಒಲ್ಲೆನ್ನುತ್ತ ಬಂದು ಈ ಬಾರಿ ಒಪ್ಪಿಕೊಂಡು ಉದ್ದ ಭಾಷಣಗಳ ಗಟ್ಟಿ ಕೋಟೆಯನ್ನು ಒಡೆದು ತಮ್ಮ ಚಿಕ್ಕ, ಧೀಪ್ರಧಾನ, ವಿಚಾರಪ್ರಚೋದಕ, ಕಾರ್ಯಪ್ರೇರಕ ವಿನೋದ ಪರಿಪೂರ್ಣವಾದ ವೈಶಿಷ್ಟ್ಯದಿಂದೊಡಗೂಡಿದ ಭಾಷಣವನ್ನು ಮಾಡಿ ಸಮ್ಮೇಲನವನ್ನು ಕಾರ್ಯಪ್ರವೃತ್ತ ಮಾಡಿದುದಕ್ಕಾಗಿ ಅವರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಮತ್ತು ‘ಮಕ್ಕಳ ಸ್ಕೂಲು ಮನೇಲಲ್ಲೆ!’ ಎಂದುಸುರಿ ‘ಟೊಳ್ಳು ಗಟ್ಟಿ’ ನಾಟಕವನ್ನು ಬರೆದ ಶಿಕ್ಷಣದ ಒಂದು ಮಹತ್ವದ ಸಂದೇಶವನ್ನು ಬೀರಿದ ಶ್ರೀ. ಕೈಲಾಸಂ ಅವರು ಈ ಬಾರಿಯ ಸಮ್ಮೇಲನದ ಅಧ್ಯಕ್ಷರಾದುದು ನಮಗೆ ಹೆಮ್ಮೆಯ ವಿಷಯವಾಗಿದೆ. ಇವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪ್ರಾಥಮಿಕ ಶಿಕ್ಷಕರನ್ನೂ ಕನ್ನಡ ಸಾಹಿತಿಗಳನ್ನೂ ನಗಿಸುತ್ತ ಅವರಲ್ಲಿ ನೆಲೆಗೊಂಡ ನಿಜವಾದ ವಾತಾವರಣವನ್ನು ಹೊಡೆದೋಡಿಸಿ ಚಿಕ್ಕಮಕ್ಕಳಿಗೆ ನಿಜವಾದ ಶಿಕ್ಷಣವು ದೊರೆಯುವಂತೆ ಪ್ರೋತ್ಸಾಹಿಸುವಿರೆಂದು ಹಾರೈಸಿದ್ದೇವೆ.

ಇದೇ ಸಂದರ್ಭದಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನ ಕನ್ನಡ ವ್ಯಾಧ್ಯಾಪಕರಾದ ಶ್ರೀ. ಎಸ್. ಎಸ್. ಮಾಳವಾಡರವರು ಸಾಹಿತ್ಯಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ಕನ್ನಡ ಸಾಹಿತ್ಯದ ನಿಪರ್ಶನ ಮಾಡಿಕೊಟ್ಟುದಕ್ಕಾಗಿ ಅವರನ್ನೂ, ಸಮ್ಮೇಲನದ ಸ್ವಾಗತಾಧ್ಯಕ್ಷಪದದಿಂದ ಕನ್ನಡಿಗರು ಮಾಡಬೇಕಾದ ಕಾರ್ಯದ ಬಗ್ಗೆ ಎಚ್ಚರಿಕೆಯನ್ನು ಕೊಟ್ಟ ಡಾ॥ ಯು. ರಾಮರಾಯರಿಗೂ ಸಮ್ಮೇಲನದ ಉದ್ಘಾಟನ ಸಮಾರಂಭವನ್ನು ಜರುಗಿಸಿ 'ಕರ್ನಾಟಕವು ಅವಿಭಾಜ್ಯ ಪ್ರಾಂತ' ವೆಂದು ಹೇಳಿ ಹುರಿದುಂಬಿಸಿದ ಶ್ರೀ. ಚಕ್ರವರ್ತಿ ರಾಜಗೋಪಾಲಾಚಾರ್ಯರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಸಾರ್ಜಂಟ್ ಯೋಜನೆಯ ಮುಖ್ಯಾಂಶಗಳು

(ಮುಂದುವರಿದುದು)

ತಾಂತ್ರಿಕ (Technical), ವ್ಯವಹಾರಿಕ (Commercial) ಮತ್ತು ಕಲಾತ್ಮಕ ಶಿಕ್ಷಣ ಪ್ರಕರಣ

ತಾಂತ್ರಿಕ ಶಿಕ್ಷಣ ಸಮಿತಿಯ ಮುಖ್ಯ ಶಿಫಾರಸ್ಸುಗಳು (ನಿರ್ಣಯ)ಗಳು ಕೆಳಗಿನಂತಿವೆ—

(೧) ಇತ್ತೀಚೆಗೆ ಕಂಡುಬಂದ ಉದ್ಯೋಗಗಳ ಬೆಳವಣಿಗೆ ಮತ್ತು ಯುದ್ಧೋತ್ತರ ಅವಧಿಯಲ್ಲಿ ಅವುಗಳಲ್ಲಾಗುವ ಪ್ರಗತಿಯ ದೃಷ್ಟಿಯಿಂದ ತಾಂತ್ರಿಕ ಶಿಕ್ಷಣದ ಸರ್ವಾಂಗ ಪರಿಪೂರ್ಣ ಪದ್ಧತಿಯನ್ನು, ತೀವ್ರದಲ್ಲಿಯೇ ರೂಢಿಯಲ್ಲಿ ಬರುವ ಯೋಜನೆಗಳನ್ನು ಸಿದ್ಧಗೊಳಿಸುವದು ಅವಶ್ಯ.

(೨) ತಾಂತ್ರಿಕ ಶಿಕ್ಷಣದ ಮುಖ್ಯ ಕರ್ತವ್ಯಗಳು ಎರಡು :—

(ಅ) ಉದ್ಯಮ ಮತ್ತು ವ್ಯಾಪಾರಗಳ ಬೇಡಿಕೆಗಳನ್ನು ಪೂರೈಸುವಂತೆ ಎಲ್ಲ ತರಗತಿಯ ತರಬೇತು ಹೊಂದಿದ ಕೆಲಸಗಾರರನ್ನು ತಯಾರಿಸುವದು, ಮತ್ತು

(ಬ) ಬಾಲಬಾಲಿಕೆಯರ ಸ್ವಾಭಾವಿಕ ಶಕ್ತಿಗಳನ್ನು ಪ್ರಾತ್ಯಕ್ಷಿಕ ಶಿಕ್ಷಣಸಹಾಯದಿಂದ ಬಲಪಡಿಸುವ ಯೋಗ್ಯವೆನಿಸುವ ಶಿಕ್ಷಣಕ್ರಮವನ್ನು (ಸ್ವರೂಪವನ್ನು) ಸಿದ್ಧಗೊಳಿಸುವದು.

(೩) ತಾಂತ್ರಿಕ ಶಿಕ್ಷಣವು ಸಾಮಾನ್ಯ ಶೈಕ್ಷಣಿಕ ಪದ್ಧತಿಯ ಮೂಲ್ಯಾಂಗವಾಗಬೇಕಲ್ಲದೆ ಬೌದ್ಧಿಕ ಶಿಕ್ಷಣಕ್ಕಿಂತ ಯಾವ ರೀತಿಯಿಂದಲೂ ಕಡಿಮೆ ತರಹದ್ದಿರಬಾರದು.

(೪) ಶಿಕ್ಷಣಕ್ಕೆ ತೀರ ಚಿಕ್ಕವಯಸ್ಸಿನ ತರಗತಿಯಿಂದಲೇ ವ್ಯಾವಹಾರಿಕ ಸ್ವರೂಪವನ್ನು ಕೊಡಬೇಕು. ಮತ್ತು ಅಭ್ಯಾಸಪತ್ರಿಕೆಯಲ್ಲಿ ಬೌದ್ಧಿಕ ಹಾಗು ವ್ಯವಹಾರಿಕ ವಿಷಯಗಳ ಪರಿಚಯವು ಬಾಲಬಾಲಿಕೆಯರಿಗೆ ಆಗುವಂತೆ ಯತ್ನಿಸಬೇಕು.

(೫) ತಾಂತ್ರಿಕ ಶಿಕ್ಷಣದ ಉದ್ಯಮಕ್ಕೆ ಸಂಬಂಧಿಸಿದ ವ್ಯಾಪಾರಿಕ ಮತ್ತು ಕಲಾತ್ಮಕ ಶಿಕ್ಷಣವೂ ಅಡಕವಾಗಿರಬೇಕು.

(೬) ಕೃಷಿ-ಶಿಕ್ಷಣವು ತಾಂತ್ರಿಕ ಶಿಕ್ಷಣದ ಮುಖ್ಯ ಶಾಲೆಯಾಗಬೇಕು. (ಸೀನಿಯರ್ ಬೇಸಿಕ್) ಮತ್ತು ಹಳ್ಳಿ ಕ್ಷೇತ್ರಗಳಲ್ಲಿಯೂ ಮಾಧ್ಯಮಿಕ ಶಾಲೆಗಳಲ್ಲಿಯೂ ಕೃಷಿ-ಶಿಕ್ಷಣದ ಒಲವು ಇರತಕ್ಕದ್ದು.

(೭) ಹಿಂದುಸ್ಥಾನಕ್ಕೆ ಅತಿ ಮಹತ್ವವುಳ್ಳ ಕೃಷಿ-ಶಿಕ್ಷಣದ ಸಲುವಾಗಿ ಕೃಷಿ-ಶಿಕ್ಷಣ ತಜ್ಞರ ವಿಶಿಷ್ಟ ಸಮಿತಿಯು ಈ ವಿಷಯವನ್ನು ಸರ್ವತೋಮುಖವಾಗಿ ಅಭ್ಯಸಿಸಲು ಸ್ಥಾಪಿಸಲ್ಪಡಬೇಕು.

(೮) ಬೇರೆ ಬೇರೆ ತರದ ಕೆಲಸಗಾರರಿಗೆ ಯೋಗ್ಯ ಶಿಕ್ಷಣ ಮತ್ತು ತರಬೇತಿಯನ್ನು ಪೂರೈಸಲು ಕೆಳಗೆ ಕಾಣಿಸಿದ ಔದ್ಯೋಗಿಕ ಶಿಕ್ಷಣ ಸಂಸ್ಥೆಗಳ ಏರ್ಪಾಡು ಮಾಡಬೇಕು.

(ಅ) Junior Technical ಅಥವಾ ಔದ್ಯೋಗಿಕ ಅಥವಾ ಚಿಕ್ಕವರ ಸಲುವಾಗಿ ಔದ್ಯೋಗಿಕ ವ್ಯಾಪಾರದ ಶಾಲೆಗಳು

(ಬ) ಔದ್ಯೋಗಿಕ ಮಾಧ್ಯಮಿಕ ಶಾಲೆಗಳು.

(ಕ) ಸೀನಿಯರ್ ಬಾಲಬಾಲಿಕೆಯರಿಗಾಗಿ ಔದ್ಯೋಗಿಕ ಸಂಸ್ಥೆಗಳು.

(ಅ) ಮತ್ತು (ಬ) ಶಾಲೆಗಳು ಸಾಧಾರಣವಾಗಿ ನವಕರಿ ದೊರೆಯುವ ಮುಂಚಿತವಾಗಿ ಪೂರ್ಣ ಅವಧಿಯ ಶಿಕ್ಷಣವನ್ನು ಕೊಡಬೇಕು. (ಕ) ಶಾಲೆಗಳು ನವಕರಿಯಲ್ಲಿದ್ದವರ ಸಲುವಾಗಿ ಕೆಲವು ನಿಶ್ಚಿತ ವೇಳೆಯಲ್ಲಿ ಮಾತ್ರ ಶಿಕ್ಷಣ ಕೊಡಬಹುದು.

(೯) ಕೆಲವು ಅವಧಿಯ ವರೆಗೆ ಕೊಡಲ್ಪಡುವ ಶಿಕ್ಷಣ ಸ್ವರೂಪವನ್ನು ಆಯಾ ಕ್ಷೇತ್ರದಲ್ಲಿಯ ಮಾಲಕರ ಮತ್ತು ಬೇಡಿಕೆಗಳಿಗೆ ಅನುಸರಿಸಿ ನಿರ್ಣಯಿಸಬೇಕು. ಕೆಲವು ನಿರ್ದಿಷ್ಟ ಅವಧಿಯ ವರ್ಗಗಳನ್ನು ಸಂಜೆಯ ಸುಮಾರಕ್ಕೆ ಹಾಕದಂತೆ ದಿವಸದ ಪೂರ್ವಭಾಗದಲ್ಲಿಯೇ ನಡಿಸಬೇಕು.

(೧೦) ಸಂಸ್ಥಿತಿಯು ಅನುಕೂಲವಿದ್ದಲ್ಲಿ ಒಂದೇ ಉದ್ಯೋಗದ ಶಿಕ್ಷಣಕ್ಕಿಂತ ಅನೇಕ ಉದ್ಯೋಗಗಳ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು.

(೧೧) ಔದ್ಯೋಗಿಕ ಸಂಸ್ಥೆಗಳಲ್ಲಿ ಕೆಳಗಿನ ಅಭ್ಯಾಸಕ್ರಮಗಳು ನಡೆಯುವಂತೆ ವ್ಯವಸ್ಥೆ ಇರಬೇಕು.

(೧) ಇಡೀ ಅವಧಿಯ ಎರಡು ವರ್ಷಗಳ ಅಭ್ಯಾಸಕ್ರಮವು ಜ್ಯೂನಿಯರ ಔದ್ಯೋಗಿಕ ಶಾಲೆಗಳಲ್ಲಿ (ಔದ್ಯೋಗಿಕ ಅಥವಾ ವ್ಯಾಪಾರಶಾಲೆ) ಇರತಕ್ಕದ್ದು. ಇಲ್ಲಿಯ ವಿದ್ಯಾರ್ಥಿಗಳು ಸುಮಾರು ಹದಿನಾಲ್ಕನೆಯ ವರ್ಷಕ್ಕೆ ಸೀನಿಯರ್ ಬೇಸಿಕ್ ಶಾಲೆಗಳಿಂದ ಬಿಟ್ಟು ಬಂದವರಿರಬೇಕು.

(೨) ಔದ್ಯೋಗಿಕ ಮಾಧ್ಯಮಿಕ ಶಾಲೆಗಳಲ್ಲಿ ಆರು ವರುಷಗಳ ವರೆಗಿನ ಅಭ್ಯಾಸಕ್ರಮವಿರಬೇಕು. ಹನ್ನೊಂದನೆಯ ವರ್ಷದಲ್ಲಿ ಮುಗಿಸಲ್ಪಡುವ ಜ್ಯೂನಿಯರ ಬೇಸಿಕ ಶಾಲೆಯ ಅಭ್ಯಾಸವನ್ನು ಮುಗಿಸಿದ ವಿದ್ಯಾರ್ಥಿಗಳಲ್ಲಿ ಆರಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶವಿದೆ. ಈ ಪಠ್ಯಕ್ರಮದ ಮೊದಲನೆಯ ಮೂರು ವರ್ಷಗಳಲ್ಲಿ ಮುಖ್ಯವಾಗಿ ಸಾಮಾನ್ಯ ವಿಷಯಗಳನ್ನು ಕಲಿಸತಕ್ಕದ್ದು.

(೩) ಮೂರು ವರ್ಷದ ವರೆಗಿರುವ ಡಿಪ್ಲೋಮಾ ಅಭ್ಯಾಸಕ್ರಮಕ್ಕೆ ಔದ್ಯೋಗಿಕ ಮಾಧ್ಯಮಿಕ ಶಾಲೆಯ ಅಥವಾ ಅದಕ್ಕೆ ಸರಿಯಾಗಿರುವ ಸಂಸ್ಥೆಯ ಪರೀಕ್ಷೆಯನ್ನು ಪಾಸಾದ ವಿದ್ಯಾರ್ಥಿಗಳು ಅರ್ಹರಾಗುವರು.

(೪) ಮೇಲಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರ ಸಲುವಾಗಿ ಎರಡು ವರ್ಷಗಳ ಸಂಪೂರ್ಣ ಅವಧಿಯ ವರೆಗಿರುವ ವೈಲ್ತರದ ಅಭ್ಯಾಸಕ್ರಮವಿರತಕ್ಕದ್ದು.

(೫) ನೌಕರಿಯಲ್ಲಿ ಸೇರಿದ ವಿದ್ಯಾರ್ಥಿಗಳ ಸಲುವಾಗಿ ಟೆಕ್ನಿಕಲ್ ಮಾಧ್ಯಮಿಕ ಶಾಲೆಗಳಲ್ಲಿ ಮೂರು ವರ್ಷಗಳ ಕೆಲವು ವೇಳೆಯು ವರೆಗಿರುವ ಅಭ್ಯಾಸಕ್ರಮದ ಸರ್ಟೀಫಿಕೇಟು (ಪ್ರಾಶಸ್ತ್ಯಪತ್ರ) ಇರತಕ್ಕದ್ದು.

(೬) ಮೇಲಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರ ಸಲುವಾಗಿ ೨ ವರ್ಷದ ಮೇಲ್ಪರದ (advanced) ಕೆಲವು ವೇಳೆಯ ವರಿಗಿರುವ ಅಭ್ಯಾಸಕ್ರಮದ ಸರಟೇಫಿಕೇಟು ಇರತಕ್ಕದ್ದು.

(೭) ಮತ್ತು ವ್ಯಾಪಾರ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದ ವಿಷಯಗಳ ಸಾಕಷ್ಟು ಅವಶ್ಯಕತೆಯೆನಿಸಿದ ಕಲೆ (ಧಂದೆ) ಕಸಬು, (Craft) ಮುಂತಾದ ವಿಷಯಗಳನ್ನು ಕಲಿಸುವ ವರ್ಗಗಳ ಏರ್ಪಾಟು ಆಗತಕ್ಕದ್ದು

(೧೨) ಪ್ರತಿಯೊಂದು ಅಭ್ಯಾಸಕ್ರಮದ ಅಂತ್ಯದಲ್ಲಿ ಒಂದೇ ಬಾಹ್ಯಪರೀಕ್ಷೆ ಇರತಕ್ಕದ್ದು. ಉಳಿದ ಪರೀಕ್ಷೆಗಳನ್ನೆಲ್ಲ ಆಂತರಿಕ ಪರೀಕ್ಷೆಗಳಿಂದಲೇ ನಡೆಯಿಸಬೇಕು.

(೧೩) ತಾಂತ್ರಿಕ (Technical) ಸಂಸ್ಥೆಗಳಲ್ಲಿಯ ಎಲ್ಲ ಅಧ್ಯಾಪಕರು ವ್ಯಾಪಾರ ಮತ್ತು ಉದ್ಯೋಗದ ಕೆಲವು ಶಾಲೆಗಳಲ್ಲಿಯಾದರೂ ಪ್ರಥಮ ಪರಿಚಯ (ಪ್ರತ್ಯಕ್ಷ ಅನುಭವ) ಉಳ್ಳವರಿರಬೇಕು.

(೧೪) (ಅ) Technical ಮಾಧ್ಯಮಿಕ ಶಾಲೆಗಳಲ್ಲಿಯ ಸಾಮಾನ್ಯವಿಷಯಗಳನ್ನು ಕಲಿಸುವ ಅಧ್ಯಾಪಕರು ಉಳಿದ ಮಾಧ್ಯಮಿಕ ಶಾಲೆಗಳ ಶಿಕ್ಷಕರಂತೆಯೇ ಪಗಾರದ ಗ್ರೇಡನ್ನು ಪಡೆಯತಕ್ಕದ್ದು. ೨೦ ವರ್ಷಗಳಾದ ನಂತರ ಅದರಲ್ಲಿ ಕಂಡುಬರುವ ಔದ್ಯೋಗಿಕ ಅಥವಾ ವ್ಯಾಪಾರಿಕ ಯೋಗ್ಯ ಅನುಭವದ ಪ್ರತಿಫಲವಾಗಿ ಐದು ಒಡತಿಗಳ ವರೆಗೆ ಬಡತಿಗಳನ್ನು ಅಂಥವರಿಗೆ ಕೊಡಬಹುದು.

(ಬ) ಕಸಬಿಗೆ ಸಂಬಂಧಿಸಿದ ವಿಷಯಗಳನ್ನು ಕಲಿಸುವ ಅಧ್ಯಾಪಕರು ಕೆಳಗಿನ ಸ್ಕೇಲಿನಂತೆ ಪಗಾರವನ್ನು ಪಡೆಯಬಹುದು.

(೧) ಕಾರ್ಯಾಲಯ ಅಥವಾ ಲಾಬರೇಟರಿ ಅಸಿಸ್ಟಂಟು:- ಪ್ರತಿತಿಂಗಳ ೫೦-೧-೭೫ ಪ್ರಾರಂಭದ ಪಗಾರವನ್ನು ಅನುಭವಕ್ಕೆ ಸರಿಯಾಗಿ ಹೆಚ್ಚುಕಡಿಮೆ ನಿರ್ಣಯಿಸಬೇಕು.

(೨) ಮೂರನೆ ತರಗತಿಯ ಶಿಕ್ಷಕರು: ರೂ:- ೭೫-೫-೧೫೦ ಪ್ರತಿ ತಿಂಗಳಿಗೆ

(೩) ಎರಡನೆ ತರಗತಿಯ ಶಿಕ್ಷಕರು: ರೂ:- ೧೭೫ ೧೦-೭೫೫ ,,

(೪) ಮೊದಲನೆ ತರಗತಿಯ ಶಿಕ್ಷಕರು: ೪೦೦-೨೫-೧೦೦೦ ,,
ಅಯಾ ಖಾತೆಗಳ(ಮುಖ್ಯಸ್ಥರನ್ನು ಒಳಗೂಂಡು)

(೫) ಪ್ರಿನ್ಸಿಪಾಲರು :—(ಸಂಸ್ಥೆಯ ಗಾತ್ರ ಮತ್ತು ಸ್ವರೂಪಕ್ಕನುಗುಣವಾಗಿ) ಎರಡನೆಯ ಮತ್ತು ಮೂರನೆಯ ತರಗತಿಯ ಶಿಕ್ಷಕರಿಗೆ ಕೆಲವು ಕ್ಷೇತ್ರಗಳಲ್ಲಿ ವಿಶಿಷ್ಟ ಪರಿಸ್ಥಿತಿ ಅಥವಾ ಚರಿತಾರ್ಥದ ಹೆಚ್ಚಿನ ಬೆಲೆಯಸಲುವಾಗಿ ೧೦೦ಕ್ಕೆ ೫೦ರ ಮಟ್ಟಿಗೆ ಭತ್ತೇ (allowance) ಕೊಡಬಹುದು. ತಿಂಗಳಿಗೆ ೧೦೦ ಕ್ಕೆ ೭೫ ರಂತೆ ಭತ್ತೆ ದೊರೆಯುವ ವಿಶಿಷ್ಟ ಹೊಣೆಗಾರಿಕೆಯ ಕೆಲವು ಸ್ಥಳಗಳ ಏರ್ಪಡೆಯಾಗಿರಬೇಕು ಈ ಸ್ಥಳಗಳನ್ನು ಸಾಮಾನ್ಯವಾಗಿ ಎರಡನೇ, ಮೂರನೇ ತರಗತಿಯ ಶಿಕ್ಷಕರಿಗಾಗಿ ಕಾದಿಡತಕ್ಕದ್ದು.

(೧೫) ಕಸಬಿನ ಶಿಕ್ಷಣವನ್ನು ಕೊಡುವ ಎಲ್ಲ ಶಿಕ್ಷಕರು ತಾವು ಕಲಿಸುವ ಉದ್ಯೋಗ ಅಥವಾ ವ್ಯಾಪಾರ ಭಾಗದ ಪ್ರಥಮ ಪರಿಚಯವನ್ನು ಇಟ್ಟುಗೊಳ್ಳುವಂತೆ ಪ್ರೋತ್ಸಾಹಿಸಬೇಕು. ಈ ಉದ್ಯೋಗವನ್ನು ಸಾಧಿಸುವದಕ್ಕೆ ಅವರಿಗೆ ತಜ್ಞರ ಸಲಹೆಗಳನ್ನು ಪಡೆಯುವದಕ್ಕಾಗಿ ಅಥವಾ ಇವರ ಸಹಕಾರ ಸಹಾಯಗಳನ್ನು ಪಡೆಯುವಂತೆ ಅವಕಾಶವನ್ನು ಕೊಡಬೇಕು. ಆದರೆ ಅವರ ಶಿಕ್ಷಣ ಕೆಲಸಕ್ಕೆ ತಡೆಯಾಗದಂತೆ ಸುಧಾರಿಸಿದ ಪರಿಸ್ಥಿತಿಯನ್ನು ಕಲ್ಪಿಸಿಕೊಡಬೇಕು.

(೧೬) ಅವಶ್ಯವಿದ್ದ ಯೋಗ್ಯತೆ ಹಾಗು ಒಲವು ಇದ್ದ ಯಾವನಿಗೂ ಹಣದ ಕೊರತೆಯ ಸಲುವಾಗಿ ಕಸಬಿನ ಶಿಕ್ಷಣವು ದೊರೆಯದೆ ಉಳಿಯಬಾರದಂತೆ ಚರಿತಾರ್ಥ ಭತ್ತೆ

ಮತ್ತು ವೇತನಗಳ ಪದ್ಧತಿಗಳ ತಕ್ಕ ಯೋಜನೆಯಾಗಬೇಕು. ಅವಶ್ಯವಿದ್ದಾಗ ವಸ
ಗೃಹಗಳ ವ್ಯವಸ್ಥೆಯನ್ನು ಮಾಡಬೇಕು.

(೧೭) ಯಾಂತ್ರಿಕ ಅಥವಾ ಕಸಬಿನ ಅಥವಾ ಔದ್ಯೋಗಿಕ ಸಂಸ್ಥೆಗಳು ಔದ್ಯೋಗಿ
ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಅಥವಾ ಅವುಗಳ ಹತ್ತಿರ ಸ್ಥಾಪಿಸಲ್ಪಡಬೇಕು
ಆದರೆ ಬೇರೆ ಕ್ಷೇತ್ರಗಳಿಂದ ಬರುವ ವಿದ್ಯಾರ್ಥಿಗಳಿಗೆ ಸಹ ಈ ಸಂಸ್ಥೆಗಳಿಗೆ ಪ್ರವೇಶ ದೊರೆಯುವ
ಸಮಾನ ಹಕ್ಕುಗಳಿರಬೇಕು. ಈ ಯೋಜನೆಯನ್ನು ಸಾಧಿಸಲು ಸಮಗ್ರ ಹಿಂದುಸ್ಥಾನದ
ದೃಷ್ಟಿಯಿಂದ ಯಾಂತ್ರಿಕ ಅಥವಾ ಕಸುಬಿನ ಶಿಕ್ಷಣವನ್ನು ವ್ಯವಸ್ಥಿತಗೊಳಿಸಬೇಕು.

(೧೮) ಯಾಂತ್ರಿಕ ಮಾಧ್ಯಮಿಕ ಶಾಲೆಗಳು ಮತ್ತು ಜ್ಯೂನಿಯರ ಟೆಕ್ನಿಕಲ
ವ್ಯಾಪಾರದ ಅಥವಾ ಔದ್ಯೋಗಿಕ ಶಾಲೆಗಳ ವ್ಯವಸ್ಥೆಯನ್ನು ಪ್ರಾಂತಿಕ ಸರಕಾರಗಳು ನೋಡಿ
ಕೊಳ್ಳಬೇಕು. ವಿಶ್ವವಿದ್ಯಾಲಯದ ಔದ್ಯೋಗಿಕ (Technological) ಶಾಲೆಗಳಲ್ಲಿ ಕೊಡ
ಲ್ಪಡುವ ಶಿಕ್ಷಣವನ್ನು ಹೊರತು ಎಲ್ಲ ಹೆಚ್ಚಿನ ತರಗತಿಯ ಔದ್ಯೋಗಿಕ ಶಿಕ್ಷಣವು ಕೇಂದ್ರ
ನಿಯಂತ್ರಣ ಸಮಿತಿಯ ಆಧೀನದಲ್ಲಿರಬೇಕು. ಈ ಸಮಿತಿಯಲ್ಲಿ ಎಲ್ಲ ಹಿತಗಳ ಪ್ರತಿನಿಧಿ
ಗಳಿರಬೇಕು. ಶಕ್ಯವಿದ್ದಷ್ಟು ಈ ಸಮಿತಿಯನ್ನು ಸ್ಥಾಪಿಸಬೇಕು.

(೧೯) ಹಿಂದುಸ್ಥಾನದಲ್ಲಿಯ ಔದ್ಯೋಗಿಕ ಸಂಸ್ಥೆಗಳ ಮುಖ್ಯಾಧ್ಯಾಪಕರ ಸಮಿತಿಯ ರಚ
ನೆಯು ದೇಶದಲ್ಲಿಯ ಔದ್ಯೋಗಿಕ (ಯಾಂತ್ರಿಕ) ಶಿಕ್ಷಣವನ್ನೆಲ್ಲ ಕೇಂದ್ರೀಕರಿಸಲು ತೀರ ಅ
ನಿವಾರ್ಯವಾದ ಯೋಜನೆಯೆಂದು ಹೇಳಬಹುದು. ಕೇಂದ್ರ ನಿಯಂತ್ರಣ ಸಂಸ್ಥೆಯಲ್ಲಿ ಅದಕ್ಕೆ
ಸರಿಯಾದ ಪ್ರಾತಿನಿಧ್ಯವಿರತಕ್ಕದ್ದು.

(೨೦) ೧೮ ನೇ ಕಲಮಿನಲ್ಲಿ ಹೇಳಿದ ಕರಾರಕ್ಕೊಳಪಟ್ಟು ಎಲ್ಲ ಔದ್ಯೋಗಿಕ ಶಿಕ್ಷಣದ ಆ
ಳಿತವು ಕೇಂದ್ರ ಅಥವಾ ಪ್ರಾಂತಿಕ ಸರಕಾರದ ಕಡೆಗೆ ಇರತಕ್ಕದ್ದು. ಇದರ ಸಲುವಾಗಿ ಸ್ವತಂ
ತ್ರವೇತನವಾದ ನೋಲ್ಪಿಚಾರಕರು ಇರತಕ್ಕದ್ದು. ಶಿಕ್ಷಣ ಖಾತೆಯು ಔದ್ಯೋಗಿಕ ಮತ್ತು
ವ್ಯಾಪಾರಕ್ಕೆ ಸಂಬಂಧಿಸಿದ ಎಲ್ಲ ಖಾತೆಗಳ ಕೂಡ ನಿಕಟ ಸಂಬಂಧವನ್ನಿಟ್ಟುಕೊಳ್ಳತಕ್ಕದ್ದು.

(೨೧) ಮೇಲಿನ ತರಗತಿಗಳ ಎಲ್ಲ ಔದ್ಯೋಗಿಕ ಶಿಕ್ಷಣವು ಕೇಂದ್ರ ಸರಕಾರದಿಂದ ನ
ಯಿಸಲ್ಪಡುವದರಿಂದ ಬೇಕಾಗುವ ಹಣದ ಹೊಣೆಯನ್ನು ಕೇಂದ್ರಸರಕಾರವೇ ಪಹಿಸತಕ್ಕದ್ದು.

ಈ ಪ್ರಕರಣದಲ್ಲಿಯ ಮುಖ್ಯನಿರ್ಣಯಗಳು ಕೆಳಗಿನಂತಿವೆ:—

(ಅ) ಮುಂಬರುವ ಯುದ್ಧೋತ್ತರ ಉದ್ಯೋಗ ಮತ್ತು ವ್ಯಾಪಾರಗಳಿಗೆ ಬೇ
ಗುವ ಜಾಣ್ಮೆಯುಳ್ಳ ಔದ್ಯೋಗಿಕ ಕೆಲಸಗಾರರ ಬೇಡಿಕೆಗಳನ್ನು ಪೂರೈಸ
ಮತ್ತು ವ್ಯವಹಾರಿಕ ಕಾರ್ಯಕ್ರಮದ ಹೆಚ್ಚಿನ ಲಾಭವನ್ನು ಪಡೆಯುವ
ಮನಸ್ಸಿನ ಒಲುವುಗಳಿಗೆ ಸಾಕಷ್ಟು ಪುಷ್ಟಿಯನ್ನು ಕೊಡುವ ಉದ್ದೇಶದಿಂ
ಕಾರ್ಯತತ್ಪರತೆಯುಳ್ಳ ಔದ್ಯೋಗಿಕ ಸಮಿತಿಯ ವರದಿಯಲ್ಲಿ ಕಾಣಿ
ಸಿಕೊಳ್ಳಲಾಗಿರುವ ಶಿಫಾರಸಿನನ್ವಯ ಔದ್ಯೋಗಿಕ ಶಿಕ್ಷಣದ ಎಲ್ಲ ತರಗತಿಗಳ ಶಿಕ್ಷ
ಣಪದ್ಧತಿಯು ತೀರ ಅವಶ್ಯವಾದ ವಿಷಯ.

(ಬ) ಔದ್ಯೋಗಿಕ ಶಿಕ್ಷಣದ ಸ್ವರೂಪ ಹಾಗೂ ಅಸ್ಪದವನ್ನು ನಿರ್ಣಯಿಸುವ
ಆಬಟವುಡ್ ಸಮಿತಿಯ ಶಿಫಾರಸುಗಳಿಗೆ ಯೋಗ್ಯ ಲಕ್ಷ್ಯವನ್ನು
ಪೂರೈಸಬೇಕು.

(ಕ) ಈ ಪ್ರಕರಣದಲ್ಲಿ ಮಾಡಿದ ಸೂಚನೆಗಳು ಕಾರ್ಯರೂಪದಲ್ಲಿ ಬ
ಕಾದರೆ ಸುಮಾರು ಹತ್ತು ಕೋಟಿ, ನಿಶ್ಚಿತವಾಗಿ ಎಂಟು ಕೋಟಿ ರೂಪಾ
ಗಳ ಪೆಚ್ಚವು ತಗಲುವದು.

ಸರಕಾರಿ

ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ್, ಧಾರವಾಡ

ಸುವರ್ಣ ಮಹೋತ್ಸವದ ಸಮಾರಂಭಗಳು

ಪ್ರಾರಂಭ

ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಸುವರ್ಣಮಹೋತ್ಸವವು ಮುಂಬಯಿ ಪ್ರಾಂತದ ಶಿಕ್ಷಣ ಖಾತೆಯ ಐಸಿಎಸ್ ಡಾಯರೆಕ್ಟರರೂ, ರ್ಯಾಂಗಲರರೂ ಆಚ್ಚಕನ್ನಡಿಗರೂ ಆದ ಶ್ರೀಮಾನ್ ಡಿ. ಸಿ. ಪಾವಟೆ ಎಂ. ಎ. (ಕೆಂಬ್ರಿಜ್) ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಮಹೋತ್ಸವಕ್ಕೆ ಕಲೆಕ್ಟರರಾದ ಶ್ರೀ. ಬರ್ವೆ, ಶ್ರೀಮತಿ ಬರ್ವೆ, ಎ. ಇನಸ್ಪೆಕ್ಟರರಾದ ಮಿ. ಖಾನಸಾಹೇಬರು, ಹಾಗೂ ಜಿಲ್ಲೆಯ ಎಲ್ಲ ಶಿಕ್ಷಕರೂ, ಶಿಕ್ಷಕಿಯರೂ ಶಿಕ್ಷಣಾಭಿಮಾನಿಗಳೂ ಆಗಮಿಸಿದ್ದರು. ಪ್ರಾಥ್ಯ. ಸ್ಕೂಲಿನ ಹಾಗೂ ಕಾಲೇಜದ ಕಟ್ಟಡಗಳು ತಳಿರು ತೋರಣಗಳಿಂದ ಅಲಂಕೃತವಾಗಿದ್ದುವು. ಕಾರ್ಯಕಲಾಪಗಳು ಮಧ್ಯಾನ್ನ ೪ ಘಂಟೆಗೆ ಪ್ರಾರಂಭವಾದವು. ಪ್ರಾರ್ಥನೆಯ ನಂತರ ಕೆಲವು ಮನೋರಂಜಕ ಕಾರ್ಯಗಳು ಜರುಗಿದವು. ಕುಮಾರಿ ಸಿಂಧು ಮುಧೋಳಕರ ಹಾಗು ಕು. ಮಾಲತಿ ಕೋಟೂರ ಇವರ ಗೀತನೃತ್ಯಗಳು ಪ್ರಶಂಸನೀಯವಾಗಿದ್ದವು.

ವರದಿ ವಾಚನ

ಮಿಸ್ ಇ. ಎಸ್. ಎಲಾಯಿಜಾ ಅವರು

ಅನಂತರ ಕಾಲೇಜದ ಲೇಡಿ ಸುಪರಿಂಟೆಂಡಂಟರಾದ ಮಿಸ್ ಎಲಾಯಿಜಾರವರು ಎಲ್ಲರನ್ನೂ ಸ್ವಾಗತಿಸಿ ಕಾಲೇಜದಲ್ಲಿ ನಡೆಯುತ್ತಿರುವ ಶಿಕ್ಷಣಕ್ರಮ ಹಾಗೂ ಕಾಲೇಜದ ಇತಿಹಾಸವನ್ನು ವರ್ಣಿಸಿದರು. ಸನ್ ೧೮೯೫ರಲ್ಲಿ ಕೇವಲ ೮ ವಿದ್ಯಾರ್ಥಿನಿಯರಿಂದ ಪ್ರಾರಂಭವಾದ ಈ ಸಂಸ್ಥೆಯು ಇಂದು ೧೩೦ ವಿದ್ಯಾರ್ಥಿನಿಗಳುಳ್ಳ ಭವ್ಯ ಸಂಸ್ಥೆಯಾಗಿ ಬೆಳೆದು ಬಂದು ಅಭಿವೃದ್ಧಿಯನ್ನು ಹೊಂದುತ್ತಲಿದೆ. ಕಾಲೇಜಿಗೆ ಪ್ರಾಕ್ಟೀಸಿಂಗ ಸ್ಕೂಲು ಜೋಡಿಸಲ್ಪಟ್ಟು, ವಸತಿಗೃಹವೂ ನಿರ್ಮಾಣವಾಗಿದೆ. ಕಾಲೇಜದ ನುರಿತ ಶಿಕ್ಷಕರ ಸಹಾಯವಿದೆ. ಪರೀಕ್ಷೆಗಳ ಫಲಿತಾಂಶವೂ ಪ್ರಶಂಸನೀಯವಾಗಿದೆ. ಟ್ರೇನಿಂಗದ ಅವಧಿಯು ೨ ವರ್ಷಗಳವರೆಗೆ ಇದು ಈ ಟ್ರೇನಿಂಗೋತ್ತರ ಐದು ಜಿಲ್ಲೆಗಳಿಂದ ಶಿಕ್ಷಕಿಯರನ್ನು ಆರಿಸಲಾಗುತ್ತದೆ. ಶಿಕ್ಷಕಿವಿದ್ಯಾರ್ಥಿನಿಯರ ವಿಷಯೇತರ ಚಟುವಟಿಕೆಗಳಿಗೂ ಆರೋಗ್ಯಕ್ಕೂ ಹಾಗು ಹೆಣ್ಣುಮಕ್ಕಳಿಗೆ ಬೇಕಾಗುವ ಎಲ್ಲ ವಿಧವಾದ ಜ್ಞಾನವೆಳವಣಿಗೆಗೂ, ಹೆಚ್ಚು ಲಕ್ಷ್ಯ ದೊರೆಯುತ್ತಲಿದೆ. ಬಳಿಕ ಲೇಡಿ ಸಾಹೇಬರು ಕಾಲೇಜದ ಅಲೆವಾಂಕ್ಷೆಗಳನ್ನು ಕುರಿತು ಮಾತನಾಡಿದರು. ನಂತರ ಲೇಡೀ ಸಾಹೇಬರು ಅಧ್ಯಕ್ಷರಿಗೂ, ಎ. ಇನಸ್ಪೆಕ್ಟರರಿಗೂ, ಶ್ರೀಮತಿ ಬರ್ವೆಯವರಿಗೂ ಪೂಮಾಲೆಗಳನ್ನು ಅರ್ಪಿಸಿದರು.

ಅಧ್ಯಕ್ಷರ ಭಾಷಣ



ಶ್ರೀ ಡಿ. ಸಿ. ಪಾವಟೆ ಅವರು

ಆನಂತರ ಅಧ್ಯಕ್ಷರಾದ ಶ್ರೀ. ಡಿ.ಸಿ. ಪಾವಟೆ ಅವರು ಕನ್ನಡದಲ್ಲಿ ಮಾತನಾಡಿದರು. "ನೀವು ಈ ದಿವಸ ಈ ಶಿಕ್ಷಣಸಂಸ್ಥೆಯ ಸುವರ್ಣಮಹೋತ್ಸವವನ್ನು ನೆರವೇರಿಸುತ್ತಿರುವ ಈ ಸುವರ್ಣಸಂಧಿಯಲ್ಲಿ ನಿಮ್ಮೊಡನೆ ನಾನು ಬೆರೆತುಕೊಂಡಿರುವದು ನಿಜವಾಗಿಯೂ ಅತ್ಯಾನಂದದ ಸಂಗತಿಯಾಗಿದೆ. ಜಗತ್ತು ವಿನಾಶಕಾರಕ ಮಹಾಯುದ್ಧದ ಕುತ್ತಿನಿಂದ ಪಾರಾಗಿರುತ್ತದೆ. ತನ್ಮೂಲಕ ಮಿತ್ರರಿಗೆ ದೊರೆತ ವಿಜಯೋತ್ಸವವು ನಿಮ್ಮ ಸುವರ್ಣ ಉತ್ಸವಕ್ಕೆ ಹೊಂದಿಕೆಯಾಗಿರುವದು ಇನ್ನೂ ಆನಂದದ ಸಂಗತಿ.

ಲೇಡೀ ಸುಪರಿಂಟೆಂಡಂಟರು ಈ ಸಂಸ್ಥೆಯ ಚಿಕ್ಕದಾದರೂ ಚೊಕ್ಕಾದ ಚರಿತ್ರೆಯನ್ನು ಬಿತ್ತರಿಸಿರುವರು. ಈ ಟ್ರೇನಿಂಗ ವರ್ಗವು ಮಿ ಜೆ. ಎಫ್. ಮ್ಯೂಅರ್. ಆಯ್. ಸಿ. ಎಸ್. ಅವರ ಸಲಹೆ ಸೂಚನೆಯ ಮೇರೆಗೆ ಪ್ರಾರಂಭಿಸಲ್ಪಟ್ಟಿತು. ಮುಂದೆ ಉತ್ತರೋತ್ತರ ಅಭಿವೃದ್ಧಿಯನ್ನು ಪಡೆಯುತ್ತ ನಮ್ಮದ ಸ್ಥಿತಿಗೆ ಬಂದು ಮುಂದುವರಿಯುವ ಮಾರ್ಗದಲ್ಲಿದೆ ಟ್ರೇನಿಂಗ ಸಂಸ್ಥೆಗಳು ರಾಷ್ಟ್ರೀಯ ಶಿಕ್ಷಣದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದಿವೆ. ಇದನ್ನು ಅನುಲಕ್ಷಿಸಿ ಕಳೆದ ೫ವರ್ಷಗಳಿಂದೀಚೆಗೆ ಶಿಕ್ಷಣಖಾತೆಯವರು ಸರಕಾರೀ ಟ್ರೇನಿಂಗ ಸಂಸ್ಥೆಗಳನ್ನು ಸ್ಥಾಪಿಸುವದಕ್ಕಿಂತ ಖಾಸಗಿ ಸಂಸ್ಥೆಗಳಿಗೆ ಮುಕ್ತ ಹಸ್ತದಿಂದ ಧನಸಹಾಯವನ್ನು ಮಾಡುತ್ತ ಬಂದಿರುವರಲ್ಲದೆ ಹೊಸ ಸಂಸ್ಥೆಗಳನ್ನು ಪ್ರಾರಂಭಿಸಲು ಉತ್ತೇಜನ ಕೊಡುತ್ತಲಿದ್ದಾರೆ.

ಗಂಡುಮಕ್ಕಳ ಹಾಗೂ ಹೆಣ್ಣುಮಕ್ಕಳ ಪ್ರಮಾಣಪರೀಕ್ಷೆಗಳಲ್ಲಿದ್ದ ಅಂತರವು ಇಂದು ಇಲ್ಲದಂತಾಗಿದೆ. ಸರಿಸಮಾನತೆಯನ್ನು ಎಣಿಸಿ ಗೃಹಿಣಿಯರಿಗೆ ಯುಕ್ತವಾದ ವಿಷಯಗಳೂ ಅಭ್ಯಾಸ ಪತ್ರಿಕೆಯಲ್ಲಿ ಅಡಕವಾಗಿವೆ. ಹೆಣ್ಣುಮಕ್ಕಳು ಭಾವಿ ನಾಗರಿಕ ಮತ್ತು ಸಮಾಜದ ಬುದ್ಧಿವಂತ ಘಟಕಳಾಗುವದಕ್ಕಾಗಿ ಹುಡುಗಿಯರ ವಿದ್ಯಾಭ್ಯಾಸದ ಕಡೆಗೆ ಹುಡುಗರ ವಿದ್ಯಾಭ್ಯಾಸದಷ್ಟೇ ಲಕ್ಷ್ಯವಿಟ್ಟು ಪೂರೈಸಬೇಕು. ಮನೆತನದ ಯಜಮಾನನಿಗೆ ಬೇಕಾಗುವ ಸರ್ವತೋಮುಖವಾದ ವಿಷಯಗಳ ಕಡೆಗೆ ಗಮನವನ್ನೀಯಲೇಬೇಕು. ವ್ಯವಹಾರಿಕ ಚಟುವಟಿಕೆಯು ಎಲ್ಲ ಶಿಕ್ಷಣದ ಆಧಾರ ಸ್ತಂಭವಾಗಿದೆ.

ಈ ಸಂಸ್ಥೆಯಲ್ಲಿ ನೀವು ನಿಮ್ಮ ಉದ್ಯೋಗದ ಜಾಣ್ಮೆಯನ್ನು ಸಂಪಾದಿಸುವದಲ್ಲದೆ ಒಳ್ಳೆಯ ತರಹದ ಸಾಮಾನ್ಯ ಶಿಕ್ಷಣವನ್ನೂ ಸಂಪಾದಿಸಬೇಕು. ಶಿಕ್ಷಣವು ಕೇವಲ ಜೀವನದ ಪೂರ್ವ ಸಿದ್ಧತೆ ಮಾತ್ರವಲ್ಲದೆ ಪ್ರತ್ಯಕ್ಷ ಜೀವನವೇ ಆಗಿದೆ. ಶಿಕ್ಷಣವು ಜೀವಮಾನದ ವರೆಗೂ ಸಾಗಿಯೇ ಇರುವದು. ಕಲಿಸುವದು ಉತ್ತಮ ಉದ್ಯೋಗವಲ್ಲದೆ ಪ್ರೀತಿಯ ವ್ಯವಸಾಯವೂ ಆಗಿದೆ. ನಿಮಗೆ ದೊರಕುವ ಪ್ರತಿಫಲಗಳು ಸತ್ಯವಾದುವು, ನಿತ್ಯವಾದುವು. ರಾಷ್ಟ್ರನಿರ್ಮಾಣ

ಕಾರ್ಯದಲ್ಲಿ ನೀವು ಕೈದೀವಟಿಗೆಗಳು, ಚಿಕ್ಕ ಮಕ್ಕಳಲ್ಲಿ ಅಂತರಂಗದಲ್ಲಿ ಹುದುಗಿದ ಅಧ್ಯಾತ್ಮಿಕ ದಿವ್ಯ ಶಕ್ತಿಗಳನ್ನು, ಮಗುವಿನ ನೈತಿಕಜೀವನದ ಆದರ್ಶ, ಅದರ ಅರಿವು, ಇವುಗಳನ್ನು ವಿಕಾಸ ಗೊಳಿಸುವದು ನಿಮ್ಮನ್ನೇ ಕೂಡಿದೆ. ಈ ಮಹತ್ತರ ಕಾರ್ಯದಲ್ಲಿ ಹೆಮ್ಮೆಯಿದೆ, ಹಿರಿಮೆಯಿದೆ, ಎಂದು ಭಾವಿಸಬೇಕು. ಜಗತ್ತಿನ ಐತಿಹ್ಯದ ಯಾವ ಅವಧಿಯಲ್ಲಿಯೂ ಈಗಿನಂತೆ ಶಿಕ್ಷಕನಾಗಿ ರುವದು ಪವಿತ್ರವಾದ ಹಾಗೂ ಶ್ರೇಷ್ಠವಾದ ಕಾರ್ಯವೆಂದು ಎಣಿಸಲ್ಪಟ್ಟಿಲ್ಲ, ಇಂದು ಸಾರ್ವತ್ರಿಕ ಶಿಕ್ಷಣಕ್ಕಾಗಿ ಅಪರಿಮಿತ ಉತ್ಸಾಹವು ಮೂಡಿದೆ. ಈಗ ಅಖಂಡವಾದ ಜಗತ್ತು ವಿಚಾರ ಸಾಮ್ರಾ ಜ್ಯದ ಅತ್ಯಧಿಕವಾದ ಮೇಲಿನಮಟ್ಟಿಕ್ಕೆ ಮುಟ್ಟುತ್ತಿದೆ. ಜನ ಸಾಮಾನ್ಯರನ್ನು ಅಜ್ಞಾನಾಂಧ ಕಾರದಿಂದ ಬಡಿದೆಬ್ಬಿಸಿ ಸುಜ್ಞಾನಪ್ರಕಾಶದಲ್ಲಿ ಅವರು ಬೆಳಗಿ ಬಾಳುವಂತೆ ಮಾಡುವ ನಿಮ್ಮ ಮಹತ್ಕೃತಿಯಿಂದ ಅಮೋಘವಾದ ಸೇವೆಯನ್ನು ಸಲ್ಲಿಸುತ್ತಿರುವಿರಿ. ಈ ಕಾರ್ಯದಲ್ಲಿ ದೇವರು ಯಶಸ್ಸನ್ನೂ ಸೌಭಾಗ್ಯವನ್ನೂ ದಯಪಾಲಿಸಲಿ, ಎಂದು ಹೇಳಿ ಪೀಠವನ್ನು ಅಲಂಕರಿಸಿದರು. ನಂತರ ಕಾಲೇಜದ ಶಿಕ್ಷಕರಲ್ಲೊಬ್ಬರಾದ ಶ್ರೀ. ಆರ್. ಸಿ. ತಂಬದ ಅವರು ಸಮಾರಂಭದ ಯಶಸ್ಸನ್ನು ಕೋರಿ ಡೈರೆಕ್ಟರ ಮೊದಲಾದ ಮಹನೀಯರಿಂದ ಬಂದ ಶುಭ ಸಂದೇಶಗಳನ್ನು ಓದಿ, ಮತ್ತು ನಾನಾರೀತಿಯಿಂದ ನೆರವಾದ ಸೋದರ ಸಂಸ್ಥೆಗಳ ಹಾಗೂ ಅನೇಕ ಬಗೆಯಿಂದ ಸಹಾಯ ಮಾಡಿದವರೆಲ್ಲರ ಅಭಾರವನ್ನಡಿ ಮಾಡಿದನಂತರ ೭ ಘಂಟೆಗೆ ಸಮಾರಂಭವು ಮುಗಿಯಿತು.

ವಿವಿಧ ವಿನೋದಾವಳಿಗಳು.

ರಾತ್ರಿ ೧೦ ಘಂಟೆಗೆ ನೃತ್ಯ, ಪ್ರಹಸನ, ಕರ್ನಾಟಕಗೀತೆಯ ನಾಟ್ಯ, ಮತ್ತು "ನರಸಿಂಹ ಯರ ವಕೀಲಿ" ಎಂಬ ಏಕಾಂಕನಾಟಕ ಇತ್ಯಾದಿಗಳು ಅಭಿನಯಿಸಿ ತೋರಿಸಲ್ಪಟ್ಟವು. ಏಕಾಂಕನಾಟಕವು ಕಲಾತ್ಮಕವಾಗಿ ಎಲ್ಲರೂ ತಲೆದೂಗುವಂತೆ ನಟಿಸಲ್ಪಟ್ಟಿತು. ನಾಟಕದನಂತರ ಸುವರ್ಣಮಹೋತ್ಸವದ ಆರತಿ ಗೀತದ ನಂತರ ಕಾರ್ಯಕ್ರಮವು ಕೊನೆಗೊಂಡಿತು.

ಮಾತೃದಿನಾಚರಣೆ ಹಾಗೂ ಪಾರಿತೋಷಕ ಸಮಾರಂಭ

ತಾ. ೨೩-೧೧-೪೫

ಮರುದಿನ ಮಹೋತ್ಸವದ ಅಂಗವಾಗಿ ಮಾತೃದಿನಾಚರಣೆಯು ಆಚರಿಸಲ್ಪಟ್ಟಿತು. ಈ ಭಾಗದ ಎ. ಇನಸ್ಪೆಕ್ಟರರ ಧರ್ಮಪತ್ನಿಯವರಾದ ಶ್ರೀಮತಿ ಎ. ಖಾನರವರ ಅಧ್ಯಕ್ಷತೆಯಲ್ಲಿ ಕಾರ್ಯ ಕಲಾಪಗಳು ನೆರವೇರಿದವು. ಸಮಾರಂಭಕ್ಕೆ ಜಿಲ್ಲೆಯ ನಾನಾಭಾಗಗಳಿಂದ ಶಿಕ್ಷಕೆಯರು ಯರೂ ಪ್ರತಿಷ್ಠಿತ ಮಹಿಳೆಯರೂ ಆಗಮಿಸಿದ್ದರು. ವಿವಿಧ ವಿನೋದಾವಳಿಗಳ ನಂತರ ಶ್ರೀ. ಸು. ಎಲಾಯಿಜ್ಯಾ ಅವರು ಅಧ್ಯಕ್ಷರ ಪರಿಚಯವನ್ನು ಮಾಡಿ, ಮಾತೃ ದಿನಾಚರಣೆಯ ಮಹತ್ವವನ್ನು ತಿಳುಹಿಕೊಟ್ಟರು.

ಅಧ್ಯಕ್ಷರಿಗೆ ಪೂಮಾಲೆಗಳನ್ನರ್ಪಿಸಿದ ನಂತರ, ಬೇರೆ ಬೇರೆ ಕಾರ್ಯಗಳಲ್ಲಿ ನೈಪುಣ್ಯತೆ ಯನ್ನು ತೋರಿಸಿದ ವಿದ್ಯಾರ್ಥಿನಿಯರಿಗೆ, ಅಧ್ಯಕ್ಷರು ಪಾರಿತೋಷಕಗಳನ್ನು ಅರ್ಪಿಸಿದರು. ನಂತರ ಉರ್ದು ಭಾಷೆಯಲ್ಲಿ ತಮ್ಮ ಚೊಕ್ಕ ಭಾಷಣವನ್ನು ಮಾಡಿದರು— "ಮಾತೃ ದಿನಾಚರಣೆಯಿಂದ ಶಿಕ್ಷಿಕೆಯರೂ ತಾಯಂದಿರೂ ಒಂದೆಡೆ ಸೇರಿ ವಿಚಾರ ವಿನಿಮಯ ಮಾಡಲಿಕ್ಕೆ ಸುಸಂಧಿ ದೊರೆಯುವದು, ಉಳಿದ ಮಹಿಳೆಯರಿಗೆ ಪ್ರೋತ್ಸಾಹವನ್ನೀಯಲು ಹದವಾದ ಕಾಲ·

ಕಲೆಯ ದೃಷ್ಟಿಯಿಂದ ನೀವು ಪ್ರದರ್ಶಿಸಿದ ವಸ್ತುಗಳು, ಮಾದರಿಗಳು, ನಕ್ಷಾಶಗಳು ಪ್ರಶಂಸನೀಯವಾಗಿವೆ. ಹೊಲಿಗೆಯ ಕೆಲಸವು ಪ್ರಾವೀಣ್ಯತೆಯ ಹಿರಿಮೆಟ್ಟನ್ನು ಮುಟ್ಟಿದೆ. ಶಿಸ್ತು ಹಾಗೂ ವಿನಯಗಳು ಅಚ್ಚು ಮೆಚ್ಚಿನವಾಗಿವೆ. ವಿದ್ಯಾರ್ಥಿಗಳ ಸಾಮಾನ್ಯ ಬೆಳವಣಿಗೆಯ ಕಡೆಗೆ ನಿಮ್ಮ ಸಂಸ್ಥೆಯಂತೆ ಮಹತ್ವ ಕೊಡುವ ಸಂಸ್ಥೆಗಳು ಕಡಿಮೆ. ವಿದ್ಯಾರ್ಥಿನಿಯರ ಡ್ರಿಲ್ ನೃತ್ಯ, ಕಾವ್ಯಗಾಯನಗಳು ಮನೋರಂಜಕವಾಗಿವೆ. ಈಗ ಪಾರಿತೋಷಕಗಳನ್ನು ದೊರಕಿಸಿದ ವಿದ್ಯಾರ್ಥಿನಿಯರಂತೆ ಇನ್ನಿತರರೂ ಪ್ರಯತ್ನ ಮಾಡಿ ಪಾರಿತೋಷಕಗಳನ್ನು ಪಡೆಯಲಿ! ಎಂದು ಹೇಳಿ ಲೇಡಿ ಸುಪರಿಂಟೆಂಡಂಟರಿಗೂ, ಕಾಲೇಜಿನ ಶಿಕ್ಷಕರಿಗೂ, ಶಿಕ್ಷಿಕೆಯರಿಗೂ ಪ್ರಾಥ. ಸ್ಕೂಲಿನ ಹೆಡ್ ಮಿಸ್ಟ್ರೆಸರಿಗೂ, ಸಮಾರಂಭದ ಯಶಸ್ವಿತೆಗಾಗಿ ಪ್ರಯತ್ನಿಸಿದ ಎಲ್ಲ ಶಿ. ವಿದ್ಯಾರ್ಥಿನಿಯರಿಗೂ ಅಭಿನಂದಿಸಿ, ಸಂಸ್ಥೆಯು ಉತ್ತರೋತ್ತರ ಅಭಿವೃದ್ಧಿಯನ್ನು ಪಡೆಯಲೆಂದೂ, ನುರಿತ ಶಿಕ್ಷಿಕೆಯರಿಂದ ದೇಶದ ಪ್ರಗತಿಯು ಮುಂದುವರಿಯಲೆಂದೂ ಹಾರೈಸಿ ಭಾಷಣವನ್ನು ಮುಗಿಸಿದರು. ಸೂಚಿಶಿಲ್ಪದ ಜಾಣ್ಮೆಗಾಗಿ ಒಂದು ಬೆಳ್ಳಿಯ ಪದಕವನ್ನು ಕಾಲೇಜಿಗೆ ಅರ್ಪಿಸಿದರು.

ಈ ಉರ್ದು ಭಾಷಣವನ್ನು ಕಾಲೇಜಿನ ಶಿಕ್ಷಿಕೆಯರಲ್ಲಿ ಒಬ್ಬರಾದ ಮಿಸ್. ಸುಶೀಲಾಬಾಯಿ ಧಾರೇಶ್ವರ ಅವರು ಕನ್ನಡದಲ್ಲಿ ಓದಿದ ಮೇಲೆ ಅಧ್ಯಕ್ಷರಿಗೂ ಇನ್ನುಳಿದ ಮಹಿಳೆಯರಿಗೂ ಕೃತಜ್ಞತೆಯನ್ನು ಸಲ್ಲಿಸಿದರು. ರಾಷ್ಟ್ರಗೀತೆಯ ನಂತರ ಸಮಾರಂಭವು ಕೊನೆಗೊಂಡಿತು.

ಪ್ರದರ್ಶನ

ಪ್ರಾಥ. ಸ್ಕೂಲಿನ ಅಭ್ಯಾಸ ಪತ್ರಿಕೆಯ ಮೇರೆಗೆ ಚಿತ್ರಕಲೆ, ಕೈಕೆಲಸ, ಮಾದರಿ, ಪಾಕಶಾಸ್ತ್ರ, ಕಸೂತಿ ಮೊದಲಾದ ವಿಷಯಗಳನ್ನು ಕುರಿತು ಏರ್ಪಡಿಸಿದ ಪ್ರದರ್ಶನವು ಪ್ರೇಕ್ಷಣೀಯವಾಗಿತ್ತು. ಐತಿಹಾಸಿಕ ವಸ್ತುಗಳೂ, ಚಿಕ್ಕ ಮಕ್ಕಳಿಗೆ ಕಲಿಸುವ ಉಪಕರಣಗಳೂ ಸುತರಾಂ ಮನೋರಂಜಕವಾಗಿದ್ದುವು. ಕೈಕೆಲಸವಂತೂ (ಕಸೂತಿಯ ಕಲೆ) ಮೈವೆತ್ತು ಬಂದು ಸೀರೆಯ ರೂಪದಲ್ಲಿ ನಿಂತಿತ್ತು. ಆ ಶ್ರೇಷ್ಠ ಕಸೂತಿಯ ಕಲೆಯು, ಕನ್ನಡನಾಡು ಕಲೆಯನಾಡು ಎಂದು ಸಾರುವಂತಿತ್ತು. ಪ್ರದರ್ಶನದ ವಸ್ತುಗಳನ್ನು ಇಟ್ಟರೀತಿಯೂ ಮನಮೆಚ್ಚುವಂತಹದಿದ್ದಿತು. ಸಂಸ್ಥೆಯು ಬಹು ಮುಖ್ಯವಾದ ಧ್ಯೇಯವನ್ನಿಟ್ಟುಕೊಂಡು ಸಾಧಿಸುತ್ತಿದೆ ಎಂದು ಸಾರಿ ಹೇಳುತ್ತಿತ್ತು.

ಸಂದೇಶಗಳು

ಸರ್ವಶ್ರೀ. ಆರ್. ಪಿ. ಪಟವರ್ಧನ, ಡಿ. ಪಿ. ಐ, ಕೆ. ಆಯ್. ಗುಂಜೀಕರ, ಬಿ. ಜಿ. ನೇನೆ, ಸ್ಮಿ. ವ್ಹಿ. ಕಾಮತ್, ಕೆ. ಎಸ್. ವಕೀಲ್, ಘಾಟೆ, ರ್ಯಾಂಗಲರ್ ಕಟ್ಟಿ, ಎಸ್. ಆರ್. ಕಾವಡೆ ಎಸ್. ಆರ್. ದೇಸಾಯಿ, ಬಿ. ಯಂ. ಮೀನವಾಂಸಿ, ಎಸ್. ಆರ್. ತಟ್ಟಿ, ಎ. ಡಬ್ಲ್ಯೂ. ಎಂ. ಎಚ್. ಶೇಖ್, ಜಿ. ಎನ್. ಲಾಗು, ಮಿಸ್. ಬೆಂಜಾಮಿನ್, ಜೆ. ಪಿ. ನಾಯಕ, ಪ್ರಿನ್ಸಿಪಾಲ್ ಜೊಸೆಫ್, ಮಿಸ್. ಬಿ. ಎಚ್. ಜೆ. ರುಸ್ತೊಮಜೀ, ಡಿ. ಜಿ. ಬಡಿಗೇರ, ರಾ. ಬ. ಬಿ. ಜೆ. ಜಿ ಶಾಸ್ತ್ರಿ, ಮಿಸ್. ಎಚ್. ವಿ. ಟ್ವೆಲ್ಸ್, ಪ್ರೊ. ನೊಸೆಸ್ ಎಜಕೇಲ್, ಪ್ರೊ. ಟಿ. ಕೆ. ದೇವಲಾಲಕರ್, ಮೇರಿ ಬಿ. ಹಾರ್ಡಿಂಜ್, ಕಿಂಡರ ಗಾರ್ಟನ್ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲ್ ಮುಂತಾದ ಮಹನೀಯರು ಸುವರ್ಣ ಮಹೋತ್ಸವವು ಯಶಸ್ವಿಯಾಗಿ ಜರುಗಲೆಂದು ಹಾರೈಸುವ ಸಂದೇಶಗಳನ್ನು ಕಳಿಸಿದ್ದರು.

ಆಯ-ವ್ಯಯ

ಸುವರ್ಣ ಮಹೋತ್ಸವದ ಆಯವ್ಯಯಗಳ ಸಂಕ್ಷಿಪ್ತ ವಿವರವನ್ನು ಮಿಸ್. ಇ. ಎಸ್. ಎಲಾಯಿಜಾ ಅವರು ಈ ರೀತಿಯಾಗಿ ಕಳಿಸಿದ್ದಾರೆ:—

ಆಯ (ರೂಪಾಯಿ)		ವ್ಯಯ (ರೂಪಾಯಿ)	
೯೨೧-೦-೦	ಹಿಂದಿನ ವಿದ್ಯಾರ್ಥಿನಿಯರಿಂದ ಹಾಗೂ ಹೊರಗಿನವರಿಂದ	೭೩೫-೧೩-೯	ಪ್ರದರ್ಶನ, ರಂಗಭೂಮಿಯ ಸಲಕರಣೆ, ಇತ್ಯಾದಿ
೨೫೬-೦-೦	ಇಂದಿನ ವಿದ್ಯಾರ್ಥಿನಿಯರಿಂದ	೩೧೬-೦-೦	ರಿಪೋರ್ಟ್, ಆಮಂತ್ರಣ ಪತ್ರಿಕೆಗಳ ಮುದ್ರಣ, ಬ್ಲಾಕ್‌ಗಳು ಇತ್ಯಾದಿ.
೯೦-೦-೦	ಪ್ರಾಕ್ಟೀಸಿಂಗ ಸ್ಕೂಲಿನ ಬಾಲಿಕೆಯರಿಂದ	೧೩೧-೬-೦	ಫೋಟೋ
೨೦೦-೦-೦	ಸರಕಾರಿ ಗ್ರ್ಯಾಂಟ	೬೮-೮-೦	ಪಾರಿತೋಷಕಗಳು
೧೪೬೬-೦-೦	ಅಂತೂ	೧೫೬-೦-೦	ಮಂಟಪ, ಅಲಂಕಾರ, ಇತ್ಯಾದಿ.
		೧೧೩-೩-೦	ಉಪಹಾರ
		೩೪೯-೫-೦	ಇತರೇತರ ವೆಚ್ಚ
		೧೪೬೦-೩-೯	ಅಂತೂ
		೧೪೬೦-೩-೯	ಒಟ್ಟು ವ್ಯಯ
		೧೪೬೬-೦-೦	ಒಟ್ಟು ಆಯ
		೪೦೩-೩-೯	ಕೊರತೆ

ಮೇಲೆ ಕಾಣಿಸಿದ ಕೊರತೆ ಬಿದ್ದ ಹಣ (ರೂ. ೪೦೩-೩-೯)ವನ್ನು ಕಾಲೇಜ ಹಾಗು ಪ್ರಾಕ್ಟೀ. ಸ್ಕೂಲಗಳ ಶಿಕ್ಷಕ-ಶಿಕ್ಷಿಕೆಯರು ಪೂರೈಸಲು ಸಂತೋಷದಿಂದ ಒಪ್ಪಿಕೊಂಡಿದ್ದಾರೆ.

ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ ೧೯೪೬

೧. ಕೆಳಗೆ ಬರೆದಂತೆ ಸಾರ್ವತ್ರಿಕ ಮತ್ತು ವಿಶಿಷ್ಟಪ್ರಕಾರದ ವಿದ್ಯಾರ್ಥಿ ವೇತನಗಳನ್ನು ಕೊಡುವದರ ಸಲುವಾಗಿ ನಡೆಯುವ ಈ ವರ್ಷದ ಮಿಡಲ್ ಸ್ಕೂಲ್ ಸ್ಕಾಲರ್ ಶಿಪ್ ಪರೀಕ್ಷೆಯು ೧೯೪೬ನೇ ಇಸ್ವಿಯ ಫೆಬ್ರುವರಿ ತಿಂಗಳ ೮ ಮತ್ತು ೯ ನೆಯ ತಾರೀಖುಗಳ ದಿವಸ ದಕ್ಷಿಣಭಾಗದೊಳಗಿನ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ನಡೆಯಬೇಕೆಂದು ಗೊತ್ತಾಗಿದೆ.

ಈ ಕೆಳಗೆ ಬರೆದಷ್ಟು ಸ್ಕಾಲರಶಿಪ್ಪುಗಳು ಆಯಾ ಜಿಲ್ಲೆಗಳಲ್ಲಿ ಆಯಾ ವರ್ಗಗಳ ವಿದ್ಯಾರ್ಥಿಗಳಿಗೆ ದೊರೆಯುವವು.

ಜಿಲ್ಲೆಯ ಕೇಂದ್ರದ ಹೆಸರು	ಜಿಲ್ಲೆಯೊಳಗಿನ ಎಲ್ಲ ವರ್ಗಗಳ ಜನರ ಬಗ್ಗೆ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು	ಜಿಲ್ಲೆಯೊಳಗಿನ ವಿಶಿಷ್ಟ ವರ್ಗಗಳ ಜನರಿಗಾಗಿ ಕಾಯ್ದಿಟ್ಟ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು			
		ಮಾಧ್ಯಮಿಕ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ	ಹಿಂದುಳಿದ ವರ್ಗಗಳ ವಿ. ಗಳ ಬಗ್ಗೆ	ಮುಸಲ್ಮಾನ ವಿ. ಗಳ ಬಗ್ಗೆ	ಒಟ್ಟು
ಧಾರವಾಡ	೨	೧೩	೫	೧೧	೩೧
ಬೆಳಗಾವಿ	೨	೧೩	೫	೬	೨೬
ವಿಜಾಪುರ	೨	೧೦	೫	೭	೨೪
ಕಾರವಾರ	೨	೫	೧	೩	೧೧
ಸೊಲ್ಲಾಪುರ	೨	೧೦	೫	೫	೨೨
ಒಟ್ಟು	೫೧೦	೧೫೨	೨೧	೩೨	೧೧೪

೨. ಬೆಳಗಾವಿಯ ಕೇಂದ್ರ ಪರೀಕ್ಷೆಯ ಭಾಷೆಯು ಮರಾಠಿ ಮತ್ತು ಕನ್ನಡ ಎಂದೂ ಧಾರವಾಡ, ವಿಜಾಪುರ, ಕಾರವಾರ ಕೇಂದ್ರಗಳಲ್ಲಿ ಕನ್ನಡವೊಂದೇ ಎಂದೂ, ಸೊಲ್ಲಾಪುರ ಕೇಂದ್ರದ ಭಾಷೆಯು ಮರಾಠಿ ಒಂದೇ ಎಂದೂ ಗೊತ್ತಾಗಿದೆ. ಆದರೆ ಮುಸಲ್ಮಾನ ಉಮೇದವಾರರು ಉರ್ದುವಿನಲ್ಲಿ ಪರೀಕ್ಷೆಗೆ ಕೂಡ್ರಬಹುದು. ಮತ್ತು ಉರ್ದು ಭಾಷೆಯು ಅವರ ಪ್ರಾಂತಿಕ ಭಾಷೆಯೆಂದು ತಿಳಿಯಲಾಗಿದೆ.

೩. ಸ್ಥಾನಿಕ ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಾಗಿರುವ ಒಂದು ಕಮಿಟಿಯ ಮುಖಾಂತರವಾಗಿ ಈ ಪರೀಕ್ಷೆಯು ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ನಡೆಯುವದು. ಎ. ಕೆ. ಗರ್ಲ್ಸ ಹೈಸ್ಕೂಲಿನ ಹೆಡ್ ಮಿಸ್ಟ್ರೆಸರು ಧಾರವಾಡ ಜಿಲ್ಲಾ-ಕೇಂದ್ರದ ಅಧ್ಯಕ್ಷರು.

೪. ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ಮುದ್ರಿಸಿದ ನಮೂನೆಯಲ್ಲಿ (ಫಾರ್ಮಿನಲ್ಲಿ) ತಯಾರಿಸಿ ೧೯೪೬ನೆಯ ಇಸ್ವಿಯ ಜನವರಿ ತಿಂಗಳ ೫ನೆಯ ತಾರೀಖಿನ ವಳಗಾಗಿ ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಮುಟ್ಟುವಂತೆ ಕಳುಹಿಸಬೇಕು. ಈ ಅರ್ಜಿಯ ನಮೂನೆಗಳನ್ನು ಆಯಾ ಕೇಂದ್ರಗಳ ಪರೀಕ್ಷಾ ಕಮಿಟಿಯ ಅಧ್ಯಕ್ಷರಿಗೆ ಅರ್ಜಿ ಮಾಡಿಕೊಂಡು ಅವರಿಂದ ತರಿಸಿಕೊಳ್ಳಬಹುದು. ಅರ್ಜಿಯ ಸಂಗಡಲೇ ೧ ರೂ. ಫಿಯನ್ನೂ ಕಳುಹಿಸಲೇಬೇಕು. ಅರ್ಥಾತ್ ಮೇಲೆ ಹೇಳಿದ ತಾರೀಖಿನ ದಿವಸ ಅಥವಾ ಅದಕ್ಕೂ ಮೊದಲೇ ಅರ್ಜಿಯೂ ಫೀ ಹಣವೂ ಅಧ್ಯಕ್ಷರಿಗೆ ಮುಟ್ಟಲೇ ಬೇಕು. ಆ ತಾರೀಖನ್ನು ಮೀರಿ ಬಂದ ಅರ್ಜಿಯನ್ನು ಅಥವಾ ಫೀಯ ಹಣವನ್ನು ಸ್ವೀಕರಿಸಲಿಕ್ಕಿಲ್ಲ. ಹಿಂದುಳಿದ ವರ್ಗಗಳ ಉಮೇದವಾರರು ಫೀ ಕೊಡುವ ಕಾರಣವಿಲ್ಲ. ಉಳಿದ ನಿಯಮಗಳು ಮೊದಲಿನಂತೆ ಇವೆ.

ಮಿಡಲ್ ಸ್ಕೂಲ್ ಸ್ಕಾಲರ ಶಿಪ್ ಪರೀಕ್ಷೆ (೧೯೪೬)

ಕಾರ್ಯಕ್ರಮ

ಗುರುವಾರ ತಾ. ೭-೩-೧೯೪೬ನೆಯ ದಿನ ೧೧॥ ಯಿಂದ ೧೩॥ಯ ವರೆಗೆ ಅಂಕಗಣಿತ; ೧॥ಯಿಂದ ೨-೧೫ರ ವರೆಗೆ ಸಾಮಾನ್ಯವಿಜ್ಞಾನ (೧ನೆಯ ಕಾಗದ) ; ೩ ರಿಂದ ೩-೪೫ರವರೆಗೆ

ಸಾಮಾನ್ಯ ವಿಜ್ಞಾನ (೨ನೆಯ ಕಾಗದ). ಶುಕ್ರವಾರ ತಾ. ೮-೨-೧೯೪೬ನೆಯ ದಿನ ೨ರಿಂದ ೨-೪೫ರ ವರೆಗೆ ಪ್ರಾಂತಿಕಭಾಷೆ (೧ನೆಯ ಕಾಗದ); ೪ ರಿಂದ ೪-೪೫ರ ವರೆಗೆ ಪ್ರಾಂತಿಕ ಭಾಷೆ (೨ನೆಯ ಕಾಗದ).

ದಕ್ಷಿಣ ಭಾಗದ
ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಕಚೇರಿ,
ಧಾರವಾಡ. ೨೬ನೆಯ ಡಿಸೆಂಬರ ೧೯೪೫

(ಸಹಿ) A. N. SANE.
ದಕ್ಷಿಣಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ.

ಟ್ರೇನಿಂಗ್ ಕಾಲೇಜ್ ಸರ್ಟಿಫಿಕೆಟ್ ಪರೀಕ್ಷೆ

೧೯೪೬ರಲ್ಲಿ ಜರಗುವ ಗಂಡುಮಕ್ಕಳ ಹಾಗೂ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ್ ಸರ್ಟಿಫಿಕೆಟ್ ಪರೀಕ್ಷೆಯ ಫೀ ಐದು ರೂಪಾಯಿಯೆಂದು ನಿರ್ಧರಿಸಲಾಗಿದೆ. ಪರೀಕ್ಷೆಗೆ ಕುಳಿತು ಕೊಳ್ಳತಕ್ಕ ಎಲ್ಲ ಶಿಕ್ಷಕವಿದ್ಯಾರ್ಥಿಗಳು ಐದು ರೂಪಾಯಿ ಪರೀಕ್ಷಾ ಫೀಯನ್ನು ಕೊಡತಕ್ಕದ್ದು. ಲೋಕಲ್ ಅಥಾರಿಟಿಗಳಿಂದ ಕಳಿಸಲ್ಪಟ್ಟ ಶಿಕ್ಷಕವಿದ್ಯಾರ್ಥಿಗಳೂ ಐದು ರೂಪಾಯಿ ಪರೀಕ್ಷಾ ಫೀಯನ್ನು ಕೊಡಬೇಕಾಗುವದು.

ಧಾರವಾಡ
೭-೧೨-೧೯೪೫

(ಸಹಿ) ಎ. ಎನ್. ಸಾನೆ
ದ. ಭಾ. ಎ. ಇನಸ್ಪೆಕ್ಟರರ ಪರವಾಗಿ.

ದೇಶವತ್ಸಲ ದಿವಾಕರರ ಸಂದೇಶ

ನನ್ನ ತಿಳವಳಿಕೆಯ ಮಟ್ಟಿಗೆ ಶಿಕ್ಷಕನ ಕಾರ್ಯವೆಂದರೆ ಅತ್ಯಂತ ಶ್ರೇಷ್ಠ ಹಾಗೂ ಪವಿತ್ರವಾದುದು. ಸಾಲೆಯ ಕಟ್ಟಿಟ್ಟ ವೇಳೆಯಲ್ಲಿ ಪಠ್ಯ ಪುಸ್ತಕಗಳನ್ನಷ್ಟೇ ವಿದ್ಯಾರ್ಥಿಗಳಿಂದ ಓದಿಸಿದರೆ ಶಿಕ್ಷಕನ ಕರ್ತವ್ಯವು ಮುಗಿಯಲಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯ ಶಾರೀರಕ, ಮಾನಸಿಕ, ನೈತಿಕ ಆಧ್ಯಾತ್ಮಿಕ ವಿಕಾಸವು ಆಗುವಂತೆ ಪ್ರತಿಕ್ಷಣವೂ ಪ್ರಯತ್ನ ಸಡುತ್ತಿರುವದೇ ಶಿಕ್ಷಕನ ಜೀವನ ಧ್ಯೇಯವು.

—ರಂಗನಾಥ ದಿವಾಕರ

ಕರ್ನಾಟಕ

ಕನ್ನಡವು, ಕನ್ನಡವು ಮೊಲೆಯುಣಿಸಿದಾ ನುಡಿಯ ನುಡಿವ ದಾರ್ಶನಿಕರೆಲ್ಲ,
ದಿವ್ಯ ದರ್ಶನವೊಂದನವ್ಯತಸ್ಪರ್ಶನವಾಗಿ ಗೆಯ್ವ ಸಾಹಸಿಗಳೆಲ್ಲ,
ಮತ್ತಿ ವರಗೊಲಿಯುತಿಹ ಸಹೃದಯರು, ಸಹೃದರಾ ನುಡಿಯ ನಂಬಿರುವ ಬಾಳು,
ಇವರೆ ಕರ್ನಾಟವೈ! ಉಳಿದೆಲ್ಲ ಕರ್ಣಾಟ! ಕರ್ಣಾಟ! ಅಟಮಟದ ಮಾತು ಕೇಳು!

—ವಿನಾಯಕ

ಮಗುವಿಗೆ ಸ್ವಾತಂತ್ರ್ಯ

ಜಗತ್ತಿನಲ್ಲಿಯ ಸಾಮಾಜಿಕ ಪ್ರಗತಿಯನ್ನು ವಿಚಾರಿಸಿದಲ್ಲಿ ಅದರಲ್ಲಿ ಮುಖ್ಯವಾದ ಎರಡು ಧೋರಣಗಳು ಒಡೆದು ಕಾಣುವವು ಮೊದಲನೆಯದು ಪ್ರತಿಯೊಂದು ಜನಾಂಗದಲ್ಲಿಯ ಕೂಲಿಕಾರ ಪಕ್ಷಗಳ ವಿಜಯ; ಎರಡನೆಯದೆಂದರೆ ದಾಸ್ಯದಲ್ಲಿ ತೊಳಲುತ್ತಿರುವ ಪ್ರತಿಯೊಂದು ರಾಷ್ಟ್ರವು ದಾಸ್ಯದ ಸಂಕೋಲೆಗಳನ್ನು ಕಿತ್ತೊಗೆದು ಸ್ವಾತಂತ್ರ್ಯವನ್ನು ಪಡೆಯಬೇಕೆಂಬ ಅದರ ಅಂತರಂಗದ ಹವ್ಯಾಸ ಹಾರ್ದಿಕ ಇಚ್ಛೆ; ಅದರೆ ಮಾನವಕೋಟಿಯು ತನ್ನ ಇವೆರಡೂ ಮಹತ್ವದ ಬೇಡಿಕೆಗಳನ್ನು ಸಾಧಿಸಿಕೊಂಡರೂ ಅದು ತನ್ನ ಪರಿಪೂರ್ಣತೆಯನ್ನು ತುಂಬ ಸಾಧಿಸಿದಂತಾಯಿತೆಂದು ಹೇಳಲಾರೆ. ನನ್ನ ದೃಷ್ಟಿಯು ಇದರಾಚೆಗೆ ಓಡುತ್ತಲಿರುವದು. ನಾನು (ವಿಚಾರಿಸುವದು) ಕಾಣುತ್ತಿರುವದು ಜಗತ್ತಿನ ಅಸಂಖ್ಯೆ ಜೀವಕೋಟಿಗಳ ಸಮುದಾಯವನ್ನು; ಅದರ ಸ್ವಭಾವವನ್ನು ಚೆನ್ನಾಗಿ ಅರಿತುಕೊಳ್ಳಲು ಸಾಕಷ್ಟು ಪ್ರಯತ್ನಗಳು ನಡೆದಿಲ್ಲ. ಅವ್ಯಕ್ತ ಶಕ್ತಿಗಳಿಂದ ಅದು ಪ್ರಭಾವಶಾಲಿಯಾಗಿದ್ದಾಗ್ಯೂ ಇನ್ನೂ ದಾಸ್ಯದಲ್ಲಿ ಕೊಳೆಯುತ್ತಿರುವದು. ಸ್ವಾತಂತ್ರ್ಯವೆ? ಅದರ ಜೀವನದ ಹಿರಿಯಾಸೆ, ಹೆಗ್ಗುರಿ; ಆ ಜೀವಕೋಟಿ ಯಾವದು? ನಿಮಗೆ ಹೊಳೆಯದಿರದು.

ಜಗತ್ತಿನಲ್ಲಿಯ ಚಿಕ್ಕ ಮಕ್ಕಳನ್ನು ತುಂಬ ಮರೆತುಬಿಡುವ ತನಕ ಅವರ ವಿಷಯದಲ್ಲಿ ನಾವು ಅನಾಸ್ಥೆ ತೋರಿಸಿದ್ದೇವೆ. ಅವರೆಂದೊಂದು ಪ್ರತ್ಯೇಕ ಪ್ರಪಂಚವಿದೆಯೆಂಬುದನ್ನು ನಾವು ಅಲಕ್ಷಿಸಿದ್ದೇವೆ. ಚಿಕ್ಕ ಮಕ್ಕಳ ನೆನಪಾದೊಡನೆ, ಜಗತ್ತು ಅವರ ಬೆಲೆಯನ್ನು ಚೆನ್ನಾಗಿ ಅರಿತುಕೊಂಡಿಲ್ಲವೆಂದೂ ಎಷ್ಟೋ ಸಲ ಅವರನ್ನು ಹಿಂಸೆಗೆ ಗುರಿಮಾಡಲಾಗುತ್ತಿದೆಯೆಂದೂ ನನಗೆ ಕಂಡು ಬಂದಿದೆ. ನಾವು ಹಿಂಸಿಸಿದಾಗ ಚಿಕ್ಕ ಮಕ್ಕಳು ಅಳುವರು; ಆದಾಗ್ಯೂ ಅವರ ಅಳುವಿಕೆಯು ಜನರ ಹೃದಯದಲ್ಲಿ ಕನಿಕರವನ್ನು ಹುಟ್ಟಿಸದೆ ಅವರನ್ನು ರೊಚ್ಚಿಗೆಬ್ಬಿಸುವದು. ಹೀಗಿದ್ದರೂ ಅವರು ಹೆಚ್ಚಿನ ದುಡಿಮೆಗಾರರೆಂದು ಹೇಳಬಹುದು. ಯಾಕಂದರೆ,— ಅವರ ಅವಿಶ್ರಾಂತ ಪ್ರಯತ್ನದಿಂದಲೇ— ಜಗತ್ತಿನಲ್ಲಿ ಅನೇಕ ಸ್ವಭಾವದ ವ್ಯಕ್ತಿಗಳು ರೂಪಗೊಳ್ಳುತ್ತಾರೆ. ಅವರ ಜೀವನದಲ್ಲಿಯೇ ಮಾನವ ಜೀವನದ ಗುಟ್ಟು ಹುದುಗಿಕೊಂಡಿರುವದು. ಹೀಗೆ— ಮಾನವ ವ್ಯಕ್ತಿಯ ವಿಕಾಸವು ಶಿಶುವನ್ನೇ ಅವಲಂಬಿಸಿರುತ್ತದೆ. ಮಗುವನ್ನು ದಾಸ್ಯದ ವಾತಾವರಣದಲ್ಲಿಯೇ ಇಟ್ಟರೆ— ಅದರ ಉತ್ಪಾದಕ ಶಕ್ತಿಗಳನ್ನು ಬಲುಮೆಯಿಂದ ಹತ್ತಿಕ್ಕಿದರೆ- ಆ ಮಗುವಿನಿಂದ ಉದಯಿಸುವ ವ್ಯಕ್ತಿಯ ಅವ್ಯಕ್ತ ಶಕ್ತಿಗಳು ಜನ್ಮ ಜನ್ಮಾಂತರಕ್ಕೂ ಕುಗ್ಗಿ ಹೋಗುತ್ತವೆ. ಯಾಕಂದರೆ, ಆ ವ್ಯಕ್ತಿಯ ಮೇಧಾಶಕ್ತಿಯೇ ಕ್ಷೀಣವಾಗಿ— ಅವನ ಸದಸದ್ವಿವೇಕ ಬುದ್ಧಿಯು ಅನಿಶ್ಚಿತವಾಗಿ ಉಳಿದು, ಇದ್ದೂ ಇಲ್ಲದಂತೆ ಆಗುವದು.

ವ್ಯಕ್ತಿಯ ಉನ್ನತಿಯೇ ಜನತೆಯ ಉನ್ನತಿಯು. ಚಿಕ್ಕ ಮಕ್ಕಳಿಗೆ ಸ್ವಾತಂತ್ರ್ಯವನ್ನಿಯುವದರಿಂದ ಹಾಗೂ ಅವರ ಜೀವನಾರಬಂದಿಂದ ಅನಿರ್ಬಂಧ ವಾತಾವರಣವನ್ನು ಅವರಿಗಾಗಿ ಕಲ್ಪಿಸಿಕೊಟ್ಟರೆ— ಸ್ವತಂತ್ರವೂ ಯಾವ ನಿರ್ಬಂಧಕ್ಕೂ ಸೊಪ್ಪು ಹಾಕದ್ದೂ ಆದ ಜನತೆಯನ್ನು ನಿರ್ಮಿಸಿದಂತೆ ಆಗುವದು. ಸ್ವಯಂ ಪೂರ್ಣತೆಯಿಂದ ಹಾಗೂ ಜಗತ್ತಿನಲ್ಲಿ ನಡೆಯುತ್ತಿರುವ ಅನೇಕ ಘಟನೆಗಳಲ್ಲಿ ತನ್ನದೇ ಆದ ವಿಶಿಷ್ಟ ಮಾರ್ಗವನ್ನು ಕಂಡುಹಿಡಿಯಬಲ್ಲ ಯೋಗ್ಯತೆಯಿಂದಲೇ ಸ್ವಾತಂತ್ರ್ಯವು ಲಭಿಸುವದು. ಸ್ವಾತಂತ್ರ್ಯವೆಂದರೆ— ತನ್ನಲ್ಲಿಯ ಸ್ವಾಭಾವಿಕ ಶಕ್ತಿಗಳನ್ನು ಯೋಗ್ಯ ರೀತಿಯಿಂದ ವಿನಿಯೋಗಿಸುವ ಶಕ್ತಿಯೆಂದು ಹೇಳಬಹುದು. ಇಂಥ ಧ್ಯೇಯವನ್ನು ಸಾಧಿಸಲು ಒಂದೇ ಮಾರ್ಗವಿರುವದು. ಅದು ಯಾವುದೆಂದರೆ— ಜಗತ್ತಿನಲ್ಲಿಯ ಚಿಕ್ಕ ಮಕ್ಕಳಿಗೆಲ್ಲ ನಿಯಂತ್ರಣಗಳನ್ನು ಸಂಪೂರ್ಣವಾಗಿ ತೊಲಗಿಸಿ ಸ್ವಾತಂತ್ರ್ಯದ ಲಾಳವನ್ನೀಯುವದು.

ಆದರೆ ಈ ಧ್ಯೇಯವನ್ನು ಕಾರ್ಯರಂಗದಲ್ಲಿ ತರುವದು ಎಷ್ಟು ದುಃಸಾಧ್ಯ!

ಬಹುಶಃ ಎಲ್ಲ ಪ್ರೌಢರು ತಮ್ಮ ಮಕ್ಕಳನ್ನು ಕ್ರೂರತನದಿಂದ ನಡೆಸಿಕೊಳ್ಳುವರು! ಚಿಕ್ಕ ಮಕ್ಕಳ ಬಗ್ಗೆ ಅವರಲ್ಲಿ ಎಳ್ಳಷ್ಟೂ ಆದರವಿಲ್ಲ. ಅವರನ್ನು ಹೆಜ್ಜೆ ಹೆಜ್ಜೆಗೆ ಪೀಡಿಸುತ್ತ, ಹೊಡೆಯುತ್ತ ಅವಮಾನಿಸುತ್ತಾರೆ. ಅಂದಮೇಲೆ ಹಿಂದಿನ ಕಾಲದ ಗುಲಾಮರಿಗೂ ನಮ್ಮ ಚಿಕ್ಕ ಮಕ್ಕಳಿಗೂ ಯಾವ ಅಂತರವಿದೆ? ಹಿಗಿದ್ದರೂ ಸ್ವಾತಂತ್ರ್ಯವು ಮಾನವನ ಅತಿಪವಿತ್ರವಾದ ಆಕಾಂಕ್ಷೆಯೆಂದು ನಾವು ಪ್ರತಿಪಾದಿಸುತ್ತೇವೆ. ಪ್ರಜಾಸತ್ತೆಯನ್ನು ಸ್ಥಿರಪಡಿಸಲು ಎರಡು ಮಹಾ ಯುದ್ಧಗಳು ಯೋಜಿಸಲ್ಪಟ್ಟವು. ಜಗತ್ತಿನಲ್ಲಿ ಆಹಾರ, ಶಾಂತಿ, ಹಾಗೂ ನಿಜವಾದ ಜೀವನದ ಬೇಡಿಕೆ ಇವುಗಳಿಗಿಂತಲೂ ಹೆಚ್ಚಾಗಿ ಸ್ವಾತಂತ್ರ್ಯದ ಕೂಗು ಕೇಳಬರಹತ್ತಿದೆ– ನಮ್ಮ ಹೊಟ್ಟೆಯ ಮಕ್ಕಳನ್ನೇ ಕ್ರೂರತನದಿಂದ ನಡೆಸಿಕೊಳ್ಳುತ್ತಿರುವ ನಮಗೆ ಸ್ವಾತಂತ್ರ್ಯದ ಭಿಕ್ಷೆಯನ್ನು ಬೇಡಲು ಅದಾವ ಅರ್ಹತೆಯಿದೆ? ನಾವು ನಮ್ಮ ಮಕ್ಕಳನ್ನು ನಮ್ಮ ಮನಸ್ಸಿನ ಪ್ರತಿಯೊಂದು ಲಹರಿಗೆ ಎಳತಂದು ಗುರಿಮಾಡಿ ಪರಾವಲಂಬಿನ ಸ್ಥಿತಿಯಲ್ಲಿಯೇ ಬೆಳೆಯಲು ಒತ್ತಾಯಪಡಿಸುತ್ತಿರುವಾಗ ನ್ಯಾಯಮೂರ್ತಿಯಾದ ದೇವರು ನಮಗೆ ಸ್ವಾತಂತ್ರ್ಯವನ್ನು ದಯಪಾಲಿಸಬಹುದೋ?

ನಿರಪರಾಧಿಗಳಾದ ಮಗುಗಳನ್ನು ನ್ಯಾಯಶೀಲತೆಯಿಂದ ನಡೆಯಿಸಿಕೊಳ್ಳಿರಿ, ಅಂದರೆ ಮಾತ್ರ ನ್ಯಾಯದೇವತೆಯು ಈ ಜಗತ್ತಿನಲ್ಲಿ ತನ್ನ ಪ್ರಭಾವವನ್ನು ಬೀರುವಳು.

ಇಂಥ ಹೀನ ದೀನ ಸ್ಥಿತಿಯಿಂದ ಚಿಕ್ಕಮಕ್ಕಳನ್ನು ಉಳಿಸಿಕೊಂಡರೆ ಮಾತ್ರ ಮಾನವ ಕೋಟಿಯ ಅಂತಿಮವೂ ಅತ್ಯುತ್ತಮವೂ ಆದ ಪ್ರಗತಿಯು ಸಾಧಿಸುವದೆಂದು ನಾನು ಧಾರಾಳವಾಗಿ ಹೇಳಬಲ್ಲೆ. ಜಗತ್ತಿನಲ್ಲಿಯ ಎಲ್ಲ ಜನಾಂಗಗಳಲ್ಲಿಯೂ ಜಾತಿ ಪಂಗಡಗಳಲ್ಲಿಯೂ ಚಿಕ್ಕಮಕ್ಕಳಿರುವದು ನಿಸರ್ಗಸಿದ್ಧವಾದುದು. ಎಲ್ಲರಿಗಿಂತಲೂ ಹೆಚ್ಚು ಪೀಡೆಯನ್ನು ಸಹಿಸುತ್ತ ಹಿಂಸೆಯನ್ನು ಈಯುವವರ ಹಾಗೂ ಅದನ್ನು ಸಹಿಸುವವರ ಕೂಡ ಚಿಕ್ಕಮಕ್ಕಳು ಜೀವನವನ್ನು ಸಾಗಿಸುತ್ತಲಿರುವರು. ಮಗುವಿನ ಉದ್ಧಾರವೇ ಜಗದುದ್ಧಾರ.

ಹಿರಿಯರು ಸ್ವಾತಂತ್ರ್ಯದ ಸಲವಾಗಿ ಹೋರಾಡಿ ಒಂದುವೇಳೆ ಅದನ್ನು ಅವರು ಗಳಿಸಬಹುದು; ಆದರೆ ಚಿಕ್ಕಮಕ್ಕಳಿಗೆ ಇಂಥ ಹೋರಾಟವವು ಸಾಧ್ಯವಿಲ್ಲ. ನಾವೇ ಅವರನ್ನು ಬಂಧನದ ಬಲೆಯಿಂದ ಮುಕ್ತಗೊಳಿಸಬೇಕು. ಹಾಗೆ ಮಾಡಬೇಕಾದರೆ ನಮ್ಮ ವಿವೇಕ ಬುದ್ಧಿಯನ್ನೇ ಮಾರ್ಪಡಿಸಿ ನಮ್ಮ ತಪ್ಪುಗಳನ್ನು ಒಪ್ಪಿಕೊಂಡು ಅವುಗಳನ್ನು ತಿದ್ದಿಕೊಳ್ಳಬೇಕು.

ಚಿಕ್ಕಮಕ್ಕಳು ತಮಗೆ ಜೀವಾಳವಾಗಿದ್ದ ಸ್ವಾತಂತ್ರ್ಯವನ್ನು ಪಡೆದರೆ ಪ್ರೌಢರು ಹೃದಯ ಪರಿವರ್ತನೆ ಹೊಂದಿದವರಾಗಿ ಇದುವರೆಗೆ ಮಗುವಿಗೆ ಉಂಟುಮಾಡಿದ ಹಾನಿಯನ್ನು ಸ್ವಪ್ರೇರಣೆಯಿಂದಲೇ ನಾವು ತುಂಬಿ ಕೊಟ್ಟೆವೆಂದು ಹೇಳುವರೆಂದು ಖಂಡಿತವಾಗಿ ಹೇಳಬಹುದು.

ಈ ರೀತಿಯಾಗಿ ಸ್ವಾತಂತ್ರ್ಯವನ್ನು ಪಡೆದ ಮಗುವನ್ನು ನೋಡಿ ಪ್ರೌಢರೆಲ್ಲರೂ ತಾವು ತಪ್ಪುಗಾರರಾಗಿದ್ದೇವೆಂದು ಒಪ್ಪಿ ಪಶ್ಚಾತ್ತಾಪಕ್ಕೆ ಗುರಿಯಾಗುವರು. ಆಗ ಮಾತ್ರ ಈ ವರೆಗೆ ಕಠೋರರಿಗಿಂತಲು ಹೆಚ್ಚು ಕಠೋರತನದಿಂದ ತಮ್ಮ ಮಕ್ಕಳನ್ನು ನಡೆಸಿಕೊಂಡೆವಲ್ಲಾ ಎಂದು ಮರುಗುವರು.

"ನಾವು ಎಷ್ಟು ವಿಚಾರಶೂನ್ಯರು; ತಿಳಿಗೇಡಿಗಳೂ ಆಗಿದ್ದೆವು: ಚಿಕ್ಕಮಕ್ಕಳು ತೀರ ನಿರುಪಯೋಗಿಗಳೆಂದು ನಾವು ಭಾವಿಸಿದ್ದೆವು. ಆದರೆ ಅವರೇ ನಮಗೆ ಪುನರ್ಜನ್ಮವನ್ನಿತ್ತರು. ನಾವು ನಮ್ಮ ಸ್ವಾತಂತ್ರ್ಯದಬಗ್ಗೆ ಹೆಣಗಾಡುತ್ತಿರುವಾಗ ಮಕ್ಕಳ ನಿರಪರಾಧಿತನವನ್ನು ತುಚ್ಛೀಕರಿಸಿ ನಮ್ಮ ಹೊಟ್ಟೆಯ ಮಕ್ಕಳಾದಾಗ್ಯೂ ಅವರ ಹೃದಯದ್ರಾವಕ ಅಳುವನ್ನು ಲೆಕ್ಕಿಸದೆ ನಮ್ಮ ಅಧೋಗತಿ, ಸರ್ವನಾಶ ಹಾಗೂ ನರಕದ ಮಾರ್ಗ ಇವನ್ನೇ ಸ್ಥಿರಪಡಿಸಿಕೊಂಡಿದ್ದೆವಲ್ಲಾ"!ಎಂದು ಉದ್ಗಾರ ತೆಗೆಯಬಹುದು!

(Listener—ಇವರ ಕೃಪೆಯಿಂದ. ಡಾ. ಮೇರಿಯಾ ಮಾಂಟೆಸರಿ ಇವರು ಲಾಹೋರದ ಆಕಾಶವಾಣಿಯಿಂದ ಮಾಡಿದ ಭಾಷಣ)

ಬಂಧುಭಗಿನಿಯರೆ— ಅಲ್ಲಲ್ಲಿ, ವಾಚಕರೆ,— ಅಥವಾ, ತುಸು ತಡೆಯೋಣ, ಬರೆಯುವ ಕೈಯನ್ನಲ್ಲ ಹರಿಯುವ ಮನಸ್ಸನ್ನು ತಡೆಯೋಣ; ಯಾಕಂದರೆ, ನಾವೀಗ ತಡೆಯುವುದು ಮಾನಸಶಾಸ್ತ್ರದ ದೃಷ್ಟಿಯಿಂದ ವಿಚಾರಮಾಡಿ ನೋಡೋಣ. ನಾನು ಪ್ರಾರಂಭಿಸಿದ್ದು 'ಬಂಧು ಭಗಿನಿಯರೆ' ಎಂದು. ಯಾಕೆ? ಇಂದು ನಮ್ಮ ಸಮಾಜದಲ್ಲಿ ಸರ್ವಸಾಮಾನ್ಯವಾಗಿ ಅಷ್ಟು ರೂಢವಾಗಿದೆ. ಸಭೆಯಲ್ಲಿ ಮಾತುಗಾರನು ಸಭಿಕರನ್ನುದ್ದೇಶಿಸುವ ರೀತಿಯೆ ನಮ್ಮಲ್ಲಿ ಹೆಚ್ಚಾಗಿ ರೂಢವಾದುದೇಕೆ? ಅರ್ಥಾತ್, ನಮ್ಮ ಸಾರ್ವಜನಿಕ ಜೀವನವೆಲ್ಲ ಸಭೆಗಳಿಂದಲೆ ನಡೆದಿದೆ ಎಂದು ಸರಿ. ಸಭೆಗಳೆ ನಮ್ಮ ಸಾರ್ವಜನಿಕ ಜೀವನದಲ್ಲಿ ಹೆಚ್ಚು ರೂಢವಾಗಲೂ ಕಾರಣವೇನು? ಸಭೆಯಲ್ಲಿ ಮಾತನಾಡುವದನ್ನುಳಿದು ಬೇರೆ ರೀತಿಯಿಂದ ನಮ್ಮವರಿಗೆ ನಮ್ಮ ವಿಚಾರಗಳನ್ನು ನಾವು ಹೇಳುವುದಿಲ್ಲವೇಕೆ? ಯಾಕಂದರೆ, ನಮ್ಮವರಿಗೆ ಓದುಬರೆಯ ಜ್ಞಾನವಿಲ್ಲದ್ದಕ್ಕೆ. ಅಂತೂ ನಾನೂ ಪ್ರಾರಂಭಿಸಿದ ರೀತಿ ನಮ್ಮ ಜೀವನಕ್ಕೆ ಸಹಜವಾದುದು ಎಂದಂತಾಯಿತು. ಪ್ರಾರಂಭಿಸಿದ ರೀತಿಯೆ ಜೀವನಕ್ಕೆ ಸಹಜವಾಗಿದೆ ಎಂದ ಮೇಲೆ ಮುಂದೆ ಬರೆಯುವುದೂ ಜೀವನಕ್ಕೆ ಸಹಜವಾಗಿದೆ— ಉತ್ತಮ ಸಾಹಿತ್ಯ ಎಂದಂತಾಯಿತಲ್ಲವೆ?

ನಮ್ಮಲ್ಲಿ ಸಭೆಯಮಾತುಗಾರಿಕೆ ಹೆಚ್ಚಾಗಿ ರೂಢವಾದುದಕ್ಕೆ ಬಹುಜನರ ಓದುಬರೆಯ ಅಜ್ಞಾನ ಕಾರಣವಲ್ಲ, ಕೆಲವು ಬುದ್ಧಿವಂತರ ವಿಚಾರಸಾಮರ್ಥ್ಯದ ರಭಸವೆ ಕಾರಣ ಎಂದು ಯಾರಾದರೂ ಹೇಳಬಹುದು. ಆ ತಿಳುವಳಿಕೆ ತಪ್ಪಾದುದು ಎಂದು ತೋರಿಸುವುದಕ್ಕಾಗಿಯೆ ಈ ಲೇಖನವನ್ನು ಬರೆಯುತ್ತಲಿದ್ದೇನೆ. ಸಭೆಯ ಭಾಷಣಕ್ಕೂ ವಿಚಾರಸಾಮರ್ಥ್ಯಕ್ಕೂ ಸಂಬಂಧವಿದೆ ಎಂದು ತಿಳಿಯುವುದೆ ತಪ್ಪು; ಚಿತ್ರಪಟಗಳಿಗೂ ಕಲಾವಂತಿಕೆಗೂ ಸಂಬಂಧವಿದೆ ಎಂದು ತಿಳಿಯುವುದೆ ತಪ್ಪಾದುದು. ಹುಡುಗಾಟಿಕೆ, ಪ್ರಣಯಚೇಷ್ಟೆ, ಕೆರಳಿಸುವಂತಹ ವೇಷ, ಹೋಳಿ ಹುಣ್ಣಿಮೆಯ ಕುಣಿತ— ಇಂತಹಗಳಿಂದ ಜನರನ್ನು ಅಲ್ಪಾವಧಿಯಲ್ಲಿ ರಂಜಿಸುವುದೆ ಚಿತ್ರಪಟದ ಉದ್ದೇಶ ಎಂದು ದೇಶಿಯ ಚಿತ್ರಪಟಾಭಿಮಾನಿಗಳಿಗೆ ಬೇರೆಯಾಗಿ ಹೇಳಬೇಕಾಗಿಲ್ಲ. ಆದರಂತೆಯೆ ಆವೇಶ, ಹಾವಭಾವ, ಅರ್ಭಟೆ, ಕೂಗಾಟ, ಕುಣಿದಾಟಗಳಿಂದ ಸಭಿಕರನ್ನು ರಂಜಿಸುವುದೆ (ಸಾಮಾನ್ಯವಾಗಿ) ಸಭಾಭಾಷಣಗಳ ಉದ್ದೇಶ. ಇದು ಸಾಮಾನ್ಯ ನಿಯಮವಲ್ಲ ಎನ್ನುವವರು ವಸ್ತುಸ್ಥಿತಿಯನ್ನಾದರೂ ಅರಿತಿಲ್ಲ, ಇಲ್ಲವೆ ತಾವೇ ಸಭೆಯ ಮಾತುಗಾರರಿದ್ದಾರೆ ಎಂದು ಹೇಳಬಹುದು.

ಮಾತನಾಡುವ ಸಭೆಗಳ ಉದ್ದೇಶ ಮೂರು ತರದ್ದು, ಮೂರು ದೃಷ್ಟಿಗಳಿಂದ. (೧) ಚಿತ್ರಪಟಮಂದಿರ, ವಾಚನಾಲಯ, ಸಂಸಾರಸುಖ— ಮುಂತಾದವನ್ನು ಇಲ್ಲದವರು ಮತ್ತು ಒಲ್ಲದವರು ಯಾವ ತೊಂದರೆ ಮತ್ತು ವೆಚ್ಚವಿಲ್ಲದೆ ಮನರಂಜನೆಯನ್ನು ಮಾಡಿಕೊಳ್ಳುವ ಸುಲಭಸಾಧನವೆಂದರೆ ಸಾರ್ವಜನಿಕ ಸಭೆ; (೨) ಧನವನ್ನಾಗಲಿ ಬುದ್ಧಿಯನ್ನಾಗಲಿ ವಿನಿಯೋಗಿಸದೆ, ವ್ಯಯಿಸದೆ ನಾಲ್ಕು ಜನರಿದರು ಸ್ಥಾನಿಕ ಸಾರ್ವಜನಿಕ ಮುಂದಾಳಾಗಬಯಸುವನ ಆಕಾಂಕ್ಷೆಯನ್ನೇರಲು ನಿಚ್ಚಣಿಕೆಯ ಮೊದಲ ಹೆಜ್ಜೆಂದರೆ ಸಭೆಯೆ; ಮತ್ತು (೩) ಮಾತುಗಾರಿಕೆಯೆ ಒಂದು ಯೋಗ್ಯತೆ ಯಾದವನಿಗೆ ಉಪಜೀವನವನ್ನು ನಡೆಯಿಸುವ ಒಂದೇ ಒಂದು ಸಾಧನವೆಂದರೂ ಸಭೆಯೆ. ಹೀಗೆ ಸಭೆಯಲ್ಲಿ ಮಾತಾಡುವವನ, ಸಭೆಯನ್ನು ಕೂಡಿಸುವವನ, ಕುಳಿತು ಮಾತನ್ನು ಕೇಳುವವನ ದೃಷ್ಟಿಗಳಿಂದ ನೋಡಿದರೆ ಸಭೆಗೆ ಮೂರು ತರದ ಉದ್ದೇಶಗಳಿಗೆ ಎಂಬುದು ಸ್ಪಷ್ಟವಾಗುವುದು.

ಇನ್ನು ಈ ಉದ್ದೇಶಗಳಿಂದ ಸಾಧಿಸಬಹುದಾದ ಕಾರ್ಯವಿವರವನ್ನು ನೋಡೋಣ. ಮೊದಲು, ಮಾತುಗಾರನ ಉದ್ದೇಶ. ಸಾಮಾನ್ಯವಾಗಿ ಮಾತುಗಾರನಿಗೆ ಸಭೆಯೆ ಉಪಜೀವನದ ಮಾರ್ಗವೆಂದು ಹೇಳಬೆಯಲ್ಲವೆ? ಊರಿಂದ ಊರಿಗೆ ಹೋಗುವುದು. ಆಯಾ ಊರಿನವರು ವೆಚ್ಚದಿಂದ; ಹೋದಕೋವಲಿ ಯಾವನೊಬ್ಬನ ಸಭಾನ ಅತಿಥಿಯಾಗುವುದು, ಅತಿಥಿ ಪ್ರಧಾನನೆಂದು ಆದರ ಸಮಿಚೀನವಾಗುವುದು; ಕೊನೆಗೆ ಸಭಿಕರು ಕೊಟ್ಟ ಮಾನವನ್ನು ಕೀಸೆ

ಯಲ್ಲಿ ತುಂಬಿಕೊಳ್ಳುವುದು. ಎಂದರೆ ಒಟ್ಟಿನ ಮೇಲೆ ಮಾತುಗಾರನು ಕೈಯಿಂದ ಹೊಟ್ಟೆ ತುಂಬಿಕೊಂಡು, ಹೊಟ್ಟೆ ತುಂಬಿತುಂಬಿದಂತೆ ಬಾಯುತ್ತುಂಬ ಮಾತನಾಡುವನು. ಆದರೂ ಮುಖ್ಯ ಉದ್ದೇಶ ಹೊಟ್ಟೆಯನ್ನು ಉಣ್ಣಿಸುವುದು. ಉಣ್ಣಿಸಲು ಸಾಧನ ಕೈ, ಎಂದರೆ ಮುಂಗೈ, ಅಥವಾ ಮೊಳಕೈಯ ಕೆಳಗಿನ ಭಾಗದ ಕೈ.

ಸಭೆಯನ್ನು ಕೂಡಿಸುವವನ ದೃಷ್ಟಿಯಿಂದ ನೋಡಿದಾಗ್ಗೂ ಇದೇ ಸಿದ್ಧಾಂತಕ್ಕೆ ಪುಷ್ಟಿ ದೊರೆಯುವುದು. ಮಾತುಗಾರನನ್ನು ಕರೆಯಿಸುವುದು, ಉಣ್ಣಿಸುವುದು. ಸಭೆಗಳನ್ನು ಕೂಡಿಸುವುದು ಎಂದರೇನು ಸಾಮಾನ್ಯ ಕೆಲಸವೆ? ಎಂದಿಗೂ ಅಲ್ಲ. ನಿಶ್ಚಯವಾಗಿಯೂ ಅಸಾಮಾನ್ಯ ಕೆಲಸ ಎಂದರೆ ವೆಚ್ಚದ ಕೆಲಸ. ಇದಕ್ಕಾಗಿ ಏನಿಲ್ಲೆಂದರೂ ತುಸು ಸಾಕಷ್ಟು ಫಂಡನ್ನು ಕೂಡಿಸಬೇಕಾಗುವುದು. ಕೊನೆಗೆ ಸಭೆಯ ಸಮಯದಲ್ಲಿ ಪ್ರಧಾನ ಅತಿಥಿಗೆ ತನ್ನ ಕೈಯಿಂದಲೆ ಹಾರವನ್ನು ಹಾಕಬೇಕಾಗುವುದು. ಇದೆಲ್ಲವೂ ಮಹತ್ವದ್ದಾಗಿದೆ. ಇದೆಲ್ಲವನ್ನೂ—ಎಂದರೆ ಫಂಡನ್ನು ಹಾಕಲು, ಹಾರವನ್ನೆತ್ತಲು—ಅಲ್ಲಲ್ಲಲ್ಲಲ್—ಫಂಡನ್ನೆತ್ತಲು, ಹಾರವನ್ನು ಹಾಕಲು—ಕಸುವಿನ ಮುಂಗೈಯೇ ಕಾರಣ.

ಕೊನೆಗೆ ಸಭಿಕರ ದೃಷ್ಟಿಯಿಂದಲೂ ಅದೇ ಮಾತನ್ನು ಕಾಣಬಹುದು. ಸಭೆಯಲ್ಲಿ ಸಭಿಕರು ಮಾಡಬೇಕಾದ್ದೇನು? ತಲೆಯನ್ನು ತೂಗುವದಲ್ಲ. ಯಾಕಂದರೆ ಅದು ಗಾಯನ ಸಭೆಯಲ್ಲ; ಕಣ್ಮುಚ್ಚಿ ಕಿವಿಯಿಂದ ಕೇಳುವಂತಿಲ್ಲ, ಯಾಕಂದರೆ ಅದು ಪುರಾಣಶ್ರವಣವಲ್ಲ; ಕಿವಿಮುಚ್ಚಿ ಕಣ್ಣಿಂದ ನೋಡುವಂತಲೂ ಇಲ್ಲ, ಯಾಕೆಂದರೆ ಅದು ಸಿನೇಮಾದೊಳಗಿನ ನರ್ತನವೂ ಅಲ್ಲ. ಹೀಗಾಗಿ ಸಭಿಕರಿಗೆ ಒಂದೇ ಒಂದು ಉಪಾಯವು ಅನಿವಾರ್ಯವಾಗುವುದು, ಅದೆಂದರೆ ಕೈಗಳಿಂದ ಚಪ್ಪಾಳೆಯನ್ನು ತಟ್ಟುವುದು. ಕೈಗಳಿಂದ ಎಂದರೆ ಇಡಿಯು ಕೈಯಿಂದಲ್ಲ. ಅಂಗೈ ಎಂದರೆ ಮೊಳಕೈ ಕೆಳಗಿನ ಕೈಯಿಂದಲೆ ಚಪ್ಪಾಳೆ ತಟ್ಟುವುದು ಎಂದು ಸುಜ್ಞರಿಗೆ ಸ್ಪಷ್ಟವಾಗಿ ಹೇಳಬೇಕೆ?

ಅಂತೂ—ಗಂಡಸಿನ ಬುದ್ಧಿವಂತಿಕೆಯ ಕ್ರೀಡಾಂಗಣದಂತಿದ್ದ ಸಾರ್ವಜನಿಕ ಸಭೆಯನ್ನು ಸೂಕ್ಷ್ಮವಾಗಿ ವಿಮರ್ಶಿಸಿದರೆ ಗಂಡಸಿನ ಬುದ್ಧಿ ಮೊಳಕೈ ಕೆಳಗೆ ಎಂದು ಹೇಳಲು ಯಾವ ಅಡ್ಡಿಯೂ ಇಲ್ಲ.

ಒಂದು ವೇಳೆ ಈ ನನ್ನ ಲೇಖವೂ ಬುದ್ಧಿವಂತಿಕೆಯದಾದದ್ದೆಂದು ತಮ್ಮ ಅಭಿಪ್ರಾಯವಾದರೆ ತಾವು ನನ್ನ ಈ ಸಿದ್ಧಾಂತವನ್ನು ಒಪ್ಪಿದಂತಾಗುವುದು ಎಂದು ವಿನಮ್ರನಾಗಿ ಎಚ್ಚರವನ್ನು ಕೊಡಬಯಸುತ್ತೇನೆ.

—ಶ್ರೀರಂಗ

೧೯೪೫ನೇ ಇಸ್ವಿಯ ಗಂಡು ಹುಡುಗರ ಪ್ರಮಾಣಪತ್ರ ಪರೀಕ್ಷೆಯಲ್ಲಿ ಉಮೇದವಾರರ ಉತ್ತರಗಳ ಬಗ್ಗೆ ಸಂಗ್ರಹಿಸಿದ ವರದಿ—

ಭಾಷಾ ವಿಷಯ ೧ನೇ ಕಾಗದ:— ಪ್ರಶ್ನೆಕಾಗದವು ಸಾಧಾರಣ ಯೋಗ್ಯತೆಯ ಉಮೇದವಾರರಿಗೆ ಸ್ವಲ್ಪು ಗಡಚಾದ್ದರಿಂದ ಭಾಷಾವಿಷಯದಲ್ಲಿ ನಿರೀಕ್ಷಣೆಗಿಂತ ಹೆಚ್ಚಾಗಿ ಉಮೇದವಾರರು ತೇರ್ಗಡೆ ಹೊಂದಲಿಲ್ಲ. ಆದರೆ ಪ್ರಶ್ನೆಗಳು ಕಠಿಣವಾದುದರಿಂದಲೇ ಮಾತ್ರ ತೇರ್ಗಡೆ ಹೊಂದಿದವರ ಸಂಖ್ಯೆಯು ತೀರ ಕಡಿಮೆಯಾಯಿತೆಂದು ಹೇಳಲಾಗುವದಿಲ್ಲ. ಉಮೇದವಾರರ ಸಿದ್ಧತೆಯು ತೀರ ಕೆಳಗಿನ— ತರಗತಿಯಾಗಿತ್ತು. ಪ್ರಶ್ನಕಾಗದವಲ್ಲಿಯ ಅವತರಣಿಕೆಗಳನ್ನಾಗಲೀ— ಅವಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನಾಗಲೀ ತಿಳಿದುಕೊಳ್ಳುವ ಯೋಗ್ಯತೆಯು ಅವರಲ್ಲಿ ಕಂಡುಬರಲಿಲ್ಲ. ಅಲ್ಲದೆ ಅವರ ಬರಹ ಸಾಮರ್ಥ್ಯವೂ ಕೂಡ ತೀರ ಕಡಿಮೆ ತರಗತಿಯದಿತ್ತು. ಅಶುದ್ಧ ಹಾಗೂ ಅರ್ಥವಿಲ್ಲದ ಶಬ್ದ ಸಮುದಾಯಗಳೂ, ದೂಷಿತ ವ್ಯಾಕರಣ, ಅಸಡ್ಡೆಯಾದ ಶಬ್ದರಚನೆ, ಮತ್ತು

ಜಾಗರೂಕತೆ ಇಲ್ಲದೆ ಬರಹದಲ್ಲಿನ ಅವರ ಹೀನ-ಯೋಗ್ಯತಾ ಪ್ರದರ್ಶನದ ಮುಖ್ಯ ಲಕ್ಷಣಗಳು. ಭಾಷಾವಿಷಯದಲ್ಲಿ ಉಮೇದವಾರರ ಸಿದ್ಧಿಯ ಮಾನವು ಪ್ರತಿ ವರ್ಷ ಹೆಚ್ಚು ಹೆಚ್ಚು ಕೆಡುತ್ತ ನಡೆದಿದೆಯೆಂದು ಪರೀಕ್ಷಕರಿಗೆ ಕಂಡುಬಂದಿದೆ. ಈ ಸ್ಥಿತಿಯನ್ನು ಸುಧಾರಿಸುವದು ಮುಖ್ಯವಾಗಿ ಶಿಕ್ಷಕರನ್ನೇ ಕೂಡಿದೆ. ಆದ್ದರಿಂದ ಭಾಷಾ ಶಿಕ್ಷಕರು ತೀರ ಹೆಚ್ಚು ಪರಿಶ್ರಮ ವಹಿಸಬೇಕೆಂದು ಆಗ್ರಹದ ಸೂಚನೆ ಮಾಡದೆ ಗತ್ಯಂತರವಿಲ್ಲ. ಗದ್ಯ-ಪದ್ಯಗಳಲ್ಲಿಯ ಅನೇಕ ಅವತರಣಿಕೆಗಳನ್ನು ವಿದ್ಯಾರ್ಥಿಗಳು ಅಭ್ಯಸಿಸುವ ಹಾಗೆ ಮಾಡಬೇಕು, ಮತ್ತು ಬರಹದ ಕೆಲಸದ ಬಗ್ಗೆ ಒಂದು ಸುಯೋಚಿತ ಯೋಜನೆಯನ್ನು ಪ್ರತ್ಯಕ್ಷ ಕಾರ್ಯರೂಪಕ್ಕೆ ಇಳಿಸಬೇಕು. ಆಧುನಿಕ ಶಾಲೆಗಳಲ್ಲಿ ತೀರ ಕಡಿಮೆ ತರಗತಿಯ ಲಕ್ಷ್ಯವನ್ನು ಪೂರೈಸಲ್ಪಟ್ಟ ವ್ಯಾಕರಣದ ಅಭ್ಯಾಸದ ಕಡೆಗೆ ವಿಶಿಷ್ಟ ಗಮನವನ್ನು ಕೊಡಬೇಕು. ಪದ್ಯದಲ್ಲಿಯ ಭಾವಗಳ ಆವಿರ್ಭಾವದಲ್ಲಿಯ ಹಾಗೂ ಪದಲಾಲಿತ್ಯದಲ್ಲಿಯ ಸೌಂದರ್ಯದ ಸಿರಿಯನ್ನು ಕಂಡು ಹಿಡಿಯುವಂತೆ ವಿದ್ಯಾರ್ಥಿಗಳಿಗೆ ದೀಕ್ಷೆಯನ್ನಿಯಬೇಕು.

ಭಾಷಾ ವಿಷಯ ತನೇ ಕಾಗದ:—ಉಮೇದವಾರರ ಬರಹ ಸಾಮರ್ಥ್ಯದ ಬಗ್ಗೆ ಮಾಡಿದ ಸೂಚನೆಗಳು ಈ ಕಾಗದಕ್ಕೂ ಕೂಡ ಅನ್ವಯಿಸುತ್ತವೆ. ತಮ್ಮ ವಿಚಾರಗಳನ್ನು ಅಥವಾ ಮನೋಭಾವಗಳನ್ನು ತಿಳಿಸಿ ಹೇಳುವ ಸಾಮರ್ಥ್ಯವು ಅದರಲ್ಲಿ ಇಲ್ಲದಿರುವದಲ್ಲದೇ— ಪತ್ರ, ಬೇಡಿಕೆ ಪತ್ರ (ಅರ್ಜಿ), ಜಾಹೀರಾತ, ಸಂಭಾಷಣೆ, ವರದಿ ಮುಂತಾದ ನಿಬಂಧದ ವಿವಿಧ ಅಂಗಗಳ ರಚನೆಯ ತಂತ್ರದ ಕಲ್ಪನೆಯಂತೂ ಅವರಲ್ಲಿ ಇಲ್ಲನೇ ಇಲ್ಲ. ಗ್ರಾಮ್ಯ ಹಾಗೂ ಸುರೂಪತೆ ಇಲ್ಲದ ಪದಗಳನ್ನು ಧಾರಾಳವಾಗಿ ಉಪಯೋಗಿಸಿದ್ದಾರೆ. ಬರಹದ ಭಾಷೆ ಹಾಗೂ ಮಾತಾಡುವ ಭಾಷೆ ಇವುಗಳಲ್ಲಿರುವ ಸೂಕ್ಷ್ಮ ಭೇದದ ಕಡೆಗೆ ಲಕ್ಷ್ಯಗೊಟ್ಟಂತೆ ಕಾಣಲಿಲ್ಲ. ಆದ್ದರಿಂದ ಉಮೇದವಾರರಿಗೆ ಇನೇ ಇಯತ್ತೆಯಿಂದ ನಿಬಂಧದ ವಿವಿಧ ಮಟ್ಟುಗಳ ಅಭ್ಯಸನಗಳ ಮುಖಾಂತರವಾಗಿ ಸಮಯೋಚಿತ ಸಹಾಯ ಹಾಗೂ ಸಾಕಷ್ಟು ರಚನಾಕೌಶಲ್ಯವನ್ನು ಒದಗಿಸಿಕೊಡಬೇಕು. ಸಾಮಾನ್ಯ ವಾಚನದ ಅಭಿರುಚಿಯನ್ನು ವಿದ್ಯಾರ್ಥಿಗಳಲ್ಲಿ ಬಿಂಬಿಸಬೇಕು. ಪ್ರಾಮುಖ್ಯವಾಗಿ ಶಿಕ್ಷಕನು ನಿಬಂಧದ ವಿವಿಧದ ಅಂಗಗಳ ರಚನೆಯ ತಂತ್ರದ ಬಗ್ಗೆ ಸರಿಯಾದ ಜ್ಞಾನವಾಗುವಂತೆ ಯತ್ನಿಸಬೇಕು.

ಗಣಿತ:—ಈ ವಿಷಯದಲ್ಲಿಯ ಉತ್ತರಗಳ ಮುಖ್ಯ ದೋಷವೆಂದರೆ ಕ್ರಮಬದ್ಧ ರೀತಿಯ ಅಭಾವವೆಂದು ಹೇಳಬಹುದು. ಉಮೇದವಾರರು ವಿಶೇಷವಾಗಿ ವ್ಯವಹಾರಿಕ ಉಪಯುಕ್ತತೆಗೆ ಸಂಬಂಧಿಸಿದ ಉದಾಹರಣೆಗಳನ್ನು ಚನ್ನಾಗಿ ಬಿಡಿಸಿಲ್ಲ. ತಾಂತ್ರಿಕ ರೀತಿಯಿಂದ ಬಿಡಿಸುವ ಲೆಖ್ಖಗಳಲ್ಲಿ ಮಾತ್ರ ತಮ್ಮ ಕೈಚಳಕ (ಲಾಘವ) ವನ್ನು ತೋರಿಸಿದ್ದು ಕಂಡುಬರುತ್ತದೆ. ಎಷ್ಟೋ ಉಮೇದವಾರರು ಪರೀಕ್ಷೆಗೆ ಹಾಕಿದ ಲೆಖ್ಖಗಳ ಅರ್ಥವನ್ನು ಕೂಡ ತಿಳಿದುಕೊಳ್ಳುವದಾಗಲಿಲ್ಲ ವೆಂಬುದು ಸ್ಪಷ್ಟವಾಗಿದೆ. ಗಣಿತ ಶಿಕ್ಷಕರು ಕೆಳಗಿನ ಇಯತ್ತೆಗಳಲ್ಲಿ ಬಾಯಿಲೆಖ್ಖಗಳ ಕಡೆಗೆ ವಿಶೇಷ ಗಮನವನ್ನು ಕೊಡಬೇಕೆಂದು ಸೂಚನೆ ಇದೆ. ಕೇವಲ ಅಂಕಿಗಳನ್ನು ಅತ್ತಿತ್ತ ಗೀಚಿ ಹೇಗಾದರೂ ಮಾಡಿ ಉತ್ತರವನ್ನು ದೊರಕಿಸಿದರೆ ಲೆಖ್ಖಗಳನ್ನು ವ್ಯವಸ್ಥಿತ ರೀತಿಯಿಂದ ಬಿಡಿಸಿದಂತಾಗುವದಿಲ್ಲವೆಂಬುದನ್ನು ವಿದ್ಯಾರ್ಥಿಗಳ ಮೇಲೆ ಬಿಂಬಿಸಬೇಕು. ಅಂಕಿಗಳನ್ನು ಸ್ಪಷ್ಟವಾಗಿಯೂ ಅಚ್ಚುಕಟ್ಟಾಗಿಯೂ ಮುಂಡಿಸುವದು, ಕ್ರಮಬದ್ಧ ಮೆಟ್ಟುಗಳು, ಸುಗಮವಿವೇಚನೆ ಮತ್ತು ಲಘುಪದ್ಧತಿ, ಇವೇ ಮೊದಲಾದವುಗಳು ಲೆಖ್ಖವನ್ನು ಉತ್ತಮ ರೀತಿಯಿಂದ ಬಿಡಿಸುವ ಮುಖ್ಯ ಲಕ್ಷಣಗಳು. ಶಿಕ್ಷಕರು ವರ್ಗದ ರೂಢಿಗಾಗಿ ಸಾಂಪ್ರದಾಯಿಕ ಲೆಖ್ಖಗಳ ಮಾದರಿಗಳನ್ನೇ ಆರಿಸುವ ಸಂಕೋಚವನ್ನು ಇಡಕೂಡದು. ಗಣಿತ ವಿಷಯವನ್ನು ಕಲಿಸುವಾಗ ವ್ಯಾವಹಾರಿಕ ಮಹತ್ವ ಹಾಗೂ ಉಪಯುಕ್ತತೆ, ಈ ದೃಷ್ಟಿಯಿಂದ ಆರಿಸಿದ ಲೆಖ್ಖಗಳಿಗೂ ಪ್ರಮುಖ ಸ್ಥಾನವಿರಬೇಕು.

ಭೂಮಿತಿ :—ಈ ವಿಷಯದಲ್ಲಿ ಉಮೇದವಾರರಲ್ಲಿಯ ಅನೇಕರು ಪ್ರಶ್ನೆಕಾಗದವನ್ನು ಚನ್ನಾಗಿ ಬಿಡಿಸಿಲ್ಲ. ಎಷ್ಟೋ ಉಮೇದವಾರರು ಪೂರ್ಣ ಗುಣಗಳನ್ನೂ ದೊರಕಿಸಿದ್ದಾರೆ. ಎಷ್ಟೋ ಉತ್ತರಗಳು ಅಸಡ್ಡೆಯಾದವಿದ್ದವು, ಮತ್ತು ಕೃತಿಗಳು ತಪ್ಪುಗಳಿಂದ ಕೂಡಿದವೂ ಅಸಹ್ಯವೂ ಇದ್ದವು. ಉಮೇದವಾರರು ಪ್ರಮೇಯಗಳಲ್ಲಿ ಅಡಕವಾದ ತತ್ವಗಳನ್ನು ಜಾಣ್ಮೆಯಿಂದ ತಿಳಿದು ಕೊಳ್ಳುವ ಬದಲು, ಕೇವಲ ಅವನ್ನು ಮುಖಪಾಠ ಮಾಡಿದ್ದರೆಂದು ಕಂಡುಬಂದಿದೆ. ಕೆಲವು ಉಮೇದವಾರರಿಗೆ ಕಾಟಕೋನ, ಚೌಕೋನ, ಸಮಭುಜಚೌಕೋನ, ವ್ಯಾಪ್ತಿಯುಳ್ಳ ತ್ರಿಕೋನಗಳ ಕಲ್ಪನೆಯು ಕೂಡ ಚನ್ನಾಗಿ ಇದ್ದಿಲ್ಲ. ಪ್ರಾಯೋಗಿಕ ಭೂಮಿತಿಯ ಸಮಸ್ಯೆಗಳ ಕಡೆಗೆ ತೀರ ಅಲಕ್ಷ ಮಾಡಿದುದು ಶೋಚನೀಯವಾದುದು. ಈ ವಿಷಯದ ಅಭ್ಯಾಸದಲ್ಲಿಯ ದೋಷಗಳನ್ನು ಹೊಡೆದು ಹಾಕಲು ಅದರಲ್ಲಿಯ ಪ್ರಾಯೋಗಿಕ ಸ್ವರೂಪಕ್ಕೆ ಹೆಚ್ಚಿಗೆ ಮಹತ್ವವನ್ನು ಕೊಟ್ಟು ಆ ವಿಷಯದ ಕಲಿಸುವಿಕೆಯನ್ನು ಪ್ರತ್ಯಕ್ಷ ವಸ್ತುಗಳಿಗೆ ಹೆಚ್ಚು ಸಂಬಂಧವುಳ್ಳದ್ದನ್ನಾಗಿ ಮಾಡಬೇಕು. ಭೂಮಿತಿಯ ಸಲಕರಣೆಗಳ ಸತತ ಸಹಾಯದಿಂದ ಶುದ್ಧ ಮತ್ತು ಅಚ್ಚು ಕಟ್ಟಾದ ಆಕೃತಿಗಳನ್ನು ತೆಗೆಯಿಸುವಂತೆ ಹೆಚ್ಚಿನ ಜಾಗರೂಕತೆಯನ್ನು ವಹಿಸಬೇಕು. ಭೂಮಿತಿಯನ್ನು ಪ್ರತ್ಯಕ್ಷ ಜೀವನಕ್ಕೆ ಸಂಬಂಧವಿಲ್ಲದ ಪಾಠವಮಾಡುವ ವಿಷಯದಂತೆ ಕಲಿಸದೆ, ಅದನ್ನು ವಿಶಿಷ್ಟ ಚಟುವಟಿಕೆಯ ಮುಖಾಂತರ ಕಲಿಸಿದರೆ ಹೆಚ್ಚು ಪರಿಣಾಮಕಾರಿಯಾಗುವದು.

ಜಮಾಖರ್ಚು :— ಭೂಮಿತಿಯಲ್ಲಿ ಕಂಡುಬಂದಂತೆ ಈ ವಿಷಯದಲ್ಲಿಯಾದರೂ ವಿದ್ಯಾರ್ಥಿಗಳು ಚನ್ನಾಗಿ ಪ್ರಗತಿಯನ್ನು ತೋರಿಸಿಲ್ಲ. ರೋಖ ಮತ್ತು ಉದ್ದರಿ ವ್ಯವಹಾರಗಳನ್ನೊಳಗೊಂಡ ರೋಜಕಿರ್ದಿಯನ್ನು ಸರಿಯಾಗಿ ತುಂಬಲು ವ್ಯಾವಹಾರಿಕ ಜ್ಞಾನವು ಅವಶ್ಯ. ಬ್ಯಾಂಕು, ಮತ್ತು ಖಾಸಗಿ ಅಂಗಡಿಗಳಲ್ಲಿ ಲೆಕ್ಕಮಾಡುವ ರೀತಿಯನ್ನು ಮತ್ತು ಬೇರೆ ಬೇರೆ ತರದ ಹುಂಡಿಗಳನ್ನಾಗಲಿ, ಚೆಕ್ಕುಗಳನ್ನಾಗಲೀ ಉಪಯೋಗಿಸಿ ಹಣವನ್ನು ತರುವ ಪದ್ಧತಿಯನ್ನು ಪ್ರತ್ಯಕ್ಷ ರೀತಿಯಿಂದ ಅಭ್ಯಸಿಸುವ ಸಂಧಿಯನ್ನೂ ವಿದ್ಯಾರ್ಥಿಗಳಿಗೆ ಒದಗಿಸಿಕೊಡ ಬೇಕು. ತೀರಕಡಿಮೆ ವಿದ್ಯಾರ್ಥಿಗಳಿಗೆ ಮಾತ್ರ ದುಹೇರಿ ಜಮಾಖರ್ಚು(Double Accounting) ಪರಿಚಯವಿದ್ದಂತೆ ಕಂಡುಬಂತು. ಜಮಾಖರ್ಚಿನಂತಹ ವ್ಯವಹಾರಿಕ ವಿಷಯವನ್ನು ಪ್ರತ್ಯಕ್ಷ ವ್ಯವಹಾರಗಳ ಮುಖಾಂತರವೇ ಕಲಿಸಲು ಯತ್ನಿಸಬೇಕು.

ಇತಿಹಾಸ :— ಈ ವಿಷಯದಲ್ಲಿ ವಿದ್ಯಾರ್ಥಿಗಳ ಗಮನವು ಸಾಕಷ್ಟು ಸಮಾಧಾನಕರ ವಿದ್ದಾಗ್ಯೂ—ಅದರ ಯಶಸ್ಸಿನ ಕಾರಣವು ಪ್ರಶ್ನೆಗಳ ಸುಲಭ ಸ್ವರೂಪವೇ ಹೊರ್ತು ವಿದ್ಯಾರ್ಥಿಗಳು ಬರೆದ ಉತ್ತರಗಳ ಹೆಚ್ಚಿನ ಮಟ್ಟು ಅಲ್ಲವೆಂದು ಒಪ್ಪಬೇಕಾಗಿದೆ. ಉಮೇದವಾರರಲ್ಲಿ ಅನೇಕರಿಗೆ ಐತಿಹಾಸಿಕ ಕಾಲಮಾನದ ಪರಿಚಯವಿದ್ದಂತೆ ತೋರಲಿಲ್ಲ. ಪ್ರತಿಯೊಂದು ಉತ್ತರ ಕಾಗದದಲ್ಲಿ ಕೆಳಗಿನ ಮಾದರಿಯಂತಹ ಅವಾಸ್ತವ ಜೋಡಣೆ ಮತ್ತು ಅಸಂಬದ್ಧ ಸಂಗತಿಗಳು ಹೇರಳವಾಗಿ ಕಂಡುಬಂದಿವೆ. ಉದಾಹರಣಾರ್ಥವಾಗಿ—" ವಿಜಯನಗರವು ಅಲ್ಲಿಅದಿಲಶಹನಿಂದ ಸ್ಥಾಪಿಸಲ್ಪಟ್ಟು ಅದನ್ನು ಬಾಬರನು ಕಳೆದುಕೊಂಡನು. "; " ಅಶೋಕನ ಶಾಸನಲಿಪಿಗಳು ಫ್ರೆಂಚ ಭಾಷೆಯಲ್ಲಿ ಬರೆಯಲ್ಪಟ್ಟಿವೆ "; " ಅರನೇ ಜಾರ್ಜ ಬಾದಶಹನು ಕಾಂಗ್ರೆಸ ಅಂದೋಲನವನ್ನು ಪ್ರಾರಂಭಿಸಿದನು ", ಮುಂತಾದವು ಕಾಲರೇಷೆಗಳ ಮೇಲಿಂದ ಮೇಲಿನ ಉಪಯೋಗ, ಐತಿಹಾಸಿಕ ಪುರುಷರ ಚರಿತ್ರೆಗಳ ನಿಕಟ ಅಭ್ಯಾಸ, ಸ್ಥಳಗಳ ಇರುವಿಕೆಯ, ದಿಕ್ಕು ಅಂತರಗಳ, ಸರಿಯಾದ ಜ್ಞಾನವಾಗುವಂತೆ ನಕಾಶೆಗಳ ಉಪಯೋಗ, ಐತಿಹಾಸಿಕ ಸಂಘಟಣೆಗಳ ಕಾರಣ ಮತ್ತು ವೃತ್ತಾಂತಗಳ ವಿಚಾರಪ್ರಚೋದಕ ವಿವೇಚನೆ, ಇವೇ ಮುಖ್ಯವಾದ ಕೆಲವು ಸಂಗತಿಗಳನ್ನು ಇತಿಹಾಸ ವಿಷಯದ ಶಿಕ್ಷಕನು ಮರೆಯಕೂಡದು.

ಭೂಗೋಲ :— ಈ ವಿಷಯದಲ್ಲಿ ಉಮೇದವಾರರು ತಮ್ಮ ಪ್ರಗತಿಯನ್ನು ಸಮಾಧಾನಕರವಾಗಿ ವ್ಯಕ್ತಗೊಳಿಸಿದ್ದಾರೆ. ಅದರೆ ಅವರಲ್ಲಿ ಹಲವರಿಗೆ ಭೌಗೋಲಿಕ ಸ್ಥಾನಪರಿಚಯದ ಬಗ್ಗೆ ಸಾಕಷ್ಟು ಗಮನವಿದ್ದಂತೆ ತೋರಲಿಲ್ಲ. ನಕಾಶದಲ್ಲಿಯ ಉತ್ತರಗಳನ್ನು ಸ್ಥಾನವನ್ನು

ನಿರ್ದೇಶಿಸಿ ತುಂಬಾನದರಲ್ಲಿ ಅನೇಕ ಮೋಸಗಳು ಬಯಲಿಗೆ ಬಂದಿವೆ. ದಿಲ್ಲಿಯನ್ನು ದಕ್ಷಿಣ ಹಿಂದುಸ್ತಾನದಲ್ಲಿ ತೋರಿಸಿದವರು. ಗೋದಾವರೀ ನದಿಯು ಅರಬೀ ಸಮುದ್ರಕ್ಕೆ ಹೋಗಿ ಕೂಡುವಂತೆ ಚಿತ್ರಿಸಿದ್ದಾರೆ; ಬನಾರಸ ಪಟ್ಟಣವನ್ನು ಮದ್ರಾಸದ ಹತ್ತಿರ ಗುರುತಿಸಿರುವರು. ಕಾರ್ಯಕಾರಣ ಸಂಬಂಧ ಜ್ಞಾನವಾದರೂ ಅಷ್ಟಕ್ಕಷ್ಟೇ ಎಂದರೆ ಸಲ್ಲುವದು;—ಸಿಂಧಪ್ರಾಂತದ ಮನೆಗಳಿಗೆ ಸಪಾಟಾದ ಚಕ್ಕರಗಳಿವೆ, ಯಾಕುದರೆ, ಅಲ್ಲಿ ಭೂಕಂಪಗಳಾಗುತ್ತವೆ. ಹಿಂದುಸ್ತಾನದ ವ್ಯಾಪಾರದ ಸಂಬಂಧವಾಗಿ ವಿದ್ಯಾರ್ಥಿಗಳು ಏನಾದರೂ ಪರಿಶ್ರಮ ವಹಿಸಿರುವರೆಂಬ ಬಗ್ಗೆ ಬಲವಾದ ಸಂಶಯ ತೋರಿಬರುವದು. ವಿದ್ಯಾರ್ಥಿಗಳು ಯಾವದೇ ಒಂದು ಬಂದರದಿಂದ ಸಾರಾಸಾರ ವಿಚಾರವಿಲ್ಲದೆ ಅಲ್ಲಿ ಬೆಳೆಯದೇ ಇದ್ದ ಸಾಮಾನುಗಳು ರಫ್ತು ಅಥವಾ ಆಮದು ಆಗುವನೆಂಬ ವಿಧಾನಗಳನ್ನು ಮಾಡಿದ್ದು ಕಂಡುಬರುತ್ತದೆ. ಭೂಗೋಲ ಶಿಕ್ಷಕರು ಶಾಲೆಯಲ್ಲಿದ್ದ ಪಠ್ಯ ಪುಸ್ತಕಗಳಲ್ಲಿ ದೊರೆಯಬಹುದಾದ ಸಂಗತಿಗಳಿಗಿಂತ ತೀರ ಹೆಚ್ಚಿನ ಜ್ಞಾನವನ್ನು ಮಾಡಿಕೊಳ್ಳಬೇಕೆಂದು ಆಗ್ರಹದ ಸೂಚನೆ ಇದೆ. ಅವರ ಕಲಿಸುವಿಕೆಯು ವರ್ಗದಲ್ಲಿ ಪಠ್ಯ ಪುಸ್ತಕಗಳನ್ನು ಓದಿದ್ದರಿಂದ ಅಥವಾ ಓದಿಸುವದರಿಂದಲೇ ಮಾತ್ರ ಸಂಪೂರ್ಣವಾಯಿತೆಂದು ತಿಳಿದುಕೊಳ್ಳಬಾರದು. ನಕಾಶಗಳನ್ನು ತೆಗೆಯಿಸಿ ನಕಾಶಗಳ ಅಭ್ಯಾಸದಿಂದ ಸರಿಯಾದ ಅರ್ಥವನ್ನು ವಿದ್ಯಾರ್ಥಿಗಳು ಗ್ರಹಿಸುವಂತೆ ಯತ್ನಿಸಬೇಕು. ಭೌಗೋಲಿಕ ಜ್ಞಾನವನ್ನು ಮೂರ್ತದೃಷ್ಟಾಂತಗಳ ಸಹಾಯದಿಂದ ಕೊಡಬೇಕು. ಆಯಾ ಜೀವನದ ವೈಶಿಷ್ಟ್ಯಗಳನ್ನೂ ಮನುಷ್ಯರ ಚಟುವಟಿಕೆಗಳನ್ನೂ ಭೌಗೋಲಿಕ ಪರಿಸ್ಥಿತಿಗೆ ಹೊಂದಿಸಿ ತಿಳಿಸಿಹೇಳಬೇಕು. ಭೌಗೋಲಿಕ ಸಂಗತಿಗಳನ್ನು ವರ್ಗದ ಕೋಣೆಯಿಂದ ಹೊರಗೆ ಹೋಗಿ ಪ್ರತ್ಯಕ್ಷ ನಿರೀಕ್ಷಿಸುವ ಮಹತ್ವವನ್ನು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಚನ್ನಾಗಿ ಬಿಂಬಿಸಿ, ಭೂಗೋಲ ಶಿಕ್ಷಣವನ್ನು ಈಗಿನಕಿಂತಲೂ ಹೆಚ್ಚು ಪ್ರಮಾಣದಿಂದ ಪ್ರತ್ಯಕ್ಷಿಸುವದು ಅವಶ್ಯ.

ಶಾಸ್ತ್ರೀಯ ವಿಷಯ:— ಈ ವಿಷಯದಲ್ಲಿ ೧೦೦ಕ್ಕೆ ತೀರ ಹೆಚ್ಚಿನ ಪ್ರಮಾಣದಿಂದ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದುದೇ ಅವರು ಅದರಲ್ಲಿ ತೋರಿಸಿದ ಸಮಾಧಾನಕರವಾದ ಪ್ರಗತಿಯ ದ್ಯೋತಕವಾಗಿದೆ. ಆದರೆ ಅವರ ಜ್ಞಾನದ ಮುಖ್ಯ ಆಧಾರವು ಪಠ್ಯ ಪುಸ್ತಕಗಳಿಂದ ದೊರಕಿಸಿದ ತುಣುಕು ವಿಷಯಕುಗಳೇ ಹೊರ್ತು, ವಸ್ತುಗಳ ಪ್ರತ್ಯಕ್ಷ ನಿರೀಕ್ಷಣೆಯಿಂದಾಗಲೀ ಪ್ರಯೋಗಗಳ ಪರಿಣಾಮದಿಂದಾಗಲೀ ಕಂಡು ಹಿಡಿದಿಲ್ಲವೆಂಬುದು ಸ್ಪಷ್ಟವಿದೆ. ಪಠ್ಯಪುಸ್ತಕಗಳ ನಿರಸವಾದ ಅಭ್ಯಾಸಕ್ಕಿಂತ ರೇಷೇಯ ಚಿತ್ರಗಳು (ನಕ್ಷೆಗಳು), ಪ್ರಯೋಗಗಳು, ಪ್ರತ್ಯಕ್ಷನಿರೀಕ್ಷಣೆ, ದಟ್ಟ ಜನಸಂದಣಿಯುಳ್ಳ ಕ್ಷೇತ್ರಗಳ ಮತ್ತು ಋಗ್ಣಾಲಯಗಳ ಸಂದರ್ಶನ ಮುಂತಾದವುಗಳೇ ವಿಷಯದ ಯಥಾರ್ಥ ಜ್ಞಾನದ ಪ್ರವೇಶವನ್ನು ಹೆಚ್ಚು ತೃಪ್ತಿಕರವಾಗಿ ಮಾಡಬಲ್ಲವು. ಆಧುನಿಕ ಶಾಸ್ತ್ರೀಯ ಯುಗದಲ್ಲಿ ಶಾಸ್ತ್ರೀಯ ವಿಷಯವನ್ನು ಈಗಿನಕಿಂತ ಹೆಚ್ಚು ಶಾಸ್ತ್ರೋಕ್ತ ರೀತಿಯಿಂದ ಕಲಿಸುವದರ ಕಡೆಗೆ ಹೆಚ್ಚಿನ ಲಕ್ಷವನ್ನು ಪೂರೈಸಬೇಕೆಂದು ಸೂಚಿಸಲಾಗಿದೆ.

ಕಂಬನಿ

ಶ್ರೀ. ತಮ್ಮಣ್ಣರಾವ ಅಮ್ಮಿನಭಾವಿ ಅವರು ಕನ್ನಡ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಪ್ರಸಿದ್ಧಿಯನ್ನು ಪಡೆದು, ಎಷ್ಟೋ ಉಪಯುಕ್ತ ಪುಸ್ತಕಗಳನ್ನು ಬರೆದು ಹೆಣ್ಣುಮಕ್ಕಳ ಕಾಲೇಜಿನಲ್ಲಿ ತಮ್ಮ ಆಜನ್ಮ ಸೇವೆಯನ್ನು ಸಲ್ಲಿಸಿ, ಸೇವಾನಿವೃತ್ತರಾಗಿ ತಮ್ಮ ಉಜ್ವಲ ಪರಂಪರೆಯನ್ನು ಪ್ರಾಥಮಿಕ ಶಿಕ್ಷಕರಿಗೆ ಸ್ಫೂರ್ತಿಯಾಗುವಂತೆ ಕೊಟ್ಟು ತಾ. ೨೯-೧೨-೪೩ನೆಯ ದಿನ ನಮ್ಮನ್ನು ಅಗಲಿದ್ದಕ್ಕಾಗಿ ನಮಗೆ ಅತ್ಯಂತ ದುಃಖವಾಗಿದೆ, ಹಾಗೂ ಅವರ ಕುಟುಂಬದವರ ದುಃಖದಲ್ಲಿ ನಾವೂ ಸಮಭಾಗಿಗಳಾಗಿದ್ದೇವೆ. ದೇವರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಕೊಡಗಾನೂರು(ವಿಜಾಪುರ)—ಶಾಲೆಯ ವಾಚನಾಲಯವು ಚೆನ್ನಾಗಿ ನಡೆದಿದೆ.

ಲಿಂಗದಹಳ್ಳಿ (ರಾಣೇಬೆನ್ನೂರ ತಾಲೂಕು)— ಕುಮಾರೇಶ ವಾಚನಾಲಯದ ವಾರ್ಷಿಕ ಸಮಾರಂಭವು ವಿಜ್ಯಂಭಣೆಯಿಂದ ಆಯಿತು.

ಸ್ವೀಕಾರ

ದಿ ಡಿಸ್ಟ್ರಿಕ್ಟ ಪ್ರೊಬೇಶನ್ ಆ್ಯಂಡ ಆಫ್ಟರ ಕೇರ ಅಸೋಸಿಯೇಶನ್ ಧಾರವಾಡ

೧೨ನೆಯ ವಾರ್ಷಿಕ ವರದಿಯು ನಮ್ಮ ಕೈಸೇರಿದೆ. ಈ ಸಂಸ್ಥೆಯು ಚಿಕ್ಕಮಕ್ಕಳು ಮಾಡುವ ತಪ್ಪುಗಳಿಗಾಗಿ ಅವರನ್ನು ಸರಿಯಾಗಿ ಶಿಕ್ಷಿಸಿ ರಕ್ಷಿಸಿ ಅವರಿಗೂ ಅವರ ಪಾಲಕರಿಗೂ ಯೋಗ್ಯ ದಾರಿಯನ್ನು ತೋರಿಸುತ್ತದೆ. ಧಾರವಾಡ, ಹುಬ್ಬಳ್ಳಿ, ಗದಗ, ರಾಣೇಬೆನ್ನೂರಗಳಲ್ಲಿ ಜ್ಯುವೆನಾಯಿಲ್ ಕೋರ್ಟುಗಳನ್ನು ನಡಿಸುತ್ತದೆ. ಹುಬ್ಬಳ್ಳಿಯಲ್ಲಿ ಒಂದು ರಿಮಾಂಡ ಹೋಮನ್ನು ನಡಿಸಿದೆ. ಈ ಸಂಸ್ಥೆಯ ವಾರ್ಷಿಕ ಆದಾಯ ನೆಚ್ಚಗಳು ೧೯ ಸಾವಿರ ರೂ. ಇವೆ. ತಪ್ಪು-ದಾರಿ ಹಿಡಿದ ಮಕ್ಕಳ ವರದಿಯನ್ನು ಈ ಸಂಸ್ಥೆಗೆ ತಿಳಿಸುವದಲ್ಲದೆ ಧನಸಹಾಯವನ್ನು ಎಲ್ಲರೂ ಆವಶ್ಯವಾಗಿ ಮಾಡಬೇಕು.

ವಾಚನಪಾಠಮಾಲೆ ಮತ್ತು ಕವಿತಾಪಾಠಮಾಲೆ

ಪಂಡಿತ ಪೂಜಾರರೂ ಶ್ರೀ ಕುರಡಿಯವರೂ ಕೂಡಿ ರಚಿಸಿ ಪ್ರಕಟಿಸಿದ ಕನ್ನಡ ಗಂಡು ಮತ್ತು ಹೆಣ್ಣು ಮಕ್ಕಳ ಸ್ತ್ರಾ. ಶಾ. ಪ್ರ ಪರೀಕ್ಷೆಯ ಉಪೇದವಾರರಿಗೂ ಏಳನೆಯ ಇಯಂತ್ತೈಯ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯಕ್ತವಾಗಿದ್ದು ಬಹುದಿನಗಳಿಂದಲೂ ಪಾಠ ಪುಸ್ತಕದಂತೆ ಉಪಯೋಗಿಸಲ್ಪಡುತ್ತ ಬಂದಿರುವ ಈ ಪುಸ್ತಕದ **ಹೊಸ ಮುದ್ರಣದ ಪ್ರತಿಗಳು ಮಾರಲಿಕ್ಕೆ ಸಿದ್ಧವಾಗಿವೆ.** ಪ್ರಕಾಶಕರಿಂದಲೂ ಧಾರವಾಡದೊಳಗಿನ ಪುಸ್ತಕ ವ್ಯಾಪಾರಿಗಳಿಂದಲೂ ಪ್ರತಿಗಳನ್ನು ತರಿಸಿಕೊಳ್ಳಬಹುದು.

ಬೆಲೆ: ೧-೮-೦ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮೀಶನ್ ಕೊಡಲಾಗುವದು

ಶ್ರೀ. ಎಚ್ ಬಿ. ಉನುಡಿ ಎಮ್. ಎ. ಧಾರವಾಡ ಇವರು ರಚಿಸಿದ

ಹಿಂದ ಪದ್ಧತಿಯ ಜಮಾಖರ್ಚು

ಭಾಗ ೧ ಬೆಲೆ ೪ ಆ.

ಭಾಗ ೨ ಬೆಲೆ ೧೨ ಆ.

ಲೇಖಕರಲ್ಲಿಯೂ ಕರ್ನಾಟಕದ ಎಲ್ಲ ಬುಕ್‌ಡಿಪೋಗಳಲ್ಲಿಯೂ ದೊರೆಯುವವು.

ಪ್ರತಿಭಾ ಗ್ರಂಥಮಾಲೆ, ಧಾರವಾಡ

ಯುಗಾದಿಯಿಂದ ಯುಗಾದಿಗೆ ೮ ಉತ್ತಮ ಕತೆ ಕಾದಂಬರಿಗಳು.

ವಾರ್ಷಿಕ ಚಂದಾ (ಪೋಸ್ಟ ರಜಿಸ್ಟರ ವೆಚ್ಚ ಸೇರಿ) ೯—೦—೦

ಹೊಸ ವರ್ಷದ ಪ್ರಕಟನೆಗಳು :

೧	ಹೆತ್ತಳಾತಾಯಿ (ಕಾರಂತರ ಕಾದಂಬರಿ)	೨ ೦ ೦
೨	ಭೂಮಾತೆ ಮತ್ತು ಮಂಗಿರ (ಗರ್ಲಬಕ್ ಮತ್ತು ಶರತ್)	೧ ೮ ೦
೩	ಗಂಡು-ಹೆಣ್ಣಿನ ಸಮಸ್ಯೆ (ಕಾದಂಬರಿ ಭಾಗ ೨)	೧ ೮ ೦
೪	ಬಿರುಗಾಳಿ (ಪ್ರೊ. ನಾ. ಸಿ. ಫಡಕೆಯವರ ಕಾದಂಬರಿ)	೩ ೮ ೦
೫	ಷೋಡಶಿ (ಶ್ರೀಮತ್ ಶರತ್ ಕಾದಂಬರಿ) ೨ ಭಾಗಗಳು ಸೇರಿ	೨ ೦ ೦
೬	ರಮಾನಾಥ (ದಿ. ಪ್ರೇಮಚಂದರ ಶ್ರೇಷ್ಠ ಕಾದಂಬರಿ)	೨ ೮ ೦
೭	ಗುಲಾಬಿ ಹೂ (ಕಟ್ಟೀಮನಿ)	೧ ೮ ೦

ಹೋದ ವರ್ಷದ ಹೊತ್ತಿಗೆಗಳು :

೧	ಘಾಟೀ ಮುದುಕ ಮತ್ತು ಇತರ ಕತೆಗಳು (ದೇವುಡು)	೧ ೮ ೦
೨	ರಾಜಲಕ್ಷ್ಮಿ (ಶರತ್ ನಿಳ್ಳತೆಗಳು)	೧ ೮ ೦
೩	ಅನ್ನಪೂರ್ಣಾಮಂದಿರ (ನಿರುಪಮಾದೇವಿ ಕಾದಂಬರಿ)	೨ ೦ ೦
೪	ವೈಕುಂಠನ ಮೃತ್ಯುಪತ್ರ (ಶರತ್ ಕಾದಂಬರಿ)	೧ ೮ ೦
೫-೬	ಸಾವಿನ ಉಡಿಯಲ್ಲಿ (ಎನ್ನೆ ಕಾದಂಬರಿ, ೧—೨ಭಾಗ)	೩ ೦ ೦
೭	ಚಕಮಕಿ (ಶ್ರೀ ಲ. ಜಿ. ಬೇಂದ್ರೆ ಕಥೆಗಳು)	೨ ೦ ೦
೮	ಗಂಡು-ಹೆಣ್ಣಿನ ಸಮಸ್ಯೆ (ಕುಪ್ಪಮ್ಮ ಕಾದಂಬರಿ ಭಾಗ ೧)	೨ ೦ ೦

ಹೊಸ ವರ್ಷದ ಚಂದಾದಾರರಾಗುವವರಿಗೆ ಈ ಪುಸ್ತಕಗಳನ್ನು ಹತ್ತು ರೂ. ಗಳಿಗೆ ಕೊಡುತ್ತೇವೆ. ಅಂದರೆ ಒಟ್ಟಿಗೆ ೧೯—೦—೦ ಮನಿಯಾರ್ಡರು ಮಾಡಬೇಕು. ಮಿಕ್ಕವರಿಗೆಲ್ಲ ಮೂಲ ಬೆಲೆ ಮತ್ತು ಅಂಚೇ ವೆಚ್ಚ ಕೂಡಿ ವ್ಹಿ. ಪಿ. ಮಾಡಲಾದೀತು.

ಸಮಾಜ ಪುಸ್ತಕಾಲಯ, ಧಾರವಾಡ

ಹೊಸ ಪುಸ್ತಕಗಳಿಗೆ ತ್ವರೆ ಮಾಡಿರಿ ! ಲಾಭಪಡೆಯಿರಿ !

ಹೊಸಪದ್ಧತಿಯ
(೧) ಹಿಂದೀ ಜಮಾಖರ್ಚು ಭಾಗ ೧
(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫ನೆಯ ಇಯತ್ತೆಯವರಿಗೂ ಹೆಣ್ಣುಮಕ್ಕಳ ಮುಟ್ಟೇ ಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ : ೮ ಆಣೆ.

೨. ಆರಂಭಪ ಜಮಾಖರ್ಚು : ೩ನೆಯ ಇಯತ್ತೆಯವರಿಗೆ ಉಪಯೋಗವಿದೆ. ಬೆಲೆ: ೩ ಆಣೆ.

೩. ಅಂಗಸಾಧನ ಶಿಕ್ಷಕ: ಬೆಲೆ: ೪ ಆಣೆ.

೪. ಗಣಿತಪಾಠ ಸಂಗ್ರಹ: ಇದು ಈಗಿನ ಪರೀಕ್ಷೆಯ ಪದ್ಧತಿಯಂತಿರುವದರಿಂದ ಸ್ಕಾಲರ ಮತ್ತು ಮುಲ್ಕೀಪರೀಕ್ಷೆಯವರಿಗೆ ಉಪಯುಕ್ತವಿದೆ.

ಬೆಲೆ: ೪ ಆಣೆ.

ಹೊಸಪದ್ಧತಿಯ
ಹಿಂದೀ ಜಮಾಖರ್ಚು ಭಾಗ ೨
(ವ್ಯಾಪಾರಿ ಜಮಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮುನಿಯಾರ್ಡರ, ಬಡ್ಡೀ ಅಕರಣೆ ಜಮಾಖರ್ಚಿನ ಇತರ ವಹಿಗಳು ಯಾವಿ, ಗಳ ನಮೂನೆಗಳು, ಪ್ರಶ್ನೆಗಳು. ಪ್ರಶ್ನೆಕಾಗದ ಗಳು ಇರುವವಲ್ಲದೆ, ಒಕ್ಕಲತನ, ಒಲುವಿನ ಶಾಲೆಯ ವಿದ್ಯಾರ್ಥಿಗಳ ಕಲುವಾಗಿ ಬರೆದ ಜಮಾಖರ್ಚು ಅಂದರೆ ಜೇಲಿ ಲೇಬರ ಶೀಟು, ವೀಕಲಿ ಮುಸ್ತರ ರೋಲ್, ಕಲ್ಟಿವೇಶನ್ ಶೀಟ ಮುಂತಾ ಪವುಗಳ ಪತ್ರಿಕೆಗಳೂ ಕಬುಲಾಯತಿ, ಬಾಡಿಗೆಯ ಪತ್ರಗಳ ನಮುನೆಗಳೂ ಇರುವದರಿಂದ ಇದು ೭ನೆಯ ಇಯತ್ತೆಯವರಿಗೂ, ಆಗ್ರಿಕಲ್ಚರಲ್ ಬಾಯಸ್ ಕ್ಲಾಸಿನವರಿಗೂ ಉಪಯುಕ್ತವಿದೆ. ಸ್ವಲ್ಪ ಸ್ಮತಿಗಳಿರುವದರಿಂದ ನಮೂನೆಗಾಗಿ ಒಂದು ಸ್ಕಾದರೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ: ೮ ಆಣೆ.

ವಿಳಾಸ :— **ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಹೇಟಿ, ವಿಜಾಪುರ.**

Printed by R. G. Hukeri at the Vasant Printing Works Dharwar and Published by S. G. Baichwal Esq. M. A. Principal Training College For-Men Dharwar, at his Office. 7403-45-1375.

ಕನ್ನಡ



ಸಂಪಾದಕರು:

ಶ್ರೀನಿವಾಸ ಗುರುರಾಜಾಚಾರ್ಯ ಬೈಚೆವಾಳ, ಎ. ಎ

ಜನವರಿ, ಫೆಬ್ರುವರಿ, ಮಾರ್ಚ್ ೧೯೪೬

ಹತ್ತು ವರುಷಗಳ ಅನುಭವದಿಂದ ಬರಿದ

ಚಿ. ಶ್ರೀ. ಕುಲಕರ್ಣಿಯವರ ಶಾಲೋಪಯೋಗಿ ಪುಸ್ತಕಗಳು.

ಮುಲ್ಕೀಪರೀಕ್ಷೆಗಾಗಿ

೧	ಗಣಿತ ಸಂಗ್ರಹ	೦	೧೨	೦
೨	ಇತಿಹಾಸ ಪ್ರಶ್ನೋತ್ತರ ಮಾಲೆ	೦	೯	೦
೩	ಭೂಗೋಲ ಪ್ರಶ್ನೋತ್ತರ ಮಾಲೆ	೦	೯	೦
೪	ಭೂಮಿತಿ ಪ್ರಶ್ನೋತ್ತರ ಮಾಲೆ	೦	೮	೦
೫	ಜಮಾಖರ್ಚು ,,	೦	೧೧	೦
೬	ಶಾಸ್ತ್ರೀಯ ವಿಷಯ ,,	೦	೩	೦
೭	ಆರೋಗ್ಯವಿಜ್ಞಾನ ,,	೦	೯	೦
೮	ವಾಕ್ಯರಚನೆ ಹಾಗೂ ನಿಬಂಧ ಬರೆಹ	೦	೮	೦
೯	ಈಗಿನ ರಾಜ್ಯವ್ಯವಸ್ಥೆ	೦	೪	೦
೧೦	ಗಂಡು ಹುಡುಗರ ಮುಲ್ಕೀ ಪರೀಕ್ಷೆಯ ಪ್ರಶ್ನೆಗಳು	೦	೯	೦
೧೧	ಹೆಣ್ಣು ಮಕ್ಕಳ ಮುಲ್ಕೀ ಪರೀಕ್ಷೆಯ ಪ್ರಶ್ನೆಗಳು	೦	೧೨	೦
೧೨	ವಾಚನಮಾಲೆ	೦	೮	೦
೧೩	ಪದ್ಯಮಾಲೆ	೦	೪	೦
೧೪	ಪ್ರಶ್ನೋತ್ತರ ಭಾಷಾಭ್ಯಾಸ ಭಾಗ (೧)	೦	೧೦	೦
೧೫	,, (ವ್ಯಾಕರಣ) (ಭಾಗ ೨)	೦	೧೦	೦
೧೬	ಶಾಸ್ತ್ರೀಯ ವಿಷಯಸಾರ	೦	೧೦	೦
೧೭	ಭೂಮಿತಿ	೦	೭	೦
೧೮	ಹೈಸ್ಕೂಲ ಸ್ಕಾಲರಷಿಪ್ ಪರೀಕ್ಷೆಯ ಪ್ರಶ್ನೆಗಳು	೦	೧೨	೦
೧೯	ಮಿಡಲ್ ಸ್ಕೂಲು ಸ್ಕಾಲರಷಿಪ ಪರೀಕ್ಷೆಯ ಪ್ರಶ್ನೆಗಳು	೦	೮	೦
೨೦	ಭಾರತ ಸ್ವರಾಜ್ಯ ಸಾಧನೆ	೦	೫	೦
೨೧	ಮುಲ್ಕೀ ಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ	೧	೦	೦
೨೨	ಇತಿಹಾಸ ಸಾರ	೦	೪	೦
೨೩	ಮೂಪರಿಯ ನಿಬಂಧಗಳು	೦	೭	೦

ಕೆಳಗಿನ ವರ್ಗಗಳಿಗಾಗಿ

೧	೧ನೇ ಇಯತ್ತೆಯ ಸಾಮಾನ್ಯ ವಿಜ್ಞಾನ	೦	೩	೦
೨	೨ನೇ ,, ,,	೦	೩	೦
೩	೩ನೇ ,, ,,	೦	೪	೦
೪	೪ನೇ ,, ,,	೦	೫	೦
೫	೫ನೇ ,, ,,	೦	೬	೦
೬	೨ನೇ ಇಯತ್ತೆಯ ಭೂಗೋಲ (ಪ್ರಪಂಚ ಪರಿಚಯ) ಭಾಗ ೧	೦	೬	೦
೭	೩ನೇ ,, ,, ಭಾಗ ೨	೦	೬	೦
೮	೪ನೇ ,, ,, ಭಾಗ ೩	೦	೬	೦
೯	೫ನೇ ,, ,, ಭಾಗ ೪	೦	೬	೦
೧೦	೧ನೇ ತರಗತಿಯ ಕಥೆ	೦	೧	೬
೧೧	೨ನೇ ,,	೦	೧	೬
೧೨	೩ನೇ ,,	೦	೨	೦
೧೩	೪ನೇ ,,	೦	೩	೦
೧೪	ಶನಿಮಹಾತ್ಮೆ	೦	೧	೦
೧೫	ಪೌರಾಣಿಕ ಕಥೆಗಳು (೨-೫ ವರ್ಗಗಳ ಇತಿಹಾಸ)	೦	೩	೦
೧೬	೩ನೇ ವರ್ಗದ ನಿಬಂಧ ಮತ್ತು ವ್ಯಾಕರಣ	೦	೫	೦
೧೭	ಮಕ್ಕಳ ಕಥೆಗಳು. ಭಾಗ ೧	೦	೪	೦
೧೮	,, ಭಾಗ ೨	೦	೪	೦
೧೯	ಪೌರನೀತಿ ೧ನೆ ಇಯತ್ತೆಗಾಗಿ	೦	೩	೦
೨೦	,, ೨ನೇ ,,	೦	೩	೦
೨೧	,, ೩ನೇ ,,	೦	೪	೦
೨೨	,, ೪ನೇ ,,	೦	೬	೦

ಕೈಯಲ್ಲಿರುವ ಕೃತಿಗಳು.

೧ ಪೌರನೀತಿ ೫ನೇ ವರ್ಗಕ್ಕಾಗಿ. ೨ ಪೌರನೀತಿ ೬ನೇ ವರ್ಗಕ್ಕಾಗಿ. ೩ ಪೌರನೀತಿ ೭ನೇ ವರ್ಗಕ್ಕಾಗಿ. ೪ ಕುಮಾರ ಕಿಟ್ಟಣ್ಣ. (ಹೊಸ ಆವೃತ್ತಿ).೫ ಮಹಾತ್ಮರ ಪರಿಚಯ,,. ೬ ರಾಮ ಕೃಷ್ಣ ನೀತಿಯ ಕಥೆಗಳು,, ೭ ಪುರಂದರದಾಸರ ಪರಿಚಯ ,, ೮ ಶಾರೀರಿಕ ಶಿಕ್ಷಣ (ಡ್ರಿಲ್ ಪುಸ್ತಕ)

೧ ಮಿಡಲ್ ಸ್ಕೂಲ ಸ್ಕಾಲರ ಷಿಪ್ ಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ. ೨ ಹೈಸ್ಕೂಲ ಸ್ಕಾಲರಷಿಪ್ ಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ. ೩ ಪ್ರಪಂಚಪರಿಚಯಭಾಗ ೨. ೪ನೇ ವರ್ಗಕ್ಕಾಗಿ.೫ ಪ್ರಪಂಚಪರಿಚಯ ಭಾಗ ೩. ೬ನೇ ವರ್ಗಕ್ಕಾಗಿ.೭ ಹಿಂದಹಿಂದಿನ ಇಂದಿನ ಉದ್ಧಾರಕರು.

ಶಿಕ್ಷಕರೂ, ಬಾಲಕರೂ ಎಂದಿನಂತೆ ಚಿ. ಶ್ರೀ. ಯವರ ಪುಸ್ತಕಗಳನ್ನೇ ಉಪಯೋಗಿಸಿ ಅವರ ಶ್ರಮದ ಲಾಭ ಪಡೆಯಬೇಕಾಗಿ ವಿನಂತಿ ಉದೆ.

ಪುಸ್ತಕ ಸಿಗುವ ಸ್ಥಳ.

ಕೆ. ಎಸ್. ಕುಲಕರ್ಣಿ ಬುಕ್‌ಸೇಲರ. ಪಬ್ಲಿಶರ,

ಸ್ಟೇಶನ್‌ರೋಡ, ಹುಬ್ಬಳ್ಳಿ.